ಗುರುವಾರ, ಅಕ್ಟೋಬರ್ 16, 2025 | ₹ 7.00
prajavani.net prajavani
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಆಗಸದಲ್ಲಿ ರಾಮಾಯಣ**

ಉತ್ತರ ಪ್ರದೇಶದ ಅಯೋಧ್ಯೆಯ ದೀಪೋತ್ಸವವು ಸಂಪ್ರದಾಯ ಮತ್ತು ತಂತ್ರಜ್ಞಾನದ ಸಮ್ಮಿಲನಕ್ಕೆ ಸಾಕ್ಷಿಯಾಗಲಿದೆ. 1,100 ದೇಶೀಯ ಡ್ರೋನ್‌ಗಳು ದೀಪಗಳ ಮೂಲಕ ಆಗಸದಲ್ಲಿ ರಾಮಾಯಣದ ಕಥಾಹಂದರವನ್ನು ಮರುಸೃಷ್ಟಿಸಲಿವೆ

**ಓದುಗರ ಗಮನಕ್ಕೆ**

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

# ನ.1ರಿಂದ ಖಾತಾ ಪರಿವರ್ತನೆ ಅಭಿಯಾನ

## ‘ಬಿ’-ಖಾತಾದಿಂದ ‘ಎ’-ಖಾತಾಗೆ ಬದಲಾವಣೆ

• 15 ಲಕ್ಷ ಆಸ್ತಿಗಳ ಮಾಲೀಕರಿಗೆ ಉಪಯೋಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ದ (ಜಿಬಿಎ) ವ್ಯಾಪ್ತಿಯಲ್ಲಿರುವ ‘ಬಿ’ ಖಾತಾ ನಿವೇಶನಗಳಿಗೆ ‘ಎ’ ಖಾತಾ ನೀಡುವ ಅಭಿಯಾನ ನವೆಂಬರ್ 1 ರಿಂದ ಆರಂಭವಾಗಲಿದೆ. ಇದರಿಂದ 15 ಲಕ್ಷ ಆಸ್ತಿಗಳ ಮಾಲೀಕರಿಗೆ ಉಪಯೋಗವಾಗುತ್ತದೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಜಿಬಿಎ ವ್ಯಾಪ್ತಿಯಲ್ಲಿರುವ ‘ಬಿ’-ಖಾತಾ ನಿವೇಶನಗಳಿಗೆ ‘ಎ’-ಖಾತಾ ನೀಡುವುದು ಮತ್ತು ಈವರೆಗೂ ಖಾತಾ ಹೊಂದಿಲ್ಲದ ನಿವೇಶನಗಳಿಗೂ ‘ಎ’-ಖಾತಾ ನೀಡುವ ಆನ್‌ಲೈನ್ ವ್ಯವಸ್ಥೆಗೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

2,000 ಚ.ಮೀ ವಿಸ್ತೀರ್ಣದ ಆಸ್ತಿಗಳನ್ನು ಹೊಂದಿರುವ ಮಾಲೀಕರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. 2,000 ಚ.ಮೀಟರ್‌ಗಿಂತ ಹೆಚ್ಚು ವಿಸ್ತೀರ್ಣದ ಆಸ್ತಿಗಳಿಗೆ ಕ್ಯಾಡ್ ಡ್ರಾಯಿಂಗ್ ಸೇರಿದಂತೆ ಇತರೆ ದಾಖಲೆಗಳನ್ನು ಎಂಜಿನಿಯರ್‌ಗಳ ಮೂಲಕ ನೀಡಬೇಕಾಗುತ್ತದೆ. ನ.1 ರಿಂದ ಪ್ರಾರಂಭವಾಗುವ ಅಭಿಯಾನ 100 ದಿನ ನಡೆಯಲಿದೆ. ₹500 ಅರ್ಜಿ ಶುಲ್ಕವನ್ನು ಕಟ್ಟಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಸಿಕೊಂಡರೆ ಪಾಲಿಕೆ ಅಧಿಕಾರಿಗಳೇ ಮನೆ ಬಾಗಿಲಿಗೆ ಬಂದು ಸೇವೆ ನೀಡುತ್ತಾರೆ ಎಂದು ಹೇಳಿದರು.

ಆಸ್ತಿ ಮಾಲೀಕರು ಅವರ ಆಸ್ತಿಯ ಮಾರ್ಗಸೂಚಿ ದರದ ಶೇ 5 ರಷ್ಟನ್ನು ಶುಲ್ಕವಾಗಿ ಪಾವತಿಸಬೇಕು. ಬಡಾವಣೆಗಳಿಗೆ ವಿದ್ಯುತ್, ನೀರು, ಒಳಚರಂಡಿ ಸೇರಿ ಇತರೇ ಮೂಲಸೌಕರ್ಯ ವ್ಯವಸ್ಥೆ ಮಾಡಬೇಕಾಗಿರುವುದರಿಂದ ಶುಲ್ಕ ವಿಧಿಸಲಾಗಿದೆ. 100 ದಿನಗಳ ನಂತರ ಹೆಚ್ಚುವರಿ ಶುಲ್ಕ ನಿಗದಿ ಮಾಡಲಾಗುತ್ತದೆ. ಹೆಚ್ಚುವರಿ ಶುಲ್ಕವನ್ನು ಆ ನಂತರ ತಿಳಿಸಲಾಗುತ್ತದೆ ಎಂದು ಶಿವಕುಮಾರ್ ಹೇಳಿದರು.

ಜಿಬಿಎ ವ್ಯಾಪ್ತಿಯ ಪ್ರತಿ ಪಾಲಿಕೆಯಲ್ಲೂ ಎರಡೆರಡು ಸ್ಥಳಗಳಲ್ಲಿ ಕಚೇರಿಗಳನ್ನು ತೆರೆಯಲಾಗುವುದು. ಬೆಂಗಳೂರು ಒನ್ ಕೇಂದ್ರದಲ್ಲಿಯೂ ನೋಂದಣಿ ಮಾಡಲು ಅವಕಾಶ ನೀಡಲಾಗುವುದು ಎಂದು ಅವರು ತಿಳಿಸಿದರು.

‘ಒಸಿ ಮತ್ತು ಸಿಸಿಗೂ ಹೊಸ ವ್ಯವಸ್ಥೆಗೂ ಸಂಬಂಧವಿಲ್ಲ. ‘ಬಿ’ ಖಾತಾ ಮಾಲೀಕರಿಗೆ ಕಟ್ಟಡ ನಕ್ಷೆ ಅನುಮೋದನೆ ಸದ್ಯಕ್ಕೆ ದೊರೆಯುವುದಿಲ್ಲ. ‘ಬಿ’ ಖಾತಾದಲ್ಲಿರುವ ಬಹುಮಹಡಿ ಕಟ್ಟಡಗಳೂ ‘ಎ’ ಖಾತಾ ಆಗಿ ಬದಲಾವಣೆ ಆಗುವುದಿಲ್ಲ. ಮೊದಲು ನಿವೇಶನಕ್ಕೆ ಖಾತಾ ನೀಡಲಾಗುತ್ತದೆ. ಆ ಜಾಗದಲ್ಲಿರುವ ಕಟ್ಟಡ ಕಾನೂನಿನ ವ್ಯಾಪ್ತಿಯಲ್ಲಿ ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುತ್ತೇವೆ. ಆ ಬಳಿಕ ಕಟ್ಟಡಗಳಿಗೆ ಎಷ್ಟು ಶುಲ್ಕ ವಿಧಿಸಬೇಕು ಎಂಬುದನ್ನು ನಿಗದಿ ಮಾಡುತ್ತೇವೆ. ಅನಿಯಂತ್ರಿತ, ಅನಧಿಕೃತ ಮಾರಾಟ ಮತ್ತು ಅಕ್ರಮ ಆಸ್ತಿಗಳಿಗೆ ಮುಂದಕ್ಕೆ ಅವಕಾಶ ದೊರೆಯದಂತೆ ಮಾಡುವುದು, ನಕಲಿ ಖಾತಾಗಳನ್ನು ಸೃಷ್ಟಿಸಿ ಮೋಸ ಮಾಡುವುದನ್ನು ತಪ್ಪಿಸಲು ಈ ತೀರ್ಮಾನ ತೆಗೆದುಕೊಳ್ಳಲಾಗಿದೆ’ ಎಂದರು.

ಅರ್ಜಿ ಸಲ್ಲಿಸಿದ ನಂತರ ಪಾಲಿಕೆ ಅಧಿಕಾರಿಗಳು ಪ್ರತಿ ಆಸ್ತಿಯ ಮುಂದೆ ಮಾಲೀಕನನ್ನು ನಿಲ್ಲಿಸಿ ವಿಡಿಯೊ, ಫೋಟೊ ದಾಖಲೀಕರಣ ಮಾಡಿ ಅಪ್‌ಲೋಡ್ ಮಾಡುತ್ತಾರೆ. ಇದನ್ನು ಪರಿಶೀಲಿಸಲು ಹಾಗೂ ತಕರಾರುಗಳನ್ನು ಸಲ್ಲಿಸಲು ಸಹ ಅವಕಾಶ ನೀಡಲಾಗಿದೆ. ಸರ್ಕಾರಿ ಜಾಗ, ಪಿಟಿಸಿಎಲ್ ಪ್ರಕರಣಗಳ ಆಸ್ತಿಗಳು, 94 ಸಿ ಸೇರಿದಂತೆ ಇತರೇ ಪ್ರಕರಣಗಳ ಭೂಮಿ ಇದರ ವ್ಯಾಪ್ತಿಗೆ ಬರುವುದಿಲ್ಲ ಎಂದರು.

### ಅಂಕಿ ಅಂಶಗಳು

**25 ಲಕ್ಷ** ನಗರದಲ್ಲಿರುವ ಒಟ್ಟು ಆಸ್ತಿ

**7.5 ಲಕ್ಷ** ‘ಎ’ ಖಾತೆ ಹೊಂದಿರುವವರು

**7.5 ಲಕ್ಷ** ‘ಬಿ’ ಖಾತೆ ಹೊಂದಿರುವವರು

**7-8 ಲಕ್ಷ** ‘ಬಿ’ ಖಾತೆ ಪಡೆಯಲು ಅನುಮೋದನೆ ಪಡೆದಿಲ್ಲ

**ಆಸ್ತಿ ಡಿಜಿಟಲೀಕರಣಕ್ಕೆ ಕೇಂದ್ರ ಸರ್ಕಾರ ನಮ್ಮ ಅಧಿಕಾರಿಗಳಿಗೆ ಪ್ರಶಸ್ತಿ ನೀಡಿದೆ. ದೇಶದಲ್ಲಿ ಯಾರೂ ಇಂತಹ ಕ್ರಾಂತಿಕಾರಿ ಹೆಜ್ಜೆಯನ್ನಿಟ್ಟಿಲ್ಲ ಎಂದೂ ಪ್ರಶಂಸೆ ಮಾಡಿದೆ**

**ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಜಿಬಿಎ

### 30 ಅಡಿx 40 ಅಡಿ ನಿವೇಶನಕ್ಕೆ ₹2.10 ಲಕ್ಷ

ಜಿಬಿಎ ವ್ಯಾಪ್ತಿಯಲ್ಲಿನ 30 x 40 ಅಡಿ ಬಿ ಖಾತಾ ನಿವೇಶನಕ್ಕೆ ಎ ಖಾತಾ ಪಡೆಯಲು ಸುಮಾರು ₹2.10 ಲಕ್ಷ ವೆಚ್ಚವಾಗುತ್ತದೆ. ಮಾರ್ಗಸೂಚಿ ದರ ಪ್ರತಿ ಚದರಡಿಗೆ ₹3,000 ಇದ್ದರೆ, ₹1.80 ಲಕ್ಷ ಶುಲ್ಕ ಪಾವತಿಸಬೇಕಾಗುತ್ತದೆ. ಇದರ ಜೊತೆಗೆ, ಪ್ರತಿ ಚದರ ಮೀಟರ್‌ಗೆ ಸುಮಾರು ₹30 ಅಭಿವೃದ್ಧಿ ಶುಲ್ಕ, ಇತರೆ ಶುಲ್ಕಗಳಿರುತ್ತವೆ. ಮಾರ್ಗಸೂಚಿ ದರದ ಅನ್ವಯ ಶುಲ್ಕ ಬದಲಾಗುತ್ತದೆ.

### ಮೊದಲ ಬಾರಿಗೆ ‘ಏಕರೂಪ ಖಾತಾ’ ವ್ಯವಸ್ಥೆ ಜಾರಿ

‘ಬೆಂಗಳೂರಿನಲ್ಲಿ ಮೊದಲ ಬಾರಿಗೆ ಏಕರೂಪ ಖಾತಾ ವ್ಯವಸ್ಥೆ ಜಾರಿ ಮಾಡಲಾಗಿದೆ. ಆಸ್ತಿಗಳ ದಾಖಲೆ ಡಿಜಿಟಲೀಕರಣ ಮಾಡಲು ದಾಖಲೆಗಳನ್ನು ಸ್ಕ್ಯಾನ್ ಮಾಡಿದ್ದೇವೆ. ಆನ್‌ಲೈನ್ ಖಾತಾ ವ್ಯವಸ್ಥೆಯನ್ನೂ ಜಾರಿ ಮಾಡಿದ್ದೇವೆ. 50 ವರ್ಷಗಳಲ್ಲಿ ಇಂತಹ ತೀರ್ಮಾನ ಆಗಿರಲಿಲ್ಲ. ಇದು ನಮ್ಮ ಸರ್ಕಾರದ ಆರನೇ ಗ್ಯಾರಂಟಿಯಾಗಿದೆ. ನಿಮ್ಮ ಆಸ್ತಿ, ನಿಮ್ಮ ಹಕ್ಕು. ನಿಮ್ಮ ಹಕ್ಕನ್ನು ನಾವು ಸರಿಪಡಿಸುತ್ತಿದ್ದೇವೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಟಿಸಿಪಿ ಕಾಯ್ದೆ 61 ರ ಅಡಿಯಲ್ಲಿ ಅನುಮೋದನೆಗೊಂಡ ಕಂದಾಯ ಜಮೀನಿನಲ್ಲಿ ಇರುವ ನಿವೇಶನಗಳಲ್ಲಿ ಒಂದಷ್ಟು ಜನ ಭೂ ಪರಿವರ್ತನೆ ಮಾಡಿಕೊಳ್ಳದೇ ಕಟ್ಟಡ ಕಟ್ಟಿಕೊಂಡಿದ್ದಾರೆ. ಈ ಆಸ್ತಿಗಳಿಗೆ ಬಿ ಖಾತಾ ನೀಡಲಾಗಿತ್ತು. ಇಂತಹವರಿಗೆ ಬ್ಯಾಂಕ್ ಸಾಲ ದೊರೆಯುತ್ತಿರಲಿಲ್ಲ. ಕಾನೂನು ಪ್ರಕಾರ ಕಟ್ಟಡ ನಕ್ಷೆಗೆ ಅನುಮತಿ ಸೇರಿ ಯಾವುದೇ ಸೌಲಭ್ಯಗಳನ್ನು ಪಡೆಯಲು ಪರದಾಡಬೇಕಿತ್ತು. ಸರ್ಕಾರದ ಹೊಸ ಕ್ರಮದಿಂದ ಜನರ ಸಮಸ್ಯೆ ತಪ್ಪುತ್ತದೆ. ಆದರೆ, ಈ ನಿವೇಶಗಳಲ್ಲಿ ಕಟ್ಟಿರುವ ಕಟ್ಟಡಗಳನ್ನು ಸಕ್ರಮಗೊಳಿಸುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

**2000 ಚದರ ಮೀ.ವರೆಗಿನ ನಿವೇಶನದವರು ಬಿ ಖಾತಾದಿಂದ ಎ ಖಾತಾ/ ಹೊಸದಾಗಿ ಎ-ಖಾತಾ ಪಡೆಯಲು ಅರ್ಜಿ ಸಲ್ಲಿಸುವ ವಿಧಾನ**

- ಮೊಬೈಲ್ ಮತ್ತು ಓಟಿಪಿ ಬಳಸಿ https://bbmp.karnataka.gov.in/BtoAKhata ಲಾಗಿನ್ ಆಗಿ
- ಅಂತಿಮ ಬಿ-ಖಾತೆಯ ಇಪಿಐಡಿ ಸಂಖ್ಯೆಯನ್ನು ನಮೂದಿಸಿ, ವಿವರಗಳನ್ನು ಪಡೆಯಿರಿ
- ಮಾಲೀಕರ ಆಧಾರ್ ದೃಢೀಕರಿಸಿ
- ನಿವೇಶನವಿರುವ ಸ್ಥಳವನ್ನು ಮತ್ತು ನಿವೇಶನ ಮುಂಭಾಗದ ರಸ್ತೆಯ ಪ್ರಕಾರವನ್ನು ದೃಢಪಡಿಸಿ
- ಭೂ ಪರಿವರ್ತನೆಯಾದ ಮತ್ತು ಭೂ ಪರಿವರ್ತನೆಯಾಗದ ಎರಡೂ ನಿವೇಶನಗಳು ಅರ್ಹ (ಫ್ಲ್ಯಾಟ್‌ಗಳು ಅನರ್ಹ)
- ಸ್ವೀಕೃತಿಯನ್ನು ಪಡೆಯಿರಿ
- ನಗರ ಪಾಲಿಕೆ ವತಿಯಿಂದ ನಿವೇಶನಕ್ಕೆ ಭೇಟಿ ಮತ್ತು ದೃಢೀಕರಣ
- ನಿವೇಶನದ ಮಾರುಕಟ್ಟೆ ಮೌಲ್ಯದ ಶೇ 5ರಷ್ಟು ಮೊತ್ತವನ್ನು ಏಕ ನಿವೇಶನ ಅನುಮೋದನೆ ಶುಲ್ಕವಾಗಿ ಹಾಗೂ ಇತರೆ ಶುಲ್ಕಗಳನ್ನು ಪಾವತಿಸುವುದು
- ಸ್ವಯಂಕೃತ ಏಕ ನಿವೇಶನ ಅನುಮೋದನೆಯಾಗಿ ಅರ್ಹತಾನುಸಾರ ಎ-ಖಾತಾ ವಿತರಣೆ

**2,000 ಚದರ ಮೀ.ಗೂ ಹೆಚ್ಚಿನ ನಿವೇಶನಗಳಿಗೆ ಎ-ಖಾತಾ ಪಡೆಯಲು ಅರ್ಜಿ ಸಲ್ಲಿಸುವ ವಿಧಾನ**

- ನೋಂದಾಯಿತ ವಾಸ್ತುಶಿಲ್ಪಿ ಅಥವಾ ಎಂಜಿನಿಯರ್ ಅನ್ನು ಸಂಪರ್ಕಿಸಿ
- ಯಾವುದೇ ರೀತಿಯ ನಿವೇಶನಗಳಿಗಾಗಿ https://bpas.bbmpgov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ
- ಅಗತ್ಯ ದಾಖಲೆಗಳು ಮತ್ತು ಕ್ಯಾಡ್ ಡ್ರಾಯಿಂಗ್ ಅನ್ನು ಅಪ್‌ಲೋಡ್ ಮಾಡಿ
- ಆರಂಭಿಕ ಪರಿಶೀಲನಾ ಶುಲ್ಕ ₹500 ಪಾವತಿಸಿ
- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ (ಫ್ಲ್ಯಾಟ್‌ಗಳಿಗೆ ಅನ್ವಯವಾಗಲ್ಲ)
- ನಿವೇಶನಕ್ಕೆ ಭೇಟಿ ನೀಡುವ ಮೂಲಕ ಪರಿಶೀಲನೆ
- ಅರ್ಹತಾನುಸಾರ ಅನುಮೋದನೆ
- ಅನ್ವಯವಾಗುವ ಶುಲ್ಕಗಳ ಪಾವತಿ
- ಅರ್ಹತಾನುಸಾರ ಏಕನಿವೇಶನ ಅನುಮೋದನೆ ಪ್ರಮಾಣಪತ್ರ, ಡ್ರಾಯಿಂಗ್ ಮತ್ತು ಎ-ಖಾತಾ ವಿತರಣೆ

## ಸುದ್ದಿ 2 ನಿಮಿಷ

### ಸಮೀಕ್ಷೆ: ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇ 81.25 ರಷ್ಟು ಪ್ರಗತಿ

**ಬೆಂಗಳೂರು:** ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯ ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇ 81.25ರಷ್ಟು ಪೂರ್ಣಗೊಂಡಿದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಜಿ.ಎನ್. ಶ್ರೀಕಂಠಯ್ಯ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸಮೀಕ್ಷೆಯ ಪ್ರಗತಿ ಪರಿಶೀಲನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರ ಜಿಲ್ಲೆಯಲ್ಲಿ ಸಮೀಕ್ಷೆ ಕಾರ್ಯ ಕಷ್ಟದ ಕೆಲಸ. ಇಲ್ಲಿ ಬಹು ಸಂಖ್ಯೆಯಲ್ಲಿ ಅಪಾರ್ಟ್‌ಮೆಂಟ್‌ಗಳಿದ್ದು, ಜನರು ಪ್ರತಿದಿನ ಕೆಲಸಕ್ಕೆ ತೆರಳುವುದರಿಂದ ಬೆಳಿಗ್ಗೆ ಮನೆಗಳಲ್ಲಿ ಲಭ್ಯವಿರುವುದಿಲ್ಲ. ಕೆಲವು ಸಂದರ್ಭದಲ್ಲಿ ಗಣತಿದಾರರಿಗೆ ಸಾರ್ವಜನಿಕರು ಮಾಹಿತಿಯನ್ನು ನೀಡಲು ನಿರಾಕರಿಸುತ್ತಾರೆ. ಇಂತಹ ಸವಾಲುಗಳ ನಡುವೆಯೂ ಗಣತಿದಾರರು ಉತ್ತಮವಾಗಿ ಕೆಲಸ ನಿರ್ವಹಿಸಿದ್ದಾರೆ ಎಂದು ಹೇಳಿದರು.

ಜಿಲ್ಲೆಯಲ್ಲಿ 7,91,095 ಲಕ್ಷ ಮನೆಗಳಿದ್ದು 6,20,000 ಮನೆಗಳ ಸಮೀಕ್ಷೆ ಮುಗಿಸಿದ್ದಾರೆ. 15,46,525 ಜನಸಂಖ್ಯೆ ಪೈಕಿ ಒಟ್ಟು 12,41,429 ಜನರ ಗಣತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಜಗದೀಶ ಜಿ. ಮಾತನಾಡಿ, ‘ನಗರ ಜಿಲ್ಲೆಯಲ್ಲಿ ಪ್ರಾರಂಭಿಕ ಹಂತದಲ್ಲಿ ಬಿಬಿಎಂಪಿ ದತ್ತಾಂಶ ಹಾಗೂ ನಗರ ಜಿಲ್ಲೆಯ ದತ್ತಾಂಶಗಳು ಸ್ಪಷ್ಟವಾಗಿ ದೊರಕಲಿಲ್ಲ. ವಲಸಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅನ್ಯ ಭಾಷಿಕರೇ ಅಧಿಕ ಇರುವುದು ಕೂಡ ತೊಡಕಿಗೆ ಕಾರಣವಾಯಿತು’ ಎಂದು ವಿವರಿಸಿದರು. ಕಳೆದ ನಾಲ್ಕು ದಿನಗಳಲ್ಲಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಬಿಬಿಎಂಪಿ ವ್ಯಾಪ್ತಿಯ 7,000 ಮನೆಗಳು ಸೇರ್ಪಡೆಗೊಂಡಿವೆ. ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಬ್ಬ ಗಣತಿದಾರರು 250ಕ್ಕಿಂತ ಹೆಚ್ಚು ಮನೆಗಳ ಸಮೀಕ್ಷೆ ಪೂರ್ಣಗೊಳಿಸಿದ್ದಾರೆ ಎಂದು ತಿಳಿಸಿದರು.

### ಬಸ್‌ಗಳಲ್ಲಿ ಅಧಿಕ ಲಗೇಜ್ ಸಾಗಾಟ: ದಂಡ

**ಬೆಂಗಳೂರು:** ಪ್ರಯಾಣಿಕರ ಕರೆದೊಯ್ಯುವ ಬಸ್‌ಗಳಲ್ಲಿ ಅಧಿಕ ಲಗೇಜ್‌ಗಳನ್ನು ಒಯ್ಯುತ್ತಿರುವುದನ್ನು ಪತ್ತೆ ಹಚ್ಚಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬಸ್ ಮಾಲೀಕರಿಗೆ ದಂಡ ವಿಧಿಸಿದ್ದಾರೆ.

ನಗರದ ಹತ್ತು ಪ್ರಾದೇಶಿಕ ಸಾರಿಗೆ ಕಚೇರಿಗಳ ವ್ಯಾಪ್ತಿಯಲ್ಲಿ ಮೂರು ದಿನ ನಡೆದ ಕಾರ್ಯಾಚರಣೆಯಲ್ಲಿ 600 ಬಸ್‌ಗಳಲ್ಲಿ ಅಧಿಕ ಲಗೇಜ್ ಸಾಗಾಟ ಮಾಡುವುದು ಪತ್ತೆಯಾಗಿದೆ. ಲಗೇಜ್ ಇಳಿಸಿ, ಪ್ರಯಾಣಿಕರನ್ನು ಮತ್ತು ಅವರ ಬ್ಯಾಗ್‌ಗಳನ್ನು ಮಾತ್ರ ಒಯ್ಯಲು ಅವಕಾಶ ಮಾಡಿಕೊಟ್ಟಿದ್ದಾರೆ

ಬಸ್‌ಗಳಲ್ಲದೇ ಗೂಡ್ಸ್ ವಾಹನಗಳನ್ನು ಕೂಡ ತಪಾಸಣೆ ನಡೆಸಲಾಗಿದೆ. ನಿಗದಿ ಪಡಿಸಿದ್ದಕ್ಕಿಂತ ಅಧಿಕ ಸಾಗಾಟ ಮಾಡುತ್ತಿದ್ದ ಸುಮಾರು 500 ವಾಹನಗಳಿಗೆ ದಂಡ ವಿಧಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

## ಚಿಟಿಕೆ ಸುದ್ದಿ

### ದೀಪಾವಳಿಗೆ ಬೆಳಕಿನ ಚಿತ್ತಾರ

**ಬೆಂಗಳೂರು:** ದೀಪಾವಳಿ ಹಬ್ಬದ ಅಂಗವಾಗಿ ಫಿನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ‘ಫಿನಿಕ್ಸ್ ಇಂಡಿಯಾ ಲೈಟ್ ಫೆಸ್ಟಿವಲ್ (ಐಎಲ್‌ಎಫ್)’ ಪ್ರಾರಂಭವಾಗಿದೆ.

ಮಾಲ್‌ನ ದಕ್ಷಿಣ ವಲಯದ ಮಾರುಕಟ್ಟೆ ನಿರ್ದೇಶಕಿ ರೀತು ಮೆಹ್ತಾ ಮಾತನಾಡಿ, ‘ಮಾಲ್‌ನಲ್ಲಿ ಬಣ್ಣ, ಬಣ್ಣದ ದೀಪಗಳಿಂದ ಅಲಂಕಾರ ಮಾಡಲಾಗಿದೆ. ಅನಿಮೇಟೆಡ್ ಕಿರಣಗಳು ಮತ್ತು ಪ್ರಜ್ವಲಿಸುವ ದೀಪಗಳ ಚಿತ್ತಾರ ನೋಡಗರನ್ನು ಸೆಳೆಯುತ್ತಿದೆ. ಐಎಲ್‌ಎಫ್ ಉತ್ಸವದಲ್ಲಿ ಪಾಲ್ಗೊಳ್ಳುವ ಎಲ್ಲರಿಗೂ ಇದು ಅದ್ಭುತ ಅನುಭವ ನೀಡುತ್ತದೆ. ಇದು ಕಲೆ, ತಂತ್ರಜ್ಞಾನದ ಪರಿಕಲ್ಪನೆಗೆ ಸಾಕ್ಷಿಯಾಗಿದೆ. ಫಿನಿಕ್ಸ್ ಮಾಲ್‌ಗೆ ಭೇಟಿ ನೀಡುವ ಪ್ರತಿಯೊಬ್ಬರು ಬೆಳಕಿನ ಈ ಚಿತ್ತಾರವನ್ನು ಕಣ್ತುಂಬಿಕೊಳ್ಳಬಹುದು’ ಎಂದು ತಿಳಿಸಿದ್ದಾರೆ.

ಪ್ರವೇಶ ಉಚಿತವಾಗಿದ್ದು, ಕುಟುಂಬ ಸಮೇತ ಪಾಲ್ಗೊಳ್ಳ ಬಹುದು. ಹಬ್ಬದ ಅಂಗವಾಗಿ ಮಾಡಿರುವ ಚಿತ್ತಾಕರ್ಷಣೆಯ ವಿನ್ಯಾಸ ವಿಶಿಷ್ಟ ಅನುಭವ ನೀಡಲಿದೆ ಎಂದಿದ್ದಾರೆ.

### ಆರ್‌ಎಸ್‌ಎಸ್ ಕಟ್ಟಡ ಮರಳಿ ಪಡೆಯಲು ಆಗ್ರಹ

**ಬೆಂಗಳೂರು:** ನಗರದ ಚಾಮರಾಜಪೇಟೆಯ ಬುಲ್ ಟೆಂಪಲ್ ರಸ್ತೆಯ ದೊಡ್ಡ ಬಸವನಗುಡಿ ದೇವಸ್ಥಾನದ ಎದುರು ಬಿಬಿಎಂಪಿಗೆ ಸೇರಿದ್ದ ಸುಂಕೇನಹಳ್ಳಿ ವಾರ್ಡ್ ಕಚೇರಿ ಕಾರ್ಯನಿರ್ವಹಿಸುತ್ತಿತ್ತು. ಕೆಲವು ಪಟ್ಟಭದ್ರರು ಶಾಮಿಲಾಗಿ ಪಾಲಿಕೆಯ ಕಚೇರಿಯನ್ನೇ ಖಾಲಿ ಮಾಡಿಸಿ ಕಟ್ಟಡವನ್ನು ಆರ್‌ಎಸ್‌ಎಸ್‌ನ ರಾಷ್ಟ್ರೋತ್ಥಾನ ಯೋಗ ಕೇಂದ್ರಕ್ಕೆ ಬಿಟ್ಟುಕೊಡಲಾಗಿದೆ. ಅದನ್ನು ವಾಪಸ್ ಪಡೆಯಬೇಕು ಎಂದು ಪತ್ರಕರ್ತ ಪಾರ್ವತೀಶ ಬಿಳಿದಾಳೆ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಪತ್ರ ಬರೆದಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸೇರಬೇಕಾದ ಈ ಜಾಗದಲ್ಲಿರುವ ವಿಶಾಲ ಕಟ್ಟಡ ಹಾಗೂ ಉದ್ಯಾನವನ್ನು ಸಂಘಪರಿವಾರದಂಥ ಕೋಮುವಾದಿ ಖಾಸಗಿ ಸಂಸ್ಥೆಗೆ ಬಿಟ್ಟುಕೊಟ್ಟಿರುವುದು ಕಾನೂನು ಬಾಹಿರ ಎಂದಿದ್ದಾರೆ.

### ಮುನಿರತ್ನ ವಿರುದ್ಧ ಕ್ರಮಕ್ಕೆ ಆಗ್ರಹ

**ಬೆಂಗಳೂರು:** ಮಹಿಳೆಯರ ಘನತೆ, ವ್ಯಕ್ತಿತ್ವ ಹಾಗೂ ಚಾರಿತ್ರ್ಯವಧೆ ಮಾಡುವ ಹೇಳಿಕೆಗಳನ್ನು ನೀಡುತ್ತಿರುವ ರಾಜರಾಜೇಶ್ವರಿನಗರದ ಶಾಸಕ ಮುನಿರತ್ನ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಮಹಿಳಾ ಘಟಕ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಬಿಎಂಪಿ ಮಾಜಿ ಸದಸ್ಯೆ ಆಶಾ ಸುರೇಶ್, ಕಾಂಗ್ರೆಸ್ ಮುಖಂಡರಾದ ನೇತ್ರಾವತಿ, ಲಕ್ಷ್ಮೀ, ನಳಿನಿ, ‘ಮತ್ತಿಕೆರೆಯ ಜಯಪ್ರಕಾಶ್ ನಾರಾಯಣ ಉದ್ಯಾನದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಮುನಿರತ್ನ ಅವರು ಕಾಂಗ್ರೆಸ್ ನಾಯಕಿ ಕುಸುಮಾ ಹನುಮಂತರಾಯಪ್ಪ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದು ಖಂಡನೀಯ’ ಎಂದು ತಿಳಿಸಿದರು.

### ರಸ್ತೆ ಗುಂಡಿಗೆ ಆಕ್ರೋಶ: ನಗರದ ಐಟಿ ಕಂಪನಿ–ಉದ್ಯಮಿಗಳಿಗೆ ಡಿಕೆಶಿ ಪ್ರಶ್ನೆ

# ‘ಸಿಎಸ್‌ಆರ್ ಹಣ ಎಲ್ಲಿ ವೆಚ್ಚವಾಗುತ್ತಿದೆ?’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬೆಂಗಳೂರಿನಲ್ಲಿ ಮೂಲಸೌಕರ್ಯ ಇಲ್ಲ, ರಸ್ತೆಗಳು ಇಲ್ಲ ಎನ್ನುತ್ತಿರುವ ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ಏನು ಮಾಡುತ್ತಿವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ವಿಧಾನಸೌಧದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿಯನ್ನು ಎಲ್ಲಿ ಬಳಕೆ ಮಾಡುತ್ತಿವೆ ಎಂಬ ವಿವರಗಳನ್ನು ಬಹಿರಂಗಪಡಿಸಲಿ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ರಸ್ತೆ ಸರಿಯಿಲ್ಲ, ಮೂಲಸೌಕರ್ಯ ಇಲ್ಲ ಎಂದು ಎಲ್ಲರೂ ಟೀಕಿಸುತ್ತಾರೆ. ಆದರೆ ಇಲ್ಲಿಯೇ ಕಂಪನಿ ಆರಂಭಿಸಿ, ಇಲ್ಲಿಂದಲೇ ಎಲ್ಲವನ್ನೂ ಪಡೆದುಕೊಂಡು, ಇಲ್ಲಿನ ರಸ್ತೆಗಳ ವಿಸ್ತರಣೆಗೆ ಜಾಗ ಕೇಳಿದರೆ ನೀಡುತ್ತಾರೆಯೇ? ಜಾಗ ನೀಡಲು ಯಾರೊಬ್ಬರೂ ಮುಂದೆ ಬರುವುದಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರಿನ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವ ಕೆಲಸ ತ್ವರಿತವಾಗಿ ಆಗುತ್ತಿಲ್ಲ ಎಂದು ಉದ್ಯಮಿ ಕಿರಣ್ ಮಜುಂದಾರ್ ಷಾ ಅವರು ‘ಎಕ್ಸ್’ನಲ್ಲಿ ಮಾಡಿದ್ದ ಪೋಸ್ಟ್ ಬಗ್ಗೆ ಪ್ರಶ್ನಿಸಿದಾಗ, ‘ಗುಂಡಿಗಳನ್ನು ಮುಚ್ಚುವ ಕೆಲಸವನ್ನು ಗರಿಷ್ಠ ಮಟ್ಟದಲ್ಲಿ ಮಾಡುತ್ತಿದ್ದೇವೆ. ಎಲ್ಲರಿಗೂ ಸ್ವಲ್ಪ ತಾಳ್ಮೆ ಇರಬೇಕು. ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಬೆದರಿಸುವುದೇ ನಿಮಗೆ ಮುಖ್ಯವಾದರೆ, ಅದನ್ನೇ ಮಾಡಿ. ನಾನು ಯಾರನ್ನೂ ಪ್ರಶ್ನಿಸುವುದಿಲ್ಲ, ಟೀಕಿಸುವುದಿಲ್ಲ. ಪ್ರಧಾನಿಯೇ ಬೆಂಗಳೂರನ್ನು ಹೊಗಳಿದ್ದಾರೆ. ಆದರೆ ಇವರು ಪ್ರಧಾನಿ ಮಾತಿಗೆ ತದ್ವಿರುದ್ಧವಾಗಿ ಮಾತನಾಡುತ್ತಿದ್ದಾರೆ. ಇವರಿಗೆ ಏನು ಹೇಳುವುದು’ ಎಂದು ಹೇಳಿದರು.

‘ಅವರು ‘ಎಕ್ಸ್’ ಮಾಡುವ ಮೂಲಕ, ಅವರಿಗೆ ನೆರವಾಗಿರುವ ದೇಶ ಮತ್ತು ರಾಜ್ಯಕ್ಕೆ ಧಕ್ಕೆ ತರುತ್ತಿದ್ದಾರೆ. 25 ವರ್ಷಗಳ ಹಿಂದೆ ಅವರು ಎಲ್ಲಿದ್ದರು? ಅವರ ಬೆಳವಣಿಗೆಯಲ್ಲಿ ಹೆಚ್ಚಿನ ಕೊಡುಗೆ ಇರುವುದು ಬೆಂಗಳೂರಿನದ್ದು. ಈ ನಗರವು ಲಕ್ಷಾಂತರ ಮಂದಿಗೆ ಉದ್ಯೋಗ ನೀಡಿ, ಉದ್ಯಮಿಗಳನ್ನು ದೊಡ್ಡಮಟ್ಟಕ್ಕೆ ಬೆಳೆಸಿದೆ. ಈಗ ಈ ನಗರವನ್ನು ಟೀಕಿಸುತ್ತಿರುವವರು, ಇಲ್ಲಿನ ಸರ್ಕಾರಗಳು ತಮಗೆ ಎಷ್ಟು ಜಾಗ ನೀಡಿವೆ ಮತ್ತು ಎಷ್ಟು ನೆರವು ನೀಡಿವೆ ಎಂಬುದನ್ನು ಸ್ಮರಿಸಿಕೊಳ್ಳಬೇಕು’ ಎಂದರು.

‘ಮಹದೇವಪುರ ಹಾಗೂ ಕೆ.ಆರ್.ಪುರವನ್ನೇ ಪ್ರತ್ಯೇಕ ಪಾಲಿಕೆ ಮಾಡಿದ್ದು, ಅಲ್ಲೇ ಐಟಿ ಹಬ್ ಇವೆ. ಅಲ್ಲಿ ಸಂಗ್ರಹವಾಗುವ ಆದಾಯವನ್ನು, ಅಲ್ಲಿಯೇ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಬಹುದಾಗಿದೆ. ಆ ಭಾಗದ ಜನಸಂಖ್ಯೆ, ಅವರ ಸಮಸ್ಯೆಗಳೇನು ಎಂಬ ಅರಿವು ನಮಗೆ ಇದೆ. ಅವರಿಗೆ ನೆರವಾಗಬೇಕು ಎಂದೇ ಈ ಕ್ರಮ ತೆಗೆದುಕೊಂಡಿದ್ದೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

**ಆಂಧ್ರಪ್ರದೇಶದಲ್ಲಿ ಗೂಗಲ್ ಎಐ ಕೇಂದ್ರ ಸ್ಥಾಪಿಸಲು ಮುಂದಾದರೆ, ಅವರನ್ನು ಬೇಡ ಎಂದು ನಾವು ತಡೆಯಲಾಗುತ್ತದೆಯೇ?**

**ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

### ಮಾರ್ಕೆಟಿಂಗ್‌ಗಾಗಿ ಬೆಂಗಳೂರಿನ ಹೆಸರು ಬಳಕೆ: ಉಪ ಮುಖ್ಯಮಂತ್ರಿ

‘ಮೂಲಸೌಕರ್ಯ, ಮಾನವ ಸಂಪನ್ಮೂಲ, ನವೋದ್ಯಮ, ಅನ್ವೇಷಣೆ ವಿಚಾರದಲ್ಲಿ ದೇಶದಲ್ಲಿ ಬೆಂಗಳೂರಿಗೆ ಸರಿಸಮನಾದ ನಗರ ಮತ್ತೊಂದಿಲ್ಲ. ಬೇರೆಯವರು ತಮ್ಮನ್ನು ಮಾರ್ಕೆಟಿಂಗ್ ಮಾಡಿಕೊಳ್ಳಲು ಬೆಂಗಳೂರಿನ ಬಗ್ಗೆ ಮಾತನಾಡುತ್ತಾರೆ. ಆಂಧ್ರ ಪ್ರದೇಶದ ಮಾಹಿತಿ ತಂತ್ರಜ್ಞಾನ ಸಚಿವ ನಾರಾ ಲೋಕೇಶ್ ಸಹ ಇದನ್ನೇ ಮಾಡುತ್ತಿದ್ದಾರೆ’ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

‘ಬೆಂಗಳೂರಿನಲ್ಲಿ 25 ಲಕ್ಷ ಐಟಿ ವೃತ್ತಿಪರರು, 2 ಲಕ್ಷ ವಿದೇಶಿಯರು ಕೆಲಸ ಮಾಡುತ್ತಿದ್ದಾರೆ. ದೇಶದ ಪ್ರಗತಿಯಲ್ಲಿ ಬೆಂಗಳೂರಿನ ಕೊಡುಗೆ ಅಪಾರ. ಕೇಂದ್ರ ಸರ್ಕಾರಕ್ಕೆ ಸುಮಾರು ಶೇ 40ರಷ್ಟು ತೆರಿಗೆ ಆದಾಯ ಇಲ್ಲಿಂದಲೇ ಹೋಗುತ್ತಿದೆ. ಅವರು ತಮ್ಮ ಬಗ್ಗೆ ಮಾರ್ಕೆಟಿಂಗ್ ಮಾಡಿಕೊಳ್ಳಲು ಮಾತನಾಡುತ್ತಾರೆ. ಅವರು ಏನಾದರೂ ಮಾಡಿಕೊಳ್ಳಲಿ. ಅವರಿಗೆ ಕೇಂದ್ರ ಸರ್ಕಾರವೂ ಸಹಾಯ ಮಾಡಲಿ. ಆದರೆ ಬೆಂಗಳೂರಿಗೆ ಸರಿಸಮನಾಗಲು ಸಾಧ್ಯವಿಲ್ಲ’ ಎಂದರು.

### ರಸ್ತೆ ಅಭಿವೃದ್ಧಿಗೆ ₹2,200 ಕೋಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ₹1,100 ಕೋಟಿ, ವಾರ್ಡ್ ರಸ್ತೆ, ಚರಂಡಿ ಅಭಿವೃದ್ಧಿಗೆ ₹1,100 ಕೋಟಿ ವೆಚ್ಚದ ಎರಡು ಕ್ರಿಯಾಯೋಜನೆಗಳನ್ನು ಸಲ್ಲಿಸುವಂತೆ ಜಿಬಿಎಗೆ ನಗರಾಭಿವೃದ್ಧಿ ಇಲಾಖೆ ಸೂಚಿಸಿದೆ.

ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಮೊದಲ ಜಿಬಿಎ ಸಭೆಯಲ್ಲಿ, ರಸ್ತೆಗಳ ಅಭಿವೃದ್ಧಿ ಬಗ್ಗೆ ಸಚಿವರು ಹಾಗೂ ಶಾಸಕರು ಪ್ರಸ್ತಾಪಿಸಿದ್ದರು. ಇದಕ್ಕಾಗಿ, ಕ್ರಿಯಾ ಯೋಜನೆ ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಬೇಕು. ಎರಡೂ ಕ್ರಿಯಾ ಯೋಜನೆಗಳನ್ನು ಐದು ನಗರ ಪಾಲಿಕೆಗಳಿಂದ ಪಡೆದು, ಪರಿಶೀಲಿಸಿ, ಕ್ರೋಡೀಕರಿಸಿ ಸರ್ಕಾರಕ್ಕೆ ಶೀಘ್ರ ಸಲ್ಲಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತರಿಗೆ ಅ.15ರಂದು ಸೂಚಿಸಲಾಗಿದೆ.

ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ಅಭಿವೃದ್ಧಿಗೆ ₹1,100 ಕೋಟಿ ಕ್ರಿಯಾ ಯೋಜನೆಯನ್ನು ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆಯಡಿ ಪ್ರಸ್ತಾವ ಸಲ್ಲಿಸಬೇಕು. ವಾರ್ಡ್‌ಗಳ ರಸ್ತೆ, ಚರಂಡಿ ಅಭಿವೃದ್ಧಿ, ನಿರ್ವಹಣೆ ಕಾಮಗಾರಿಗಳ ₹1,100 ಕೋಟಿ ಕ್ರಿಯಾ ಯೋಜನೆಯನ್ನು ಮುಖ್ಯಮಂತ್ರಿಯವರ ವಿವೇಚನಾ ನಿಧಿಯಲ್ಲಿ ಕೈಗೊಳ್ಳಲು ಪ್ರಸ್ತಾವ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

‘ನಮ್ಮ ರಸ್ತೆ ಕೈಪಿಡಿ’ಯಲ್ಲಿನ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು, ಪ್ರತಿ ನಗರ ಪಾಲಿಕೆಗಳನ್ವಯ ಅಂದಾಜು ಪಟ್ಟಿ ತಯಾರಿಸಿ, ಮುಖ್ಯ ಎಂಜಿನಿಯರ್‌ನಿಂದ ದೃಢೀಕರಿಸಬೇಕು. ಲೋಕೋಪಯೋಗಿ ಇಲಾಖೆಯ ಎಸ್‌ಆರ್ ದರಗಳಂತೆ ಅಂದಾಜು ಪಟ್ಟಿ ಸಿದ್ಧಪಡಿಸಬೇಕು. ಕಾಮಗಾರಿಗಳು ಸಾರ್ವಜನಿಕ ಸುಗಮ ಸಂಚಾರ ದೃಷ್ಟಿಯಿಂದ ಅತ್ಯಂತ ಅವಶ್ಯಕ ಎಂಬುದನ್ನೂ ಮುಖ್ಯ ಎಂಜಿನಿಯರ್ ದೃಢೀಕರಿಸಬೇಕು. ರಸ್ತೆ ನಿರ್ಮಾಣ, ಅಂದಾಜು ಪಟ್ಟಿ ತಯಾರಿಕೆ, ಕಾಮಗಾರಿಗಳಿಗೆ ನಿಗದಿಪಡಿಸಿರುವ ಅಂದಾಜು ಮೊತ್ತದಲ್ಲಿ ಐದು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಏಕರೂಪ, ಏಕ ವಿನ್ಯಾಸ ಇರುವಂತೆ ನೋಡಿಕೊಳ್ಳಬೇಕು ಎಂದು ಹೇಳಲಾಗಿದೆ. ಈ ಸೂಚನೆಯಂತೆ, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಐದೂ ನಗರ ಪಾಲಿಕೆಗಳ ಆಯುಕ್ತರಿಗೆ ಪ್ರಸ್ತಾವ ಸಲ್ಲಿಸಲು ಸೂಚಿಸಿದ್ದಾರೆ.

ಕೋರಮಂಗಲದ ಸಂತ ಫ್ರಾನ್ಸಿಸ್ ಪದವಿ ಕಾಲೇಜಿನಲ್ಲಿ ನಡೆದ ಕಿಟೆಲ್ ನೆನಪಿನ ಕಾರ್ಯಕ್ರಮದಲ್ಲಿ ಪ್ರಶಾಂತ್ ಪಂಡಿತ್ ಅವರನ್ನು ಸನ್ಮಾನಿಸಲಾಯಿತು.ಕಾಲೇಜಿನ ನಿರ್ದೇಶಕ ಟೈಟಸ್ ಆಂಟೋ, ಪ್ರಾಂಶುಪಾಲ ಆರ್.ಎನ್.ಸುಬ್ಬರಾವ್, ಕನ್ನಡ ಸಹ ಪ್ರಾಧ್ಯಾಪಕ ಬಿ.ವಿ.ಜಗದೀಶ್ ಬಾಬು ಹಾಜರಿದ್ದರು

### ನಗರದಲ್ಲಿ ಇಂದು

ವಿಷ್ಣುವರ್ಧನ್

**‘ಡಾ. ವಿಷ್ಣುವರ್ಧನ್ ನೂರೊಂದು ನೆನಪು’ ಸಂಗೀತ ರಸಮಂಜರಿ:** ಅತಿಥಿಗಳು: ವೀರಕಪುತ್ರ ಶ್ರೀನಿವಾಸ್, ಸುಂದರ್ ರಾಜ್, ಶ್ಯಾಮ್, ಆಯೋಜನೆ: ಎಚ್‌ಎಎಲ್ ಲಲಿತಕಲಾ ಸಂಘ, ಸ್ಥಳ: ಹಳೆಯ ಎಚ್‌ಎಂಎ ಸಭಾಂಗಣ, ಎಚ್‌ಎಎಲ್, ಮಧ್ಯಾಹ್ನ 3.30

**ಶ್ರೀ ಸರಸ್ವತಿ ವಿದ್ಯಾಮಂದಿರದ (ಎಸ್‌ಎಸ್‌ವಿಎಂ) 75 ವರ್ಷಗಳ ಸಂಭ್ರಮಾಚರಣೆ:** ಅತಿಥಿಗಳು: ಎನ್. ಮಂಜುನಾಥ ಪ್ರಸಾದ್, ಸೌಜನ್ಯ, ‘ಸನಾತನಿ’ ನೃತ್ಯ ಸಂಗೀತ ನಾಟಕ ಪ್ರದರ್ಶನ: ಕಲಾ ಸುಜಯಾ ತಂಡ, ಆಯೋಜನೆ, ಸ್ಥಳ: ಎಸ್‌ಎಸ್‌ವಿಎಂ ಕ್ಯಾಂಪಸ್, ವಿ.ವಿ. ಪುರ, ಸಂಜೆ 5

**‘ಕನಕ ಕಾವ್ಯ ದೀವಿಗೆ’ ಮೂರು ದಿನಗಳ ಕನಕ ನಡೆ–ನುಡಿ ಉತ್ಸವದ ಉದ್ಘಾಟನೆ:** ಸಿದ್ದರಾಮಯ್ಯ, ಅಧ್ಯಕ್ಷತೆ: ಮುನಿರತ್ನ, ಅತಿಥಿಗಳು: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಎಚ್.ಎಂ. ರೇವಣ್ಣ, ಡಾ.ಸಿ.ಎನ್. ಮಂಜುನಾಥ್, ಎಂ.ವಿ. ವೆಂಕಟೇಶ್, ಕೆ.ಎಂ. ಗಾಯಿತ್ರಿ, ಶಶಿಧರ ಅಡಪ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

**‘ನನ್ನ ತೇಜಸ್ವಿ’ ನಾಟಕ ಪ್ರದರ್ಶನ:** ಆಯೋಜನೆ: ಕಲಾಮಾಧ್ಯಮ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 7

### ಜುಂಜಪ್ಪ ಸ್ವಾಮಿ ಜಾತ್ರಾ ಮಹೋತ್ಸವ

ಪ್ರಜಾವಾಣಿ ವಾರ್ತೆ

**ಪೀಣ್ಯ,ದಾಸರಹಳ್ಳಿ:** ಮಲ್ಲಸಂದ್ರದ ಜುಂಜಪ್ಪ ಸ್ವಾಮಿ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ನಡೆಯಿತು.

‘ಜುಂಜಪ್ಪ ಸ್ವಾಮಿಯು ಮೂಲತಃ ಯಾದವ ಸಮುದಾಯವರು. ಈ ದೇವಾಲಯದಲ್ಲಿ ಪೂಜೆ ಮಾಡಿದರೆ ಭಕ್ತರ ಮನೆಯಲ್ಲಿ ಹಾವು, ಚೇಳುಗಳು ಕಾಣುವುದಿಲ್ಲ ಎಂಬ ಪ್ರತೀತಿಯಿದೆ. ಹಾಗಾಗಿ ಅಕ್ಕಪಕ್ಕದ ಗ್ರಾಮಸ್ಥರೆಲ್ಲರೂ ಈ ದೇವಾಲಯಕ್ಕೆ ಬರುತ್ತಾರೆ’ ಎಂದು ಶಾಸಕ ಎಸ್. ಮುನಿರಾಜು ಹೇಳಿದರು.

# ‘ಪಟ್ಟಭದ್ರರಿಂದ ಮೌಢ್ಯ ಬಿತ್ತನೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಜ್ಞಾನ ವಿಷಯ ಅಧ್ಯಯನ ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿದ್ದು, ವಿಜ್ಞಾನ ಓದಿದವರೇ ಮೂಢನಂಬಿಕೆ, ಕಂದಾಚಾರಕ್ಕೆ ಗಂಟು ಬೀಳುತ್ತಿದ್ದಾರೆ. ಚಲನೆ ಇಲ್ಲದ ಜಾತಿ ತಾರತಮ್ಯವನ್ನು ಗಟ್ಟಿಗೊಳಿಸುವ ಸಲುವಾಗಿಯೇ ಪಟ್ಟಭದ್ರರು ಮೌಢ್ಯವನ್ನು ಬಿತ್ತುತ್ತಿದ್ದಾರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನೃಪತುಂಗ ವಿಶ್ವವಿದ್ಯಾಲಯದಲ್ಲಿ ₹52 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಏಳು ಅಂತಸ್ತಿನ ನೂತನ ಶೈಕ್ಷಣಿಕ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಶತಮಾನಗಳ ಹಿಂದೆಯೇ ಬಸವಾದಿ ಶರಣರು ಮೌಢ್ಯ, ಕಂದಾಚಾರಗಳ ವಿರುದ್ಧ ಹೋರಾಟ ಮಾಡಿದ್ದರು. ಆದರೆ, ಇಂದಿಗೂ ಮೌಢ್ಯವಿದೆ. ವಿದ್ಯೆ, ಪ್ರತಿಭೆ ಯಾವುದೇ ಒಂದು ಜಾತಿಯ ಸ್ವತ್ತಲ್ಲ. ಅವಕಾಶ ಸಿಗಬೇಕು. ವೈಚಾರಿಕತೆ, ವೈಜ್ಞಾನಿಕತೆ ಬೆಳೆಸಿಕೊಂಡರೆ ಸಮಾಜದ ಪ್ರಗತಿ ಸಾಧ್ಯ. ವಿಜ್ಞಾನದ ವಿದ್ಯಾರ್ಥಿಗಳು ವೈಚಾರಿಕತೆ ಅಳವಡಿಸಿಕೊಂಡು ಸಮಾಜವನ್ನು ಮುನ್ನಡೆಸಬೇಕು ಎಂದರು.

ಹೊಸ ಕಟ್ಟಡದ ಆರನೇ ಮತ್ತು ಏಳನೇ ಮಹಡಿಗಳನ್ನು ಪೂರ್ಣಗೊಳಿಸಲು ₹8 ಕೋಟಿ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ.ಫಜೀಹಾ ಸುಲ್ತಾನ, ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಖುಷ್ಬೂ ಗೋಯಲ್ ಚೌಧರಿ, ಆಡಳಿತ ಮತ್ತು ಮೌಲ್ಯಮಾಪನ ಕುಲಸಚಿವೆ ಪ್ರೊ.ಎ.ಸಿ. ಮಂಜುಳಾ ಉಪಸ್ಥಿತರಿದ್ದರು.

ನೃಪತುಂಗ ವಿಶ್ವವಿದ್ಯಾಲಯದ ನೂತನ ಶೈಕ್ಷಣಿಕ ಕಟ್ಟಡವನ್ನು ಸಿದ್ದರಾಮಯ್ಯ ಉದ್ಘಾಟಿಸಿದರು. ಡಾ. ಎಂ.ಸಿ. ಸುಧಾಕರ್, ನೃಪತುಂಗ ವಿ.ವಿ ಪ್ರಭಾರ ಕುಲಪತಿ ಪ್ರೊ. ಫಜೀಹಾ ಸುಲ್ತಾನ, ಕುಲಸಚಿವೆ ಪ್ರೊ.ಎ.ಸಿ. ಮಂಜುಳಾ, ಇಲಾಖೆ ಪ್ರಧಾನ ಕಾರ್ಯದರ್ಶಿ ಖುಷ್ಬೂ ಗೋಯಲ್ ಚೌಧರಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

### ‘ವಿದೇಶಿ ವಿ.ವಿಗಳಲ್ಲೂ ಮೀಸಲಾತಿ’

ಕರ್ನಾಟಕದಲ್ಲಿ ಆರಂಭವಾಗುವ ವಿದೇಶಿ ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರಾಜ್ಯದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೀಸಲಾತಿ ನೀಡಲು ಸಲಹೆ ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಬ್ರಿಟನ್‌ನ ಲ್ಯಾಂಕಾಸ್ಟರ್ ವಿಶ್ವವಿದ್ಯಾಲಯ 2026ರ ಫೆಬ್ರವರಿಯಿಂದ ಕಾರ್ಯಾರಂಭ ಮಾಡಲಿದ್ದು, ಆಗಸ್ಟ್‌ನಿಂದ ಆರಂಭವಾಗುವ ಪ್ರವೇಶ ಪ್ರಕ್ರಿಯೆ ವೇಳೆ ಮೀಸಲಾತಿ ಪರಿಗಣಿಸಲಾಗುವುದು. ಮೀಸಲಾತಿ ಅಡಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

### ಗೋಪ್ಯತೆ ರಕ್ಷಣೆ ಸಂಬಂಧಿಸಿದಂತೆ ಮೂರು ದಿನಗಳಲ್ಲಿ ಪ್ರಮಾಣಪತ್ರ ಸಲ್ಲಿಸಿ: ಹೈಕೋರ್ಟ್

# ಬಟ್ಟೆ ಬಿಚ್ಚಿ ಗುರುತು ಪತ್ತೆ: ಸಮೀಕ್ಷೆಗೆ ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ಲೈಂಗಿಕ ಅಲ್ಪಸಂಖ್ಯಾತರ ಬಟ್ಟೆ ತೆಗೆಸಿ ಪರಿಶೀಲನೆ ಮಾಡಿ ಗುರುತು ಪತ್ತೆ ಹಚ್ಚುವ (ಸ್ಟ್ರಿಪ್ ಅಂಡ್ ಸರ್ಚ್ ಮೆಥೆಡ್) ವಿಧಾನಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಮೈಸೂರಿನ, ‘ಅನಿತಾ ಹ್ಯೂಮನಟೇರಿಯನ್ ಫೌಂಡೇಶನ್’ ಸಂಸ್ಥಾಪಕ ಟ್ರಸ್ಟಿ ಅನಿತಾ ಪ್ರಸಾದ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಸ್.ಶ್ರೀವತ್ಸ ಅವರ ವಾದ ಆಲಿಸಿದ ನ್ಯಾಯಪೀಠ, ‘ಲೈಂಗಿಕ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ನಡೆಸಲಾಗುವ ಯಾವುದೇ ಸಮೀಕ್ಷೆಯನ್ನು ಕಡ್ಡಾಯವಾಗಿ ಗೋಪ್ಯವಾಗಿರಿಸಬೇಕು. ಸಂಗ್ರಹಿಸಿದ ಮಾಹಿತಿಯನ್ನು ಗೋಪ್ಯತೆಯಿಂದ ಹೇಗೆ ಕಾಪಾಡಲಾಗುತ್ತಿದೆ ಎಂಬುದಕ್ಕೆ ಸಂಬಂಧಿಸಿದಂತೆ ಪೊಲೀಸ್ ಮಹಾನಿರ್ದೇಶಕರು ಮೂರು ದಿನಗಳಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು’ ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿತು.

ಅಂತೆಯೇ, ‘ಲೈಂಗಿಕ ಅಲ್ಪಸಂಖ್ಯಾತರು ಸಮೀಕ್ಷೆಯಲ್ಲಿ ಸ್ವಯಂಪ್ರೇರಣೆಯಿಂದ ಭಾಗ ವಹಿಸುವುದನ್ನು ಸರ್ಕಾರ ಮತ್ತು ಸಂಬಂಧಿಸಿದವರು ಖಾತರಿ ಪಡಿಸಬೇಕು. ಯಾರನ್ನೂ ಬಟ್ಟೆ ತೆಗೆಸಿ ಶೋಧಿಸಿ, ಗುರುತು ಪತ್ತೆ ಮಾಡಿ ಸಮೀಕ್ಷೆ ನಡೆಸುವಂತಿಲ್ಲ’ ಎಂದೂ ನ್ಯಾಯಪೀಠ ತಾಕೀತು ಮಾಡಿದೆ.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕ, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಕಾರ್ಯದರ್ಶಿ, ಲೈಂಗಿಕ ಅಲ್ಪಸಂಖ್ಯಾತರ ರಾಷ್ಟ್ರೀಯ ಮಂಡಳಿ ಮತ್ತು ಜನಗಣತಿ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 5ಕ್ಕೆ ಮುಂದೂಡಿದೆ. ಹೈಕೋರ್ಟ್ ವಕೀಲ ಉದಿತ್ ರಮೇಶ್ ಮತ್ತು ವಿ.ಆರ್. ರೋಹಿತ್ ವಕಾಲತ್ತು ವಹಿಸಿದ್ದಾರೆ.

**ಅರ್ಜಿಯಲ್ಲಿ ಏನಿದೆ?**

‘ಸಂವಿಧಾನದ 14, 15, 19(1)(ಎ) ಮತ್ತು 21ನೇ ವಿಧಿಗಳಿಗೆ ವಿರುದ್ಧವಾಗಿ ಖಾಸಗಿತನ ಉಲ್ಲಂಘಿಸಿ ನಡೆಸಲಾಗುತ್ತಿರುವ ಈ ಸಮೀಕ್ಷೆಯನ್ನು ಅಸಾಂವಿಧಾನಿಕ ಮತ್ತು ಸ್ವೇಚ್ಛೆಯ ಕ್ರಮ ಎಂದು ಘೋಷಿಸಬೇಕು. ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಕಾಯ್ದೆ ಮತ್ತು ನಿಯಮಕ್ಕೆ ಪೂರಕವಾಗಿ ಹೊಸದಾಗಿ ದತ್ತಾಂಶ ಸಂಗ್ರಹ ಅಥವಾ ನೀತಿ ರೂಪಿಸಲು ಪ್ರತಿವಾದಿಗಳಿಗೆ ನಿರ್ದೇಶಿಸಬೇಕು. ಈಗಾಗಲೇ ಸ್ಟ್ರಿಪ್ ಅಂಡ್ ಸರ್ಚ್ ವಿಧಾನದಿಂದ ಸಂಗ್ರಹಿಸಲಾಗಿರುವ ದತ್ತಾಂಶವನ್ನು ನಾಶಪಡಿಸಲು ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

### ಶಿಕ್ಷಕರಿಗೆ ಪ್ರಬಂಧ ಸ್ಪರ್ಧೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ನಗರದ ಚಾಮರಾಜ ಪೇಟೆಯಲ್ಲಿರುವ ಸದಾತನ ಸಂಸ್ಥೆಯು ಶಾಲಾ ಶಿಕ್ಷಕರಲ್ಲಿ ಓದು ಮತ್ತು ಬರವಣಿಗೆ ಕೌಶಲವನ್ನು ಉತ್ತೇಜಿಸಲು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಹಮ್ಮಿಕೊಂಡಿದೆ.

ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು ‘ನೆಮ್ಮದಿಯ ಜೀವನಕ್ಕೆ ಸನಾತನ ಧರ್ಮದ ಮೌಲ್ಯಗಳು’ ವಿಷಯ ಕುರಿತು ಪ್ರಬಂಧವನ್ನು ಬರೆದು ಡಿಸೆಂಬರ್ 31ರ ಒಳಗೆ ಕಳುಹಿಸಬಹುದು. ಒಟ್ಟು 13 ಬಹುಮಾನಗಳಿದ್ದು, ವಿಜೇತರಿಗೆ ನಗದು ಬಹುಮಾನ ನೀಡಲಾಗುತ್ತದೆ ಎಂದು ಸಂಸ್ಥೆಯ ಟ್ರಸ್ಟಿ ಕೆ.ಎಸ್.ಉಪಾಧ್ಯಾಯ ತಿಳಿಸಿದ್ದಾರೆ.

ಸ್ಪರ್ಧೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗೆ 7483681708 ಸಂಪರ್ಕಿಸಲು ಕೋರಲಾಗಿದೆ.

ಗುರುವಾರ, ಅಕ್ಟೋಬರ್ 16, 2025 | ₹ 7.00

prajavani.net prajavani

www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಆಹಾ ಲಡ್ಡು...**
ದೀಪಾವಳಿ ಹಬ್ಬಕ್ಕಾಗಿ, ಚೆನ್ನೈನ ಅಂಗಡಿಯೊಂದರ ಕೆಲಸಗಾರ ಸಿಹಿ ಲಡ್ಡು ತಯಾರಿಸಿದರು. ಎಲ್ಲೆಡೆ ಹಬ್ಬದ ವ್ಯಾಪಾರ ಜೋರಾಗಿದೆ

**ಮಧುಸಂಗ್ರಹ**
ಜಮ್ಮು ಮತ್ತು ಕಾಶ್ಮೀರದ ಶ್ರೀನಗರದ ಹೊಲವೊಂದರಲ್ಲಿ ಕೇಸರಿ ಹೂವಿನಿಂದ ಮಕರಂದ ಹೀರಿದ ಜೇನುನೊಣ

ಶ್ರೀ ಸಿದ್ಧರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮತ್ತು
5 ಬೆಂಗಳೂರು ನಗರ ಪಾಲಿಕೆಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು

## ಬೆಂಗಳೂರು ನಾಗರಿಕರಿಗೆ ದೀಪಾವಳಿ ಹಬ್ಬದ ಅತೀ ದೊಡ್ಡ ಉಡುಗೊರೆ

# ಕರ್ನಾಟಕ ಸರ್ಕಾರದಿಂದ ಐತಿಹಾಸಿಕ ನಿರ್ಣಯ

## ಬಿ-ಖಾತಾದಿಂದ ಎ-ಖಾತಾ ಪರಿವರ್ತನೆ ಮತ್ತು ಹೊಸ ನಿವೇಶನಗಳಿಗೂ ಎ-ಖಾತಾ ಲಭ್ಯ

### ಬಿ-ಖಾತಾದಿಂದ ಎ-ಖಾತಾ ಪರಿವರ್ತನೆ ಮತ್ತು ಹೊಸ ನಿವೇಶನಗಳಿಗೆ ಎ-ಖಾತಾ ಪಡೆಯಲು ಅರ್ಜಿ ಸಲ್ಲಿಸುವ ವಿಧಾನ

#### 2000 ಚ.ಮೀ.ಗಳ ವರೆಗೆ

- ನಿಮ್ಮ ಮೊಬೈಲ್ ಮತ್ತು ಓಟಿಪಿ ಬಳಸಿ https://bbmp.karnataka.gov.in/ BtoAKhata ರಲ್ಲಿ ಲಾಗಿನ್ ಆಗಿ
- ನಿಮ್ಮ ಅಂತಿಮ ಬಿ-ಖಾತೆಯ ಇಪಿಐಡಿ ಸಂಖ್ಯೆಯನ್ನು ನಮೂದಿಸಿ ವಿವರಗಳನ್ನು ಪಡೆಯಿರಿ
- ಮಾಲೀಕರ ಆಧಾರ್ ದೃಢೀಕರಿಸಿ
- ನಿವೇಶನವಿರುವ ಸ್ಥಳವನ್ನು ಮತ್ತು ನಿವೇಶನ ಮುಂಭಾಗದ ರಸ್ತೆಯ ಪ್ರಕಾರವನ್ನು ದೃಢಪಡಿಸಿ
- ಭೂ ಪರಿವರ್ತನೆಯಾದ ಮತ್ತು ಭೂ ಪರಿವರ್ತನೆಯಾಗದ ಎರಡೂ ನಿವೇಶನಗಳು ಅರ್ಹ (ಫ್ಲಾಟ್‌ಗಳಿಗೆ ಅರ್ಹತೆಯಿಲ್ಲ)
- ಸ್ವೀಕೃತಿಯನ್ನು ಪಡೆಯಿರಿ
- ನಗರ ಪಾಲಿಕೆ ವತಿಯಿಂದ ನಿವೇಶನಕ್ಕೆ ಭೇಟಿ ಮತ್ತು ದೃಢೀಕರಣ
- ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರದ ಶೇ. 5% ರಷ್ಟು ಮೊತ್ತವನ್ನು "ಏಕ ನಿವೇಶನ" ಅನುಮೋದನೆ ಶುಲ್ಕವಾಗಿ ಹಾಗೂ ಇತರೆ ಶುಲ್ಕಗಳನ್ನು ಪಾವತಿಸುವುದು
- ಸ್ವಯಂಕೃತ "ಏಕ ನಿವೇಶನ" ಅನುಮೋದನೆಯಾಗಿ ಅರ್ಹತಾನುಸಾರ ಎ-ಖಾತಾ ವಿತರಣೆ

#### 2000 ಚ.ಮೀ.ಗೂ ಹೆಚ್ಚಿನ

- ನೋಂದಾಯಿತ ವಾಸ್ತುಶಿಲ್ಪಿ ಅಥವಾ ಎಂಜಿನಿಯರ್‌ರನ್ನು ಸಂಪರ್ಕಿಸಿ
- ಯಾವುದೇ ರೀತಿಯ ನಿವೇಶನಗಳಿಗಾಗಿ https://bpas.bbmpgov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ
- ಅಗತ್ಯ ದಾಖಲೆಗಳು ಮತ್ತು ಕ್ಯಾಡ್ ಡ್ರಾಯಿಂಗ್ ಅನ್ನು ಅಪ್‌ಲೋಡ್ ಮಾಡಿ
- ಆರಂಭಿಕ ಪರಿಶೀಲನಾ ಶುಲ್ಕ ರೂ.500 ಅನ್ನು ಪಾವತಿಸಿ
- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ (ಫ್ಲಾಟ್‌ಗಳಿಗೆ ಅರ್ಹತೆಯಿಲ್ಲ)
- ನಿವೇಶನಕ್ಕೆ ಭೇಟಿ ನೀಡುವ ಮೂಲಕ ಪರಿಶೀಲನೆ
- ಅರ್ಹತಾನುಸಾರ ಅನುಮೋದನೆ
- ಅನ್ವಯವಾಗುವ ಶುಲ್ಕಗಳ ಪಾವತಿ
- ಅರ್ಹತಾನುಸಾರ "ಏಕನಿವೇಶನ" ಅನುಮೋದನೆ ಪ್ರಮಾಣಪತ್ರ, ಡ್ರಾಯಿಂಗ್ ಮತ್ತು ಎ-ಖಾತಾ ವಿತರಣೆ



Kaleesuwari
ನಿಮಗೆ ಆರೋಗ್ಯಕರ,
ಸಂತೋಷ ಮತ್ತು ಸಮೃದ್ಧಿ
ದೀಪಾವಳಿಯನ್ನು ನಾವು ಬಯಸುತ್ತೇವೆ.
ಗೋಲ್ಡ್ ವಿನ್ನರ್
Gold Winner®
Kaleesuwari
Gold Winner
Refined Sunflower Oil
Clear, Light & Non-sticky
Zero Cholesterol
Vitamins A, D, E
Improves Digestion
80 QUALITY CHECKS
0% CHOLESTEROL
VITAMINS A D E
CLEAR & LIGHT
US FDA REGISTERED
80 QUALITY CHECKS
www.kaleesuwari.com | 99621 50000

ಗುರುವಾರ, ಅಕ್ಟೋಬರ್ 16, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 286 | ಪುಟ 24

prajavani.net prajavani www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ದೀಪಾವಳಿ ತಯಾರಿ ಜೋರು...** ಪಂಜಾಬ್‌ನ ಅಮೃತಸರದ ಮಳಿಗೆಯೊಂದರಲ್ಲಿ ಆಲಂಕಾರಿಕ ವಸ್ತುಗಳನ್ನು ಬುಧವಾರ ಖರೀದಿ ಮಾಡುತ್ತಿದ್ದ ಯುವತಿ

**ಕುಲದೀಪ್‌ಗೆ ಬಡ್ತಿ** ಭಾರತ ಕ್ರಿಕೆಟ್ ತಂಡದ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ 14ನೇ ಸ್ಥಾನಕ್ಕೇರಿದರು. ತಮ್ಮ ವೃತ್ತಿಜೀವನ ಶ್ರೇಷ್ಠ ಸಾಧನೆ ದಾಖಲಿಸಿದರು

ಸೆನ್ಸೆಕ್ಸ್ 82,605 | ನಿಫ್ಟಿ 25,323 | $/₹88.08 | ಚಿನ್ನ (Std. 10g) ₹1,32,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,06,000 (ಬೆಂಗಳೂರು)

## ಬೆಂಗಳೂರಿನಲ್ಲಿ ಕೆ.ಜಿ ಬೆಳ್ಳಿ ₹2.06 ಲಕ್ಷ

ನವದೆಹಲಿ/ಬೆಂಗಳೂರು: ಬೆಂಗಳೂರಿನ ರಿಟೇಲ್ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಕೆ.ಜಿ ಬೆಳ್ಳಿ ಧಾರಣೆ ₹2.06 ಲಕ್ಷ ಆಗಿದೆ.

ವಿವರ ಪುಟ 8

# ಪರೀಕ್ಷಾ ತೇರ್ಗಡೆಗೆ 33 ಅಂಕ

### 2025–2026ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಿಂದಲೇ ಹೊಸ ನಿಯಮ ಅನ್ವಯ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಬೇಕಿರುವ ಕನಿಷ್ಠ ಅಂಕವನ್ನು ಶೇ 33ಕ್ಕೆ ನಿಗದಿ ಮಾಡಲಾಗಿದ್ದು, ಈ ನಿಯಮ 2025–26ನೇ ಶೈಕ್ಷಣಿಕ ಸಾಲಿನಿಂದಲೇ ಹೊಸ, ಪುನರಾವರ್ತಿತ ಹಾಗೂ ಖಾಸಗಿ ವಿದ್ಯಾರ್ಥಿಗಳಿಗೆ ಅನ್ವಯವಾಗಲಿದೆ.

ಈ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ರಾಜ್ಯದಲ್ಲಿ ತೇರ್ಗಡೆಯಾಗಲು ಪ್ರತಿ ವಿದ್ಯಾರ್ಥಿ ಶೇ 35ರಷ್ಟು ಅಂಕ ಪಡೆಯಬೇಕು ಎಂಬ ನಿಯಮವಿದೆ. ಸಿಬಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯಕ್ರಮ ಹಾಗೂ ನೆರೆಯ ರಾಜ್ಯಗಳಲ್ಲಿ ತೇರ್ಗಡೆಯಾಗಲು ಕನಿಷ್ಠ ಅಂಕ ಶೇ 33 ಇದೆ. ಈ ತಾರತಮ್ಯ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಸಹ ಶಿಫಾರಸು ಮಾಡಿತ್ತು. ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣವನ್ನು ಹೆಚ್ಚಿಸಲು, ಕೇಂದ್ರ ಹಾಗೂ ನೆರೆಯ ರಾಜ್ಯಗಳ ಉತ್ತೀರ್ಣತಾ ಮಾನದಂಡವನ್ನು ರಾಜ್ಯ ಪಠ್ಯಕ್ರಮ ವಿದ್ಯಾರ್ಥಿಗಳಿಗೂ ಅನ್ವಯ ಮಾಡಲು ಮಹತ್ವದ ನಿರ್ಧಾರ ತೆಗೆದುಕೊಳ್ಳಲಾಗಿದೆ’ ಎಂದು ವಿವರ ನೀಡಿದರು.

ಏಕರೂಪದ ಪರೀಕ್ಷಾ ಪದ್ಧತಿ ಜಾರಿಗೊಳಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೊರಡಿಸಿದ್ದ ಕರಡು ಅಧಿಸೂಚನೆಗೆ ಸಾರ್ವಜನಿಕರಿಂದ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಕರಡು ಅಧಿಸೂಚನೆ ಪರವಾಗಿ 701 ಹಾಗೂ ವಿರುದ್ಧವಾಗಿ ಎಂಟು ಪತ್ರಗಳು ಸಲ್ಲಿಕೆಯಾಗಿವೆ.

**18,000 ಶಿಕ್ಷಕರ ನೇಮಕಾತಿಗೆ ಡಿಸೆಂಬರ್‌ನಲ್ಲಿ ಅಧಿಸೂಚನೆ ಹೊರಡಿಸಲಾಗುವುದು. ಬರುವ ಶೈಕ್ಷಣಿಕ ವರ್ಷದ ಒಳಗೆ ನೇಮಕಾತಿ ಆದೇಶ ನೀಡಲಾಗುವುದು**

**ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

ವಾರದ ಒಳಗೆ ಅಂತಿಮ ಅಧಿಸೂಚನೆ ಹೊರಬೀಳಲಿದೆ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಆಂತರಿಕ ಮತ್ತು ಬಾಹ್ಯ ಪರೀಕ್ಷೆ ಸೇರಿ ತೇರ್ಗಡೆಗೆ ಒಟ್ಟಾರೆ ಶೇ 33 ಅಂಕ ಪಡೆಯಬೇಕು. ಎಲ್ಲ ವಿಷಯಗಳಿಂದ 206 ಅಂಕ ಪಡೆದವರು ಪ್ರತಿ ವಿಷಯದಲ್ಲಿ ಕನಿಷ್ಠ 30 ಅಂಕ ಪಡೆದರೆ ಸಾಕು, ಉತ್ತೀರ್ಣ ರಾಗುತ್ತಾರೆ. ಪಿಯು ವಿದ್ಯಾರ್ಥಿಗಳು ಪ್ರತಿ ವಿಷಯದ ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ 30 ಅಂಕ ಪಡೆದು ಒಟ್ಟಾರೆ ಶೇ 33 ಅಂಕ ಗಳಿಸಬೇಕು ಎಂದರು.

| ಪರೀಕ್ಷೆ | ಗರಿಷ್ಠ ಅಂಕ | ತೇರ್ಗಡೆಯ ಅಂಕ | ಕನಿಷ್ಠ ಶೇಕಡವಾರು |
|---|---|---|---|
| ಎಸ್‌ಎಸ್‌ಎಲ್‌ಸಿ | 625 | 206 | 33 |
| ಪಿಯುಸಿ | 600 | 198 | 33 |

### ಕೆಪಿಎಸ್: ನವೆಂಬರ್‌ನಿಂದಲೇ 2026–27ನೇ ಸಾಲಿನ ದಾಖಲಾತಿ ಆರಂಭ

ಕರ್ನಾಟಕ ಪಬ್ಲಿಕ್ ಶಾಲೆಗಳೂ (ಕೆಪಿಎಸ್) ಸೇರಿದಂತೆ ರಾಜ್ಯದ ಸರ್ಕಾರಿ ಶಾಲೆಗಳ 2026–27ನೇ ಸಾಲಿನ ದಾಖಲಾತಿ ಪ್ರಕ್ರಿಯೆಯನ್ನು ಬರುವ ನವೆಂಬರ್‌ನಿಂದಲೇ ಆರಂಭಿಸಲಾಗುವುದು ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ರಾಜ್ಯದಲ್ಲಿ ಪ್ರಸ್ತುತ 308 ಕೆಪಿಎಸ್ ಶಾಲೆಗಳಿವೆ. ಬಜೆಟ್‌ನಲ್ಲಿ ಘೋಷಿಸಿದ 500 ಶಾಲೆಗಳನ್ನು ಎಡಿಬಿ ನೆರವಿನ ಸಹಯೋಗದಲ್ಲಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ನೆರವಿನಲ್ಲಿ ಆ ಭಾಗಕ್ಕೆ 200 ಶಾಲೆ ಹಾಗೂ ಗಣಿ ಬಾಧಿತ 10 ತಾಲ್ಲೂಕುಗಳಿಗೆ ತಲಾ 10ರಂತೆ 100 ಶಾಲೆಗಳನ್ನು ತೆರೆಯಲಾಗುತ್ತಿದೆ. ಒಂದೇ ವರ್ಷದಲ್ಲಿ 800 ಹೊಸ ಶಾಲೆಗಳ ಆರಂಭಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಲು ದ್ವಿಭಾಷಾ ಮಾಧ್ಯಮದ ಕಲಿಕೆಗೆ ಅವಕಾಶ ನೀಡಲಾಗಿದೆ. ಆರನೇ ತರಗತಿಯಿಂದ ವಿದ್ಯಾರ್ಥಿಗಳು ಕನ್ನಡ ಇಲ್ಲವೇ ಇಂಗ್ಲಿಷ್ ಭಾಷಾ ಮಾಧ್ಯಮ ಆಯ್ಕೆ ಮಾಡಿಕೊಳ್ಳಬಹುದು ಎಂದರು.

### ವಾರದಲ್ಲಿ ಒಂದು ಅವಧಿ ಮೌಲ್ಯ ಶಿಕ್ಷಣ

1ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ವಾರದಲ್ಲಿ ಒಂದು ಅವಧಿಯನ್ನು ಮೌಲ್ಯ ಶಿಕ್ಷಣ ಬೋಧನೆಗೆ ಮೀಸಲಿಡಲಾಗುವುದು. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಅನುಭೂತಿ ಮತ್ತು ದಯೆ, ಗೌರವ, ಪ್ರಾಮಾಣಿಕತೆ ಮತ್ತು ಬದ್ಧತೆ, ಸುಸ್ಥಿರ ಜೀವನ ಮತ್ತು ಪರಿಸರ ಜಾಗೃತಿ, ನಾಗರಿಕ ಜವಾಬ್ದಾರಿ, ವೈವಿಧ್ಯ, ಸಮಾನತೆ, ವೈಜ್ಞಾನಿಕ ಮನೋಭಾವ, ಸುರಕ್ಷತೆ, ಲಿಂಗ ಸಮಾನತೆ ಮೊದಲಾದ ವಿಷಯ ಒಳಗೊಂಡ 10 ಪುಸ್ತಕಗಳನ್ನು ಸಿದ್ಧಪಡಿಸಿದೆ. ಮೂಲ ಮೌಲ್ಯಗಳು ಮತ್ತು ಉಪ ಮೌಲ್ಯಗಳಿಗೆ ಅನುಗುಣವಾಗಿ ಪಠ್ಯ ಚಟುವಟಿಕೆ ಸಿದ್ಧಪಡಿಸಲಾಗಿದೆ ಎಂದು ಮಧು ಬಂಗಾರಪ್ಪ ಮಾಹಿತಿ ನೀಡಿದರು.

**ಚಿನಕುರುಳಿ** ಪ್ರಕಾಶ್ ಶೆಟ್ಟಿ

### ಪಾಕಿಸ್ತಾನ– ಅಫ್ಗಾನಿಸ್ತಾನ ನಡುವೆ 48 ಗಂಟೆಗಳ ತಾತ್ಕಾಲಿಕ ಕದನ ವಿರಾಮ

# 40ಕ್ಕೂ ಹೆಚ್ಚು ತಾಲಿಬಾನಿಗಳ ಹತ್ಯೆ

**ಇಸ್ಲಾಮಾಬಾದ್ (ಪಿಟಿಐ/ಎಎಫ್‌ಪಿ):** ಬುಧವಾರ ಬೆಳಿಗ್ಗೆ ಗಡಿಯಲ್ಲಿ ನಡೆದ ಮತ್ತೊಂದು ಸುತ್ತಿನ ಕಾದಾಟದಲ್ಲಿ ಹಲವು ಯೋಧರು ಮತ್ತು ನಾಗರಿಕರು ಮೃತಪಟ್ಟ ನಂತರ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದ ನಡುವೆ 48 ಗಂಟೆಗಳ ಕದನ ವಿರಾಮ ಏರ್ಪಟ್ಟಿದೆ. ಪಾಕಿಸ್ತಾನದ ವಿದೇಶಾಂಗ ಇಲಾಖೆ ಇದನ್ನು ಸ್ಪಷ್ಟಪಡಿಸಿದೆ.

ತಾಲಿಬಾನಿಗಳ ಮನವಿಯ ನಂತರ ಪಾಕಿಸ್ತಾನ ಸರ್ಕಾರ ಮತ್ತು ತಾಲಿಬಾನ್ ಆಡಳಿತದ ಅಫ್ಗಾನಿಸ್ತಾನ ಸರ್ಕಾರ ಬುಧವಾರ ಸಂಜೆ 6 ಗಂಟೆಯಿಂದ ಮುಂದಿನ 48 ಗಂಟೆಗಳವರೆಗೆ ತಾತ್ಕಾಲಿಕ ಕದನ ವಿರಾಮಕ್ಕೆ ನಿರ್ಧರಿಸಿದವು ಎಂದು ಇಲಾಖೆ ತಿಳಿಸಿದೆ.

ತಾಲಿಬಾನ್ ಭದ್ರತಾ ಪಡೆಯ ಸಿಬ್ಬಂದಿ (ಎಎಫ್‌ಪಿ ಚಿತ್ರ)

ತಾಲಿಬಾನ್ ನಡೆಸಿದ ಹಲವಾರು ದಾಳಿಗಳನ್ನು ತಾನು ಹಿಮ್ಮೆಟ್ಟಿಸಿರುವುದಾಗಿ ಪಾಕಿಸ್ತಾನ ಸೇನೆ ಬುಧವಾರ ಹೇಳಿದೆ. ಅಲ್ಲದೆ, ಉಭಯ ದೇಶಗಳ ನಡುವಿನ ಗಡಿ ಘರ್ಷಣೆಯ ಪ್ರತ್ಯೇಕ ಘಟನೆಗಳಲ್ಲಿ ತಾನು 40ಕ್ಕೂ ಹೆಚ್ಚು ದಾಳಿಕೋರರನ್ನು ಕೊಂದಿರುವುದಾಗಿ ತಿಳಿಸಿದೆ.

8

### ಪಾಕಿಸ್ತಾನಿ ಅಧಿಕಾರಿಗಳಿಂದ ಅಫ್ಗನ್ ನಿರಾಶ್ರಿತರ ಶಿಬಿರ ಧ್ವಂಸ

**ಕರಾಚಿ (ಪಿಟಿಐ):** ಪಾಕಿಸ್ತಾನದ ಕರಾಚಿಯ ಹೊರವಲಯದಲ್ಲಿರುವ ನಿರಾಶ್ರಿತರ ಶಿಬಿರವಾದ ಅಫ್ಗನ್ ಬಸ್ತಿಯಲ್ಲಿ (ಗ್ರಾಮ) ಪಾಕಿಸ್ತಾನಿ ಅಧಿಕಾರಿಗಳು ಧ್ವಂಸ ಮತ್ತು ಸ್ವಚ್ಛತಾ ಕಾರ್ಯಾಚರಣೆ ನಡೆಸಿದ್ದಾರೆ. ಇದನ್ನು ವಿರೋಧಿಸಿ ನಡೆದ ಪ್ರತಿಭಟನೆಯ ವೇಳೆ ಪೊಲೀಸರೊಂದಿಗೆ ಘರ್ಷಣೆ ನಡೆದಿದ್ದು, ಕೆಲವು ಜನರು ಗಾಯಗೊಂಡಿದ್ದಾರೆ.

8

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

## ವೈದ್ಯೆ ಕೃತಿಕಾ ರೆಡ್ಡಿ ಕೊಲೆ ಪ್ರಕರಣ

# ಅಳಿಯನಿಂದ ಕಿರುಕುಳ: ಮಾವ ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮದುವೆಯ ನಂತರ ಕೃತಿಕಾಳನ್ನು ನಿರ್ಲಕ್ಷಿಸಲು ಪ್ರಾರಂಭಿಸಿದ್ದ. ಮನೆಯ ಸಣ್ಣ ನಿರ್ಧಾರಗಳಿಗೂ ತನ್ನ ತಂದೆಯ ಒಪ್ಪಿಗೆ ಪಡೆಯಬೇಕೆಂದು ಮತ್ತು ವೈಯಕ್ತಿಕ ಖರ್ಚುಗಳನ್ನು ಆಕೆಯೇ ಭರಿಸಬೇಕೆಂದು ಅಳಿಯ ಮಹೇಂದ್ರ ರೆಡ್ಡಿ ಒತ್ತಾಯಿಸುತ್ತಿದ್ದ' ಎಂದು ಕೊಲೆಯಾದ ಕೃತಿಕಾ ರೆಡ್ಡಿ ಅವರ ತಂದೆ ಮುನಿರೆಡ್ಡಿ ಆರೋಪಿಸಿದ್ದಾರೆ.

'ದೊಡ್ಡ ಆಸ್ಪತ್ರೆಯ ನಿರ್ಮಾಣಕ್ಕೆ ಹಣಕಾಸು ನೆರವು ಒದಗಿಸುವಂತೆ ಕೇಳಿದ್ದ. ಆಸ್ಪತ್ರೆ ನಿರ್ಮಾಣಕ್ಕೆ ಬೇಕಾಗುವಷ್ಟು ಹಣ ಇಲ್ಲ ಎಂದು ಮಾರತ್ ಹಳ್ಳಿಯಲ್ಲಿರುವ ಸ್ವಂತ ಕಟ್ಟಡದಲ್ಲಿ ಕ್ಲಿನಿಕ್ ಮಾಡಿಕೊಟ್ಟಿದ್ದೆ. ಕೃತಿಕಾ ತನ್ನ ಪತಿಯನ್ನು ಸಂಪೂರ್ಣವಾಗಿ ನಂಬಿದ್ದರು. ಜೀವ ಉಳಿಸಬೇಕಾದ ವ್ಯಕ್ತಿ, ಈ ರೀತಿ ಜೀವ ತೆಗೆಯುವ ಕೆಲಸ ಮಾಡಿದ್ದಾರೆ. ಎಫ್‌ಎಸ್‌ಎಲ್ ವರದಿ ಬಂದ ಬಳಿಕ ಅಳಿಯನ ಕೃತ್ಯ ಗೊತ್ತಾಗಿದೆ. ನಮ್ಮ ಮಗಳು ಬೇಡವಾಗಿದ್ದರೆ ವಿಚ್ಛೇದನ ಕೊಡಬಹುದಿತ್ತು. ಆದರೆ, ಈ ರೀತಿ ಹತ್ಯೆ ಮಾಡಿರುವುದು ಎಷ್ಟು ಸರಿ? ಆರೋಪಿಗೆ ಕಠಿಣ ಶಿಕ್ಷೆಯಾಗಬೇಕು' ಎಂದು ಒತ್ತಾಯಿಸಿದರು.

'ಕೃತಿಕಾ ಅವರಿಗೆ ನೀಡಿರುವ ಅನಸ್ತೇಷಿಯಾವನ್ನು ಆಪರೇಷನ್ ಕೊಠಡಿಯಲ್ಲಿ ಮಾತ್ರ ಬಳಸಬೇಕು. ಆದರೆ, ಮಹೇಂದ್ರ ರೆಡ್ಡಿ ಪ್ರಭಾವ ಬಳಸಿ ಆಸ್ಪತ್ರೆಯಿಂದ ತಂದು, ಪತ್ನಿಗೆ ನೀಡಿದ್ದಾರೆ. ಅಲ್ಲದೆ ಪತ್ನಿ ಮೃತಪಟ್ಟ ಬಳಿಕ ಆಕೆಯ ಕುಟುಂಬ ಸದಸ್ಯರು ಮೃತದೇಹ ಮರಣೋತ್ತರ ಪರೀಕ್ಷೆಗೆ ಕೊಂಡೊಯ್ಯದಂತೆ ತಡೆಯಲು ಪೊಲೀಸರಿಗೆ ಪ್ರಚೋದನೆ ನೀಡಿದ್ದರು' ಎಂದು ಆರೋಪಿಸಲಾಗಿದೆ.

ಪುತ್ರಿ ಕೃತಿಕಾ ವಾಸವಾಗಿದ್ದ ಮನೆಯನ್ನು ತಂದೆ ಮುನಿರೆಡ್ಡಿ, ದೇವಾಲಯವೊಂದಕ್ಕೆ ದಾನ ಮಾಡಿದ್ದಾರೆ ಎಂಬುದು ಗೊತ್ತಾಗಿದೆ. ಆ ಮನೆ ನೋಡಿದರೆ ಪದೇ ಪದೇ ಮಗಳ ನೆನಪು ಕಾಡುತ್ತದೆ. ಹೀಗಾಗಿ ಮನೆ ದಾನ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ವೈದೇಹಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪಡೆದಿದ್ದ ಕೃತಿಕಾ ರೆಡ್ಡಿ, ರಾಯಚೂರಿನ ನವೋದಯ ಮೆಡಿಕಲ್ ಕಾಲೇಜಿನಲ್ಲಿ ಚರ್ಮರೋಗ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

### 'ಸೋಕೊ'ಗೆ ಶ್ಲಾಘನೆ

'ಕೃತ್ಯ ನಡೆದ ಸ್ಥಳದಲ್ಲಿ ದೊರೆತ ಕ್ಯಾನೂಲಾ ಸೆಟ್, ಇಂಜೆಕ್ಷನ್ ಟ್ಯೂಬ್ ಹಾಗೂ ಇತರೆ ವೈದ್ಯಕೀಯ ಪರಿಕರಗಳನ್ನು ಸೋಕೊ ತಂಡ ಸಂಗ್ರಹ ಮಾಡಿ ಎಫ್‌ಎಸ್‌ಎಲ್‌ಗೆ ನೀಡಿತ್ತು. ಎಫ್‌ಎಸ್‌ಎಲ್ ವರದಿ ಆಧರಿಸಿ ಆರೋಪಿ ಬಂಧಿಸಿದ್ದು, ಸೋಕೊ ತಂಡದ ಕಾರ್ಯ ಮಹತ್ತರವಾಗಿದೆ' ಎಂದು ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಶ್ಲಾಘಿಸಿದರು.

## ಬೆಂಕಿ: ಮೂವರು ಗಾಯಾಳುಗಳು ಸಾವು

ಬಿಡದಿ (ರಾಮನಗರ): ಇಲ್ಲಿನ ಕೈಗಾರಿಕಾ ಪ್ರದೇಶದ ಕಾಡುಮನೆ ಕ್ರಾಸ್ ಬಳಿಯ ಭೀಮೇನಹಳ್ಳಿಯಲ್ಲಿ ಕಾರ್ಮಿಕರ ಶೆಡ್‌ನಲ್ಲಿ ಅಡುಗೆ ಅನಿಲ ಸೋರಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಗಂಭೀರವಾಗಿ ಗಾಯಗೊಂಡು ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪಶ್ಚಿಮ ಬಂಗಾಳ ಮೂಲದ ಮೂವರು ಕಾರ್ಮಿಕರು ಕೊನೆಯುಸಿರೆಳೆದಿದ್ದಾರೆ.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕಳೆದ ಏಳು ದಿನಗಳಿಂದ ಸಾವು ಬದುಕಿನ ನಡುವೆ ಹೋರಾಡುತ್ತಿದ್ದ ಹಸನ್ ಮಲಿಕ್, ತಜ್ಬುಲ್ ಶೇಕ್ ಹಾಗೂ ನೂರ್ ಜಮಲ್ ಮೃತರು.

# ದರ್ಶನ್‌ಗೆ ಫಿಸಿಯೋಥೆರಪಿ: ಸಲಹೆ

## ಚಿಕಿತ್ಸೆ ಕೊಡಿಸಿ: ಪರಪ್ಪನ ಅಗ್ರಹಾರ ಜೈಲು ಅಧಿಕಾರಿಗಳಿಗೆ ಪತ್ರ ಬರೆದ ನಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್, ಅನಾರೋಗ್ಯದ ಸಂಬಂಧ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳಿಗೆ ಮತ್ತೆ ಪತ್ರ ಬರೆದು, ಚಿಕಿತ್ಸೆಗೆ ಮನವಿ ಮಾಡಿದ್ದಾರೆ.

ದರ್ಶನ್

ದರ್ಶನ್ ಅವರು ಈ ಹಿಂದೆ ಬೆನ್ನು ನೋವಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದಾಗಿ ಹೇಳಿ ನ್ಯಾಯಾಲಯದಿಂದ ಷರತ್ತುಬದ್ಧ ಮಧ್ಯಂತರ ಜಾಮೀನು ಪಡೆದು ಬಿಡುಗಡೆಯಾಗಿದ್ದರು. ನಂತರ 'ಡೆವಿಲ್' ಸಿನಿಮಾದ ಚಿತ್ರೀಕರಣದಲ್ಲೇ ಹೆಚ್ಚಿನ ಸಮಯ ಕಳೆದಿದ್ದ ಅವರು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರಲಿಲ್ಲ. ಈ ಮಧ್ಯೆ ಸುಪ್ರೀಂ ಕೋರ್ಟ್ ಅವರ ಜಾಮೀನು ರದ್ದುಪಡಿಸಿದ್ದರಿಂದ ಮತ್ತೆ ಜೈಲು ಸೇರಿದ್ದರು.

'ತಮಗೆ ಒಂದು ವಾರದಿಂದ ಬೆನ್ನು ನೋವು ಹೆಚ್ಚಾಗಿದೆ. ಹೀಗಾಗಿ, ಕುಂಟುತ್ತಲೇ ನಡೆಯುವಂತಾಗಿದೆ. ಬೆನ್ನು ನೋವಿನ ಸಮಸ್ಯೆಗೆ ಹೆಚ್ಚಿನ ಚಿಕಿತ್ಸೆ ಬೇಕು' ಎಂದು ಜೈಲಿನ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಅವರ ಮನವಿ ಮೇರೆಗೆ ಅಧಿಕಾರಿಗಳು, ಖಾಸಗಿ ಆಸ್ಪತ್ರೆ ವೈದ್ಯರಿಂದ ಆರೋಗ್ಯ ತಪಾಸಣೆ ಮಾಡಿಸಿದ್ದಾರೆ. ದರ್ಶನ್ ಅವರಿಗೆ ಫಿಸಿಯೋಥೆರಪಿಯ ಅವಶ್ಯಕತೆ ಇದೆ ಎಂದು ವೈದ್ಯರು ಅಧಿಕಾರಿಗಳಿಗೆ ತಿಳಿಸಿದ್ದಾರೆ. ವೈದ್ಯರ ಸಲಹೆ ಮೇರೆಗೆ ಜೈಲಿನಲ್ಲೇ ವಾರದಲ್ಲಿ ಎರಡು ಬಾರಿ ಫಿಸಿಯೋಥೆರಪಿ ಮಾಡಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

**ಜೈಲಿನಲ್ಲಿ ಪರಿಶೀಲನೆ:** ಕೋರ್ಟ್ ಸೂಚನೆಯಂತೆ ಬೆಂಗಳೂರು ನಗರ ಜಿಲ್ಲಾ ಕಾನೂನು ಸೇವೆ ಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ.ಬಿ. ವರದರಾಜು ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಮಂಗಳವಾರ ಭೇಟಿ ನೀಡಿ, ದರ್ಶನ್‌ಗೆ ಕಲ್ಪಿಸಿರುವ ಮೂಲಸೌಕರ್ಯದ ಬಗ್ಗೆ ಪರಿಶೀಲನೆ ನಡೆಸಿದ್ದರು.

## ವಿದೇಶಿ ಪ್ರಜೆ ಸುಲಿಗೆ: ಮೂವರ ಬಂಧನ

**ಬೆಂಗಳೂರು:** ಸುಡಾನ್ ದೇಶದ ಪ್ರಜೆಯನ್ನು ಅಡ್ಡಗಟ್ಟಿ ಸುಲಿಗೆ ಮಾಡಿದ್ದ ಆರೋಪದಡಿ ಮೂವರು ಆರೋಪಿಗಳನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಫಿಲಿಪ್ಸ್ ಜಾರ್ಜ್

ಅಜಿತ್

ವಿಕ್ರಂ

ಕೋರಮಂಗಲದ ರಾಜೇಂದ್ರ ನಗರ ನಿವಾಸಿ ಫಿಲಿಪ್ಸ್ ಜಾರ್ಜ್, ವಿಕ್ರಂ ಪಾಂಡಿಯನ್ ಮತ್ತು ಅಜಿತ್ ಬಂಧಿತರು. ಆರೋಪಿಗಳಿಂದ ₹11 ಸಾವಿರ ನಗದು ಮತ್ತು ನಾಲ್ಕು ಮೊಬೈಲ್ ಜಪ್ತಿ ಮಾಡಲಾಗಿದೆ.

'ಅಕ್ಟೋಬರ್ 8ರ ತಡರಾತ್ರಿ 12.40ಕ್ಕೆ ವಿದೇಶಿ ವಿದ್ಯಾರ್ಥಿ ದ್ವಿಚಕ್ರ ವಾಹನದಲ್ಲಿ ಕೋರಮಂಗಲದಿಂದ ಶೇಷಾದ್ರಿಪುರ ಕಡೆ ಒಂದೇ ಬೈಕ್‌ನಲ್ಲಿ ಮೂವರು ಹೋಗುತ್ತಿದ್ದನ್ನು ಕಂಡು ರೇಗಿಸಿದ್ದ. ಅದರಿಂದ ಕೋಪಗೊಂಡ ಆರೋಪಿಗಳು, ವಿದ್ಯಾರ್ಥಿಯನ್ನು ಹಿಂಬಾಲಿಸಿ ಶೇಷಾದ್ರಿಪುರದ ರಾಜೀವ್ ಗಾಂಧಿ ಸರ್ಕಲ್ ಬಳಿ ಅಡ್ಡಗಟ್ಟಲು ಮುಂದಾಗಿದ್ದು, ಅದರಿಂದ ಗಾಬರಿಗೊಂಡು ಕೆಳಗೆ ಬಿದ್ದಿದ್ದ. ಆಗ ಆರೋಪಿಗಳು ಆತನನ್ನು ಪಕ್ಕಕ್ಕೆ ಕರೆದೊಯ್ದು ಮೊಬೈಲ್ ಕಸಿದುಕೊಂಡು, ಆತನ ಫೋನ್‌ಪೇ ಪಾಸ್‌ವರ್ಡ್ ಪಡೆದು ₹11 ಸಾವಿರ ನಗದನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದರು. ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ. ವಿಕ್ರಂ ಪಾಂಡಿಯನ್ ವಿರುದ್ಧ ಅಶೋಕನಗರ ಠಾಣೆಯಲ್ಲಿ ಕೊಲೆ ಪ್ರಕರಣವಿದ್ದು, ಈತ ರೌಡಿಶೀಟರ್. ಅಜಿತ್ ವಿರುದ್ಧ ದರೋಡೆಗೆ ಯತ್ನ ಪ್ರಕರಣ ದಾಖಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧ ಸುದ್ದಿ

## ಯುವತಿ ವಿಚಾರಕ್ಕೆ ವಿದ್ಯಾರ್ಥಿಗೆ ಚಾಕು ಇರಿತ: ಇಬ್ಬರ ಬಂಧನ

**ಬೆಂಗಳೂರು:** ಯುವತಿ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗೆ ಚಾಕುವಿನಿಂದ ಇರಿದ ಪ್ರಕರಣ ಸಂಬಂಧ ಆರ್‌.ಟಿ.ನಗರ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ತಿಮ್ಮಯ್ಯ ಗಾರ್ಡನ ನಿವಾಸಿ ವೈಭವ್ ಆರ್ಯನ್ (19) ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಆರ್.ಟಿ.ನಗರದ ಮೊದಲ ಬ್ಲಾಕ್‌ನಲ್ಲಿ ಶನಿವಾರ ಘಟನೆ ನಡೆದಿದ್ದು, ಪ್ರಭುದೇವ್ ಮತ್ತು ಹೋಟೆಲ್ ಕಾರ್ಮಿಕ ಗಣೇಶ್ ಬಂಧಿತರು.

'ವೈಭವ್ ಓದುತ್ತಿರುವ ಕಾಲೇಜಿನಲ್ಲೇ ಪಿಯುಸಿ ಓದಿದ್ದ ಪ್ರಭುದೇವ್, ಅಂಬುಲೆನ್ಸ್ ಚಾಲಕನಾಗಿದ್ದ. ವೈಭವ್ ಸ್ನೇಹಿತೆಗೆ ಇನ್‌ಸ್ಟಾಗ್ರಾಂನಲ್ಲಿ ಮೆಸೇಜ್ ಮಾಡಿ ಪೀಡಿಸುತ್ತಿದ್ದ. ಇದಕ್ಕೆ ಇಬ್ಬರ ನಡುವೆ ಜಗಳವಾಗಿತ್ತು. ಅಕ್ಟೋಬರ್ 11ರಂದು ತನ್ನ ಸಹಚರನ ಜತೆ ಕಾಲೇಜಿಗೆ ತೆರಳಿದ್ದ ಪ್ರಭುದೇವ್, ಚಾಕುವಿನಿಂದ ಹೊಟ್ಟೆಗೆ ಇರಿದು ಪರಾರಿಯಾಗಿದ್ದ, ಆರ್ಯನ್ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

## ಟ್ಯಾಂಕರ್ ಚಕ್ರ ಹರಿದು ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೆ.ಬಿ.ನಗರದ ಬಳಿಯ ಕುಳ್ಳಪ್ಪ ಕಾಲೊನಿಯಲ್ಲಿ ಬುಧವಾರ ನೀರಿನ ಟ್ಯಾಂಕರ್ ಹರಿದು 9 ವರ್ಷದ ಬಾಲಕಿ ಮೃತಪಟ್ಟಿರುವ ಘಟನೆ ನಡೆದಿದೆ.

ಕುಳ್ಳಪ್ಪ ಕಾಲೊನಿ ನಿವಾಸಿ ತಿಮ್ಮಪ್ಪ ಅವರ ಮಗಳಾದ ಅನುಶ್ರೀ, ಮನೆಯ ಮುಂದೆ ಬೆಳಗ್ಗೆ ಆಟವಾಡುತ್ತಿದ್ದಾಗ ಈ ಘಟನೆ ನಡೆದಿದೆ. ಕಲಬುರಗಿ ಜಿಲ್ಲೆಯ ತಿಮ್ಮಪ್ಪ ಅವರು ಕೂಲಿ ಕಾರ್ಮಿಕರಾಗಿದ್ದು, ಕುಟುಂಬ ಸದಸ್ಯರೊಂದಿಗೆ ಕುಳ್ಳಪ್ಪ ಕಾಲೊನಿಯಲ್ಲಿ ವಾಸವಾಗಿದ್ದಾರೆ

ಕಾಲೊನಿಯ ಮನೆಗಳಿಗೆ ನೀರು ಹಾಕಲು ಬಂದಿದ್ದ ಟ್ಯಾಂಕರ್ ಚಾಲಕ, ವಾಹನವನ್ನು ರಿವರ್ಸ್ ತೆಗೆಯುವ ವೇಳೆ ಬಾಲಕಿಗೆ ಡಿಕ್ಕಿ ಹೊಡೆದಿದ್ದಾನೆ. ಕೆಳಗೆ ಬಿದ್ದ ಬಾಲಕಿ ಮೇಲೆ ಹಿಂದಿನ ಚಕ್ರಗಳು ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾಳೆ ಎಂದು ಪೊಲೀಸರು ತಿಳಿಸಿದರು.

ವಾಹನ ಬಿಟ್ಟು ಚಾಲಕ ಪರಾರಿಯಾಗಿದ್ದು, ಜೆ.ಬಿ.ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–420/2681/2025–26 ದಿನಾಂಕ: 15.10.2025

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ/ಗು | ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಶ್ರೀ ಹೆಚ್.ಎಂ.ವೆಂಕಟಸ್ವಾಮಿ ಮತ್ತು ಇತರರು | ಆನೇಕಲ್ | ಸರ್ಜಾಪುರ | ಬಿ.ಹೊಸಹಳ್ಳಿ | 2/2 | 0–6.50 | ವ್ಯವಸಾಯ ವಲಯ | ವಸತಿ |
| | | | | | 2/5 | 1–11 | | |
| | | | | | 2/6 | 1–02 | | |
| | | | | | 2/7 | 0–14.50 | | |
| | | | | | 2/9 | 0–35 | | |
| | | | | | 7/2 | 1–14 | | |
| | | | | | 7/5 | 0–15 | | |
| | | | | | 9/2 | 0–18 | | |
| | | | | | ಒಟ್ಟು | 5–36 | | |

**ಷರಾ:** ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗಿರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

**ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು**



ರಾಷ್ಟ್ರೀಯ ಪರೀಕ್ಷಾ ಸಂಸ್ಥೆ
National Testing Agency
Excellence in Assessment

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಭಾರತ ಸರ್ಕಾರ

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ ಅಡಿಯಲ್ಲಿನ ಒಂದು ಸ್ವಾಯುತ್ತ ಸಂಸ್ಥೆ

**ನಿರ್ದಿಷ್ಟ ಪ್ರದೇಶಗಳಲ್ಲಿನ ಉನ್ನತ ವರ್ಗಗಳಲ್ಲಿನ ವಿದ್ಯಾರ್ಥಿಗಳ ವಸತಿ ಶಿಕ್ಷಣ ಯೋಜನೆಗಾಗಿ (ಶ್ರೇಷ್ಠ 2026)**
**ಆನ್‌ಲೈನ್ ಅರ್ಜಿ ಆಹ್ವಾನ ಘೋಷಣೆ**

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಇವರು, ಶೈಕ್ಷಣಿಕ ವರ್ಷ 2026–27ನೇ ಸಾಲಿನ 9ನೇ ಮತ್ತು 11ನೇ ತರಗತಿಗಳ ಪ್ರವೇಶಾತಿಗಾಗಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಪರವಾಗಿ, ಪರಿಶಿಷ್ಟ ವರ್ಗದ (ಎಸ್‌ಸಿ) ವಿದ್ಯಾರ್ಥಿಗಳಿಗಾಗಿ ಶ್ರೇಷ್ಠ (ಎನ್‌ಇಟಿಎಸ್)–2026 ಎಂಬ ಪರೀಕ್ಷೆಯನ್ನು ಏರ್ಪಡಿಸಿದೆ. ಶ್ರೇಷ್ಠ ಎಂಬುದು ಒಂದು ಯೋಜನೆಯಾಗಿದ್ದು, ಇದು ಪರಿಶಿಷ್ಟ ವರ್ಗದ (ಎಸ್‌ಸಿ) ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಾತ್ರ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುತ್ತದೆ.

| | |
|---|---|
| ಆನ್‌ಲೈನ್ ಅರ್ಜಿ ಸಲ್ಲಿಸುವಿಕೆ | 10.10.2025 ರಿಂದ 30.10.2025 |
| ಪರೀಕ್ಷೆ ದಿನಾಂಕ | 2025ರ ಡಿಸೆಂಬರ್ ತಿಂಗಳಲ್ಲಿ |
| ಪರೀಕ್ಷೆ ಮಾದರಿ | ಪೆನ್ನು ಮತ್ತು ಕಾಗದ ಮಾದರಿ (ಒಎಂಆರ್) |
| ಪತ್ರಿಕೆಯ ನಮೂನೆ | ಬಹು ಆಯ್ಕೆ ಪ್ರಶ್ನೆಗಳು (ಎಂಸಿಕ್ಯೂ) |

ಪರೀಕ್ಷೆ ನೋಂದಣಿ ಮಾಡಿಕೊಳ್ಳುವ ಕುರಿತಾದ ಇನ್ನಿತರೆ ಅಗತ್ಯ ವಿವರಗಳನ್ನು ಒಳಗೊಂಡಿರುವ ಮಾಹಿತಿ ಕೈಪಿಡಿಯು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ www.nta.ac.in ಮತ್ತು https://exams.nta.nic.in/shreshta/ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು, ಕೊನೆಯ ದಿನಾಂಕಕ್ಕೆ ಮುಂಚಿತವಾಗಿವೆ ಅರ್ಜಿ ಸಲ್ಲಿಸಬೇಕು ಮತ್ತು ಪ್ರಚಲಿತ ವರ್ತಮಾನಗಳ ಕುರಿತು ತಿಳಿಯುತ್ತಿರಲು, ಮೇಲ್ಕಂಡ ವೆಬ್‌ಸೈಟ್‌ಗಳಿಗೆ ಆಗಾಗ್ಗೆ ಭೇಟಿ ನೀಡುತ್ತಿರಬೇಕು ಎಂದು ಸೂಚಿಸಲಾಗಿದೆ.

ಯಾವುದೇ ಅಭ್ಯರ್ಥಿಯು ಶ್ರೇಷ್ಠ–2026 ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಷ್ಟವಾಗಿದ್ದಲ್ಲಿ, ಅಂತಹವರು 011–40759000/011–69227700 ಸಂಖ್ಯೆಗೆ ಅಥವಾ shreshta@nta.ac.in ಇಮೇಲ್‌ಗೆ ಸಂಪರ್ಕಿಸಬಹುದು.

ಸಹಿ/–
(ನಿರ್ದೇಶಕರು)

CBC 21354/12/0003/2526


## ₹94 ಕೋಟಿಯ ಹೈಡ್ರೊ ಗಾಂಜಾ ವಶ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ವಿದೇಶದಿಂದ ಸಿದ್ಧ ಆಹಾರ ಟಿನ್‌ಗಳಲ್ಲಿ 94 ಕೆ.ಜಿ ಹೈಡ್ರೊ ಗಾಂಜಾ ಕಳ್ಳಸಾಗಣೆ ಮಾಡುತ್ತಿದ್ದ ನಾಲ್ವರು ವಿದೇಶಿಯರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಜಪ್ತಿ ಮಾಡಿರುವ ಹೈಡ್ರೊ ಗಾಂಜಾದ ಮೌಲ್ಯ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹94 ಕೋಟಿ ಎಂದು ತಿಳಿದು ಬಂದಿದೆ. ಮೊದಲೇ ದೊರೆತ ಖಚಿತ ಮಾಹಿತಿ ಹಿನ್ನೆಲೆಯಲ್ಲಿ ವಿದೇಶದಿಂದ ಬರುವ ಪ್ರಯಾಣಿಕರ ಮೇಲೆ ವೈಮಾನಿಕ ಗುಪ್ತಚರ ಘಟಕದ ಅಧಿಕಾರಿಗಳು ತೀವ್ರ ನಿಗಾ ಇಟ್ಟಿದ್ದರು. ಕಳ್ಳಸಾಗಣೆ ಪ್ರಕರಣ ಗಳಲ್ಲಿ ಹಳೆಯ ಆರೋಪಿಗಳಾಗಿದ್ದ ವಿದೇಶಿಗರನ್ನು ತಪಾಸಣೆ ಮಾಡಿದಾಗ ದೊಡ್ಡ ಪ್ರಮಾಣದ ಗಾಂಜಾ ಪತ್ತೆಯಾಯಿತು.

ನಾಲ್ವರಲ್ಲಿ ಇಬ್ಬರು ಪುರುಷರು ,ಇಬ್ಬರು ಮಹಿಳೆಯರು. ಎರಡು ಜೋಡಿ ಇಲ್ಲಿಯ ದೊಡ್ಡ ಹೋಟೆಲ್‌ಗಳಿಗೆ ಟಿನ್‌ನಲ್ಲಿ ಸಿದ್ಧ ಆಹಾರ ಪೂರೈಸಲು ಬಂದಿದ್ದೇವೆ ಎಂದು ನಂಬಿಸಿದ್ದರು.

ಸಿದ್ಧ ಆಹಾರದ ಡಬ್ಬಿಗಳಲ್ಲಿ(ಟಿನ್) ಇರಿಸಿದ್ದ ಹೈಡ್ರೊ ಗಾಂಜಾ ಮಾದರಿ

ಈ ಮೊದಲೇ ವಿವಿಧ ಕಳ್ಳಸಾಗಾಣಿಕೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಗಳ ಇತಿಹಾಸ ಗಮನಿಸಿದ ಕಸ್ಟಮ್ಸ್ ಅಧಿಕಾರಿಗಳು ಅವರು ತಮ್ಮೊಂದಿಗೆ ತಂದಿದ್ದ ಸಿದ್ಧ ಆಹಾರದ ಟಿನ್ ತೆರೆದು ಪರಿಶೀಲಿಸಿದರು. ಅದರೊಳಗೆ ಹೈಡ್ರೊ ಗಾಂಜಾ ಪತ್ತೆಯಾಯಿತು. ನಾಲ್ವರು ವಿದೇಶಿಯರ ಮೇಲೆ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

## ಕಿಕ್‌ಸ್ಟಾರ್ಟ್ ಎಫ್‌ಸಿಗೆ ಜಯ

**ಬೆಂಗಳೂರು:** ಡಾನ್ ಕಾರ್ಲೋಸ್ (17ನೇ ನಿ.) ಅವರ ಗೋಲಿನ ನೆರವಿನಿಂದ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಬುಧವಾರ 1–0ಯಿಂದ ಬೆಂಗಳೂರು ಸಿಟಿ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕಾರ್ಲೋಸ್ ಮೊದಲ ಕ್ವಾರ್ಟರ್‌ನಲ್ಲಿ ಗೋಲು ಗಳಿಸಿ ಕಿಕ್‌ಸ್ಟಾರ್ಟ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ನಂತರ ರಕ್ಷಣಾತ್ಮಕ ಆಟವಾಡಿದ ಕಿಕ್‌ಸ್ಟಾರ್ಟ್ ಆಟಗಾರರು ಜಯವನ್ನು ತಮ್ಮದಾಗಿಸಿಕೊಂಡರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ಹಾಗೂ ಎಫ್‌ಸಿ ರಿಯಲ್ ಬೆಂಗಳೂರು ತಂಡಗಳು 2–2ರಿಂದ ಸಮಬಲ ಸಾಧಿಸಿದವು. ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ಹಾಗೂ ಯುನೈಟೆಡ್ ಸ್ಟಾರ್ಸ್ ಎಫ್‌ಸಿ ನಡುವಣ ಪಂದ್ಯವು ಗೋಲು ರಹಿತ ಡ್ರಾ ಆಯಿತು.


ರಾಷ್ಟ್ರೀಯ ಪರೀಕ್ಷಾ ಸಂಸ್ಥೆ
National Testing Agency
Excellence in Assessment

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ ಅಡಿಯಲ್ಲಿನ ಒಂದು ಸ್ವಾಯುತ್ತ ಸಂಸ್ಥೆ

**ಅಖಿಲ ಭಾರತ ಸೈನಿಕ ಶಾಲೆ ಪ್ರವೇಶ ಪರೀಕ್ಷೆಗಾಗಿ (ಎಐಎಸ್‌ಎಸ್‌ಇಇ–2026)**
**ಆನ್‌ಲೈನ್ ಅರ್ಜಿ ಆಹ್ವಾನ ಘೋಷಣೆ**

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಇವರು, ಸೈನಿಕ ಶಾಲೆಗಳ ಸೊಸೈಟಿ (ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಅಡಿಯಲ್ಲಿ) ಪರವಾಗಿ ದೇಶಾದ್ಯಂತ ಸೈನಿಕ ಶಾಲೆ/ನೂತನ ಸೈನಿಕ ಶಾಲೆಗಳಲ್ಲಿ, ಶೈಕ್ಷಣಿಕ ವರ್ಷ 2026?27ನೇ ಸಾಲಿನ 6ನೇ ಮತ್ತು 9ನೇ ತರಗತಿಗಳ ಪ್ರವೇಶಾತಿಗಾಗಿ ಎಐಎಸ್‌ಎಸ್‌ಇಇ–2026 ಪರೀಕ್ಷೆಯನ್ನು ಕೈಗೊಳ್ಳಲಿದ್ದಾರೆ.

| | |
|---|---|
| ಆನ್‌ಲೈನ್ ಅರ್ಜಿ ನಮೂನೆ ಸಲ್ಲಿಸುವಿಕೆ | 10.10.2025 ರಿಂದ 30.10.2025 |
| ಪರೀಕ್ಷೆ ದಿನಾಂಕ | 2026ರ ಜನವರಿ ತಿಂಗಳಲ್ಲಿ |
| ಪರೀಕ್ಷೆ ಮಾದರಿ | ಪೆನ್ನು ಮತ್ತು ಕಾಗದ ಮಾದರಿ (ಒಎಂಆರ್) |
| ಪತ್ರಿಕೆಯ ನಮೂನೆ | ಬಹು ಆಯ್ಕೆ ಪ್ರಶ್ನೆಗಳು (ಎಂಸಿಕ್ಯೂ) |

ಪರೀಕ್ಷೆ ನೋಂದಣಿ ಮಾಡಿಕೊಳ್ಳುವ ಕುರಿತಾದ ಇನ್ನಿತರೆ ಅಗತ್ಯ ವಿವರಗಳನ್ನು ಒಳಗೊಂಡಿರುವ ಮಾಹಿತಿ ಕೈಪಿಡಿಯು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ www.nta.ac.in ಮತ್ತು https://exams.nta.nic.in/sainik-school-society/ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು, ಕೊನೆಯ ದಿನಾಂಕಕ್ಕೆ ಮುಂಚಿತವಾಗಿವೆ ಅರ್ಜಿ ಸಲ್ಲಿಸಬೇಕು ಮತ್ತು ಪ್ರಚಲಿತ ವರ್ತಮಾನಗಳ ಕುರಿತು ತಿಳಿಯುತ್ತಿರಲು, ಮೇಲ್ಕಂಡ ವೆಬ್‌ಸೈಟ್‌ಗಳಿಗೆ ಆಗಾಗ್ಗೆ ಭೇಟಿ ನೀಡುತ್ತಿರಬೇಕು ಎಂದು ಸೂಚಿಸಲಾಗಿದೆ.

ಯಾವುದೇ ಅಭ್ಯರ್ಥಿಯು ಎಐಎಸ್‌ಎಸ್‌ಇಇ–2026ರ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಷ್ಟವಾಗಿದ್ದಲ್ಲಿ, ಅಂತಹವರು 011–40759000/ 011–69227700 ಸಂಖ್ಯೆಗೆ ಅಥವಾ aissee@nta.ac.in ಇಮೇಲ್‌ಗೆ ಸಂಪರ್ಕಿಸಬಹುದು.

ಸಹಿ/–
(ನಿರ್ದೇಶಕರು)

CBC 21354/12/0004/2526



## ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉಬ/99/2025–26/2026 ದಿನಾಂಕ: 14–10–2025

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಶ್ರೀ ಬಿ.ವಿ.ನಾಗರಾಜು ಬಿನ್ ಲೇ॥ ವೀರಭದ್ರಶೆಟ್ಟಿ | ದೇವನಹಳ್ಳಿ | ಕಸಬಾ | ದೇವನಹಳ್ಳಿ | 11/4 | 0–13.04 | ವಸತಿ* | ವಾಣಿಜ್ಯ |

* ಪ್ರಶ್ನಿತ ಜಮೀನು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆಯಲ್ಲಿ **"ವಸತಿ, ಭಾಗಶಃ ವಾಣಿಜ್ಯ, ಭಾಗಶಃ ಉದ್ಯಾನವನ ಮತ್ತು ಭಾಗಶಃ ರಸ್ತೆ ವಲಯ"** ದಲ್ಲಿ ಕಾಯ್ದಿರಿಸಲಾಗಿರುತ್ತದೆ. ಆದರೆ ಮಹಾಯೋಜನೆಯಂತೆ ರಸ್ತೆ ಪಂಕ್ತೀಕರಣ ವ್ಯತ್ಯಾಸವಾಗಿದ್ದು ಹಾಲಿ ರಸ್ತೆ ಪರಿಗಣಿಸಿದಾಗ ಪ್ರಶ್ನಿತ ಪೂರಾ ಜಮೀನು **'ವಸತಿ ಮತ್ತು ಭಾಗಶಃ ವಾಣಿಜ್ಯ'** ವಲಯದಲ್ಲಿ ಬರುತ್ತದೆ. ಇಂತಹ ನ್ಯೂನ್ಯತೆಗಳಿದ್ದಲ್ಲಿ ವಲಯ ನಿಯಮಾವಳಿಯಲ್ಲಿನ ಪುಟ ಸಂ. 75 ರಲ್ಲಿನ ಕಂಡಿಕೆ 'ಜೆ' ರಲ್ಲಿ "If the alignment of the existing road is shifted in master plan, the existing road as on ground reality/cadastral map may be considered for the proposed road widening. The land use facing the road shall be considered accordingly" ಎಂದು ಸೂಚಿಸಲಾಗಿರುತ್ತದೆ. ಅದರಂತೆ ಪ್ರಶ್ನಿತ ಜಮೀನನ್ನು ವಸತಿ ವಲಯವೆಂದು ಪರಿಗಣಿಸಲಾಗಿದೆ.

**ಷರಾ:–** ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಸದರಿ ಜಮೀನಿನ ಪರಿಸರದಲ್ಲಿ ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ ವಾಣಿಜ್ಯ ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **ವಸತಿ ವಲಯ ದಿಂದ ವಾಣಿಜ್ಯ** ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

**ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.**

ವಾಸಾಸಂಇ/ವಾ.ಪ್ರ/3297/ಎಎ/2025–26



ಕರ್ನಾಟಕ ಸರ್ಕಾರ

## ಪುರಸಭಾ ಕಾರ್ಯಾಲಯ, ಅತ್ತಿಬೆಲೆ

ಅತ್ತಿಬೆಲೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562 107 ದೂ.ಸಂ. 080–27821501
ಇ–ಮೇಲ್: itstaff_ulb_attibele@yahoo.com ವೆಬ್‌ಸೈಟ್: www.attibeletown.mrc.gov.in

ಸಂಖ್ಯೆ/ಅಪುಕಾ/ಸಿಬ್ಬಂಧಿ/ಸಿ.ಆರ್/01/2025–25 ದಿನಾಂಕ: 15–10–2025

**ಸಾರ್ವಜನಿಕ ಪ್ರಕಟಣೆ**

ಅತ್ತಿಬೆಲೆ ಪುರಸಭಾ ವ್ಯಾಪ್ತಿಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಲಾಗುತ್ತಿದ್ದು ಗಣತಿದಾರರು ಮನೆ–ಮನೆಗೆ ಬೇಟಿ ನೀಡಿ ಸಮೀಕ್ಷೆಯನ್ನು ಮಾಡುತ್ತಿದ್ದು ಒಂದು ವೇಳೆ ಗಣತಿದಾರರು ತಮ್ಮ ಮನೆಗೆ ಬೇಟಿ ನೀಡಿದ ಸಮಯದಲ್ಲಿ ತಾವು ಮನೆಯಲ್ಲಿ ಇಲ್ಲದೆ ಇದ್ದಂತಹ ಸಂದರ್ಭದಲ್ಲಿ ಗಣತಿಯಿಂದ ಕೈತಪ್ಪಿರುವಂತಹ ಕುಟುಂಬಗಳು ತಮ್ಮ ಕುಟುಂಬಸ್ಥರೆಲ್ಲರ ಮಾಹಿತಿಯೊಂದಿಗೆ ದಿನಾಂಕ: 16–10–2025 ಮತ್ತು 17–10–2025 ಹಾಗೂ 18–10–2025 ರ ಬೆಳಿಗ್ಗೆ 08:00 ಗಂಟೆಯಿಂದ ರಾತ್ರಿ 08:00 ಗಂಟೆಯೊಳಗೆ ಪುರಸಭಾ ಕಚೇರಿಗೆ ಬೇಟಿ ನೀಡಿ ಮಾಹಿತಿಯನ್ನು ಒದಗಿಸಲು ಸಾರ್ವಜನಿಕರಲ್ಲಿ ಕೋರಿದೆ. ಅಥವಾ ಈ ಕೆಳಕಂಡ ಮೊಬೈಲ್ ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ನೀಡಿದರೆ ಸಮೀಕ್ಷೆದಾರರನ್ನು ತಮ್ಮ ಮನೆಗೆ ಕಳುಹಿಸಿ ಸಮೀಕ್ಷೆ ಮಾಡಲಾಗುವುದು. **9900812156, 9741372411, 9686173739, 6360980319, 9071658993**

ಸಹಿ/–
ಮುಖ್ಯಾಧಿಕಾರಿ, ಶ್ರೇಣಿ–1
ಪುರಸಭೆ, ಅತ್ತಿಬೆಲೆ



## ಪುರಸಭೆ, ಬೊಮ್ಮಸಂದ್ರ

ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560099
Email: itstaff_ulb_bommasandra@yahoo.com Phone No: 080 – 2783 4655

ಸಂಖ್ಯೆ: ಪುಕಾಬೊ/ಸಿಬ್ಬಂದಿ/ಸಿಆರ್/ಗಣತಿ/01/2025–26 ದಿನಾಂಕ: 15–10–2025

**ಸಾರ್ವಜನಿಕ ಪ್ರಕಟಣೆ**

ಬೊಮ್ಮಸಂದ್ರ ಪುರಸಭಾ ವ್ಯಾಪ್ತಿಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ–2025ರ ಸಮೀಕ್ಷೆಯನ್ನು ನಡೆಸಲಾಗುತ್ತಿದ್ದು, ಗಣತಿದಾರರು ಮನೆ–ಮನೆಗೆ ಭೇಟಿ ನೀಡಿ ಸಮೀಕ್ಷೆಯನ್ನು ಮಾಡುತ್ತಿದ್ದು, ಒಂದು ವೇಳೆ ಗಣತಿದಾರರು ತಮ್ಮ ಮನೆಗೆ ಭೇಟಿ ನೀಡಿದ ಸಮಯದಲ್ಲಿ ತಾವು ಮನೆಯಲ್ಲಿ ಇಲ್ಲದೇ ಇದ್ದಂತಹ ಸಂದರ್ಭದಲ್ಲಿ ಗಣತಿಯಿಂದ ಕೈ ತಪ್ಪಿರುವಂತಹ ಕುಟುಂಬಗಳು ತಮ್ಮ ಕುಟುಂಬಸ್ಥರೆಲ್ಲರ ಅಗತ್ಯ ಮಾಹಿತಿಯೊಂದಿಗೆ ದಿನಾಂಕ. 16.10.2025 ರಿಂದ ದಿನಾಂಕ.18.10.2025ರ ಬೆಳಿಗ್ಗೆ 08.00 ಗಂಟೆಯಿಂದ ರಾತ್ರಿ 08.00 ಗಂಟೆಯೊಳಗೆ ಪುರಸಭಾ ಕಛೇರಿಗೆ ಭೇಟಿ ನೀಡಿ ಮಾಹಿತಿಯನ್ನು ಒದಗಿಸಲು ಸಾರ್ವಜನಿಕರಲ್ಲಿ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಮೊಬೈಲ್ ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿಯನ್ನು ನೀಡಿ ಗಣತಿ ಪೂರ್ಣಗೊಳಿಸಿಕೊಳ್ಳಬಹುದಾಗಿದೆ.

01. ಶ್ರೀ ಲೋಕೇಶ್ ಬಾಬು, 99807 26081
02. ಶ್ರೀ ಚಂದ್ರಶೇಖರ್, 86602 35372
03. ಶ್ರೀಮತಿ ಶೋಭ, 80734 52584
04. ಶ್ರೀ ಮಂಜುನಾಥ್, 96201 88825

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಬೊಮ್ಮಸಂದ್ರ



## ಕೃಷಿ ಇಲಾಖೆ
## ಉಪ ಕೃಷಿ ನಿರ್ದೇಶಕರು–1 ಕೋಲಾರ ವಿಭಾಗ, ಕೋಲಾರ

ಉಪ ಕೃಷಿ ನಿರ್ದೇಶಕರ ಕಛೇರಿ–1, ಕೋಲಾರ ಉಪ ವಿಭಾಗ ಹಳೇ ಡಿ.ಸಿ ಆಫೀಸ್ ಆವರಣ, ಜಂಟಿ ಕೃಷಿ ನಿರ್ದೇಶಕರ ಕಛೇರಿ ಕಾಂಪೌಂಡ್, ಕೋಲಾರ ಜಿಲ್ಲೆ, ಕೋಲಾರ–563101 ದೂರವಾಣಿ ಸಂಖ್ಯೆ:08152–200158, ಇಮೇಲ್–dda1kolar@gmail.com

ಸಂಖ್ಯೆ:ಉಕೃನಿ–1/ಕೋ/ಮಆಅ/ಪ್ರಕಟಣೆ/2025–26 ದಿನಾಂಕ:14.10.2025

**ಟೆಂಡರ್ ಪ್ರಕಟಣೆ**

2025–26ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಮಣ್ಣು ಆರೋಗ್ಯ ಕೇಂದ್ರಕ್ಕೆ ಬೇಕಾಗುವ ವೈಜ್ಞಾನಿಕ ಉಪಕರಣಗಳನ್ನು (Soil Nutrients Analyzing Instruments: ICP-OES with accessories and Nitrogen analyser) ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮುಖಾಂತರ ಟೆಂಡರ್ ಕರೆಯಲಾಗಿದೆ **www.kppp.karnataka.gov.in** **ಮುಖಾಂತರ ಹರಾಜಿನ ದಿನಾಂಕಗಳ ವಿವರಗಳು: ಟೆಂಡರ್ ಶೀರ್ಷಿಕೆ:** Group tender for supplying of scientific equipments for soil testing lab kolar- Soil Nutrients Analyzing Instruments:- ICP-OES with accessories and Nitrogen analyzer. **ಪ್ರಾರಂಭ ದಿನಾಂಕ: 14.10.2025 ಕೊನೆಯ ದಿನಾಂಕ: 12.11.2025 ಟೆಂಡರ್ ತೆರೆಯುವ ದಿನಾಂಕ: 14.11.2025** ಟೆಂಡರ್ ಮೌಲ್ಯ ಮತ್ತು ಇ.ಎಂ.ಡಿ ವಿವರಗಳನ್ನು **www.kppp.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಅಧಿಕಾರಿಗಳ ಕಛೇರಿಯಲ್ಲಿ ಸಂಪರ್ಕಿಸಬಹುದು.

**ಸಹಿ/– ಉಪ ಕೃಷಿ ನಿರ್ದೇಶಕರು–1, ಕೋಲಾರ**

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:315/ಕೆಎಸ್ಎಂಸಿಎ/2025–26



ಪ್ರಜಾವಾಣಿ
## ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

**REAL ESTATE SELLING**

**Sites**

**Jigani**

**KHB Sites in Surya City Near Jigani**
**STRRA & BMRDA APPROVED PLOTS**
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

**TOURS & TRAVEL**

**Travel**

SRILANKA TOUR, WONDERFUL ONE WEEK, IMPORTANT PLACES INCLUDED. BEST ARRANGEMENTS. LIMITED SEATS. GANESH SHENOY 8310028157

**BUSINESS**

**Business to Business**

**Business**

PROPERY COLLATERALS/ Joint Ventures/ Schools/ Colleges/ Hospitals/ Takeovers/ Selling/ Buying/ New Ideas. Dr. Swamy Naidu (Vamshadhara Projects & Serivces).... 9342247637.

**PERSONAL**

**Change of Name**

I, **MADHAVARAO** K Hebbar, do hereby solemnly state that, as per my Aadhar card (xxxx xxxx 7167) my name is Madhavarao K Hebbar whereas in education documents, DL etc it is mentioned as Madhava Rao HK. My correct name is Madhavarao K Hebbar which will be used in all future documents, vide affidavit dt 8/10/2025 sworn to Notary.

**CHANGE OF NAME**
I, **Ramesh J & Ramesha J** residing at No. 90, Thataginu Aishwarya Layout, Near Payonidhi Enterprises, Bengaluru-560082. declare that the above names pertain to me only & henceforth I shall be known as **RAMESH J** vide affidavit dated 15.10.2025 before notary V. Rangaraju, Bengaluru.

**CHANGE OF NAME**
I, **Renukamma K** W/o P Satish, residing at No.94, 17th B Main, 5th Block, Koramangala, Bengaluru-560095, have changed my name to **RENUKA SATISH** vide affidavit dated 03.10.2025 before notary A.S Narayana Reddy, Bengaluru. Henceforth I shall be called **RENUKA SATISH** only

**Lost**

**LOST OF GPA**
I, **Padmini.G** W/o R.A.Shivaprakash Residing at No.29, 4th Cross, Ramakrishna Layout, Malagala Vishwaneedam Post, Bangalore-560091. have Lost my original **General Power of Attorney** No.58, Dtd:12-04-1985 of above addressed property wile Travailing **Finders Please Contact: 7259298717**

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ದೇವದತ್ತ ಅಮೋಘ ಆಟ**

ರಾಜಕೋಟ್‌ನಲ್ಲಿ ಬುಧವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸೌರಾಷ್ಟ್ರ ಎದುರು ಕರ್ನಾಟಕದ ದೇವದತ್ತ ಪಡಿಕ್ಕಲ್ 96 ರನ್ ಗಳಿಸಿದರು

**ಕಂಸಾಳೆ...**

ದಾವಣಗೆರೆ ಜಿಲ್ಲಾಮಟ್ಟದ ಯುವಜನೋತ್ಸವ 2025 ಕಾರ್ಯಕ್ರಮದಲ್ಲಿ ಕಂಸಾಳೆ ನೃತ್ಯ ಪ್ರಸ್ತುತಪಡಿಸಿದ ಹೊನ್ನಾಳಿಯ ಮೃತ್ಯುಂಜಯ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ

ಗಲ್ಲುಶಿಕ್ಷೆಗೆ ಪರ್ಯಾಯ ಆಯ್ಕೆ: ಒಪ್ಪದ ಕೇಂದ್ರ 5
'ಅಮೆರಿಕ ಡಾಲರ್ ಮೇಲೆ 'ಬ್ರಿಕ್ಸ್' ದಾಳಿ 8

# 'ಸಂಪುಟ'ಕ್ಕಿಂತ ಸಚಿವ ದರ್ಜೆ ಭಾರ

## ಮುಖ್ಯಮಂತ್ರಿ ಸೇರಿ ಸಚಿವರು 32 • 76 ಮಂದಿಗೆ ಸ್ಥಾನದ 'ಮಾನ' • ತಿಂಗಳಿಗೆ ತಲಾ ₹10 ಲಕ್ಷ ವೆಚ್ಚ

**32** ಸಚಿವ ಸಂಪುಟದಲ್ಲಿರುವವರು | **62** ಸಂಪುಟ ಸಚಿವ ಸ್ಥಾನಮಾನ | **14** ರಾಜ್ಯ ಸಚಿವ ಸ್ಥಾನಮಾನ

• ಆರ್.ಮಂಜುನಾಥ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಂಪುಟದಲ್ಲಿ ಅಧಿಕೃತವಾಗಿ 32 ಸಚಿವರಿದ್ದರೆ, 'ಸಚಿವ ಸ್ಥಾನಮಾನ' ಪಡೆದಿರುವವರ ಸಂಖ್ಯೆ ದುಪ್ಪಟ್ಟಾಗಿದೆ. ಸ್ಥಾನದ 'ಮಾನ' ಪಡೆದಿರುವ ಪ್ರತಿಯೊಬ್ಬರಿಗೆ ತಿಂಗಳಿಗೆ ₹10 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ಬೊಕ್ಕಸದಿಂದ ವ್ಯಯಿಸಲಾಗುತ್ತಿದೆ.

ಮುಖ್ಯಮಂತ್ರಿಯವರ ಕಾನೂನು, ರಾಜಕೀಯ, ವೈದ್ಯಕೀಯ, ಆರ್ಥಿಕ, ಮಾಧ್ಯಮ ಸಲಹೆಗಾರರು ಸೇರಿದಂತೆ ನಿಗಮ ಮಂಡಳಿಗಳ ಅಧ್ಯಕ್ಷರು–ಉಪಾಧ್ಯಕ್ಷರು ಸೇರಿದಂತೆ ಒಟ್ಟು 76 ಮಂದಿಗೆ 'ಸಚಿವರ ಸ್ಥಾನಮಾನ'ದ 'ಗ್ಯಾರಂಟಿ'ಯನ್ನು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ದಯಪಾಲಿಸಿದೆ.

2023ರಲ್ಲಿ ವಿಧಾನಸಭೆ–ವಿಧಾನ ಪರಿಷತ್‌ನ ಮುಖ್ಯ ಸಚೇತಕರಿಗೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡುವ ಪ್ರಕ್ರಿಯೆ ಆರಂಭವಾಯಿತು. ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ ಅವರಿಗೆ 'ರಾಜ್ಯ ಸಚಿವರ ಸ್ಥಾನಮಾನ'ವನ್ನು ಇದೇ 14ರಂದು ಕಲ್ಪಿಸಲಾಗಿದೆ. ಅಲ್ಲಿಗೆ, ಸದ್ಯ 'ಸಚಿವ ಸ್ಥಾನಮಾನ' ದಕ್ಕಿಸಿಕೊಂಡವರ ಸಂಖ್ಯೆ 76ಕ್ಕೇರಿದೆ.

ಎಲ್ಲರನ್ನೂ ತೃಪ್ತಿಪಡಿಸಲು ಹಿಂದೆಲ್ಲ ಸಚಿವರ ಸಂಖ್ಯೆಯನ್ನು ಬೇಕಾಬಿಟ್ಟಿ ಏರಿಸುತ್ತಿದ್ದುದರಿಂದ 'ಜಂಬೋ' ಸಚಿವ ಸಂಪುಟದ ಭಾರ ಸರ್ಕಾರವನ್ನು ಬಾಧಿಸುತ್ತಿತ್ತು. ಶಾಸನಸಭೆಯ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ರಾಜ್ಯ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಸೇರಿ ಒಟ್ಟು 34 ಮಂದಿಗೆ ಅವಕಾಶ ಕಲ್ಪಿಸಬಹುದು ಎಂಬ ನಿಯಮ ತರಲಾಯಿತು. ಸಂಪುಟ ಆಕಾಂಕ್ಷಿಗಳನ್ನು ಸಮಾಧಾನಪಡಿಸಲು ಅನ್ಯಮಾರ್ಗದಲ್ಲಿ ಅಧಿಕಾರ ನೀಡುವ ದಾರಿಯನ್ನು ಸರ್ಕಾರ ನಡೆಸುವವರು ಹಿಡಿದರು. ಇದು, ಈಗಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮಾತ್ರ ವಲ್ಲ; ಹಿಂದೆ ಆಡಳಿತ ನಡೆಸಿದ ಬಿಜೆಪಿ, ಜೆಡಿಎಸ್ ನೇತೃತ್ವದ ಸರ್ಕಾರಗಳಲ್ಲೂ ಈ ಪದ್ಧತಿ ಚಾಲ್ತಿಯಲ್ಲಿತ್ತು.

ಮುಖ್ಯಮಂತ್ರಿ, ಸಚಿವರು, ರಾಜ್ಯ ಸಚಿವರು, ವಿಧಾನಸಭೆ ಸ್ಪೀಕರ್, ವಿಧಾನ ಪರಿಷತ್ ಸಭಾಪತಿ, ಮುಖ್ಯ ಸಚೇತಕರು, ಶಾಸಕರು, ವಿಧಾನಪರಿಷತ್ ಸದಸ್ಯರಿಗೆ ವೇತನ ಏಪ್ರಿಲ್‌ನಿಂದ ದುಪ್ಪಟ್ಟಾಗಿದೆ. ವಿಧಾನಮಂಡಲದಲ್ಲಿ ಚರ್ಚೆ ಇಲ್ಲದೆಯೇ ಈ ಮಸೂದೆಗಳು ಅಂಗೀಕಾರವಾಗಿ, ಜಾರಿಯಾಗಿವೆ.

▶8

### ಯಾರಿಗೆ ಎಷ್ಟು ವೆಚ್ಚ?

| ಸಂಪುಟ ದರ್ಜೆ | |
|---|---|
| ವೇತನ | ₹ 1.25 ಲಕ್ಷ |
| ಮನೆ ಬಾಡಿಗೆ | ₹2.50 ಲಕ್ಷ |
| ಇಂಧನ ಭತ್ಯೆ | 2,000 ಲೀ (ತಿಂಗಳಿಗೆ) |
| ಸಿಬ್ಬಂದಿ | 12 ಸಿಬ್ಬಂದಿ (ಆಪ್ತ ಕಾರ್ಯದರ್ಶಿ, ಆಪ್ತ ಸಹಾಯಕ (4), ಕನ್ನಡ ಶೀಘ್ರ ಲಿಪಿಗಾರರು (1), ದಲಾಯತ್ (4), ಚಾಲಕರು (2)) |
| ಪ್ರವಾಸ ಭತ್ಯೆ | ದಿನಕ್ಕೆ ₹2,500 (ರಾಜ್ಯ), ದಿನಕ್ಕೆ ₹3,000 (ಹೊರರಾಜ್ಯ) |
| ಪ್ರಯಾಣ ಭತ್ಯೆ | ₹40 ಕಿ.ಮೀಗೆ |
| ಆತಿಥ್ಯ ಭತ್ಯೆ | ₹ 4.50 ಲಕ್ಷ (ವಾರ್ಷಿಕ) |
| ವಾಹನ ಸೌಕರ್ಯ | ₹26 ಲಕ್ಷದ ಮಿತಿಯ ವಾಹನ ಖರೀದಿಗೆ ಅವಕಾಶ (ಒಂದು ಬಾರಿ) |
| ಪೀಠೋಪಕರಣ | ₹10 ಲಕ್ಷ ಮಿತಿಯ ಗೃಹೋಪಯೋಗಿ ವಸ್ತು, ಪೀಠೋಪಕರಣ ಖರೀದಿ (ಒಂದು ಬಾರಿ) |

### ಬಿಜೆಪಿ ಅವಧಿಯಲ್ಲಿ 72

ನಿಗಮ–ಮಂಡಳಿ, ಸಲಹೆಗಾರರಿಗೆ 'ಸಚಿವ ಸ್ಥಾನಮಾನ' ನೀಡುವ ಪ್ರಕ್ರಿಯೆ ಬಿಜೆಪಿ ಸರ್ಕಾರದಲ್ಲೂ ಇತ್ತು. ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ, 72 ಮಂದಿಗೆ 'ಸಚಿವ ಸ್ಥಾನಮಾನ' ನೀಡಲಾಗಿತ್ತು. ಈಗ, ಕಾಂಗ್ರೆಸ್ ಸರ್ಕಾರದಲ್ಲಿ ಆ ಸಂಖ್ಯೆ(76) ಮೀರಿ ದಾಖಲೆ ನಿರ್ಮಾಣವಾಗಿದೆ.

**ಉಲ್ಲಂಘನೆ:** 'ಸಂವಿಧಾನದ ವಿಧಿ 164(1ಎ) ಅನ್ನು ಉಲ್ಲಂಘಿಸಿ, ಬೇಕಾದವರಿಗೆಲ್ಲ ಸಚಿವ ಸ್ಥಾನಮಾನವನ್ನು ನೀಡಲಾಗಿದೆ. ಸಂವಿಧಾನ ಹಾಗೂ ಕಾನೂನುಗಳ ಉಲ್ಲಂಘನೆ ಮಾಡಿ, ಸರ್ಕಾರಕ್ಕೆ ಅತಿಹೆಚ್ಚು ಆರ್ಥಿಕ ಹೊರೆಯನ್ನೂ ಸೃಷ್ಟಿಸಲಾಗಿದೆ. ಇದನ್ನು ಪ್ರಶ್ನಿಸಿ, ಈ ಸ್ಥಾನಮಾನವನ್ನು ರದ್ದುಗೊಳಿಸುವಂತೆ ಹೈಕೋರ್ಟ್‌ಗೆ ಎಲ್ಲ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲಾಗಿದೆ' ಎಂದು ಅರ್ಜಿದಾರ ಸೂರಿ ಪಾಯಲ್ 'ಪ್ರಜಾವಾಣಿ'ಗೆ ತಿಳಿಸಿದರು.

# ಹಸಿರು ಪಟಾಕಿ ಬಳಕೆಗೆ 'ಸುಪ್ರೀಂ' ಅನುಮತಿ

ದೆಹಲಿ–ಎನ್‌ಆರ್‌ಸಿ ಪ್ರದೇಶ



ಹಸಿರು ಪಟಾಕಿ

ನವದೆಹಲಿ: ದೀಪಾವಳಿ ಹಬ್ಬದ ಆಚರಣೆಗಾಗಿ ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶಗಳಲ್ಲಿ (ಎನ್‌ಆರ್‌ಸಿ) ಹಸಿರು ಪಟಾಕಿಯ ತಯಾರಿಕೆ, ಮಾರಾಟ ಮತ್ತು ಬಳಕೆಗೆ ಸುಪ್ರೀಂ ಕೋರ್ಟ್ ಬುಧವಾರ ಅನುಮತಿ ನೀಡಿದೆ. ಆದರೆ, ಇದಕ್ಕೆ ಹಲವು ಷರತ್ತುಗಳನ್ನೂ ವಿಧಿಸಿದೆ. ಹಸಿರು ಪಟಾಕಿ ಬಳಕೆಗೆ ಅನುಮತಿ ನೀಡುವಂತೆ ಕೇಂದ್ರ ಸರ್ಕಾರ ಮತ್ತು ದೆಹಲಿ ಸರ್ಕಾರ ನ್ಯಾಯಾಲಯಕ್ಕೆ ಮನವಿ ಮಾಡಿದ್ದವು. ಈ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ಕೆ. ವಿನೋದ್ ಚಂದ್ರನ್ ಅವರ ಪೀಠವು ನಡೆಸಿತ್ತು. ಅ.10ರಂದು ಅಂತಿಮ ವಾದ–ಪ್ರತಿವಾದ ನಡೆದು, ನ್ಯಾಯಾಲಯವು ತನ್ನ ಆದೇಶವನ್ನು ಕಾಯ್ದಿರಿಸಿತ್ತು

### ಷರತ್ತುಗಳಾವುವು?

**ಹಸಿರು ಪಟಾಕಿ ಮಾರಾಟ ಯಾವಾಗ:** ಅ.18ರಿಂದ 21ರವರೆಗೆ

**ಪಟಾಕಿ ಬಳಕೆ ಸಮಯ:** ಬೆಳಿಗ್ಗೆ 6ರಿಂದ 7ರವರೆಗೆ, ರಾತ್ರಿ 8ರಿಂದ 10ರವರೆಗೆ (ದೀಪಾವಳಿ ಹಬ್ಬದ ಹಿಂದಿನ ದಿನ, ದೀಪಾವಳಿ ಹಬ್ಬದ ದಿನ– ಎರಡು ದಿನಕ್ಕೆ ಮಾತ್ರವೇ ಅವಕಾಶ)

- ಆನ್‌ಲೈನ್‌ನಲ್ಲಿ ಹಸಿರು ಪಟಾಕಿ ಮಾರಾಟಕ್ಕೆ ಅವಕಾಶವಿಲ್ಲ
- ಎಸ್‌ಪಿಯೊಂದಿಗೆ ಚರ್ಚಿಸಿ, ಜಿಲ್ಲಾಧಿಕಾರಿ ಗುರುತಿಸಿದ ಸ್ಥಳಗಳಲ್ಲಿ ಮಾತ್ರವೇ ಮಾರಾಟ ನಡೆಯಬೇಕು. ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯಲ್ಲಿ (ನೀರಿ) ನೋಂದಾಯಿತ ಹಸಿರು ಪಟಾಕಿ ತಯಾರಿಕಾ ಕಂಪನಿಗಳು ಮಾತ್ರವೇ ತಯಾರಿಕೆ ನಡೆಸಬೇಕು. ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆಯಿಂದ (ಪಿಇಎಸ್‌ಒ) ಪರವಾನಗಿ ಪಡೆದ ಮಾರಾಟಗಾರರು ಮಾತ್ರವೇ ಮಾರಾಟ ಮಾಡಬೇಕು

▶6

**ಹಸಿರು ಪಟಾಕಿಗಳು ಶೇ 30ರಷ್ಟು ಮಾಲಿನ್ಯವನ್ನು ತಗ್ಗಿಸುತ್ತವೆ ನಿಜ. ಆದರೆ, ಈ ಕ್ರಮದಿಂದ ಹೆಚ್ಚು ಉಪಕಾರವೇನೂ ಆಗುವುದಿಲ್ಲ. ಯಾಕೆಂದರೆ, ದೀಪಾವಳಿ ಹಬ್ಬದಲ್ಲಿ ಇದರ ಬಳಿಕೆಯ ಪ್ರಮಾಣವೇ, ಇದರ ಪ್ರಯೋಜನವನ್ನು ತಿಂದುಹಾಕಿ ಬಿಡುತ್ತದೆ. ಇದರಿಂದ, ಮಾಲಿನ್ಯ ಹೆಚ್ಚೇ ಆಗುತ್ತದೆ**

**ಸುನಿಲ್ ದಹಿಯಾ,** ಪರಿಸರವಾದಿ

# ಹಾಸನಾಂಬೆ ದರ್ಶನ ಪಡೆದ ಬಾನು

ಪ್ರಜಾವಾಣಿ ವಾರ್ತೆ

ಹಾಸನ: ಲೇಖಕಿ ಬಾನು ಮುಷ್ತಾಕ್ ಅವರು ಬುಧವಾರ ಇಲ್ಲಿನ ಹಾಸನಾಂಬ ದೇಗುಲಕ್ಕೆ ಬಂದು ದೇವಿಯ ದರ್ಶನ ಪಡೆದರು. ಹೂವು ಮುಡಿದು, ಬಳೆ ತೊಟ್ಟು ಸಂಭ್ರಮಿಸಿದರು.

ಈ ವೇಳೆ ಮಾತನಾಡಿ, 'ಚಿಕ್ಕವಳಿದ್ದಾಗ ತಾಯಿಯ ಬೆರಳು ಹಿಡಿದು ಇಲ್ಲಿಗೆ ಬರುತ್ತಿದ್ದ ದಿನಗಳು ನೆನಪಾದವು. ಇಂದು ನಿಮ್ಮ ಗಮನಕ್ಕೆ ಬಂದಿದ್ದೇನೆ. ಅಂದೂ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರು ಬರುತ್ತಿದ್ದರು. ಈಗಲೂ ಕೆಲವರು ಬರ್ತಾರೆ' ಎಂದರು.

'ಹಿಂದೆ ಮುಸ್ಲಿಮರೂ ಹಾಸನಾಂಬೆಯನ್ನು ಪೂಜಿಸುತ್ತಿದ್ದರು. ತಾಯಿಯವರ ಕಾಲದಲ್ಲಿ ದೇವಿಯನ್ನು ಹಸನ್ ಬಿ, ಹುಸೇನ್ ಬೀ ಎಂಬ ನಂಬಿಕೆಯಲ್ಲಿ ಪರಿಚಯಿಸುತ್ತಿದ್ದರು. ಮುಸ್ಲಿಂ ಪದ್ಧತಿಯಂತೆ ಸಕ್ಕರೆ, ಊದಿನ ಕಡ್ಡಿ ತಂದು ಪೂಜಿಸುತ್ತಿದ್ದರು' ಎಂದು ಸ್ಮರಿಸಿದರು.

'ದೇಗುಲವು ಭಾವೈಕ್ಯದ ಜಾಗ. ಈ ಉತ್ಸವ ನಮ್ಮ ಊರಿನ ಹಬ್ಬ. ನಾವೆಲ್ಲರೂ ಈ ದೇವಿಯ ಜಾತ್ರೆಯಲ್ಲಿ ಸಂಭ್ರಮದಿಂದ ಭಾಗಿಯಾಗಬೇಕು' ಎಂದರು.

ಲೇಖಕಿ ಬಾನು ಮುಷ್ತಾಕ್ ಅವರು ಬುಧವಾರ ಹಾಸನಾಂಬೆಯ ದರ್ಶನ ಪಡೆದರು

## ತಾಯಿ, ಸಹೋದರಿಯರ ನಿಂದಿಸುವುದು ಶಾಖೆಯ ಸಂಸ್ಕಾರವೇ: ಸಚಿವ ಪ್ರಶ್ನೆ

# ವಿಡಿಯೊ ಬಿಡುಗಡೆ ಮಾಡಿದ ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ಥಳಗಳಲ್ಲಿ ಶಾಖೆ, ಸಾಂಘಿಕ್ ಅಥವಾ ಬೈಠಕ್ ಹೆಸರಿನಲ್ಲಿ ಆರ್‌ಎಸ್‌ಎಸ್ ನಡೆಸುವ ಎಲ್ಲ ಬಗೆಯ ಚಟುವಟಿಕೆಗಳಿಗೂ ನಿಷೇಧ ಹೇರಬೇಕೆಂದು ಮುಖ್ಯಮಂತ್ರಿಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದ ನಂತರ ಅವರಿಗೆ ಬರುತ್ತಿರುವ ಬೆದರಿಕೆ ಕರೆಗಳ ಒಂದು ವಿಡಿಯೊ ತುಣುಕನ್ನು ಪ್ರಿಯಾಂಕ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಬೆದರಿಕೆ ಕರೆ ಮಾಡಿದ ವ್ಯಕ್ತಿ ಹಿಂದಿಯಲ್ಲಿ ಮಾತನಾಡಿದ್ದು, ಆರ್‌ಎಸ್‌ಎಸ್ ನಿಷೇಧ ಕುರಿತ ಹೇಳಿಕೆಗೆ ಪ್ರಿಯಾಂಕ್ ಹಾಗೂ ಅವರ ಸೋದರ ರಾಹುಲ್ ಅವರನ್ನು ಕೆಟ್ಟಪದಗಳಿಂದ ನಿಂದಿಸಿದ್ದಾನೆ. ತಾಯಿ, ಸಹೋದರಿಯರ ಹೆಸರಿಡಿದು ತುಚ್ಛವಾಗಿ ಮಾತನಾಡಿದ್ದಾನೆ.

ಈ ಕುರಿತು 'ಎಕ್ಸ್'ನಲ್ಲಿ ವಿಡಿಯೊ ಸಹಿತ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಯುವಕರು, ಮಕ್ಕಳ ಮನಸುಗಳಲ್ಲಿ ಕಲ್ಮಶ ತುಂಬುವ ಕೆಲಸವನ್ನು ಆರ್‌ಎಸ್‌ಎಸ್ ಮಾಡುತ್ತಿದೆ ಎಂದಿದ್ದೆ, ಅವರು ತುಂಬಿದ ಕಲ್ಮಶವು ಹೇಗಿರುತ್ತದೆ ಎಂಬುದಕ್ಕೆ ಈ ಕರೆ ಒಂದು ಸಣ್ಣ ಉದಾಹರಣೆ' ಎಂದರು.

▶2B

**ನಾವು ಹೆಚ್ಚು ಶಕ್ತಿಶಾಲಿಯಾದಷ್ಟು, ಶತ್ರುಗಳು ಹೆಚ್ಚು. ಕಡಿಮೆ ಶಕ್ತಿ ಇದ್ದರೆ ಕಡಿಮೆ ಶತ್ರುಗಳು, ಶಕ್ತಿಯೇ ಇಲ್ಲದಿದ್ದರೆ, ಶತ್ರುಗಳೂ ಇರುವುದಿಲ್ಲ**

**ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

### ತನಿಖೆಗೆ ಸೂಚನೆ: ಪರಮೇಶ್ವರ

'ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಕರೆಗಳು ಬಂದಿರುವ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದು, ತನಿಖೆ ನಡೆಸಲು ಸೂಚಿಸಿದ್ದೇನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ, 'ಯಾರು ಬೆದರಿಕೆ ಕರೆ ಮಾಡಿದ್ದಾರೆ, ಎಲ್ಲಿಂದ ಕರೆ ಬಂದಿದೆ ಎಂಬುದನ್ನು ತನಿಖೆ ಮಾಡುತ್ತೇವೆ. ಆರ್‌ಎಸ್‌ಎಸ್ ವಿಚಾರದಲ್ಲಿ ಪ್ರಿಯಾಂಕ್ ಖರ್ಗೆ ಅವರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಆ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಅಭಿಪ್ರಾಯ ತಿಳಿಸಿದ್ದಕ್ಕೇ ಅವರಿಗೆ ಬೆದರಿಕೆ ಹಾಕುವುದು ಸರಿಯಲ್ಲ' ಎಂದರು.

ಸಿಕೆಸಿ ಗ್ರೂಪ್
155 ವರ್ಷಗಳು

ಮಹತ್ವಪೂರ್ಣ ಸಂಭ್ರಮದ ನಾಣ್ಯಗಳು.
ಪಾರಂಪರ್ಯದ ಕಲಾಕೃತಿಗಳು.
ಜೀವಿತಾವಧಿಯ ಸ್ಮರಣೀಯ ನೆನಪುಗಳು.

ಪರಿಚಯಿಸುತ್ತಿದ್ದೇವೆ, ವೈಶಿಷ್ಟ್ಯಪೂರ್ಣ ಶುದ್ಧ ಚಿನ್ನ ಹಾಗೂ ಬೆಳ್ಳಿ ನಾಣ್ಯ ಸಂಚಿಕೆಗಳು

ಭಾರತೀಯ ಪರಂಪರೆ ಮತ್ತು ವೈಭವವನ್ನು ಒಳಗೊಂಡಿರುವ ಸೀಮಿತ ಆವೃತ್ತಿಯ ಚಿನ್ನ ಮತ್ತು ಬೆಳ್ಳಿ ನಾಣ್ಯಗಳ ಸಂಗ್ರಹವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ. ಘಂಡಭೇರುಂಡ, ಗೋಲ್ಕೊಂಡಾ ಕೋಟೆ, ಮಾರ್ಗೋಸಾ, ಕುಂಭ ಮೇಳ, ವಿಧಾನ ಸೌಧ, ಮೈಸೂರು ಅರಮನೆ, ಆಪರೇಷನ್ ಸಿಂಧೂರ ಮತ್ತಿತರ ಐತಿಹಾಸಿಕ ಹಾಗೂ ಕಲಾತ್ಮಕ ವಿಷಯಗಳೊಂದಿಗೆ, ಪ್ರತಿಯೊಂದು ನಾಣ್ಯವೂ ನಮ್ಮ ಸಂಸ್ಕೃತಿ ಮತ್ತು ಹಿರಿಮೆಯ ಪ್ರತಿಬಿಂಬವಾಗಿದೆ. ನಿಖರತೆ ಹಾಗೂ ನೈಸರ್ಗಿಕತೆಯೊಂದಿಗೆ ರೂಪುಗೊಂಡ ಈ ನಾಣ್ಯಗಳು, ಪ್ರತಿ ಉಡುಗೊರೆಯಲ್ಲೂ ಅರ್ಥಪೂರ್ಣ ಸ್ಪರ್ಶವನ್ನು ನೀಡುತ್ತವೆ - ಕಲೆಗೆ ಮೌಲ್ಯ ನೀಡುವವರ ಮನಸ್ಸನ್ನು ಸೆಳೆಯುವಂತೆ, ಸಿ. ಕೃಷ್ಣಯ್ಯ ಚೆಟ್ಟಿ ಸಂಸ್ಥೆಯ ಪಾರಂಪರಿಕ ನೈಪುಣ್ಯದ ಜಾಣ್ಮೆಯಿಂದ ಕಲಾತ್ಮಕವಾಗಿ ವಿನ್ಯಾಸಗೊಳಿಸಲಾಗಿದೆ.

ನಿಮ್ಮ ದೀಪಾವಳಿ ಉಡುಗೊರೆಯನ್ನು ನಿಜವಾದ ಅರ್ಥದಲ್ಲಿ ಶಾಶ್ವತವಾಗಿಸಲು, ನಿಮ್ಮ ಹತ್ತಿರದ ನಮ್ಮ ಶೋರೂಮ್‌ಗೆ ಭೇಟಿ ನೀಡಿ ಅಥವಾ ನಮ್ಮ ಆನ್‌ಲೈನ್ ಸೇವೆಯನ್ನು ಬಳಸಿ ಖರೀದಿಸಿ.

ಬೆಲೆ ₹1,800/- ರಿಂದ ₹18 ಲಕ್ಷದ ವರೆಗೆ

ಈಗಲೇ ಖರೀದಿಸಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ!

ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲರ್ಸ್

ಬೆಂಗಳೂರಿನಾದ್ಯಂತ ಭವ್ಯವಾದ ಶೋರೂಮ್‌ಗಳು ಮತ್ತು ಬುಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ (ಕೆಂಪು ಬಣ್ಣದ ಮುಂಭಾಗ) • ಜಯನಗರ • ಮಲ್ಲೇಶ್ವರಂ
ಹೆಚ್ಚಿನ ಮಾಹಿತಿಗಾಗಿ, ಮೀಸಲಿಟ್ಟ ಸಂಬಂಧಿತ ವ್ಯವಸ್ಥಾಪಕರಿಗೆ ಕರೆ ಮಾಡಿ: +91 95 1313 1869 | Tel: 080-4000 1869 / 4100 1869 | www.ckcjewellers.com

*ಸೂಚಕ ಬೆಲೆ ನಿಗದಿ, ದರ ಏರಿಳಿತಕ್ಕೆ ಒಳಪಟ್ಟಿರುತ್ತದೆ • © ವಿನ್ಯಾಸ ಹಕ್ಕುಸ್ವಾಮ್ಯ, ಉಲ್ಲಂಘನೆಯನ್ನು ನಿಷೇಧಿಸಲಾಗಿದೆ.
• ಗುರುತುಗಳು, ಲೋಗೋಗಳು, ಹೆಸರುಗಳು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ಅನಧಿಕೃತ ಬಳಕೆಯನ್ನು ನಿಷೇಧಿಸಲಾಗಿದೆ.

ಸಿಕೆಸಿ ಸಮೂಹ ಕಂಪನಿಗಳು: C. KRISHNIAH CHETTY & SONS • C. KRISHNIAH CHETTY JEWELLERS • THE 1869 GUILD • C. Krishniah Chetty & Sons • C. KRISHNIAH CHETTY CHARITABLE TRUST • C. Krishniah Chetty Foundation

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಗಾಗದಿರಿ. ವಾಸ್ತವವಾಗಿ ಅದು ಸಿ. ಕೃಷ್ಣಯ್ಯ ಚೆಟ್ಟಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ.*

# ಬೈರತಿ ಬಸವರಾಜ್ ಪ್ರಭಾವ: ಆರೋಪ

## ಬಿಕ್ಲು ಶಿವು ಕೊಲೆ ಪ್ರಕರಣ: ಡಿಫಾಲ್ಟ್ ಜಾಮೀನು ಕಾಯ್ದಿರಿಸಿದ ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಆರೋಪಿಯಾಗಿರುವ ಕೆ.ಆರ್.ಪುರ ಕ್ಷೇತ್ರದ ಬಿಜೆಪಿಯ ಶಾಸಕ ಬೈರತಿ ಬಸವರಾಜ್ ಪ್ರಭಾವದಿಂದಾಗಿ ತನಿಖೆಗೆ ಅಡಚಣೆ ಉಂಟಾಗುವ ಸಾಧ್ಯತೆ ಇದೆ' ಎಂದು ಪ್ರಾಸಿಕ್ಯೂಷನ್ ಕಳವಳ ವ್ಯಕ್ತಪಡಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿ 90 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸಲು ವಿಫಲವಾಗಿದ್ದು, ನಮಗೆ ಜಾಮೀನು (ಡಿಫಾಲ್ಟ್ ಬೇಲ್) ಮಂಜೂರು ಮಾಡಬೇಕು' ಎಂದು ಕೋರಿ ಪ್ರಕರಣದ ಐವರು ಆರೋಪಿಗಳು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗಳನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್ ಅವರು, 'ಈ ಪ್ರಕರಣದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಣಕಾಸಿನ ಲಾಭಕ್ಕಾಗಿ ಕ್ರಿಮಿನಲ್ ಹಿನ್ನೆಲೆಯುಳ್ಳವರು ಭಾಗಿಯಾಗಿದ್ದು, ರಾಜಕೀಯ ಪ್ರಭಾವಿಗಳ ಬೆಂಬಲದಿಂದ ವ್ಯವಹಾರ ನಿರ್ವಹಿಸುತ್ತಿದ್ದಾರೆ' ಎಂದರು.



'ಈ ಕೊಲೆ ಒಂದು ಸಂಘಟಿತ ಅಪರಾಧವಾಗಿದ್ದು, ಈಗಾಗಲೇ ಕೋಕಾ (ಕರ್ನಾಟಕ ಸಂಘಟಿತ ಅಪರಾಧ ತಡೆ ಕಾಯ್ದೆ–2000) ಕಾಯ್ದೆ ಅನ್ವಯಿಸಿ ತನಿಖೆ ನಡೆಸಲಾಗುತ್ತಿದೆ. ಈಗಾಗಲೇ 40ಕ್ಕೂ ಹೆಚ್ಚು ಸಾಕ್ಷಿಗಳ ಹೇಳಿಕೆ ಪಡೆಯಲಾಗಿದೆ. ಅವರ ಸುರಕ್ಷತೆಯ ದೃಷ್ಟಿಯಿಂದ ಹೆಸರು ಬಹಿರಂಗಪಡಿಸಲು ಆಗುವುದಿಲ್ಲ. ಕೋಕಾ ಕಾಯ್ದೆ ಕಲಂ 22(2)ಬಿ ಅನ್ವಯ ಬಂಧನದ ಅವಧಿಯನ್ನು ಹೆಚ್ಚುವರಿ 90 ದಿನಗಳ ಕಾಲ ವಿಸ್ತರಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಆರೋಪಿಗಳ ಪರ ಹೈಕೋರ್ಟ್ ವಕೀಲ ಸುಯೋಗ ಹೇರಳೆ, 'ಅರ್ಜಿದಾರರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸುವಲ್ಲಿ ಪ್ರಾಸಿಕ್ಯೂಷನ್ ವಿಳಂಬ ಧೋರಣೆ ತೋರುತ್ತಿದ್ದು, ಕಾನೂನು ಬಾಹಿರವಾಗಿ ನ್ಯಾಯಾಂಗ ಬಂಧನದಲ್ಲಿ ಇರುವಂತೆ ಮಾಡಿದೆ' ಎಂದು ಆಕ್ಷೇಪಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಆದೇಶ ಕಾಯ್ದಿರಿಸಿದರು. ಈ ಕೊಲೆ ಪ್ರಕರಣದಲ್ಲಿ 5ನೇ ಆರೋಪಿಯಾಗಿರುವ ಬೈರತಿ ಬಸವರಾಜ್ ಅವರಿಗೆ ಹೈಕೋರ್ಟ್ ಈಗಾಗಲೇ ಬಂಧನದಿಂದ ರಕ್ಷಣೆ ನೀಡಿ ಆದೇಶಿಸಿದೆ.

ಭಾರತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಮಿನಿ ಅವೆನ್ಯೂ ರಸ್ತೆಯಲ್ಲಿರುವ ಸೇಫ್ ಮೆಡಿಕಲ್ ಸ್ಟೋರ್ ಮುಂಭಾಗ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವುನನ್ನು 2025ರ ಜುಲೈ 15ರಂದು 8 ರಿಂದ 9 ಜನರಿದ್ದ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತ್ತು. ಈ ಪ್ರಕರಣದಲ್ಲಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗಳಾದ ಎ–2 ಕೆ.ಕಿರಣ್, ಎ–3 ವಿಮಲ್ ರಾಜ್, ಎ–6 ಪ್ರದೀಪ್, ಎ–7 ಮದನ್ ಮತ್ತು ಎ–8 ಸ್ಯಾಮ್ಯುಯಲ್ ಡಿಫಾಲ್ಟ್ ಜಾಮೀನು ಕೋರಿದ್ದಾರೆ.

**ಈಶ್ವರಪ್ಪ ಪಾಸ್‌ಪೋರ್ಟ್ ನವೀಕರಣಕ್ಕೆ ಆದೇಶ:** ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರ ಪಾಸ್‌ಪೋರ್ಟ್ ನವೀಕರಣ ಮಾಡುವಂತೆ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿಗೆ ಆದೇಶಿಸಿರುವ ಹೈಕೋರ್ಟ್ ಈ ಸಂಬಂಧ ಈಶ್ವರಪ್ಪ ಅವರಿಗೆ ಕೆಲವು ಷರತ್ತುಗಳನ್ನು ವಿಧಿಸಿದೆ.

'ನನ್ನ ಪಾಸ್‌ಪೋರ್ಟ್ ನವೀಕರಿಸಲು ನಿರ್ದೇಶಿಸಬೇಕು' ಎಂದು ಕೋರಿ ಈಶ್ವರಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್, 'ಅರ್ಜಿದಾರರ ವಿರುದ್ಧದ ಏಳು ಕ್ರಿಮಿನಲ್ ಪ್ರಕರಣಗಳಲ್ಲಿ ಐದು ವಿಚಾರಣೆಗೆ ಬಾಕಿ ಇವೆ. ಇದರಿಂದ ನವೀಕರಣಕ್ಕೆ ತಕರಾರು ತೆಗೆಯಲಾಗುತ್ತಿದ್ದು, ಪೊಲೀಸ್ ಪರಿಶೀಲನೆ ವಿಳಂಬವಾಗುತ್ತಿದೆ. ಆದ್ದರಿಂದ, ಪಾಸ್‌ಪೋರ್ಟ್ ನವೀಕರಿಸಲು ನಿರ್ದೇಶಿಸಬೇಕು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಕೆಲವು ಷರತ್ತುಗಳನ್ನು ವಿಧಿಸಿ ಒಂದು ವರ್ಷದವರೆಗೆ ಪಾಸ್‌ಪೋರ್ಟ್ ನವೀಕರಿಸಲು ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿಗೆ ಆದೇಶಿಸಿತು. 'ದೇಶದಿಂದ ಹೊರಗೆ ಹೋಗುವಾಗ ಕೋರ್ಟ್‌ಗೆ ಪ್ರವಾಸದ ವಿವರವನ್ನು ಸ್ಥಳೀಯ ಸಕ್ಷಮ ಪ್ರಾಧಿಕಾರಕ್ಕೆ ಒದಗಿಸಬೇಕು. ವಿದೇಶದಿಂದ ಬಂದ ನಂತರವೂ ಕೋರ್ಟ್‌ಗೆ ಮಾಹಿತಿ ನೀಡಬೇಕು' ಎಂದು ನ್ಯಾಯಪೀಠ ಅರ್ಜಿದಾರರಿಗೆ ನಿರ್ದೇಶಿಸಿದೆ.

### ಶಾಸಕ ವೀರೇಂದ್ರ ಪತ್ನಿ ಅರ್ಜಿ ವಜಾ

ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ಆರೋಪಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಅವರ ಬಂಧನವನ್ನು ಅಕ್ರಮ ಎಂದು ಘೋಷಿಸುವಂತೆ ಕೋರಿದ್ದ ಅವರ ಪತ್ನಿಯ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ವೀರೇಂದ್ರ ಬಂಧನವನ್ನು ಅಕ್ರಮ ಎಂದು ಘೋಷಿಸಬೇಕು' ಎಂದು ಕೋರಿ ಅವರ ಪತ್ನಿ ಆರ್.ಡಿ.ಚೈತ್ರಾ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ಆಲಿಸಿ ಕಾಯ್ದಿರಿಸಿದ್ದ ಆದೇಶವನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ಐ.ಅರುಣ್ ಬುಧವಾರ ಪ್ರಕಟಿಸಿದರು.

'ವೀರೇಂದ್ರ ವಿರುದ್ಧ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ಬಾಕಿ ಇದೆ. ಇದು ಪಿಎಂಎಲ್‌ಎ (ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002) ಕಲಂಗೆ 2(1)(ಯು) ತಿದ್ದುಪಡಿ ತಂದಿರುವ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಬಂಧನ ಕ್ರಮ ಬಂಧನ ಮುಂದುವರಿಕೆಗೆ ಅವಕಾಶ ಕಲ್ಪಿಸುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಇ.ಡಿ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ವಾದ ಮಂಡಿಸಿದ್ದರು.

## ಸುದ್ದಿ 2 ನಿಮಿಷ

### 'ಕೃಪಾಂಕ ಅವಧಿ ವಿಸ್ತರಿಸಿ: 219 ಶಿಕ್ಷಕರ ಕಾಯಂಗೊಳಿಸಿ'

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಅಧೀನದಲ್ಲಿ ಬರುವ ವಸತಿಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 219 ಹೊರ ಸಂಪನ್ಮೂಲ ಶಿಕ್ಷಕರ ಸೇವಾ ಕೃಪಾಂಕದ ಅವಧಿಯನ್ನು 2013ರವರೆಗೆ ವಿಸ್ತರಿಸಿ, ಕಾಯಂಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ದಲಿತ ಪದವೀಧರರ ಸಂಘ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ವಿ. ಲೋಕೇಶ್, 'ಕ್ರೈಸ್ ಅಡಿಯಲ್ಲಿ 823 ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಏಕಲವ್ಯ ವಸತಿಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 2006–07ರಿಂದ ಹೊರ ಸಂಪನ್ಮೂಲ ಶಿಕ್ಷಕರು ಕೆಲಸ ಮಾಡುತ್ತಿದ್ದು ಕಾಯಂಗೊಳಿಸುವಂತೆ ಹೈಕೋರ್ಟ್ ಮೊರೆಹೋಗಲಾಗಿತ್ತು. ನ್ಯಾಯಾಲಯವು, ಪ್ರತಿ ವರ್ಷಕ್ಕೆ ಶೇಕಡ 5ರಂತೆ ಗರಿಷ್ಠ 8 ವರ್ಷಗಳಿಗೆ ಶೇ 40ರಷ್ಟು ಸೇವಾ ಕೃಪಾಂಕ ಪರಿಗಣಿಸುವಂತೆ ಆದೇಶಿಸಿತ್ತು' ಎಂದು ತಿಳಿಸಿದರು.

'2011–12ರಲ್ಲಿ ಶಿಕ್ಷಕರ ಹುದ್ದೆಗಳಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಿ, ಪೂರ್ಣ ಪ್ರಮಾಣದ ಸೇವಾ ಕೃಪಾಂಕ ಪಡೆದು ಆಯ್ಕೆಯಾಗಿದ್ದಾರೆ. ಈಗ ಸೇವಾ ಕೃಪಾಂಕದ ವಿಸ್ತರಣೆಗಾಗಿ ಹೋರಾಟ ಮಾಡುತ್ತಿರುವ 219 ಶಿಕ್ಷಕರು 2011ರಲ್ಲಿ ಸಿಇಟಿ ಪರೀಕ್ಷೆಗೆ ಹಾಜರಾಗಿದ್ದರು. ಆ ಸಂದರ್ಭದಲ್ಲಿ ಇವರ ಸೇವಾ ಅವಧಿ ಕಡಿಮೆ ಇದ್ದ ಕಾರಣ ಗರಿಷ್ಠ ಶೇ 40ರಷ್ಟು ಸೇವಾ ಕೃಪಾಂಕದಿಂದ ವಂಚಿತರಾಗಿದ್ದರು. ಹೊರ ಸಂಪನ್ಮೂಲ ಶಿಕ್ಷಕರಿಗೆ ಪ್ರತಿ ವರ್ಷ ನೀಡುವ ಶೇ 5ರಷ್ಟು ಕೃಪಾಂಕವನ್ನು 2014ರಲ್ಲಿ ರದ್ದುಪಡಿಸಿರುವುದು ಮರಣ ಶಾಸನವಾಗಿದೆ' ಎಂದು ಹೇಳಿದರು.

'ಸೇವಾ ಕೃಪಾಂಕದ ಅವಧಿಯನ್ನು 2013ರವರೆಗೆ ವಿಸ್ತರಿಸಿ ಕಾಯ್ದೆ ರೂಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಲಾಗಿದೆ' ಎಂದರು.

### ಮಾಹಿತಿ ಆಯುಕ್ತರ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಆಯುಕ್ತರನ್ನಾಗಿ ನಿವೃತ್ತ ಐಎಎಸ್ ಅಧಿಕಾರಿ ರಿಚರ್ಡ್ ವಿನ್ಸೆಂಟ್ ಡಿಸೋಜ, ಪತ್ರಕರ್ತರಾದ ಬಿ.ವೆಂಕಟ್ ಸಿಂಗ್ ಮತ್ತು ಮಹೇಶ್ ವಾಳ್ವೇಕರ್ ಅವರನ್ನು ನೇಮಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಆದೇಶ ಹೊರಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಳೆದ ವಾರ ನಡೆದ ಸಭೆಯಲ್ಲಿ ಈ ಮೂವರ ಹೆಸರುಗಳನ್ನು ಅಂತಿಮಗೊಳಿಸಿ ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದರು. ಈ ಹೆಸರುಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡಿ ಬುಧವಾರ ಅಧಿಕೃತ ಆದೇಶ ಹೊರಡಿಸಿದ್ದಾರೆ.

ವಿನ್ಸೆಂಟ್ ಡಿಸೋಜ ಮತ್ತು ಮಹೇಶ್ ವಾಳ್ವೇಕರ್ ಅವರನ್ನು ಬೆಂಗಳೂರು ವಿಭಾಗಕ್ಕೂ, ವೆಂಕಟ್ ಸಿಂಗ್ ಅವರನ್ನು ಕಲಬುರಗಿ ವಿಭಾಗದ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಚಿಕ್ಕಮಗಳೂರಿನ ಹೋಟೆಲ್‌ಗಳಲ್ಲಿ ಸಿಗುತ್ತಿದೆ ಎನ್ನಲಾದ ದನದ ಮಾಂಸದ ಬಿರಿಯಾನಿಯನ್ನು ಸಿ.ಟಿ.ರವಿ ಅವರು ಪೊಲೀಸರಿಗೆ ನೀಡಿದರು

## ಜಿಲ್ಲಾಡಳಿತಕ್ಕೆ ದನದ ಮಾಂಸದ ಬಿರಿಯಾನಿ, ಕಬಾಬ್ ನೀಡಿ ಆಕ್ರೋಶ

**ಚಿಕ್ಕಮಗಳೂರು:** ನಗರದಲ್ಲಿ ದನದ ಮಾಂಸದ ಹೋಟೆಲ್‌ಗಳ ಬಂದ್‌ಗೆ ಆಗ್ರಹಿಸಿ ಜಿಲ್ಲಾಡಳಿತಕ್ಕೆ ದನದ ಮಾಂಸದ ಬಿರಿಯಾನಿ, ಕಬಾಬ್ ನೀಡುವ ಮೂಲಕ ಹಿಂದೂ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟಿಸಿದರು.

ಗೋವುಗಳ ರಕ್ಷಣೆಗೆ ಆಗ್ರಹಿಸಿ ಬುಧವಾರ ಮೆರವಣಿಗೆ ನಡೆಸಿ ಆಜಾದ್ ಪಾರ್ಕ್ ವೃತ್ತದಲ್ಲಿ ಬಹಿರಂಗ ಸಭೆ ನಡೆಸಲಾಯಿತು. 'ಗೋವುಗಳ ಹತ್ಯೆ ನಿರಂತರವಾಗಿ ನಡೆಯುತ್ತಿದೆ' ಎಂದು ದೂರಿದರು. ಹೋಟೆಲ್‌ನಿಂದ ಕಾರ್ಯಕರ್ತರು ಪಾರ್ಸೆಲ್ ತಂದಿದ್ದ ದನದ ಮಾಂಸದ ಬಿರಿಯಾನಿ, ಕಬಾಬ್, ಒಂದು ತಟ್ಟೆಯನ್ನು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಟಿ. ಜಯಕುಮಾರ್ ಅವರಿಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ನೀಡಿದರು. ಅಂತಹ ಹೋಟೆಲ್‌ಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಬಿಜೆಪಿ ಯುವ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಸಂತೋಷ್ ಕೋಟ್ಯಾನ್, 'ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ಹಲವು ಬಾರಿ ಮನವಿ ಮಾಡಿದ್ದರೂ ಕ್ರಮ ಕೈಗೊಂಡಿಲ್ಲ. ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಅಧಿಕಾರಿಗಳ ಮನೆಗೆ ಕಳುಹಿಸಲಾಗುವುದು' ಎಂದು ಎಚ್ಚರಿಸಿದರು.

ಉಪ ಸಭಾಪತಿ ಎಂ.ಕೆ.ಪ್ರಾಣೇಶ್, ಸಂಸದ ಕೋಟ ಶ್ರೀನಿವಾಸ ಪೂಜಾರಿ ಉಪಸ್ಥಿತರಿದ್ದರು.

### ಫಿಲಿಪ್ಪೀನ್ಸ್‌ನ ಸಂಸ್ಥೆ ಜತೆಗೆ ಮಂಡ್ಯ ಕೃಷಿ ವಿಶ್ವವಿದ್ಯಾಲಯ ಒಪ್ಪಂದ

# ಭತ್ತ ಸಂಶೋಧನೆಗೆ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಭತ್ತದ ತಳಿಗಳ ಸಂಶೋಧನೆ ಮತ್ತು ಸಂವರ್ಧನೆಗೆ ನೆರವು ಪಡೆಯುವ ಉದ್ದೇಶದಿಂದ ಫಿಲಿಪ್ಪೀನ್ಸ್‌ನ ಅಂತರರಾಷ್ಟ್ರೀಯ ಭತ್ತ ಸಂಶೋಧನಾ ಕೇಂದ್ರದೊಂದಿಗೆ ಮಂಡ್ಯ ಕೃಷಿ ವಿಶ್ವವಿದ್ಯಾಲಯ ಒಡಂಬಡಿಕೆ ಮಾಡಿಕೊಂಡಿದೆ.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದ ನಿಯೋಗ ಫಿಲಿಪ್ಪೀನ್ಸ್‌ನ ಮನಿಲಾದಲ್ಲಿರುವ ಅಂತರರಾಷ್ಟ್ರೀಯ ಭತ್ತ ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿದ್ದು, ಈ ಸಂದರ್ಭದಲ್ಲಿ ಒಡಂಬಡಿಕೆಗೆ ಸಹಿ ಮಾಡಲಾಗಿದೆ.

ರಾಜ್ಯದಲ್ಲಿ ನೆರೆ ಹಾವಳಿ, ಬರ ಪರಿಸ್ಥಿತಿ, ಕರಾವಳಿ, ಮಲೆನಾಡು, ಬಯಲು ಸೀಮೆಯ ವಿಭಿನ್ನ ಭೌಗೋಳಿಕ ಪರಿಸರಕ್ಕೆ ಹೊಂದಾಣಿಕೆಯಾಗುವ ವಿವಿಧ ಜೈವಿಕ, ಅಜೈವಿಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದು, ಪೌಷ್ಟಿಕಾಂಶವುಳ್ಳ, ಅಧಿಕ ಇಳುವರಿ ತರುವ ಬೇಸಾಯ ಕ್ರಮಗಳು ಮತ್ತು ಭತ್ತದ ತಳಿಗಳ ಸಂಶೋಧನೆಗೆ ಈ ಒಡಂಬಡಿಕೆಗೆ ನೆರವಾಗಲಿದೆ ಎಂದು ಕೃಷಿ ಇಲಾಖೆ ಪ್ರಕಟಣೆ ತಿಳಿಸಿದೆ. ಕರ್ನಾಟಕದಲ್ಲಿಯೂ ಅಂತರರಾಷ್ಟ್ರೀಯ ಮಟ್ಟದ ಭತ್ತ ಸಂಶೋಧನಾ ಕೇಂದ್ರ ಸ್ಥಾಪನೆ ಬಗ್ಗೆಯೂ ಸಚಿವರು ಸಮಾಲೋಚನೆ ನಡೆಸಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮತ್ತು ಅಂತರರಾಷ್ಟ್ರೀಯ ಭತ್ತದ ಸಂಶೋಧನಾ ಕೇಂದ್ರದ ಉಪ ಮಹಾ ನಿರ್ದೇಶಕರಾದ ಜುನೆಲ್ ಸಯಾನೋ ಅವರು ಒಡಂಬಡಿಕೆ ಪತ್ರ ವಿನಿಮಯ ಮಾಡಿಕೊಂಡರು

ಭತ್ತದ ಮಹತ್ವ, ಉಭಯ ದೇಶಗಳು ಅನುಸರಿಸುತ್ತಿರುವ ಬೇಸಾಯ ಕ್ರಮಗಳು, ಮೌಲ್ಯವರ್ಧನೆಗೆ ಅನುಸರಿಸಬೇಕಾದ ಮಾರ್ಗೋಪಾಯಗಳ ಬಗ್ಗೆ ಮಾಹಿತಿ ಹಾಗೂ ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು.

ಭತ್ತದ ತಳಿಗಳ ಸಂರಕ್ಷಣೆ, ಸಂಶೋಧನೆಗೆ ಕರ್ನಾಟಕ ಸರ್ಕಾರ ತೋರುತ್ತಿರುವ ಕಾಳಜಿ ಮತ್ತು ರೈತಪರ ಯೋಜನೆಗಳ ಬಗ್ಗೆ ಫಿಲಿಪ್ಪೀನ್ಸ್‌ನ ಅಂತರರಾಷ್ಟ್ರೀಯ ಭತ್ತ ಸಂಶೋಧನಾ ಕೇಂದ್ರದ ಅಧಿಕಾರಿಗಳು ಮೆಚ್ಚುಗೆ ಸೂಚಿಸಿದರು. 1945ರಿಂದಲೂ ಭಾರತ ಮತ್ತು ಫಿಲಿಪ್ಪೀನ್ಸ್ ನಡುವೆ ಇರುವ ಬಾಂಧವ್ಯ, ಕೃಷಿ ಕ್ಷೇತ್ರದ ಸಹಕಾರವನ್ನು ಅಲ್ಲಿನ ಅಧಿಕಾರಿಗಳು ನೆನಪಿಸಿಕೊಂಡರು.

ಸಚಿವ ಚಲುವರಾಯಸ್ವಾಮಿ ಅವರು ಅಧಿಕಾರಿಗಳ ತಂಡದೊಂದಿಗೆ ಭತ್ತ ಸಂಶೋಧನಾ ಕೇಂದ್ರದ ಜೀನ್ ಬ್ಯಾಂಕ್ ಒಳಗೊಂಡಂತೆ ವಿವಿಧ ಪ್ರಯೋಗಾಲಯಗಳು ಮತ್ತು ತಾಕುಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

## 'ತಿಮರೋಡಿ ಆಪ್ತರ ವಿಚಾರಣೆ'

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ), ಮಹೇಶ್ ಶೆಟ್ಟಿ ತಿಮರೋಡಿ ಆಪ್ತ ವಲಯದ 11 ಜನರ ವಿಚಾರಣೆಯನ್ನು ಪೂರ್ಣಗೊಳಿಸಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಹಣಕಾಸಿನ ವಿಚಾರ ಸೇರಿದಂತೆ ಅನೇಕ ಮಹತ್ವದ ಮಾಹಿತಿ ಕಲೆಹಾಕಲಾಗಿದೆ. ಇದರ ಬಗ್ಗೆ ಸ್ಪಷ್ಟತೆಗೆ ಸಾಕ್ಷಿದೂರದಾರನನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸುವ ಅಗತ್ಯವಿದೆ' ಎಂದು ತಿಳಿಸಿವೆ.

## ಸೌಹಾರ್ದ ನೃತ್ಯ...

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ

ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ವಿಮೋವೇ ಫೌಂಡೇಷನ್ ಬುಧವಾರ ಆಯೋಜಿಸಿದ್ದ 'ಪಂಚತತ್ತ್ವ' ಕರ್ನಾಟಕ ಸೌಹಾರ್ದದ ನೃತ್ಯವನ್ನು ಕಾವ್ಯ ಅವಧಾನಿ ಮತ್ತು ತಂಡದವರು ಪ್ರಸ್ತುತಪಡಿಸಿದರು

## ಮೂರು ಹುಲಿ ಮರಿಗಳ ರಕ್ಷಣೆ ತಾಯಿ ಹುಲಿಗೆ ಶೋಧ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು–ಬೇಡಗುಳಿ ಸಂಪರ್ಕಿಸುವ ರಸ್ತೆಯಲ್ಲಿ ಕಂಡ ಮೂರು ಹುಲಿ ಮರಿಗಳನ್ನು ಅರಣ್ಯ ಸಿಬ್ಬಂದಿ ರಕ್ಷಿಸಿದ್ದಾರೆ. ತಾಯಿ ಹುಲಿಗಾಗಿ ಹುಡುಕಾಟ ನಡೆದಿದೆ.

ಬಜೆಬಾವಿ ಅರಣ್ಯ ವ್ಯಾಪ್ತಿಯಲ್ಲಿ ಗಸ್ತು ವೇಳೆ ಎರಡು ಮರಿಗಳು ಪತ್ತೆಯಾಗಿದ್ದವು. ತಾಯಿ ಪತ್ತೆಗೆ ಕ್ಯಾಮೆರಾ ಟ್ರ್ಯಾಪ್ ಅಳವಡಿಸಿ ಕೂಬಿಂಗ್ ನಡೆಸುವಾಗ ಮಂಗಳವಾರ ಮತ್ತೊಂದು ಮರಿ ಸಿಕ್ಕಿತ್ತು. ಎನ್‌ಟಿಸಿಎ ಮಾರ್ಗಸೂಚಿಯಂತೆ ಬಿಆರ್‌ಟಿ ಡಿಸಿಎಫ್ ಶ್ರೀಪತಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

'ಹುಲಿಯ ಪತ್ತೆಗೆ ಕಾರ್ಯಾಚರಣೆ ನಡೆಯುತ್ತಿದೆ. ಭೀಮ ಹಾಗೂ ಮಹೇಂದ್ರ ಆನೆ ಬಳಸಲಾಗಿದೆ' ಎಂದು ಪುಣಜನೂರು ಎಸಿಎಫ್ ಮಂಜುನಾಥ್ ಮಾಹಿತಿ ನೀಡಿದರು.

'ಬೇಟೆ ಸಂದರ್ಭದಲ್ಲಿ ತಾಯಿ ಹುಲಿ ಮರಿಗಳನ್ನು ಬಿಟ್ಟು ಹೋಗುತ್ತದೆ. ಜನವಸತಿ ಪ್ರದೇಶದಿಂದ 8 ಕಿ.ಮೀ ದೂರದಲ್ಲಿ ಮರಿಗಳು ಸಿಕ್ಕಿದ್ದು, ತಾಯಿ ಹುಲಿ ಬೇಟೆಯಾಡಿರುವ ಸಾಧ್ಯತೆ ಕಡಿಮೆ' ಎಂದು ತಿಳಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಪುಣಜನೂರು–ಬೇಡಗುಳಿ ಸಂಪರ್ಕಿಸುವ ರಸ್ತೆಯಲ್ಲಿ ಪತ್ತೆಯಾಗಿರುವ ಮೂರು ಹುಲಿಮರಿಗಳು

## '100 ವರ್ಷ ಆಯ್ತು, ಬುದ್ಧಿ ಬಂದಿಲ್ಲ'

ಪ್ರಜಾವಾಣಿ ವಾರ್ತೆ

**ಮೈಸೂರು:** 'ಕತ್ತೆ ವಯಸ್ಸಾದರೂ ಬುದ್ಧಿ ಬಂದಿಲ್ಲ ಎಂಬ ಗಾದೆಯಂತೆ, ಒಂದು ಸಂಸ್ಥೆಗೆ 100 ವರ್ಷವಾದರೂ ಬುದ್ಧಿ ಬಂದಿಲ್ಲ. ದೊಣ್ಣೆ ಹಿಡಿದುಕೊಂಡು ಓಡಾಡುತ್ತಿರುವ ಅವರು ಯಾವುದೇ ಧರ್ಮಕ್ಕೆ ಸೇರಿದವರಲ್ಲ' ಎಂದು ನಟ ಪ್ರಕಾಶ್‌ರಾಜ್ ಟೀಕಿಸಿದರು.

ಇಲ್ಲಿ ನಡೆದ ಬೌದ್ಧ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಅವರು, 'ಮಾತೆತ್ತಿದ್ದರೆ ಹಿಂದೂ ಧರ್ಮ ಎನ್ನುತ್ತಾರೆ. ಆ ಧರ್ಮಕ್ಕೆ ಸೇರದ ಕಳ್ಳರು ಅವರು. ಸಗಣಿ ಆಲ್‌ರೌಂಡರ್ಸ್. ಒಲೆಗೆ ಬಿದ್ದರೆ ಇಂಧನ, ಹೊಲಕ್ಕೆ ಬಿದ್ದರೆ ಗೊಬ್ಬರ, ತಲೆಗೆ ಬಿದ್ದರೆ ಅಂಧ ಭಕ್ತ' ಎಂದರು.

'ಎಲ್ಲರನ್ನೂ ತುಳಿಯಬೇಕೆಂದುಕೊಂಡಿರುವ ನಿಮ್ಮ ಇತಿಹಾಸ ಕೇವಲ ಒಂದು ಶತಮಾನವಷ್ಟೇ. ಆದರೆ, ಶತ ಶತಮಾನಗಳ ಬುದ್ಧ, ಬಸವ ಹಾಗೂ ಅವರನ್ನು ನಂಬಿ ದಾರಿದೀಪವಾಗಿರುವ ಅಂಬೇಡ್ಕರ್ ಅವರು ನಮ್ಮ ಹಿಂದೆ ಶಕ್ತಿಯಾಗಿ ನಿಂತಿದ್ದಾರೆ. ಈ ಮೂವರ ಮುಂದೆ ನಿಮಗೆ ನಿಲ್ಲಲಾಗದು. ಅಸಮಾನತೆಯನ್ನು ಪ್ರತಿಪಾದಿಸುವ ನಿಮಗೆ ಧರ್ಮದೇಟು ಕೊಡಬೇಕು' ಎಂದು ಹೇಳಿದರು.

'ರಾಜಕಾರಣಿಗಳು ಬುದ್ಧ, ಬಸವ, ಅಂಬೇಡ್ಕರ್ ಬಗ್ಗೆ ಭಾಷಣ ಮಾಡುವುದಲ್ಲ. ಸಂಘಿಗಳ ಕಾರ್ಯಕ್ರಮಗಳಿಗೆ ಅತಿಥಿಗಳಾಗಿ ಹೋಗಬಾರದು, ಸದನದಲ್ಲೂ ಅವರ ಮಂತ್ರಗಳನ್ನು ಪಠಿಸಬಾರದು ಎಂದು ಹೇಳಬೇಕು' ಎಂದರು.

### ಆರ್‌ಎಸ್‌ಎಸ್‌ನಿಂದ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ: ರಂಭಾಪುರಿ ಶ್ರೀ

ಕನಕಗಿರಿ (ಕೊಪ್ಪಳ ಜಿಲ್ಲೆ): 'ಆರ್‌ಎಸ್‌ಎಸ್ ಸಂಘಟನೆ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ, ಮನೋಭಾವನೆ ಬೆಳೆಸುತ್ತಿದೆ. ಇಂಥ ಸಮಯದಲ್ಲಿ ಸಂಘದ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿಗೆ ಪತ್ರ ಬರೆದಿದ್ದು ಸರಿಯಲ್ಲ' ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಂಘಟನೆ ತಪ್ಪು ದಾರಿ ತುಳಿಯುತ್ತಿದ್ದರೆ ಅದನ್ನು ಎತ್ತಿ ತೋರಿಸುವ ಕೆಲಸ ಮಾಡಲಿ. ಪ್ರಿಯಾಂಕ್ ಖರ್ಗೆ ಅವರ ಸಲಹೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪುವುದಿಲ್ಲ ಎನ್ನುವ ವಿಶ್ವಾಸವಿದೆ. ಒಂದು ವೇಳೆ ಕ್ರಮ ಕೈಗೊಂಡರೆ ಸರ್ಕಾರ ಮುಂದಿನ ದಿನಗಳಲ್ಲಿ ಆತಂಕ, ನೋವುಗಳನ್ನು ಎದುರಿಸಬೇಕಾಗುತ್ತದೆ' ಎಂದರು. 'ದೇಶದ ಜನರ ಕಲ್ಯಾಣಕ್ಕಾಗಿ ಆರ್‌ಎಸ್‌ಎಸ್ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದೆ. ರಾಷ್ಟ್ರೀಯ ಪ್ರಜ್ಞೆ ಬೆಳೆಸುತ್ತಿದೆ. ಸಮಾಜದಲ್ಲಿ ಅಶಾಂತಿ ತಲೆದೋರಿದಾಗ, ನೈಸರ್ಗಿಕ ವಿಪತ್ತುಗಳು ಸಂಭವಿಸಿದ ವೇಳೆಯಲ್ಲಿ ಸಂಘಟನೆಯವರು ತಮ್ಮ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ' ಎಂದರು.

ರಾಕ್ಷಸರ ಜಗತ್ತಿನಲ್ಲಿ ಕರುಣೆ, ಪ್ರೀತಿಯಿಂದಷ್ಟೇ ಅಲ್ಲ, ಹೋರಾಟದಿಂದಲೇ ಮಾತ್ರ ಗೆಲ್ಲಲು ಸಾಧ್ಯ ಎಂದು ಅರ್ಥ ಮಾಡಿಕೊಳ್ಳಬೇಕು. ಸಂಘಟಿತರಾಗಬೇಕು

**ಪ್ರಕಾಶ್ ರಾಜ್,** ನಟ

## ವಿಡಿಯೊ ಬಿಡುಗಡೆ ಮಾಡಿದ ಪ್ರಿಯಾಂಕ್

ಎರಡನೇ ಮುಖಪುಟದಿಂದ...

'ಕೆಲವು ದಿನಗಳಿಂದ ನನಗೆ ನಿರಂತರವಾಗಿ ಬರುತ್ತಿದ್ದ ಬೆದರಿಕೆ ಮತ್ತು ನಿಂದನೆಯ ಕರೆಗಳಲ್ಲಿ ಇದೂ ಒಂದು. ತಾಯಿ, ಸಹೋದರಿಯರ ಹೆಸರು ಹಿಡಿದು ಅತ್ಯಂತ ತುಚ್ಛವಾಗಿ ನಿಂದಿಸುವುದು ಶಾಖೆಗಳಲ್ಲಿ ನೀಡುವ ಸಂಸ್ಕಾರವೇ' ಎಂದು ಪ್ರಶ್ನಿಸಿದ್ದಾರೆ.

'ಆರ್‌ಎಸ್‌ಎಸ್‌ನ ಕಾಲಾಳುಗಳಾಗಿರುವ ಜನರನ್ನು ವಿಕಾರಧಾರೆಯಿಂದ ವಿಚಾರಧಾರೆಯೆಡೆಗೆ ಕರೆತರಬೇಕಿದೆ. ಬುದ್ಧ, ಬಸವ, ಅಂಬೇಡ್ಕರ್ ಅವರ ಮೌಲ್ಯಯುತ ಚಿಂತನೆಗಳನ್ನು ಪರಿಚಯಿಸಬೇಕಿದೆ. ಮುಗ್ಧ ಮಕ್ಕಳು, ಯುವ ಸಮುದಾಯವನ್ನು ಇಂತಹ ಕಲುಷಿತ ವ್ಯವಸ್ಥೆಗೆ ಬಲಿಯಾಗದಂತೆ ತಡೆಯುವ ಸಲುವಾಗಿಯೇ ಹೋರಾಡುತ್ತೇನೆ ಮತ್ತು ದೃಢವಾದ ಹೆಜ್ಜೆಗಳನ್ನು ಇಡುತ್ತೇನೆ' ಎಂದು ಹೇಳಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಹಾಗೂ ಆರ್‌ಎಸ್‌ಎಸ್ ಸರಸಂಚಾಲಕ ಮೋಹನ್ ಭಾಗವತ್ ಅವರ ತಾಯಿಯಂದಿರಿಗೆ ಇದೇ ಬಗೆಯಲ್ಲಿ ನಿಂದಿಸುವುದನ್ನು ರಾಜ್ಯದ ಬಿಜೆಪಿ ನಾಯಕರಾದ ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಸಿ.ಟಿ.ರವಿ, ವಿ.ಸುನಿಲ್‌ಕುಮಾರ್, ಪ್ರತಾಪ್ ಸಿಂಹ, ಛಲವಾದಿ ನಾರಾಯಣಸ್ವಾಮಿ ಮೊದಲಾದ ನಾಯಕರು ಒಪ್ಪುತ್ತಾರೆಯೇ? ಬಿಜೆಪಿ ನಾಯಕರ ಮಕ್ಕಳು ತಮ್ಮ ಭವ್ಯ ಭವಿಷ್ಯ ರೂಪಿಸಿಕೊಳ್ಳುತ್ತಿದ್ದಾರೆ. ಬಡವರ ಮಕ್ಕಳನ್ನು ಹೀಗೆ ನಿಂದಿಸುವುದಕ್ಕೆ, ಬೆದರಿಸುವುದಕ್ಕೆ ಮತ್ತು ಬಲಿಯಾಗುವುದಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಈ ಕುರಿತು ದೂರು ನೀಡಿದರೆ ಆ ವ್ಯಕ್ತಿಯ ಬದುಕಿನಲ್ಲಿ ಹಾನಿಯಾಗುತ್ತದೆಯೇ ಹೊರತು, ಆತನನ್ನು ಇಂತಹ ಮನಸ್ಥಿತಿಗೆ ತಳ್ಳಿದವರಿಗೆ ಯಾವ ಹಾನಿಯೂ ಆಗುವುದಿಲ್ಲ. ನಮ್ಮದು ವ್ಯಕ್ತಿಗಳ ವಿರುದ್ಧ ಹೋರಾಟವಲ್ಲ, ಆರ್‌ಎಸ್‌ಎಸ್ ಪಸರಿಸುತ್ತಿರುವ ಕೊಳಕು ಮನಸ್ಥಿತಿಯ ವಿರುದ್ಧ ಹೋರಾಟ. ಮುಗ್ಧರ ತಲೆಕೆಡಿಸಿ ಅವರ ಚಿಂತನೆಗಳನ್ನು ಕಲುಷಿತಗೊಳಿಸುತ್ತಿರುವ ಕ್ಷುದ್ರ ಶಕ್ತಿಗಳ ವಿರುದ್ಧದ ಹೋರಾಟ' ಎಂದಿದ್ದಾರೆ.

## ಲತಾ ರಜನಿಕಾಂತ್ ಅರ್ಜಿ ತಿರಸ್ಕೃತ

**ಬೆಂಗಳೂರು:** 'ಕೊಚ್ಚಾಡಿಯನ್ ಸಿನಿಮಾದ ಆರ್ಥಿಕ ವ್ಯವಹಾರಗಳಲ್ಲಿ ಫೋರ್ಜರಿ ಅಪರಾಧಕ್ಕೆ ಸಂಬಂಧಿಸಿದಂತೆ ಪ್ರಕರಣದಲ್ಲಿ ನನ್ನ ವಿರುದ್ಧ ಹೊರಿಸಲಾಗಿರುವ ದೋಷಾರೋಪ ಕೈಬಿಡಬೇಕು' ಎಂದು ಕೋರಿ ನಟ ರಜನಿಕಾಂತ್ ಪತ್ನಿ ಲತಾ ಅವರು ಸಲ್ಲಿಸಿದ್ದ ಅರ್ಜಿಯನ್ನು, ನಗರದ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಎಸಿಜೆಎಂ) ಕೋರ್ಟ್ ತಿರಸ್ಕರಿಸಿದೆ. 'ಲತಾ ರಜನಿಕಾಂತ್ ವಿರುದ್ಧದ ಆರೋಪಗಳನ್ನು ಕೈ ಬಿಡಲು ಸೂಕ್ತ ಕಾರಣಗಳಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

## ಕಚೇರಿಯಲ್ಲಿ ಮದ್ಯ ಸೇವನೆ: ನಾಲ್ವರ ಅಮಾನತು

ಚಿತ್ರದುರ್ಗ: ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರ (ಡಿಡಿಪಿಐ) ಕಚೇರಿಯಲ್ಲಿ ಮದ್ಯ ಕುಡಿದ ಆರೋಪದ ಮೇಲೆ ನಾಲ್ವರು ಸಿಬ್ಬಂದಿಯನ್ನು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಬುಧವಾರ ಅಮಾನತುಗೊಳಿಸಿದ್ದಾರೆ.

ಕಚೇರಿಯ ಅಧೀಕ್ಷಕ ಸುನೀಲ್ ಕುಮಾರ್, ಪ್ರಥಮ ದರ್ಜೆ ಸಹಾಯಕ ಸ್ವಾಮಿ, ಡಿ. ದರ್ಜೆ ನೌಕರ ತಿಪ್ಪೇಸ್ವಾಮಿ, ವಾಹನ ಚಾಲಕ ರವಿ ಅಮಾನತುಗೊಂಡ ಸಿಬ್ಬಂದಿ.

ಕಚೇರಿಯಲ್ಲಿ ಮದ್ಯ ಸೇವನೆ ಮಾಡಿದ ವಿಡಿಯೊವೊಂದು ಜಾಲತಾಣಗಳಲ್ಲಿ ಹರಿದಾಡಿತ್ತು. ಇದನ್ನು ಗಮನಿಸಿದ ಡಿಡಿಪಿಐ ಎಂ.ಆರ್. ಮಂಜುನಾಥ್ ಸಿಬ್ಬಂದಿಯ ಅಮಾನತಿಗೆ ಶಿಫಾರಸು ಮಾಡಿದ್ದರು.

ಕಚೇರಿಯಲ್ಲಿ 20 ಲೀಟರ್ ನೀರಿನ ಕ್ಯಾನ್‌ಗೆ ಬಾಟಲಿಗಳಿಂದ ಮದ್ಯ ಸುರಿಯುವ, ಅದಕ್ಕೆ ನೀರು ತುಂಬಿಸುವ, ಕೆಲವರು ಅಲ್ಲೇ ಸೇವಿಸುವ, ನಂತರ ಕಾರ್‌ನಲ್ಲಿ ಬೇರೆ ಸ್ಥಳಕ್ಕೆ ತೆರಳುವ ದೃಶ್ಯಗಳು ವಿಡಿಯೊದಲ್ಲಿವೆ.

'ಅ. 7ರಂದು ವಾಲ್ಮೀಕಿ ಜಯಂತಿಯ ದಿನ ಪಾರ್ಟಿ ಮಾಡಲಾಗಿದೆ. ವಿಷಯ ಗಮನಕ್ಕೆ ಬಂದ ಕೂಡಲೇ ನಾಲ್ವರ ಅಮಾನತಿಗೆ ಶಿಫಾರಸು ಮಾಡಿದ್ದೆ' ಎಂದು ಡಿಡಿಪಿಐ ಹೇಳಿದ್ದಾರೆ.

### ಕನ್ನಡ ಭಾಷೆ ಬೆಳವಣಿಗೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಹತ್ವದ ಹೆಜ್ಜೆ

# 'ಸ್ಥಳನಾಮ'ಗಳ ಕೋಶ ತರಲು ಸಿದ್ಧತೆ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಪ್ರಾಕೃತಿಕ ವೈಶಿಷ್ಟ್ಯ ಬಿಂಬಿಸುವ ಮತ್ತು ಜನವಸತಿ ಪ್ರದೇಶವನ್ನು ಗುರುತಿಸುವ ಸುಮಾರು 1.10 ಲಕ್ಷ 'ಸ್ಥಳನಾಮ'ಗಳು ರಾಜ್ಯದಲ್ಲಿದ್ದು, ಅವುಗಳನ್ನು ಸಂರಕ್ಷಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವು 'ಸ್ಥಳನಾಮಗಳ ಕೋಶ' ಹೊರತರಲು ಸಿದ್ಧತೆ ನಡೆಸಿದೆ.

ರಾಜ್ಯದಲ್ಲಿ ಸುಮಾರು 30 ಸಾವಿರ ಗ್ರಾಮಗಳಿದ್ದು, ನಿರ್ದಿಷ್ಟ ಭೂಪ್ರದೇಶವನ್ನು ಗುರುತಿಸಲು ಸ್ಥಳನಾಮಗಳೂ ಇವೆ. ಈ ಎಲ್ಲ ಹೆಸರುಗಳ ಸಮಗ್ರ ಪಟ್ಟಿ, ಆ ಪದಗಳ ವ್ಯುತ್ಪತ್ತಿ, ಇತಿಹಾಸ ಮತ್ತು ಅರ್ಥ ವಿವರಣೆ ಜನರಿಗೆ ಸಿಗಲಿದೆ.

'ಗ್ರಾಮಸೂಚಿ ಇದ್ದರೂ ಸ್ಥಳಗಳ ವಿಶೇಷ ಸಾರುವ ಸಮಗ್ರ ಪಟ್ಟಿ ಇಲ್ಲ. ಸ್ಥಳನಾಮಗಳು ನಾಡಿನ ಬಗ್ಗೆ ಅನೇಕ ಒಳನೋಟಗಳನ್ನು ನೀಡುತ್ತವೆ. ಅವುಗಳನ್ನು ಸಂರಕ್ಷಿಸಿದರೆ ಕನ್ನಡ ಭಾಷೆ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದಂತಾಗುತ್ತದೆ' ಎಂಬುದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆಯವರ ಅಭಿಮತ.

**ಚಾರಿತ್ರಿಕ ಮಹತ್ವ:** ಎಡೆ, ತಾಣ, ಪುರ, ಹಳ್ಳಿ, ವಾಡಿ, ಕೊಪ್ಪಲು, ಬಾಡ, ಗುತ್ತು, ಗೂಡು, ಕುಂಟೆ, ಕೊತ್ತ, ಕೋಡು, ತಟ, ಬೂಡು, ಕೊಪ್ಪಲು ಮೊದಲಾದ ಪದಗಳುಳ್ಳ ಹೆಸರುಗಳು ಮಾನವ ವಸತಿಯ ವಿವಿಧ ಹಂತಗಳನ್ನು ಸಂಕೇತಿಸುತ್ತವೆ. ಸ್ಥಳನಾಮಗಳಲ್ಲಿ ಕಲ್ಲುಗಳಿಗೆ ವಿಶೇಷ ಮಹತ್ವವಿದ್ದು, ಜೇನುಕಲ್ಲು ಗುಡ್ಡ, ಆನೆಕಲ್ಲು, ಬೆಣಕಲ್, ಹಾನಗಲ್, ಕಾರ್ಕಳ, ಕರೇಕಲ್, ಕಲ್ಲಹಳ್ಳಿ ಹೆಸರುಗಳಿಗೆ ಚಾರಿತ್ರಿಕ ಮಹತ್ವವಿದೆ.

ಕನ್ನಡದಲ್ಲಿ ಪ್ರಾಣಿ ಮತ್ತು ಸಸ್ಯಸೂಚಕ ಸ್ಥಳನಾಮಗಳು ಹೇರಳವಾಗಿವೆ. ಹುಲಿಕಲ್, ಗಿಣಿಗೇರಾ, ನವಿಲೂರು, ನೊಣವಿನಕೆರೆ, ಮಂಗನಹಳ್ಳಿ ಮುಖ್ಯವಾಗಿವೆ. ಬೆಟ್ಟ, ಗುಡ್ಡ, ಕಾಡು, ಕಣಿವೆ, ನದಿ, ಕೆರೆಯನ್ನು ಸೂಚಿಸುವ ಸ್ಥಳನಾಮಗಳು ಆ ಪ್ರದೇಶದ ಪ್ರಕೃತಿಯ ಮಹತ್ವಕ್ಕೆ ಕನ್ನಡಿ ಹಿಡಿದಿವೆ.

**ಪದಕೋಶ:** 'ಬೀದರ್‌ನಿಂದ ಚಾಮರಾಜನಗರದವರೆಗೆ, ಕರಾವಳಿಯಿಂದ ಕೋಲಾರದವರೆಗೆ ವಿಭಿನ್ನವಾದ ಪ್ರಾದೇಶಿಕ ಭಾಷೆಗಳ ಸೊಗಡಿದೆ. ಮುದ್ರಣ ಮಾಧ್ಯಮ ಮತ್ತು ಪುಸ್ತಕಗಳಲ್ಲಿ ಬಹುತೇಕ ಏಕರೂಪದ ಕನ್ನಡ ಬಳಕೆಯಾಗುತ್ತಿದೆ. ಸ್ಥಳೀಯ ಭಾಷೆಗಳ ಸೊಬಗನ್ನು ಸಂರಕ್ಷಿಸಲು ಪ್ರಾಧಿಕಾರ 'ಪ್ರಾದೇಶಿಕ ಪದಕೋಶ'ಗಳನ್ನು ಹೊರತರಲು ನಿರ್ಧರಿಸಿದೆ' ಎನ್ನುತ್ತಾರೆ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್.

ಬಹುತೇಕ ಅಂಗಡಿಗಳ ನಾಮಫಲಕದಲ್ಲಿ ಊರಿನ ಹೆಸರು ಇರುವುದಿಲ್ಲ. ಇದರಿಂದ ಪ್ರವಾಸಿಗರಿಗೆ ಸ್ಥಳನಾಮವೇ ತಿಳಿಯುವುದಿಲ್ಲ. ಊರಿನ ಹೆಸರನ್ನು ಕಡ್ಡಾಯವಾಗಿ ಹಾಕಬೇಕು

**ಪುರುಷೋತ್ತಮ ಬಿಳಿಮಲೆ,** ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ




ಪ್ರಾತಿನಿಧಿಕ ಚಿತ್ರ

### 'ಶೇ 80 ಸ್ಥಳನಾಮಗಳ ಸಂಗ್ರಹ'

'ಸ್ಥಳನಾಮಗಳಿಗೆ ಸಂಬಂಧಿಸಿ ಶೇ 80ರಷ್ಟು ಮಾಹಿತಿ ಕಲೆಹಾಕಲಾಗಿದೆ. ಸ್ಥಳನಾಮಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಯವರ ಸಂದೇಶ ಒಳಗೊಂಡ ವಿಡಿಯೊ, ಊರಿನ ಹೆಸರು ಉಳಿಸಲು 'ಜಾಗೃತಿ ಜಾಥಾ' ಮತ್ತು 'ಸ್ಥಳನಾಮಗಳ ಕೋಶ'ವನ್ನು ಹೊರತರಲು ಸಿದ್ಧತೆ ನಡೆಸಿದ್ದೇವೆ' ಎಂದು ಪ್ರೊ. ಪುರುಷೋತ್ತಮ ಬಿಳಿಮಲೆ ತಿಳಿಸಿದರು.

Cheil 29128/25

# ಅಭಿವೃದ್ಧಿ ಪರ್ವಕ್ಕೆ ನೈಸ್ ಸ್ಪರ್ಶ!

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

## ಅಶೋಕ್ ಖೇಣಿಯವರಿಗೆ ಸೌತ್ ಇಂಡಿಯನ್ ಬ್ಯುಸಿನೆಸ್ ಅಚೀವರ್ಸ್ ಅವಾರ್ಡ್!

ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ (ನೈಸ್) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ **ಅಶೋಕ್ ಖೇಣಿಯವರು** ದುಬೈನ ಎಎಜಿ ಅಧ್ಯಕ್ಷರು ಮತ್ತು ದುಬೈನ ನಿಕಟಪೂರ್ವ ರಾಯಭಾರಿ **ಡಾ.ಅಹಮದ್ ಅಬ್ದುಲ್ ರೆಹಮಾನ್ ಅಲ್ಬಾನ್ನಾ**ರಿಂದ ಸೌತ್ ಇಂಡಿಯನ್ ಬ್ಯುಸಿನೆಸ್ ಅಚೀವರ್ಸ್ ಅವಾರ್ಡ್ ಸ್ವೀಕರಿಸಿದರು.

**ದಕ್ಷಿಣ ಭಾರತದ 100 ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಅಶೋಕ್ ಖೇಣಿಯವರಿಗೆ ಸ್ಥಾನ, 'ಸೌತ್ ಇಂಡಿಯನ್ ಬ್ಯುಸಿನೆಸ್ ಅಚೀವರ್ಸ್ ಅವಾರ್ಡ್' ಗರಿ!**

ದಕ್ಷಿಣ ಭಾರತದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ನಂದಿ ಇನ್ ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟಪ್ರೈಸ್ ಲಿಮಿಟೆಡ್ (ನೈಸ್) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಖೇಣಿ ಪಾತ್ರರಾಗಿದ್ದಾರೆ. 'ಜಗತ್ತನ್ನು ರೂಪಿಸುವ ಅತ್ಯಂತ ಪ್ರಭಾವಶಾಲಿ ದಕ್ಷಿಣ ಭಾರತೀಯ ವ್ಯಕ್ತಿಗಳಲ್ಲಿ ಒಬ್ಬರು ಎಂದು ಗುರುತಿಸಲಾಗಿದೆ. ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಾರ್ವಜನಿಕ ಸೇವೆಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಹಿನ್ನೆಲೆ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ (ನೈಸ್)ನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಅಶೋಕ್ ಖೇಣಿಯವರಿಗೆ ದುಬೈ ನಲ್ಲಿ 'ಸೌತ್ ಇಂಡಿಯನ್ ಬ್ಯುಸಿನೆಸ್ ಅಚೀವರ್ಸ್ ಪ್ರಶಸ್ತಿ(ಎಸ್‌ಐಬಿಎ) ನೀಡಿ ಗೌರವಿಸಲಾಗಿದೆ.

ಸೆಪ್ಟೆಂಬರ್ 7, 2025ರಂದು ದುಬೈನಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ದಕ್ಷಿಣ ಭಾರತದಿಂದ ಉದ್ಯಮ ಕ್ಷೇತ್ರ, ಸರ್ಕಾರಿ ಸೇವಾ ಕ್ಷೇತ್ರ, ವಿಜ್ಞಾನ ಕ್ಷೇತ್ರ, ಸಾಂಸ್ಕೃತಿಕ ಕಲಾ ರಂಗ ಸೇರಿದಂತೆ ನಾನಾ ಕ್ಷೇತ್ರಗಳಲ್ಲಿ ಪ್ರಭಾವಶಾಲಿಗಳಾಗಿ ಗುರುತಿಸಿಕೊಂಡಿರುವ 100 ವ್ಯಕ್ತಿಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಉದ್ಯಮ ಹಾಗೂ ಮೂಲಸೌಕರ್ಯ ಕ್ಷೇತ್ರದಲ್ಲಿ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್(ನೈಸ್)ನ ಅನುಕರಣೀಯ ಸೇವೆ ಮತ್ತು ಸಾಮಾಜಿಕ ಪ್ರಗತಿಯಲ್ಲಿ ನೈಸ್ ಸಂಸ್ಥೆಯ ನೇತೃತ್ವ ವಹಿಸಿದ ಅಶೋಕ್ ಖೇಣಿಯವರ ದೂರದೃಷ್ಟಿ ಚಿಂತನಾಶೀಲತೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

ಈ ಸಮಾರಂಭದಲ್ಲಿ ಮಾತನಾಡಿದ ನಂದಿ ಇನ್ ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪ್ರೈಸ್ ಲಿಮಿಟೆಡ್ (ನೈಸ್) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಅಶೋಕ್ ಖೇಣಿಯವರು, 'ಈ ಗೌರವವು ಕೇವಲ ನನ್ನೊಬ್ಬನ ಪ್ರಯಾಣಕ್ಕೆ ಸಲ್ಲುವುದಿಲ್ಲ. ಬದಲಾಗಿ, ದೇಶದ ಪ್ರಗತಿಗೆಂದು ಶ್ರಮಿಸುವ ಪ್ರತಿಯೊಬ್ಬ ಶ್ರಮಿಕನಿಗೂ ಸಲ್ಲುತ್ತದೆ. ಇಂಥಹಾ ವಿಶ್ವಮಟ್ಟದ ವೇದಿಕೆಯಲ್ಲಿ ದಕ್ಷಿಣ ಭಾರತವನ್ನು ಪ್ರತಿನಿಧಿಸುವುದಕ್ಕೆ ಹೆಮ್ಮೆಯೆನಿಸಿತ್ತದೆ. ಜತೆಗೆ, ಈ ಪ್ರಶಸ್ತಿಯಿಂದ ಮೂಲಸೌಕರ್ಯ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡುವ ಜವಾಬ್ದಾರಿ ಹೆಚ್ಚಾಗಿದೆ.' ಎಂದರು.

## ದೂರದೃಷ್ಟಿ ನಾಯಕ ಅಶೋಕ್ ಕುಮಾರ್ ಖೇಣಿ

'ರಸ್ತೆಗಳೇ ದೇಶದ ಪ್ರಗತಿಯ ಸಂಕೇತ ಎನ್ನುವ ಮಾತಿನಂತೆ ಯಾವುದೇ ನಗರದ ಮೂಲಸೌಕರ್ಯ ಅಭಿವೃದ್ಧಿಗೆ ರಸ್ತೆಗಳು ಬೆನ್ನೆಲುಬಾಗಿವೆ. ಒಂದು ನಗರ, ಜಿಲ್ಲೆ, ರಾಜ್ಯ ಅಥವಾ ದೇಶದ ಅಭಿವೃದ್ಧಿಗೆ ರಸ್ತೆಗಳು ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ. ಜೊತೆಗೆ, ಆಯಾ ಪ್ರದೇಶದ ಜನರ ಜೀವನಮಟ್ಟ ಸುಧಾರಣೆಗೆ ಬಹುದೊಡ್ಡ ಕೊಡುಗೆಯನ್ನು ನೀಡುತ್ತದೆ. ಇಂಥಹಾ, ರಸ್ತೆಗಳ ಅಭಿವೃದ್ಧಿಯ ಕ್ಷೇತ್ರದಲ್ಲಿ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟಪ್ರೈಸ್(ನೈಸ್)ನ ವ್ಯವಸ್ಥಾಪಕ ನಿರ್ದೇಶಕರಾಗಿ ಮತ್ತು ಬೀದರ್ ದಕ್ಷಿಣದ ಮಾಜಿ ಶಾಸಕರಾಗಿ ಅಶೋಕ್ ಖೇಣಿ ಮಾದರಿ ಕೊಡುಗೆಯನ್ನು ನೀಡಿದ್ದಾರೆ. ಬೆಂಗಳೂರಿನ ಅಭಿವೃದ್ಧಿಯ ವಿಚಾರದಲ್ಲಿ ಅಶೋಕ್ ಖೇಣಿಯವರ ಕೊಡುಗೆ ಅಪಾರ. ಸಿಲಿಕಾನ್ ಸಿಟಿ ಬೆಂಗಳೂರು ನಗರದ ಚೌಕಟ್ಟನ್ನು ಸೃಷ್ಟಿಸುವ ನಿಟ್ಟಿನಲ್ಲಿ ಅಶೋಕ್ ಖೇಣಿಯವರ ದೂರದೃಷ್ಟಿ ಬಹುದೊಡ್ಡ ಪರಿಣಾಮವನ್ನೇ ಸೃಷ್ಟಿಸಿದೆ. ಜತೆಗೆ, ನಗರ ಪ್ರದೇಶಗಳಲ್ಲಿನ ಜನರ ಜೀವನದ ಗುಣಮಟ್ಟ ವಿಸ್ತರಣೆಗೆ ಅವರ ಆಲೋಚನಾ ದೃಷ್ಟಿಕೋನ ನಿಜಕ್ಕೂ ಅನುಕರಣೀಯ ಮತ್ತು ಶ್ಲಾಘನೀಯವಾದುದು.

## ನಂದಿಯ ಐಕಾನಿಕ್ ಟ್ರೇಡ್‌ಮಾರ್ಕ್!

ಬೆಂಗಳೂರು ನಗರದ 360 ಡಿಗ್ರಿ ನೋಟವನ್ನು ನೀಡಬಲ್ಲ 50ಮೀಟರ್ ಎತ್ತರದ ನಂದಿ ವಿಗ್ರಹ ಮಾದರಿಯ ಕಟ್ಟಡದಲ್ಲಿ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟಪ್ರೈಸ್(ನೈಸ್)ನ ಐಕಾನಿಕ್ ಯೋಜನಾ ಕಚೇರಿ ಇರಲಿದೆ. ಈ ಕಚೇರಿ ಸಮಾಜ ಸುಧಾರಕ ಬಸವಣ್ಣನವರ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ. ಜತೆಗೆ, ನೈಸ್‌ನ ಎಲ್ಲಾ ಯೋಜನೆಗಳ ಸಮರ್ಥ ಜಾರಿಗೆ ಪೂರಕವಾಗಿ ಇಲ್ಲಿನ ವ್ಯವಸ್ಥೆ ಸಾಗಲಿದೆ. ವಿಶೇಷವೆಂದರೆ ಇದೇ ಐಕಾನಿಕ್ ಕಚೇರಿ ದೇಶದ ಪ್ರಮುಖ ದಿನಗಳಲ್ಲಿ ಜನರ ಕಣ್ಮನ ಸೆಳೆಯಲಿದೆ. ವಿಶೇಷವಾಗಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ದೀಪಾವಳಿ, ಕ್ರಿಸ್ಮಸ್ ಸೇರಿ ಎಲ್ಲಾ ರಾಷ್ಟ್ರೀಯ ಮತ್ತು ಧಾರ್ಮಿಕ ಹಬ್ಬಗಳಲ್ಲಿ ಎಲ್‌ಇಡಿ ಬೆಳಕಿನೊಂದಿಗೆ ಕಂಗೊಳಿಸಲಿದೆ.

# ಬೆಂಗಳೂರಿನ ಪ್ರಗತಿಗೆ ನೈಸ್ ಎಂಬ ಕ್ರಾಂತಿ!



ಐಟಿ ಸಿಟಿ ಬೆಂಗಳೂರಿಗೆ ನೈಸ್ ಎನ್ನುವ ಯೋಜನೆ ಕೇವಲ ಒಂದು ಯೋಜನೆಯಾಗಿ ಉಳಿಯದೇ ಕ್ರಾಂತಿಕಾರಕ ಹೆಜ್ಜೆಯಾಗಿ ಗುರುತಿಸಿಕೊಂಡಿದೆ. ಬೆಂಗಳೂರಿನ ಟ್ರಾಫಿಕ್ ಪ್ರಯಾಸಕ್ಕೆ ಅಶೋಕ್ ಖೇಣಿಯವರ ನೇತೃತ್ವದಲ್ಲಿ ಸಿಕ್ಕ ಪರಿಹಾರೋಪಾಯವಾಗಿ ಬಹುದೊಡ್ಡ ಕೊಡುಗೆಯಾಗಿ ನೈಸ್ ರಸ್ತೆಯಿಂದು ಪ್ರಯಾಣಿಕರಿಗೆ ನೆರವಾಗುತ್ತಿದೆ. ಕೇವಲ ಪ್ರಯಾಣಿಕರಿಗೆ ಮಾತ್ರವಲ್ಲದೇ ಬೆಂಗಳೂರಿನ ನಿವಾಸಿಗಳಿಗೆ, ಕೈಗಾರಿಕೆಗಳಿಗೆ, ಹೊರರಾಜ್ಯಗಳಿಂದ ಬೆಂಗಳೂರಿನ ಇನ್ನಿತರೆ ಪ್ರದೇಶಗಳಿಗೆ ಸಂಪರ್ಕ ಪಡೆಯಬೇಕೆನ್ನುವವರಿಗೆ ಟ್ರಾಫಿಕ್ ತಲೆನೋವಿಲ್ಲದೇ ನೈಸ್ ರಸ್ತೆಯ ಮೂಲಕ ಸಿಗ್ನಲ್ ಫ್ರೀ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಈ ಯೋಜನೆಯ ಮೂಲಕ ಗುಣಮಟ್ಟದ ದೀರ್ಘಾವಧಿಯ ರಸ್ತೆಯೊಂದು ಬೆಂಗಳೂರಿನ ಮಹಾನಗರದ ಬೆಳವಣಿಗೆಯ ಪಥವನ್ನು ಪುನರ್ ನಿರ್ಮಿಸುವುದರ ಸಂಕೇತದಂತೆ ನಿಂತಿದೆ.

## ಮೂಲಸೌಕರ್ಯ ಪ್ರಗತಿಗೆ ಅಶೋಕಸ್ಪರ್ಶ!

ಅಶೋಕ್ ಖೇಣಿಯವರು 'ನಾವೀನ್ಯತೆ, ದೂರದೃಷ್ಟಿ, ಸುಸ್ಥಿರತೆ ಎನ್ನುವ ೩ ತತ್ವಗಳ ಆಧಾರದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುತ್ತಾರೆ. ಭಾರತದ ಐಟಿ ರಾಜಧಾನಿಯಾಗಿ ಬೆಂಗಳೂರು ತನ್ನ ಆರ್ಥಿಕ ಬೆಳವಣಿಗೆಗೆ ಅನುಗುಣವಾಗಿ ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ಹೊಂದಬೇಕೆನ್ನುವುದು ಅಶೋಕ್ ಖೇಣಿಯವರ ಆಶಯ. ಇದಕ್ಕೆ, ಪೂರಕವಾಗಿ ಅವರು ಸಾಕಷ್ಟು ಕನಸು ಕಂಡಿದ್ದಾರೆ. ಅತಿ ಮುಖ್ಯವಾಗಿ ಬೆಂಗಳೂರಿನ ಶರವೇಗದ ಬೆಳವಣಿಗೆಗೆ ಪೂರಕವಾಗಿ ಸಂಚಾರ ದಟ್ಟಣೆ ನಿಯಂತ್ರಣ, ರಸ್ತೆಗಳ ಸಂಪರ್ಕ ಜಾಲ ಅತಿದೊಡ್ಡ ಸವಾಲುಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳಿಗೆ ಪರಿಹಾರೋಪಾಯವಾಗಿ ಅಶೋಕ್ ಖೇಣಿ ವರ್ಷಗಳ ಹಿಂದೆಯೇ ನೈಸ್ ಪರಿಚಯಿಸಿದರು. ಅಶೋಕ್ ಖೇಣಿಯವರು ಕೇವಲ ಇಂದಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಲ್ಲ. ಬದಲಾಗಿ, ನಾಳಿನ ಸವಾಲುಗಳನ್ನು ಇಂದೇ ನಿರೀಕ್ಷಿಸಿ, ಪರಿಹಾರಗಳನ್ನು ಕೊಡಬಲ್ಲ ನಾಯಕತ್ವ ಗುಣ ಹೊಂದಿರುವ ದೂರದೃಷ್ಟಿ ವ್ಯಕ್ತಿತ್ವ. ಅದರ ಫಲವಾಗಿಯೇ ಇಂದು ಬೆಂಗಳೂರಿನ ಅಭಿವೃದ್ಧಿಗೆ, ಸುಗಮ ಸಂಚಾರಕ್ಕೆ ನೈಸ್ ರಸ್ತೆ ಬಹುದೊಡ್ಡ ಕೊಡುಗೆಯಾಗಿದೆ.

ಪ್ರಗತಿಗೆ ಅತಿಮುಖ್ಯವಾಗಿ ದೂರದೃಷ್ಟಿ ಮುಖ್ಯವಾಗುತ್ತದೆ. ಈ ವಿಷಯದಲ್ಲಿ ಅಶೋಕ್ ಖೇಣಿಯವರ ಯೋಜನೆಗಳು ಸಾಕ್ಷಿಯಾಗಿ ನಿಂತಿವೆ. ಕೇವಲ ಓರ್ವ ನಾಯಕನಾಗಿ ಮಾತ್ರವಲ್ಲದೇ, ಉದ್ಯಮಿಯಾಗಿ ಅವರು ದೂರದೃಷ್ಟಿ, ದೇಶದ ಪ್ರಗತಿಗೆ ಅವರ ಚಿಂತನಾಶೀಲ ವ್ಯಕ್ತಿತ್ವ ನಿಜಕ್ಕೂ ಅಭಿನಂದನಾರ್ಹ. ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವೀಧರರಾಗಿರುವ ಅವರು, ಯಾವುದೇ ಒಂದು ಕಾರ್ಯ ಯೋಜನೆ ಸಿದ್ಧವಾದರೆ, ಅದರ ಸಾಮರ್ಥ್ಯವನ್ನು ಆರಂಭದಲ್ಲೇ ಸತ್ವ ಪರೀಕ್ಷೆ ಮಾಡಬಲ್ಲ, ವಿಶ್ಲೇಷಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಅಭಿವೃದ್ಧಿಯನ್ನು ಎಲ್ಲಾ ಆಯಾಮಗಳಲ್ಲಿ ಖಚಿತಪಡಿಸಿಕೊಳ್ಳಬಲ್ಲ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಇದರ ಪ್ರತಿಫಲವಾಗಿಯೇ ಅವರು ಯೋಜನೆಗಳು ಯಶಸ್ಸಿನ ಉದಾಹರಣೆಯಾಗಿವೆ. ಅವರ ತಾಂತ್ರಿಕ ಒಳನೋಟದೊಂದಿಗೆ ಚಿಂತನಾಶೀಲತೆ ಜತೆಗೂಡಿ ಭವಿಷ್ಯದ ಪ್ರಗತಿಗೆ ನಿರ್ಣಾಯಕ ಮತ್ತು ಸ್ಕೇಲಬಲ್ ಆಗಿರುವ ಮೂಲಸೌಕರ್ಯಗಳನ್ನು ವಿನ್ಯಾಸಗೊಳಿಸಲು ಅವರಿಗೆ ಅನುವು ಮಾಡಿಕೊಡುತ್ತಿದೆ.

## ಖೇಣಿಯವರ ಕ್ರೀಡಾನಗರ!

ಅಶೋಕ್ ಖೇಣಿಯವರ ಆಲೋಚನಾ ಲಹರಿ ಕೇವಲ ಮೂಲಸೌಕರ್ಯ, ರಸ್ತೆಗಳ ಅಭಿವೃದ್ಧಿಗೆ ಸೀಮಿತವಾಗಿರದೇ ಕ್ರೀಡಾಲೋಕಕ್ಕೂ ವಿಸ್ತರಿಸಿದೆ. ನೈಸ್ ಕಾರಿಡಾರ್‌ನ ಉದ್ದಕ್ಕೂ ಕ್ರೀಡಾ ನಗರ ಸ್ಥಾಪಿಸುವುದೂ ಸಹ ಅವರ ಬಹುದೊಡ್ಡ ಚಿಂತನೆಯಾಗಿದೆ. ಆ ಮೂಲಕ ರಾಜ್ಯ ಮತ್ತು ದೇಶದ ಕ್ರೀಡಾ ಪ್ರಪಂಚಕ್ಕೆ ಅನೇಕ ಅವಕಾಶಗಳನ್ನು ಸೃಷ್ಟಿಸಲು ಇದು ನೆರವಾಗಬಲ್ಲದು. ವಿಶೇಷವಾಗಿ, ತರಬೇತಿ, ಪಂದ್ಯಾವಳಿಗಳ ಆಯೋಜನೆ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಿಗೆ ಅಗತ್ಯವೆನಿಸುವ ವಿಶ್ವದರ್ಜೆಯ ಸೌಕರ್ಯ ಕಲ್ಪಿಸಬಲ್ಲ ಪ್ರದೇಶವನ್ನಾಗಿ ಅಭಿವೃದ್ಧಿಗೊಳಿಸುವ ಕಾರ್ಯಯೋಜನೆ ಅಶೋಕ್ ಖೇಣಿಯವರದು. ಅತ್ಯುನ್ನತ ಸೌಕರ್ಯಗಳ ನಡುವೆ ಈ ಕ್ರೀಡಾ ಪ್ರಪಂಚ ಕರ್ನಾಟಕದಲ್ಲಿ ಕ್ರೀಡಾ ಸಂಸ್ಕೃತಿಯನ್ನು ಉತ್ತೇಜಿಸುವುದು ಮಾತ್ರವಲ್ಲದೇ ಅಥ್ಲೇಟಿಕ್ಸ್ ಸೇರಿ ವಿವಿಧ ಕ್ರೀಡೆಗಳಿಗೆ ಬೆಂಗಳೂರನ್ನು ಜಾಗತಿಕ ತಾಣವನ್ನಾಗಿಸಬಲ್ಲದು.



## ಮನ್ನಣೆ ಮತ್ತು ಪ್ರಶಸ್ತಿಗಳು

ಅಶೋಕ್ ಖೇಣಿಯವರು ದೇಶದ ಪ್ರಗತಿಗೆ ಸಂಬಂಧಿಸಿದಂತೆ ನೀಡಿದ ಕೊಡುಗೆಗೆ ಜಾಗತಿಕ ಮನ್ನಣೆ ಲಭಿಸಿದೆ. ಮಾತ್ರವಲ್ಲದೇ, ನೈಸ್ ಯೋಜನೆ ಸೇರಿದಂತೆ ಅವರ ಎಲ್ಲಾ ಆಲೋಚನೆಗಳಿಗೆ ಸಾಕಷ್ಟು ಅಭಿನಂದನೆಗಳು, ಶ್ಲಾಘನೆ ವ್ಯಕ್ತವಾಗಿದೆ. ವಿಶೇಷವಾಗಿ ಮೂಲಸೌಕರ್ಯ ಕ್ಷೇತ್ರದಲ್ಲಿನ ಅವರು ಕ್ರಾಂತಿಕಾರಕ ಕೆಲಸಗಳಿಗೆ ಭಾರತ ಸೇರಿ ವಿದೇಶಗಳಲ್ಲಿ ಸಾಕಷ್ಟು ಪುರಸ್ಕಾರಗಳು ಒಲಿದುಬಂದಿವೆ. ಈ ಪೈಕಿ ಕೆಲ ಪುರಸ್ಕಾರಗಳ ಮಾಹಿತಿಯನ್ನಿಲ್ಲಿ ನೀಡಲಾಗಿದೆ.

- ಕರ್ನಾಟಕದ ಅತ್ಯುತ್ತಮ ಕಾಂಕ್ರೀಟ್ ರಚನೆಗಾಗಿ ಕೆಬಿಸಿ ಬಿರ್ಲಾ ಸೂಪರ್ ಎಂಡೋಮೆಂಟ್ ಪ್ರಶಸ್ತಿ (2013)
- 6ನೇ ಸಿಐಡಿಸಿ ವಿಶ್ವಕರ್ಮ ಪ್ರಶಸ್ತಿ (2014)
- ಕನ್‌ಸ್ಟ್ರಕ್ಷನ್ ಟೈಮ್ಸ್ ಪ್ರಶಸ್ತಿ (2024)
- ಸಿಐಡಿಸಿ ವಿಶ್ವಕರ್ಮ ಪ್ರಶಸ್ತಿ (2025)
- ಮೂಲಸೌಕರ್ಯ ಮತ್ತು ನಾಯಕತ್ವದಲ್ಲಿ ಶ್ರೇಷ್ಠತೆಗಾಗಿ ದಕ್ಷಿಣ ಭಾರತೀಯ ವ್ಯವಹಾರ ಪ್ರಶಸ್ತಿ.

ಭಾರತ ಮಾತ್ರವಲ್ಲದೇ ಅಶೋಕ್ ಖೇಣಿಯವರಿಗೆ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಸಾಕಷ್ಟು ಪುರಸ್ಕಾರಗಳು ಒಲಿದುಬಂದಿವೆ. ಈ ಪೈಕಿ ೧೯೮೭ರಲ್ಲಿ ಅಮೆರಿಕಾದ ಅಧ್ಯಕ್ಷ ರೇಗನ್ ಅವರಿಂದ ಪ್ರತಿಷ್ಠಿತ ಯು.ಎಸ್. ಅಧ್ಯಕ್ಷೀಯ ಪ್ರಶಸ್ತಿ ಲಭಿಸಿದೆ. ಅಲ್ಪಸಂಖ್ಯಾತ ಸಮುದಾಯದ ವರ್ಷದ ಅತ್ಯುತ್ತಮ ಉದ್ಯಮಿ ಪ್ರಶಸ್ತಿ ಕೇವಲ ಒಂದು ಪುರಸ್ಕಾರವಾಗಿರದೇ, ಓರ್ವ ಉದ್ಯಮಿಯವರಿಗೆ ಅವರ ಯಶಸ್ಸನ್ನು ಜಗತ್ತಿಗೆ ತೋರಿಸಿದೆ. ಜತೆಗೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೂಲಸೌಕರ್ಯ ಮತ್ತು ಉತ್ಪಾದಕತೆಯನ್ನು ಮುನ್ನಡೆಸುವಲ್ಲಿ ಅವರ ದೃಷ್ಟಿಕೋನ, ಸಾಧನೆಗಳನ್ನು ಗುರುತಿಸಿ ಕೆನಡಾದ ವರ್ಲ್ಡ್ ಅಕಾಡೆಮಿ ಆಫ್ ಪ್ರೊಡಕ್ಟಿವ್ ಸೆನ್ಸ್‌ನಿಂದ ಅವರಿಗೆ ಫೆಲೋ ಪ್ರಶಸ್ತಿಯನ್ನು ಸಹ ನೀಡಿ ಗೌರವಿಸಲಾಗಿದೆ.

ಈ ಪ್ರಶಸ್ತಿಗಳು ಮಾತ್ರವಲ್ಲದೇ ಸಾಕಷ್ಟು ಅಭಿನಂದನೆಗಳು, ಖೇಣಿಯವರ ಕಾರ್ಯಕ್ಕೆ ಸಿಕ್ಕ ಮೆಚ್ಚುಗೆಗಳು ಸಾಕಷ್ಟಿವೆ. ಇವೆಲ್ಲವೂ ಸಹ ಅಶೋಕ್ ಖೇಣಿಯವರ ಇಂಜಿನಿಯರಿಂಗ್ ಶ್ರೇಷ್ಠತೆಯ ನಾಯಕತ್ವ ಮತ್ತು ಅವರ ಜಾಗತಿಕ ಪ್ರಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ಅವರನ್ನು ಮೂಲಸೌಕರ್ಯ ಕ್ಷೇತ್ರದಲ್ಲಿ ದೇಶವನ್ನು ಪ್ರತಿನಿಧಿಸುವ ಉದ್ಯಮಿಯಾಗಿ ಮಾತ್ರ ನೋಡದೇ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಓರ್ವ ಸಾಧಕರಾಗಿಯೂ ಹೊರಹೊಮ್ಮುವಂತೆ ಮಾಡಿದೆ.

## ಜನಸಾಮಾನ್ಯರ ನಾಯಕ ಅಶೋಕ್ ಖೇಣಿ!

ಸಿಲಿಕಾನ್ ಸಿಟಿ ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ ವಲಯದಲ್ಲಿ ಅಶೋಕ್ ಖೇಣಿಯವರು ವ್ಯಾಪಕ ಕೀರ್ತಿ ಗಳಿಸುವ ಜತೆಗೆ, ಹೈದರಾಬಾದ್ ಕರ್ನಾಟಕದ(ಇಂದಿನ ಕಲ್ಯಾಣ ಕರ್ನಾಟಕ) ಭಾಗದಲ್ಲಿ ಮತ್ತೊಂದು ಆಯಾಮದಲ್ಲಿ ಗುರುತಿಸಿಕೊಂಡಿದ್ದಾರೆ. ಜನಸಾಮಾನ್ಯರ ನಾಯಕರಾಗಿ ಅಶೋಖ್ ಖೇಣಿ ಸಾಕಷ್ಟು ಮಾದರಿ ಕೆಲಸಗಳನ್ನು ಮಾಡಿಸಿದ್ದಾರೆ. ಬೀದರ್ ದಕ್ಷಿಣ ಶಾಸಕರಾಗಿ ಅವರ ರಾಜಕೀಯ ಜೀವನವು ಅನೇಕರ ಬದುಕಿಗೆ ಆಶಾಜ್ಯೋತಿಯಾಗಿ ಬೆಳಕು ನೀಡಿದೆ. ಉತ್ತರ ಕರ್ನಾಟಕದ ಅತ್ಯಂತ ಹಿಂದುಳಿದ ಪ್ರದೇಶದಲ್ಲಿ ಶಾಸಕರಾಗಿ ಆಯ್ಕೆಯಾಗಿ, ಅವರ ಕೆಲಸಗಳು ಶಾಶ್ವತವಾಗಿ ಬೇರೂರುವಂತೆ ಮಾಡಿದ್ದಾರೆ. ರಾಜ್ಯದಲ್ಲಿಯೇ ಅತ್ಯಂತ ಹೆಚ್ಚು ನಿರ್ಲಕ್ಷ್ಯಕ್ಕೊಳಗಾದ ಪ್ರದೇಶವೆಂದು ಗುರುತಿಸಿಕೊಂಡಿರುವುದು ಮಾತ್ರವಲ್ಲದೇ, ಶೈಕ್ಷಣಿಕವಾಗಿ ಸಾಕಷ್ಟು ಕೊರತೆಗಳನ್ನು ಎದುರಿಸುತ್ತಿತ್ತು. ಜತೆಗೆ, ಮೂಲಸೌಕರ್ಯಗಳಲ್ಲಿ ಸಾಕಷ್ಟು ಹಿಂದುಳಿದು, ಉದ್ಯೋಗಾವಕಾಶಗಳೇ ಇಲ್ಲದ ಸ್ಥಿತಿಯಲ್ಲಿದ್ದ ಪ್ರದೇಶವನ್ನು ಅಶೋಕ್ ಖೇಣಿಯವರು ಸಾಕಷ್ಟು ಪ್ರಗತಿಯ ಪಥಕ್ಕೆ ಮುನ್ನಡೆಸಿದ್ದಾರೆ. ಅವರ ಸತತ ಪ್ರಯತ್ನಗಳ ಮುಲಕ ಬೀದರ್ ದಕ್ಷಿಣ ಕ್ಷೇತ್ರದ ಭೌತಿಕ ರೂಪ ಮೂಲಸೌಕರ್ಯ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಿಸಿದೆ. ಜತೆಗೆ, ರಾಜ್ಯದ ಇತಿಹಾಸದಲ್ಲಿ ಎಲ್ಲಾ ವಲಯಗಳಲ್ಲೂ ಹಿಂದುಳಿದಿದ್ದ ಜನರಲ್ಲಿ ಅಭಿವೃದ್ಧಿಯ ಆಶಾಭಾವನೆಯನ್ನು ಮೂಡಿಸಿದ್ದಾರೆ.

**ಶಾಸಕರಾಗಿ ಖೇಣಿಯವರ ಕೊಡುಗೆಗಳು!**

ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾಗಿ ಅಶೋಕ್ ಖೇಣಿಯವರು ಸಾಕಷ್ಟು ಜನಪರ ಯೋಜನೆಗಳನ್ನು ನೀಡಿದ್ದಾರೆ. ಮೂಲಸೌಕರ್ಯಗಳಲ್ಲಿ ಸಾಕಷ್ಟು ಹಿಂದುಳಿದಿದ್ದ ಪ್ರದೇಶದ ಸ್ವರೂಪ ಬದಲಿಸಲು ಖೇಣಿಯವರ ಶ್ರಮ ನಿಜಕ್ಕೂ ಶ್ಲಾಘನೀಯ. ಅವರ ಅಭಿವೃದ್ಧಿ ಕಾರ್ಯಗಳನ್ನಿಲ್ಲಿ ನೀಡಲಾಗಿದೆ.

ಸಂಪರ್ಕ: ಹೈದರಾಬಾದ್ ಕರ್ನಾಟಕದ ಪ್ರದೇಶದಲ್ಲಿ ದಶಕಗಳಿಂದ ಕಡೆಗಣಿಸಲಾದ ಗ್ರಾಮೀಣ ರಸ್ತೆಗಳಿಗೆ ಅಶೋಕ್ ಖೇಣಿಯವರು ಹೊಸ ಸ್ವರೂಪ ನೀಡಿದರು. ಬೀದರ್ ದಕ್ಷಿಣ ಕ್ಷೇತ್ರದಲ್ಲಿನ ರಸ್ತೆ ಮತ್ತು ಸಾರಿಗೆ ಸಂಪರ್ಕನ್ನು ಸುಧಾರಿಸಿದರು. ಜತೆಗೆ, ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ವೇಗ ನೀಡಿದರು.

ಮೂಲಸೌಕರ್ಯ: ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ಭಾಗದ ಜಿಲ್ಲೆಗಳಲ್ಲಿ ಅತಿಮುಖ್ಯವಾಗಿ ಕಾಡುವುದು ಕುಡಿಯುವ ನೀರು. ಈ ವಿಚಾರವನ್ನು ಮನಗಂಡ ಅಶೋಕ್ ಖೇಣಿಯವರು ಮೊದಲ ಆದ್ಯತೆಯನ್ನಾಗಿ ಕುಡಿಯುವ ನೀರು, ವಿದ್ಯುತ್ ಸರಬರಾಜು, ರಸ್ತೆಗಳಿಗೆ ನೀಡಿದರು. ಇದರ ಪ್ರತಿಫಲವಾಗಿ ಲಕ್ಷಾಂತರ ಜನರ ನಿತ್ಯದ ಬದುಕು ಬದಲಾಯಿತು.

ಶಿಕ್ಷಣ: ಉತ್ತರ ಕರ್ನಾಟಕದವನ್ನು ಸಾಕಷ್ಟು ಪೀಡಿಸುತ್ತಿದ್ದ ನಿರುದ್ಯೋಗಕ್ಕೆ ಮುಖ್ಯ ಕಾರಣವೆನಿಸಿಕೊಂಡಿದ್ದ ಶೈಕ್ಷಣಿಕ ಮತ್ತು ಕೌಶಲ್ಯ ಹಾದಿಯನ್ನು ಕಂಡುಕೊಂಡ ಖೇಣಿಯವರು ಪ್ರತ್ಯೇಕ ಯೋಜನೆ ರೂಪಿಸಿದರು. ಬೀದರ್ ದಕ್ಷಿಣ ಕ್ಷೇತ್ರದ ಯುವಕರಿಗೆ ಶೈಕ್ಷಣಿಕ ಮತ್ತು ವೃತ್ತಿಪರ ತರಬೇತಿ ಒದಗಿಸುವ ಯೋಜನೆಗಳನ್ನು ರೂಪಿಸಿದರು.

# ನೈಸ್ ರಸ್ತೆಯೊಂದಿಗೆ ಕರ್ನಾಟಕದ ಪ್ರಗತಿಯ ಪರ್ವ!

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

## ಸಾಮಾಜಿಕ ಹೊಣೆಗಾರಿಕೆಯತ್ತ ನೈಸ್ ದಿಟ್ಟನಡೆ!

**ದೇವಸ್ಥಾನಕ್ಕೆ ಹೊಸ ರೂಪ:** ಬೆಂಗಳೂರು-ಮೈಸೂರು ಕಾರಿಡಾರ್‌ನಲ್ಲಿದ್ದ ಪಾಳುಬಿದ್ದಿದ್ದ ದೇವಸ್ಥಾನವನ್ನು ಪುನಶ್ಚೇತನಗೊಳಿಸಿ, ಅಭಿವೃದ್ಧಿಗೊಳಿಸಲಾಗಿದೆ. ಆ ಮೂಲಕ ನೈಸ್‌ನ ಸಾಮಾಜಿಕ ಕಾರ್ಯಕ್ಕೆ ಮತ್ತೊಂದು ಕೆಲಸವನ್ನು ಜೋಡಿಸಿಕೊಳ್ಳಲಾಗಿದೆ. ಬೆಂಗಳೂರಿನ ವರಾಹಸಂದ್ರದಲ್ಲಿದ್ದ ಬಸವೇಶ್ವರ ದೇವಸ್ಥಾನವನ್ನು ನವೀಕರಿಸಿ, ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸುವ ಕೆಲಸವನ್ನು ಮಾಡಲಾಗಿದೆ. ನಂದಿ ಮೂಲಸೌಕರ್ಯ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ ಧಾರ್ಮಿಕ ಸ್ಥಳಗಳಿಗೆ ನೀಡುವ ಕಾಳಜಿಗೆ ಇದು ನೈಜ ಉದಾಹರಣೆಯಾಗಿದೆ.

ಮೊದಲು

ನಂತರ

### ಸೌಕರ್ಯ ಸಹಿತ ಲೇಔಟ್!

ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ ಯೋಜನೆಗೆಂದು ಭೂಸ್ವಾಧೀನ ವ್ಯಾಪ್ತಿಗೆ ಒಳಪಟ್ಟ ನಿವೇಶನ, ಮನೆಗಳಿಗೆಂದು ಪರಿಹಾರೋಪಾಯಗಳನ್ನು ವ್ಯವಸ್ಥೆ ಮಾಡುವ ಪ್ರಕ್ರಿಯೆ ಆರಂಭದಿಂದಲೂ ನಡೆಯುತ್ತ ಬಂದಿದೆ. ಮನೆ ಕಳೆದುಕೊಂಡ ಪ್ರತಿಯೊಬ್ಬ ಭೂಮಾಲೀಕರಿಗೂ ನೈಸ್ ವತಿಯಿಂದ ಅತ್ಯಾಧುನಿಕ ಸೌಕರ್ಯ ಹೊಂದಿರುವ ಲೇಔಟ್ ನಿರ್ಮಾಣ ಮಾಡಲಾಗಿದೆ. ಬೆಂಗಳೂರಿನ ನೈಸ್ ಯೋಜನೆಯೊಂದಿಗೆ ಈ ಯೋಜನೆ ನಾನಾ ಸೌಕರ್ಯಗಳೊಂದಿಗೆ ನಿರ್ಮಾಣಗೊಂಡಿದೆ. ವಿಶೇಷವಾಗಿ ಡಾಂಬರು ರಸ್ತೆ, ನೀರಿನ ಸಂಪರ್ಕ, ವಿದ್ಯುತ್ ಸಂಪರ್ಕ, ಅಂಡರ್‌ಗ್ರೌಂಡ್ ಪೈಪ್‌ಗಳ ಮೂಲಕ ವಿದ್ಯುತ್ ಜಾಲ, ಒಳಚರಂಡಿ ಸಂಪರ್ಕ, ಒಳಚರಂಡಿ ತ್ಯಾಜ್ಯ ಸಂಸ್ಕರಣಾ ಘಟಕ, ಉದ್ಯಾನ ಸೇರಿದಂತೆ ಸಾಕಷ್ಟು ಅತ್ಯಾಧುನಿಕ ಸೌಕರ್ಯಗಳನ್ನು ಈ ಯೋಜನೆ ಒಳಗೊಂಡಿದೆ.

ಮೊದಲು

ನಂತರ

## ನಮ್ಮ ನೈಸ್‌ನಲ್ಲಿ ನಮ್ಮ ಮೆಟ್ರೋ!

ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಗಣನೀಯ ಕಡಿಮೆ ಮಾಡುವ ನಿಟ್ಟಿನಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್(ನೈಸ್ ಲಿಮಿಟೆಡ್) ರಸ್ತೆ ದೊಡ್ಡ ಕೊಡುಗೆಯಾಗಿದೆ. ಇದೇ ರಸ್ತೆಗೆ ಹೊಂದಿಕೊಂಡಂತೆ ಬೆಂಗಳೂರಿಗೆ 'ನಮ್ಮ ಮೆಟ್ರೋ' ಜೋಡಿಸುವ ನಿಟ್ಟಿನಲ್ಲಿ ಈಗಾಗಲೇ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ. ನೈಸ್ ಲಿಮಿಟೆಡ್ ಯೋಜನಾ ಕಂಪನಿಯು, ನಮ್ಮ ಮೆಟ್ರೋ ಜಾಲದ ವಿವಿಧ ಹಂತಗಳನ್ನು ಸಂಪರ್ಕಿಸಲು ತನ್ನ ಬಾಹ್ಯ ರಸ್ತೆಯ ಮಧ್ಯದಲ್ಲಿ ಮೆಟ್ರೋ ಮಾರ್ಗವನ್ನು ನಿರ್ಮಿಸಲು ಪ್ರಸ್ತಾಪಿಸಿದೆ. ನೈಸ್ ಲಿಮಿಟೆಡ್ ರಾಜ್ಯ ಸರ್ಕಾರಕ್ಕೆ ಅನುಮೋದನೆಗಾಗಿ ಈ ಯೋಜನಾ ಪ್ರಸ್ತಾವನೆ ಸಲ್ಲಿದ್ದು, ಅನುಮೋದಿಸಿ ಕಾರ್ಯಗತಗೊಳಿಸಿದರೆ, ಬೆಂಗಳೂರಿನ ಒಟ್ಟಾರೆ ವಾಸಯೋಗ್ಯತಾ ಸೂಚ್ಯಂಕವು ಗಮನಾರ್ಹವಾಗಿ ಹೆಚ್ಚಾಗುತ್ತದೆ.



## ಪ್ರಗತಿಯ ಪಥದಲ್ಲಿ ಟ್ರಾನ್ಸಿಟ್ ಹಬ್!

**ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್(ನೈಸ್) ನಿಂದ ಸಾರಿಗೆ ಕ್ಷೇತ್ರಕ್ಕೆ ಕ್ರಾಂತಿಕಾರಕ ಯೋಜನೆಯೊಂದು ರೂಪ ಪಡೆಯುತ್ತಿದೆ.**

ಬೆಂಗಳೂರಿನ ಜನದಟ್ಟಣೆ ಅನುಗುಣವಾಗಿ ಎದುರಾಗುತ್ತಿರುವ ಸಂಚಾರ ದಟ್ಟಣೆಯನ್ನು ಸಮರ್ಥವಾಗಿ ಎದುರಿಸಿ, ಪರಿಹಾರೋಪಾಯವಾಗಬಲ್ಲ ಕಾರ್ಯಯೋಜನೆಗೆ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ ಮುಂದಾಗುತ್ತಿದೆ. ಒಂದೇ ಪ್ರದೇಶದಲ್ಲಿ ಟ್ರಕ್ ಹಬ್, ಬಸ್ ಟರ್ಮಿನಲ್, ನಮ್ಮ ಮೆಟ್ರೋ ಲಿಂಕ್ ವ್ಯವಸ್ಥೆಯಿರುವಂತೆ ಯೋಜನೆ ರೂಪಿಸಲಾಗುತ್ತಿದೆ. ವಿಶೇಷವೆಂದರೆ, ಇದೇ ಪ್ರದೇಶಕ್ಕೆ ನೈಸ್ ರಸ್ತೆ ಸಹ ಸಂಪರ್ಕ ಕೊಂಡಿಯಾಗಿರಲಿದ್ದು, ಭವಿಷ್ಯದ ಬೆಂಗಳೂರು ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಈ ಯೋಜನೆ ಸಾಕಷ್ಟು ಪರಿಣಾಮಕಾರಿಯಾಗಲಿದೆ.

**ಸಾರಿಗೆ ಕ್ಷೇತ್ರದಲ್ಲೇ ಮೊದಲ ಪ್ರಯೋಗವಾಗಿ ಬೆಂಗಳೂರಿನ ಜನದಟ್ಟಣೆ ಅನುಗುಣವಾಗಿ ಎದುರಾಗುತ್ತಿರುವ ಸಂಚಾರ ದಟ್ಟಣೆಗೆ ಪರಿಹಾರೋಪಾಯವಾಗಬಲ್ಲ ಕಾರ್ಯಯೋಜನೆಗೆ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್‌ಮುಂದಾಗುತ್ತಿದೆ.**

## ಬೆಂಗಳೂರು ಅಂತಾರಾಷ್ಟ್ರೀಯ ಎಕ್ಸಿಬಿಶನ್ ಕೇಂದ್ರ(ಬಿಐಇಸಿ) ಎಕ್ಸ್‌ಪೋ, ಕಾನ್ಫರೆನ್ಸ್‌ಗಳಿಗೆ ಸೌಕರ್ಯ!

ಬೆಂಗಳೂರು-ತುಮಕುರು ರಸ್ತೆಯಲ್ಲಿ ಈಗಾಗಲೇ ನಿರ್ಮಾಣಗೊಂಡು ಕಾರ್ಯಾರಂಭಿಸಿರುವ ಬೆಂಗಳೂರು ಅಂತಾರಾಷ್ಟ್ರೀಯ ಎಕ್ಸಿಬಿಶನ್ ಕೇಂದ್ರ(ಬಿಐಇಸಿ) ರಾಜ್ಯದ ಪ್ರಗತಿಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ಕಾರ್ಯಕ್ರಮಗಳಿಗೆ, ಪ್ರದರ್ಶನ, ಕಾನ್ಫರೆನ್ಸ್ ಸೇರಿದಂತೆ ನಾನಾ ಕಾರ್ಯಕ್ರಮಗಳಿಗೆ ಇಲ್ಲಿನ ವೇದಿಕೆ ಸಾಕ್ಷಿಯಾಗುತ್ತಿದೆ. ದಕ್ಷಿಣ ಭಾರತದಲ್ಲೇ ಅತಿದೊಡ್ಡ ಸಮ್ಮೇಳನ ಮತ್ತು ಪ್ರದರ್ಶನ ಕೇಂದ್ರವಾಗಿ ಹೆಗ್ಗಳಿಕೆ ಗಳಿಸಿದೆ. ಜತೆಗೆ, ಈ ಕೇಂದ್ರವು ಮಲ್ಟಿ ಮಾಡೆಲ್ ಲಾಜಿಸ್ಟಿಕ್ಸ್ ಪಾರ್ಕ್‌ಗೆ ನೇರ ಸಂಪರ್ಕ ಹೊಂದಿದೆ. ಜತೆಗೆ, ನೈಸ್ ರಸ್ತೆಯ ಸಮೀಪದಲ್ಲೇ ಈ ವ್ಯವಸ್ಥೆಯಿರುವ ಹಿನ್ನೆಲೆ ಭವಿಷ್ಯದ ಉತ್ತಮ ಯೋಜನೆಗಳಿಗೆ ಸಾಕಷ್ಟು ನೆರವಾಗಲಿದೆ. ವಿಶೇಷವೆಂದರೆ, ನಮ್ಮ ಮೆಟ್ರೋ ಸಹ ಜೊತೆಯಾಗುತ್ತಿರುವ ಹಿನ್ನೆಲೆ ಬೆಂಗಳೂರಿನ ಉದ್ಯಮ ಕ್ಷೇತ್ರಕ್ಕೆ ಇದೊಂದು ದೊಡ್ಡ ವರದಾನವಾಗಲಿದೆ.

## ವಿತರಣೆಗೆ ಸಜ್ಜಾಗಿವೆ ನಿವೇಶನಗಳು!

ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ ಯೋಜನೆಗೆಂದು ಭೂಸ್ವಾಧೀನ ವ್ಯಾಪ್ತಿಗೆ ಒಳಪಟ್ಟ ಭೂಮಾಲೀಕರಿಗೆ ಪರಿಹಾರೋಪಾಯಗಳನ್ನು ವ್ಯವಸ್ಥೆ ಮಾಡುವ ಪ್ರಕ್ರಿಯೆ ಆರಂಭದಿಂದಲೂ ನಡೆಯುತ್ತ ಬಂದಿದೆ. ಭೂಮಿ ಕಳೆದುಕೊಂಡ ಪ್ರತಿಯೊಬ್ಬ ಭೂಮಾಲೀಕರಿಗೂ ನೈಸ್ ವತಿಯಿಂದ ಅತ್ಯಾಧುನಿಕ ಸೌಕರ್ಯ ಹೊಂದಿದೆ ಲೇಔಟ್ ನಿರ್ಮಾಣ ಮಾಡಲಾಗಿದೆ. ಬೆಂಗಳೂರಿನ ನೈಸ್ ಯೋಜನೆಯೊಂದಿಗೆ ಈ ಯೋಜನೆ ನಾನಾ ಸೌಕರ್ಯಗಳೊಂದಿಗೆ ನಿರ್ಮಾಣಗೊಂಡಿದೆ. ವಿಶೇಷವಾಗಿ ಡಾಂಬರು ರಸ್ತೆ, ನೀರಿನ ಸಂಪರ್ಕ, ವಿದ್ಯುತ್ ಸಂಪರ್ಕ, ಅಂಡರ್ ಗ್ರೌಂಡ್ ಪೈಪ್‌ಗಳ ಮೂಲಕ ವಿದ್ಯುತ್ ಜಾಲ, ಒಳಚರಂಡಿ ಸಂಪರ್ಕ, ಒಳಚರಂಡಿ ತ್ಯಾಜ್ಯ ಸಂಸ್ಕರಣಾ ಘಟಕ, ಉದ್ಯಾನ ಸೇರಿದಂತೆ ಸಾಕಷ್ಟು ಅತ್ಯಾಧುನಿಕ ಸೌಕರ್ಯಗಳನ್ನು ಈ ಯೋಜನೆ ಒಳಗೊಂಡಿದೆ. ಇಂಥಹಾ, ಸೌಕರ್ಯಗಳುಳ್ಳ ಮನೆಗಳ ಮಾಲೀಕತ್ವದ ದಾಖಲೆಗಳನ್ನು ಹಸ್ತಾಂತರಿಸಲು ಅಗತ್ಯ ಸಿದ್ಧತೆಗಳನ್ನು ಕೈಗೆತ್ತಿಕೊಂಡಿದ್ದು, ಸರ್ಕಾರದ ಅನುಮೋದನೆಗಾಗಿ ಕಾಯುತ್ತಿದೆ.

## ವ್ಯವಸ್ಥಿತ ತಾಣಗಳ ಅಭಿವೃದ್ಧಿ!

ಸಮುದಾಯ ಸ್ಥಳಗಳು: ನೈಸ್ ರಸ್ತೆಯ ಜತೆಗೆ ಸಮುದಾಯ ಸ್ಥಳಗಳನ್ನಾಗಿ ಕೆಲವೆಡೆ ಅಭಿವೃದ್ಧಿ ಸ್ಪರ್ಶ ನೀಡಲು ಉದ್ದೇಶಿಸಿದ್ದು, ಇಲ್ಲಿ ಶಿಕ್ಷಣ, ಆರೋಗ್ಯ, ಮನರಂಜನೆ ಸೇರಿದಂತೆ ಜನರಿಗೆ ಅಗತ್ಯವುಳ್ಳ ಎಲ್ಲಾ ನಿರೀಕ್ಷೆಗಳು ಇಲ್ಲಿ ಸಿಗುವಂತೆ ವಿನ್ಯಾಸಗೊಳಿಸಲಾಗಿದೆ. '

ಸಾಮಾಜಿಕ ಮೂಲಸೌಕರ್ಯ: ನೈಸ್ ರಸ್ತೆಯ ಉದ್ದಕ್ಕೂ ವ್ಯಾಪಾರ ಕೇಂದ್ರಗಳು ಮತ್ತು ವಾಣಿಜ್ಯ ಸಂಕೀರ್ಣಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಅಶೋಕ್ ಖೇಣಿ ಹೂಡಿಕೆಗಳನ್ನು ಆಕರ್ಷಿಸುವ ವಿನೂತನ ಯೋಜನೆಯನ್ನು ಹೊಂದಿದ್ದಾರೆ. ಆ ಮೂಲಕ ಬೆಂಗಳೂರಿನತ್ತ ವಹಿವಾಟು ಹೆಚ್ಚಿಸುವ ಮತ್ತು ಉದ್ಯೋಗಾವಕಾಶ ಸೃಜಿಸುವ ಬೃಹತ್ ಗುರಿಯನ್ನು ಹೊಂದಿದ್ದಾರೆ.

**ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಲ್ಲಿ ಪ್ರತಿಯೊಬ್ಬರಿಗೂ ಇಷ್ಟವಾಗುವಂತೆ ಮನರಂಜನೆಯೊಂದಿಗೆ ಔದ್ಯೋಗಿಕ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ.**

## ನೈಸ್ ರಸ್ತೆ ಯೋಜನೆಯಲ್ಲಿ ಕೆಲಸ ಮಾಡಿದ ಉದ್ಯೋಗಿಗಳ ಮನದಾಳದ ಮಾತು!

“ ಅಶೋಕ್ ಖೇಣಿಯವರು ದೂರದೃಷ್ಟಿಯುಳ್ಳ ನಾಯಕ. ಅವರು ತಮ್ಮ ಕೆಲಸದ ಮೂಲಕ ಎಲ್ಲಾ ಅಡೆತಡೆಗಳನ್ನು ಹೋಗಲಾಡಿಸುತ್ತಾರೆ. ಜತೆಗೆ, ಔದ್ಯೋಗಿಕವಾಗಿ ಎಲ್ಲರೊಂದಿಗೆ ಗೌರವಪೂರ್ವಕವಾಗಿ ನಡೆಸಿಕೊಳ್ಳುತ್ತಾರೆ. ನೈಸ್ ರಸ್ತೆಯ ಅಭಿವೃದ್ಧಿಯ ಕನಸು ಬೆಂಗಳೂರಿನೊಂದಿಗೆ ಬೆಸೆದುಕೊಂಡಿದ್ದು, ರಾಜ್ಯದ, ರಾಷ್ಟ್ರದ ಅಭಿವೃದ್ಧಿಗೆ ಅಶೋಕ್ ಖೇಣಿಯವರ ಕೊಡುಗೆ ಎಂದಿಗೂ ಅಜರಾಮರವಾಗಿರುತ್ತದೆ.

“ ಅಶೋಕ್ ಖೇಣಿಯವರು ನೈಸ್ ರಸ್ತೆಗಾಗಿ ಅವಿರತ ಶ್ರಮಿಸಿದ್ದಾರೆ. ಅವರ ಸಮಯ ಪಾಲನೆ, ನಿರಂತರ ಶ್ರಮ, ಗುರಿಯೆಡೆಗೆ ನಿಖರವಾಗಿ ಪ್ರಯತ್ನ ನಿಜಕ್ಕೂ ಎಲ್ಲರನ್ನೂ ನಿಬ್ಬೆರಗು ಮಾಡಿತ್ತು. ನಾಯಕರ ಸಮರ್ಪಣಾ ಭಾವ ನಮಗೆಲ್ಲಾ ಸಾಕಷ್ಟು ಸ್ಫೂರ್ತಿಯಾಗಿತ್ತು.

“ ಅಶೋಕ್ ಖೇಣಿಯವರು ಕೇವಲ ಓರ್ವ ಉದ್ಯಮಿಯಾಗಿ ಮಾತ್ರವಲ್ಲದೇ, ಸಮರ್ಥ ನಾಯಕರಾಗಿ ಕಂಡಿದ್ದಾರೆ. ರಾಜಕೀಯ, ಸಾಮಾಜಿಕ, ಉದ್ಯಮ ಕ್ಷೇತ್ರದಲ್ಲಿ ಸಾಕಷ್ಟು ಕೀರ್ತಿ ಸಂಪಾಧಿಸುವುದು ಸುಲಭದ ಮಾತಲ್ಲ. ಈ ವಿಷಯದಲ್ಲಿ ಅಶೋಕ್ ಖೇಣಿಯವರು ನಿಜಕ್ಕೂ ಎಲ್ಲರಿಗೂ ಮಾದರಿ.

“ ಸಮರ್ಥ ನಾಯಕತ್ವ ಎನ್ನುವ ಪದಕ್ಕೆ ಎಂದಿಗೂ ಅಶೋಕ್ ಖೇಣಿ ನೈಜ ಉದಾಹರಣೆಯಾಗಿದ್ದಾರೆ. ಅವರ ಕಾಯಕ ನಿಷ್ಠೆಗೆ ಪ್ರತೀಕವಾಗಿ ನೈಸ್ ರಸ್ತೆ ನಿರ್ಮಾಣವಾಗಿದೆ. ಜತೆಗೆ, ಅವರ ಈ ನಿರಂತರ ಶ್ರಮ ಪ್ರತಿಯೊಬ್ಬ ಉದ್ಯೋಗಿಯನ್ನು ಸಾಕಷ್ಟು ಪ್ರೋತ್ಸಾಹಿಸಿದೆ. ಜತೆಗೆ, ಮಾದರಿಯಾಗಿದೆ.

“ ಅಶೋಕ್ ಖೇಣಿ ಯಾವಾಗಲೂ ಉದ್ಯೋಗಿಗಳ ಸುರಕ್ಷತೆ ಮತ್ತವರ ಸರ್ವತೋಮುಖ ಪ್ರಗತಿಗೆ ಹೆಚ್ಚಿನ ಒತ್ತು ನೀಡುತ್ತಾರೆ. ಉದ್ಯೋಗಿಗಳ ಆರೋಗ್ಯಕ್ಕೆ ವೈದ್ಯಕೀಯ ತಪಾಸಣೆ ಸೇರಿ ಎಲ್ಲರನ್ನು ಅತ್ಯಂತ ಕಾಳಜಿಯಿಂದ ನಡೆಸಿಕೊಳ್ಳುತ್ತಾರೆ. ತುರ್ತು ಸಂದರ್ಭಗಳಲ್ಲಿ ಉದ್ಯೋಗಿಗಳ ಪರವಾಗಿ ಅವರು ನಿಲ್ಲುವ ಪರಿ ಎಲ್ಲರಿಗೂ ಮಾದರಿಯಾಗಿದೆ.

# ಹಸಿರು ಪಟಾಕಿ: 'ಸುಪ್ರೀಂ' ಅನುಮತಿ

## ಷರತ್ತುಗಳಾವುವು?

ಎರಡನೇ ಮುಖಪುಟದಿಂದ...

- ಮಾರಾಟದ ಸ್ಥಳಗಳಲ್ಲಿ ಪೊಲೀಸರ ತಂಡವು ಗಸ್ತು ತಿರುಗುತ್ತಿರಬೇಕು. ಈ ತಂಡದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಇರಬೇಕು. ಕ್ಯೂಆರ್ ಕೋಡ್ ಇರುವ ಹಸಿರು ಪಟಾಕಿಗಳು ಮಾತ್ರವೇ ಮಾರಾಟವಾಗುತ್ತಿವೆ ಎಂಬುದನ್ನು ಇವರು ಪರಿಶೀಲಿಸುತ್ತಲೇ ಇರಬೇಕು
- ನೋಂದಾಯಿಸಿಕೊಳ್ಳದ ತಯಾರಿಕಾ ಕಂಪನಿಗಳ ಮತ್ತು ಪರವಾನಗಿ ಇಲ್ಲದ ಮಾರಾಟಗಾರರ ಹಸಿರು ಪಟಾಕಿಗಳು ಜನರ ಕೈ ಸೇರದಂತೆ ಗಸ್ತು ತಂಡವು ನೋಡಿಕೊಳ್ಳಬೇಕು. ಇಂಥ ಪಟಾಕಿಗಳು ಕಂಡುಬಂದರೆ, ತಕ್ಷಣವೇ ವಶಕ್ಕೆ ಪಡೆಯಬೇಕು
- ನಿಯಮ ಉಲ್ಲಂಘಿಸುವ ತಯಾರಿಕಾ ಕಂಪನಿಗಳಿಗೆ ನೋಟಿಸ್ ನೀಡಿ ಅವರ ಪರವಾನಗಿಯನ್ನು ರದ್ದು ಮಾಡಲಾಗುವುದು

- ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಜೊತೆ ಸಮಾಲೋಚನೆಯೊಂದಿಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಎನ್‌ಸಿಆರ್ ಪ್ರದೇಶಗಳಲ್ಲಿ ವಾಯು ಗುಣಮಟ್ಟ ಸೂಚ್ಯಂಕದ ಮೇಲ್ವಿಚಾರಣೆ ನಡೆಸಬೇಕು. ಅ.14ರಿಂದ ಆರಂಭಗೊಂಡು ಅ.25ರವರೆಗೆ ಪ್ರತಿ ದಿನ ಪರಿಶೀಲನೆ ನಡೆಸಬೇಕು. ಬಳಿಕ ಈ ಬಗ್ಗೆ ನಮಗೆ ವರದಿ ಸಲ್ಲಿಸಬೇಕು. ಪಟಾಕಿಯನ್ನು ಹೆಚ್ಚು ಸಿಡಿಸಿದ ಸ್ಥಳಗಳಲ್ಲಿನ ಮಣ್ಣು, ಮರಳು ಮತ್ತು ನೀರಿನ ಮಾದರಿಗಳನ್ನು ಮಂಡಳಿಯ ಪ್ರಾದೇಶಿಕ ಅಧಿಕಾರಿಗಳು ಸಂಗ್ರಹಿಸಬೇಕು. ಇವುಗಳ ಪರೀಕ್ಷೆ ನಡೆಸಬೇಕು

### 'ನಿಷೇಧ: ಉಪಯೋಗವಾಗಿದೆಯೇ?'

'ಪಟಾಕಿಯನ್ನು ಸಂಪೂರ್ಣವಾಗಿ ನಿಷೇಧಿಸಿದ ಮೇಲೆ ಹೆಚ್ಚು ಹೊಗೆಯುಗುಳುವ ಸಾಂಪ್ರದಾಯಿಕ ಪಟಾಕಿಗಳ ಕಳ್ಳಸಾಗಣೆಯು ವಿಪರೀತ ಏರಿಕೆಯಾಗಿದೆ. ಇದರಿಂದ ಪರಿಸರಕ್ಕೆ ಹೆಚ್ಚು ಮಾರಕವೇ ಆಗಿದೆ. ಆದ್ದರಿಂದ, ನಾವು ಹೆಚ್ಚು ಸಮತೋಲಿತ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ' ಎಂದು ಸಿಜೆಐ ಗವಾಯಿ ತಮ್ಮ ಆದೇಶದಲ್ಲಿ ಹೇಳಿದರು.

'ಎನ್‌ಸಿಆರ್ ಪ್ರದೇಶಗಳಲ್ಲಿ ಪಟಾಕಿ ನಿಷೇಧಿಸಿದ ಬಳಿಕವೂ ಇಲ್ಲಿನ ವಾಯು ಮಾಲಿನ್ಯವು ನಿಯಂತ್ರಣಕ್ಕೆ ಬಂದಿಲ್ಲ. ಕೋವಿಡ್ ಕಾಲದಲ್ಲಿ ಮಾತ್ರವೇ ವಾಯು ಮಾಲಿನ್ಯ ನಿಯಂತ್ರಣದಲ್ಲಿತ್ತು. ಯಾಕೆಂದರೆ, ಈ ಕಾಲದಲ್ಲಿ ಕಾರ್ಖಾನೆಗಳು ಮುಚ್ಚಿದ್ದವು ಮತ್ತು ವಾಹನಗಳ ಸಂಚಾರ ಇರಲಿಲ್ಲ' ಎಂದು ದತ್ತಾಂಶಗಳನ್ನು ಗಮನಿಸಿ ಪೀಠ ಅಭಿಪ್ರಾಯಪಟ್ಟಿತು.

### ಬಿಜೆಪಿ–ಎಎಪಿ ಜಟಾಪಟಿ

ದೆಹಲಿಯಲ್ಲಿ ಸರ್ಕಾರ ಬದಲಾದ ಬಳಿಕ, ಹಿಂದೂ ಹಬ್ಬಗಳ ಮೇಲೆ ನಿರ್ಬಂಧ ಹೇರುವುದು ನಿಂತಿದೆ. ದೀಪಾವಳಿ ಆಚರಿಸುವ ಹಕ್ಕನ್ನು ರಕ್ಷಿಸಲು ಎಎಪಿ ಸರ್ಕಾರ ಬಯಸಿರಲಿಲ್ಲ. ನಾವು ಜನರನ್ನು ಪ್ರತಿನಿಧಿಸುತ್ತೇವೆ. ಹಸಿರು ಪಟಾಕಿಯೊಂದಿಗೆ ಈಗ ದೀಪಾವಳಿಯನ್ನು ಸಾಂಪ್ರದಾಯಿಕ ವಾಗಿಯೇ ಆಚರಿಸಬಹುದು

**ಕಪಿಲ್ ಮಿಶ್ರಾ,** ದೆಹಲಿಯ ಕಲೆ ಮತ್ತು ಸಂಸ್ಕೃತಿ ಸಚಿವ

ನಾವು ಮಾಲಿನ್ಯವನ್ನು ನಿಯಂತ್ರಿಸಲು ಯತ್ನಿಸಿದ್ದೆವು. ದೀಪಾವಳಿಗೆ ಪಟಾಕಿ ಸಿಡಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ನ್ಯಾಯಾಲಯ ವಿಧಿಸಿದ ನಿಯಮಗಳನ್ನು ದೆಹಲಿ ಸರ್ಕಾರ ಪಾಲಿಸುತ್ತದೆ ಎಂದು ನಂಬಿದ್ದೇವೆ

**ಗೋಪಾಲ್ ರಾಯ್,** ಎಎಪಿ ನಾಯಕ

- ಸಾಂಪ್ರದಾಯಿಕ ಪಟಾಕಿಗಳ ಹೋಲಿಕೆಯಲ್ಲಿ ಹಸಿರು ಪಟಾಕಿಗಳು 20%ರಷ್ಟು ಮಾಲಿನ್ಯಕಾರಕ ಕಣಗಳು ಗಾಳಿ ಸೇರುವುದನ್ನು ತಗ್ಗಿಸುತ್ತವೆ. ಜೊತೆಗೆ, ಸಾಂಪ್ರದಾಯಿಕ ಪಟಾಕಿಗಳಿಗಿಂತ 10%ರಷ್ಟು ಹೊಗೆ ಪಸರಿಸುವಿಕೆ ತಗ್ಗುತ್ತದೆ

ಹಬ್ಬ ಆಚರಣೆ ಜನರ ಹಕ್ಕು. ಆದರೆ, ದೆಹಲಿಯದ್ದು ವರ್ಷವಿಡೀ ಇರುವ ವಾಯು ಮಾಲಿನ್ಯದ ಸಮಸ್ಯೆ. ವಾಯು ಗುಣಮಟ್ಟ ನಿರ್ವಹಣೆ ಆಯೋಗದಲ್ಲಿ ಸದ್ಯ ಶೇ 35ರಷ್ಟು ಸಿಬ್ಬಂದಿ ಕೊರತೆ ಇದೆ. ದೆಹಲಿ ವಾಯು ನಿಯಂತ್ರಣ ಸಮಿತಿ ಮತ್ತು ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲೂ ಇದೇ ಸಮಸ್ಯೆ ಇದೆ. ಇದಕ್ಕಾಗಿಯೇ ಮಾಲಿನ್ಯದ ಕುರಿತು ತಕರಾರುಗಳಲ್ಲಿ ಜಾಗೃತಿ ಕಡಿಮೆ ಇದೆ

**ಅಮಿತ್ ಗುಪ್ತಾ,** ಪರಿಸರ ಕಾರ್ಯಕರ್ತ

ಮಕ್ಕಳು ಎರಡು ದಿನ ಸಂಭ್ರಮಿಸಲಿ. ದೀಪಾವಳಿ, ಗುರು ನಾನಕ್ ಜಯಂತಿ ಮತ್ತು ಕ್ರಿಸ್‌ಮಸ್‌ಗೆ ಮಾತ್ರವೇ ಪಟಾಕಿ ಸಿಡಿಸಲಾಗುತ್ತದೆ. ನನ್ನೊಳಗಿನ ಮಗುವು ನಿಮ್ಮೊಳಗಿನ (ಸಿಜೆಐ) ಮಗುವಿಗೆ ಮನವೊಲಿಸಲು ಯತ್ನಿಸುತ್ತದೆ. ಕೆಲವು ದಿನಗಳ ಮಟ್ಟಿಗೆ ಸಮಯದ ಯಾವುದೇ ನಿರ್ಬಂಧ ಬೇಡ

**ತುಷಾರ್ ಮೆಹ್ತ,** ಸಾಲಿಸಿಟರಲ್ ಜನರಲ್ (ಅ.10ರಂದು ಮಂಡಿಸಿದ್ದ ವಾದ)

# 57 ಕ್ಷೇತ್ರಗಳಿಗೆ ಅಭ್ಯರ್ಥಿ ಪ್ರಕಟಿಸಿದ ಜೆಡಿಯು

## ಹಲವು ಸಚಿವರಿಗೆ ಟಿಕೆಟ್ ಘೋಷಣೆ ಪಕ್ಷಾಂತರಿಗೂ ಮಣೆ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಹಲವು ಸಚಿವರನ್ನು ಒಳಗೊಂಡ 57 ಅಭ್ಯರ್ಥಿಗಳ ಪಟ್ಟಿಯನ್ನು ಬುಧವಾರ ಪ್ರಕಟಿಸಿದೆ.

ಸಚಿವರಾದ ವಿಜಯ್ ಕುಮಾರ್ ಚೌಧರಿ, ಶ್ರವಣ ಕುಮಾರ್, ಮದನ್ ಸಾಹ್ನಿ, ರತ್ನೇಶ್ ಸದಾ, ಮಹೇಶ್ವರ್ ಹಜಾರಿ ಅವರೂ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಆರ್‌ಜೆಡಿಯನ್ನು ವರ್ಷದ ಹಿಂದೆ ತ್ಯಜಿಸಿ ಜೆಡಿಯುಗೆ ಮರಳಿದ್ದ ಶ್ಯಾಮ್ ರಜಾಕ್, ರಾಜಕಾರಣಿಯಾಗಿ ಬದಲಾಗಿರುವ 'ದಾನ್' ಅನಂತ್ ಕುಮಾರ್ ಸಿಂಗ್ ಹೆಸರೂ ಪಟ್ಟಿಯಲ್ಲಿದೆ. ಈಗಾಗಲೇ ಅನಂತ್ ಅವರು ಮೊಕಾಮಾ ವಿಧಾನಸಭಾ ಕ್ಷೇತ್ರದಲ್ಲಿ ಮಂಗಳವಾರ ನಾಮಪತ್ರ ಸಲ್ಲಿಸಿದ್ದಾರೆ.

ಜೆಡಿಯು ರಾಜ್ಯ ಘಟಕದ ಅಧ್ಯಕ್ಷ ಉಮೇಶ್ ಕುಶ್ವಾಹ ಅವರಿಗೆ ಮಹನಾರ್ ಕ್ಷೇತ್ರದ ಟಿಕೆಟ್ ನೀಡಲಾಗಿದ್ದು, ಈಗಾಗಲೇ ಅವರು ನಾಮಪತ್ರ ಸಲ್ಲಿಸಿದ್ದಾರೆ.

ಮದನ್ ಸಾಹ್ನಿ ಅವರನ್ನು ಬಹದ್ದೂರ್‌ಪುರ ಕ್ಷೇತ್ರದಿಂದ, ರತ್ನೇಶ್ ಸದಾ ಅವರನ್ನು ಸೋನ್‌ಬರ್ಸಾದಿಂದ, ಮಹೇಶ್ವರ್ ಹಜಾರಿ ಅವರನ್ನು ಕಲ್ಯಾಣ್‌ಪುರದಿಂದ, ವಿಜಯ್ ಕುಮಾರ್ ಚೌಧರಿ ಅವರನ್ನು ಸರಾಯರಂಜನ್‌ನಿಂದ ಹಾಗೂ ಶ್ರವಣ ಕುಮಾರ್ ಅವರನ್ನು ನಳಂದ ಕ್ಷೇತ್ರದಿಂದ ಕಣಕ್ಕಿಳಿಸುವುದಾಗಿ ಪಕ್ಷ ಘೋಷಿಸಿದೆ.

243 ಸದಸ್ಯರ ಸದಸ್ಯಬಲದ ಬಿಹಾರ ವಿಧಾನಸಭೆಗೆ ನವೆಂಬರ್ 6 ಮತ್ತು 11ರಂದು ಮತದಾನ ನಡೆಯಲಿದ್ದು, ನವೆಂಬರ್ 14ರಂದು ಮತ ಎಣಿಕೆ ನಡೆಯಲಿದೆ.

## ಚುನಾವಣೆಯಲ್ಲಿ ಸ್ಪರ್ಧಿಸಲ್ಲ: ಪ್ರಶಾಂತ್ ಕಿಶೋರ್

ಜನ್ ಸುರಾಜ್ ಪಕ್ಷದ ಸಂಸ್ಥಾಪಕ, ಚುನಾವಣಾ ತಂತ್ರಗಾರಿಕೆಯ ನಿಪುಣ ಪ್ರಶಾಂತ್ ಕಿಶೋರ್ ಅವರು ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಬುಧವಾರ ಘೋಷಿಸಿದರು.

'ಪಕ್ಷ ಈ ನಿರ್ಧಾರವನ್ನು ತೆಗೆದುಕೊಂಡಿದೆ' ಎಂದಿರುವ ಅವರು, '150ಕ್ಕಿಂತ ಕಡಿಮೆ ಸ್ಥಾನಗಳಲ್ಲಿ ಗೆದ್ದರೆ ಅದನ್ನು ಸೋಲು ಎಂದು ಪರಿಗಣಿಸಲಾಗುತ್ತದೆ' ಎಂದು ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ತಿಳಿಸಿದರು.

'ಬಿಹಾರ ಚುನಾವಣೆಯಲ್ಲಿ ಜನ್ ಸುರಾಜ್ ಪಕ್ಷ ಗೆದ್ದರೆ, ಅದು ರಾಷ್ಟ್ರ ಮಟ್ಟದಲ್ಲಿ ವ್ಯಾಪಕ ಪರಿಣಾಮ ಬೀರುತ್ತದೆ. ದೇಶದ ರಾಜಕೀಯ ದಿಕ್ಕನ್ನೇ ಬದಲಿಸುತ್ತದೆ' ಎಂದು ಅವರು ಪ್ರತಿಪಾದಿಸಿದರು.

'ನಾನು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಬಾರದು ಎಂದು ಪಕ್ಷ ನಿರ್ಧರಿಸಿದೆ. ಹೀಗಾಗಿಯೇ ರಾಘೋಪುರದ ಕ್ಷೇತ್ರದಿಂದ ತೇಜಸ್ವಿ ಯಾದವ್ ವಿರುದ್ಧ ಮತ್ತೊಬ್ಬ ಅಭ್ಯರ್ಥಿಯನ್ನು ಘೋಷಿಸಲಾಗಿದೆ. ಇದು ಪಕ್ಷದ ಹಿತದೃಷ್ಟಿಯಿಂದ ತೆಗೆದುಕೊಂಡಿರುವ ನಿರ್ಧಾರ. ನಾನು ಸ್ಪರ್ಧಿಸಿದ್ದರೆ, ಅದು ನನ್ನನ್ನು ಪಕ್ಷದ ಸಂಘಟನಾ ಕೆಲಸದಿಂದ ದೂರವಿಡುತ್ತಿತ್ತು' ಎಂದು ಕಿಶೋರ್ ಹೇಳಿದರು.

ಪ್ರಶಾಂತ್ ಕಿಶೋರ್

ತಮಗೆ ಪೂರಕ ವಾತಾವರಣ ಇಲ್ಲ ಎಂಬುದು ಪ್ರಶಾಂತ್ ಕಿಶೋರ್‌ಗೆ ಮನದಟ್ಟಾಗಿದ್ದು, ಅವರೊಳಗಿನ ವರ್ತಕ ಎಚ್ಚರಗೊಂಡಿದ್ದಾನೆ

**ಶೆಹಜಾದ್ ಪೂನಾವಾಲಾ,** ಬಿಜೆಪಿ ರಾಷ್ಟ್ರೀಯ ವಕ್ತಾರ

ಸೋಲು ಖಚಿತವೆಂಬುದನ್ನು ಅರಿತಿರುವ ಕಿಶೋರ್ ಸ್ಪರ್ಧಿಸುತ್ತಿಲ್ಲ ಎಂದಿದ್ದಾರೆ. ಅಲ್ಲದೆ, ಯುದ್ಧಭೂಮಿಗೆ ಹೋಗುವ ಮೊದಲೇ ಸೋಲೊಪ್ಪಿಕೊಂಡಿದ್ದಾರೆ

**ಮೃತ್ಯುಂಜಯ ತಿವಾರಿ,** ಆರ್‌ಜೆಡಿ ವಕ್ತಾರ

'ನಾವು 150ಕ್ಕಿಂತ ಕಡಿಮೆ ಸ್ಥಾನಗಳು, ಅಂದರೆ 120 ಅಥವಾ 130 ಬಂದರೂ ಸೋತಂತೆ. ನಾವು ಉತ್ತಮವಾಗಿ ಕಾರ್ಯನಿರ್ವಹಿಸಿದರೆ, ಬಿಹಾರವನ್ನು ಪರಿವರ್ತಿಸಲು ಮತ್ತು ದೇಶದ 10 ಅತ್ಯಂತ ಮುಂದುವರಿದ ರಾಜ್ಯಗಳ ಸಾಲಿನಲ್ಲಿ ನಿಲ್ಲಿಸಲು ಜನಾದೇಶ ದೊರೆಯುತ್ತದೆ' ಎಂದರು.

**'ಎನ್‌ಡಿಎ ಸೋಲು ಖಚಿತ':** 'ಎನ್‌ಡಿಎ ಬಿಹಾರದಲ್ಲಿ ಸೋಲುವುದು ಖಚಿತ' ಎಂದ ಅವರು, ಜೆಡಿಯು 25 ಸ್ಥಾನಗಳಲ್ಲಿ ಗೆಲ್ಲಲು ಹೆಣಗಾಡುತ್ತದೆ' ಎಂದಿದ್ದಾರೆ.

# ಸೀಟು ಹಂಚಿಕೆಗೆ ಮುನ್ನವೇ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭೆಗೆ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ 121 ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಕೆಯ ಅವಧಿ ಕೊನೆಗೊಳ್ಳಲು ಎರಡು ದಿನಗಳಷ್ಟೇ ಉಳಿದಿವೆ. ಆದರೆ, 'ಇಂಡಿಯಾ' ಮೈತ್ರಿಕೂಟದಲ್ಲಿ ಸೀಟು ಹಂಚಿಕೆ ವಿಷಯದಲ್ಲಿ ಬುಧವಾರವೂ ಒಮ್ಮತಾಭಿಪ್ರಾಯ ಮೂಡಲಿಲ್ಲ.

ಈ ನಡುವೆ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಸೇರಿದಂತೆ ಮೈತ್ರಿಕೂಟದ ಕೆಲವು ಅಭ್ಯರ್ಥಿಗಳು ಬುಧವಾರ ನಾಮಪತ್ರ ಸಲ್ಲಿಸಿದರು. ಮಿತ್ರ ಪಕ್ಷಗಳ ನಡುವೆ ಯಾವುದೇ ಪೈಪೋಟಿ ಇಲ್ಲದ ಕ್ಷೇತ್ರಗಳಲ್ಲಷ್ಟೇ ನಾಮಪತ್ರ ಸಲ್ಲಿಕೆಯಾಗಿದೆ.

ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ನೇಮಿಸಿದ ಉಪಸಮಿತಿಯು ಸುಮಾರು ಹತ್ತು ಸ್ಥಾನಗಳಿಗೆ ಅಭ್ಯರ್ಥಿಗಳ ಆಖೈರುಗೊಳಿಸುವ ಬಗ್ಗೆ ಚರ್ಚೆ ನಡೆಸಿತು. ಪಕ್ಷವು ಇಲ್ಲಿಯವರೆಗೆ ಸುಮಾರು 75 ಹೆಸರುಗಳಿಗೆ ಹಸಿರು ನಿಶಾನೆ ತೋರಿಸಿದೆ. ಆದರೆ, ಸೀಟು ಹಂಚಿಕೆ ಕುರಿತು ಆರ್‌ಜೆಡಿಯೊಂದಿಗೆ ಅಂತಿಮ ಚರ್ಚೆಗಳ ನಂತರ ಸುಮಾರು 60 ಸ್ಥಾನಗಳ ಅಂತಿಮ ಪಟ್ಟಿ ಪ್ರಕಟಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಬಿಹಾರ ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷ ರಾಜೇಶ್ ರಾಮ್ ಮತ್ತು ಶಾಸಕಾಂಗ ಪಕ್ಷದ ನಾಯಕ ಶಕೀಲ್ ಅಹ್ಮದ್ ಖಾನ್ ಸೇರಿದಂತೆ ಹಿರಿಯ ನಾಯಕರು ಬುಧವಾರ ಮಧ್ಯಾಹ್ನ ಪಟ್ನಾಕ್ಕೆ ಹಿಂತಿರುಗಿದರು. ಕ್ಷೇತ್ರಗಳ ಕುರಿತು ಮತ್ತೊಂದು ಸುತ್ತಿನ ಚರ್ಚೆ ನಡೆಸಲಿದ್ದಾರೆ. 'ಪಕ್ಷಕ್ಕೆ 70 ಸ್ಥಾನಗಳನ್ನು ಬಿಟ್ಟುಕೊಡಬೇಕು' ಎಂದು ಕಾಂಗ್ರೆಸ್ ಪಟ್ಟು ಹಿಡಿದಿತ್ತು. ಆದರೆ, 60ಕ್ಕಿಂತ ಹೆಚ್ಚು ಸ್ಥಾನಗಳನ್ನು ನೀಡಲು ಆರ್‌ಜೆಡಿ ಒಪ್ಪಿರಲಿಲ್ಲ. ಪಕ್ಷಕ್ಕೆ 58-60 ಸ್ಥಾನಗಳು ಸಿಗುವ ನಿರೀಕ್ಷೆ ಇದೆ. ಆದರೆ, ಇದೀಗ ಕೆಲವು ಕ್ಷೇತ್ರಗಳನ್ನು ಬಿಟ್ಟುಕೊಡಲು ಉಭಯ ಪಕ್ಷಗಳು ಒಪ್ಪಿಲ್ಲ. ಹೀಗಾಗಿ, ಕಗ್ಗಂಟು ಮುಂದುವರಿದಿದೆ.

ಕೆಹಲ್‌ಗಾವ್, ವೈಶಾಲಿ ಮತ್ತು ನರ್ಕಟಗಂಜ್‌ಗಾಗಿ ಆರ್‌ಜೆಡಿ ಮತ್ತು ಕಾಂಗ್ರೆಸ್ ಪೈಪೋಟಿ ನಡೆಸುತ್ತಿದ್ದು, ಈ ಕ್ಷೇತ್ರಗಳನ್ನು ಬಿಟ್ಟುಕೊಡಲು ಉಭಯ ಪಕ್ಷಗಳು ಸಿದ್ಧ ಇಲ್ಲ. ಮುಖೇಶ್ ಸಹಾನಿ ನೇತೃತ್ವದ ವಿಕಾಸಶೀಲ ಇನ್ಸಾನ್ ಪಕ್ಷಕ್ಕೆ ಸುಮಾರು 17-18 ಸ್ಥಾನಗಳನ್ನು ನೀಡಲು ಸಹಮತ ವ್ಯಕ್ತವಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿಪಿಐ(ಎಂ)ಎಲ್‌ಗೆ 19 ಕ್ಷೇತ್ರಗಳನ್ನು ನೀಡಲು ಆರ್‌ಜೆಡಿ ಒಪ್ಪಿಗೆ ಸೂಚಿಸಿತ್ತು. ಈ ಪೈಕಿ 18 ಕ್ಷೇತ್ರಗಳಿಗೆ ಸಿಪಿಐ(ಎಂ)ಎಲ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಆರಂಭಿಸಿದ್ದಾರೆ. ಎಡ ಪಕ್ಷಗಳು ಕನಿಷ್ಠ 30 ಕ್ಷೇತ್ರಗಳನ್ನು ನೀಡಬೇಕು ಎಂದು ಬೇಡಿಕೆ ಮುಂದಿಟ್ಟಿದ್ದವು. ಈ ಪ್ರಸ್ತಾವವನ್ನು ಆರ್‌ಜೆಡಿ ತಿರಸ್ಕರಿಸಿತ್ತು. ಇನ್ನೂ 3-4 ಕ್ಷೇತ್ರಗಳನ್ನು ಕೊಡಬೇಕು ಎಂದು ಎಡ ಪಕ್ಷಗಳು ಹಠ ಹಿಡಿದಿವೆ. ಎಲ್‌ಜೆಪಿ (ಪರಾಸ್), ಜೆಎಂಎಂನಂತಹ ಸಣ್ಣ ಪಕ್ಷಗಳಿಗೆ ಕೆಲವೊಂದು ಕ್ಷೇತ್ರಗಳನ್ನು ನೀಡಬೇಕಿದ್ದು, ಉಳಿದ ಪಕ್ಷಗಳು ಸಹಕಾರ ನೀಡಬೇಕು ಎಂದು ಆರ್‌ಜೆಡಿ ನಾಯಕರು ಮಿತ್ರರಲ್ಲಿ ಮನವಿ ಮಾಡಿಕೊಂಡಿದ್ದಾರೆ.

## ಮಮತಾ ಕ್ಷಮೆ ಕೇಳಿದ ಸಂತ್ರಸ್ತೆ ತಂದೆ

ಕೋಲ್ಕತ್ತ (ಪಿಟಿಐ): ದುರ್ಗಾಪುರದ ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಂತ್ರಸ್ತೆಯ ತಂದೆ ಬುಧವಾರ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕ್ಷಮೆಯಾಚಿಸಿದ್ದಾರೆ.

'ಮಮತಾ ನಮಗೆ ತಾಯಿಯಂತೆ. ನಿಮ್ಮ ವಿರುದ್ಧ ನಾನು ಏನಾದರೂ ತಪ್ಪು ಮಾತನಾಡಿದ್ದರೆ ನನ್ನನ್ನು ಕ್ಷಮಿಸಿ. ನಮ್ಮ ಪುತ್ರಿಗೆ ನ್ಯಾಯ ದೊರಕಿಸಿಕೊಡಬೇಕು' ಎಂದು ಮನವಿ ಮಾಡಿದ್ದಾರೆ.

'ನಾನು ಅವರ ಪಾದಗಳಿಗೆ ಸಹಸ್ರ ಪ್ರಣಾಮಗಳನ್ನು ಸಲ್ಲಿಸುತ್ತೇನೆ ಹಾಗೂ ನನ್ನ ಮಗಳಿಗೆ ನ್ಯಾಯ ಒದಗಿಸಬೇಕೆಂದು ವಿನಂತಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

**ಬನ್ನೇರುಘಟ್ಟ ಜೈವಿಕ ಉದ್ಯಾನವನ**
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ: ಎ1/ಬಬಪಾ/ಪಶುವೈದ್ಯ/2025–26 ದಿನಾಂಕ: 14–10–2025

**ನೇರ ಸಂದರ್ಶನ**

ಬನ್ನೇರುಘಟ್ಟ ಜೈವಿಕ ಉದ್ಯಾನವನ (ಬಬಪಾ), ಬೆಂಗಳೂರು ಇವರು **ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಯನ್ನು ತೊಡಗಿಸಿಕೊಳ್ಳಲು ಉದ್ದೇಶಿಸಿದ್ದಾರೆ.**

| ಕ್ರ. ಸಂ. | ವಿವರಗಳು | ಅರ್ಹತೆ | ಸಂಖ್ಯೆ | ಸಂಬಳ ತಿಂಗಳು |
|---|---|---|---|---|
| 1 | ಪಶುವೈದ್ಯ | B.V.Sc. & A.H or M.V.Sc. | 01 | ರೂ. 55,000/- |

**ಸೂಚನೆ: ವನ್ಯಜೀವಿ ಔಷಧ ಮತ್ತು ಶಸ್ತ್ರಚಿಕಿತ್ಸೆಯಲ್ಲಿ ಅನುಭವ ಹೊಂದಿರಬೇಕು.**
ಆಸಕ್ತ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಮಾಣಪತ್ರಗಳು ಹಾಗೂ ಅವರ ವ್ಯಕ್ತಿಗತ ವಿವರದೊಂದಿಗೆ **ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ ಇಲ್ಲಿ 23–10–2025 ರಂದು ಬೆಳಿಗ್ಗೆ 11.30 ಗಂಟೆಗೆ** ಸಂದರ್ಶನಕ್ಕೆ ಹಾಜರಾಗಲು ಕೋರಿದೆ. ಅಭ್ಯರ್ಥಿಯು ಅವರ ವ್ಯಕ್ತಿಗತ ವಿವರವನ್ನು ದಿನಾಂಕ: **21–10–2025 ಕ್ಕಿಂತಲೂ ಮುಂಚಿತವಾಗಿ bannerghattazoohospital@gmail.com** ಇಲ್ಲಿಗೆ **ಕಳುಹಿಸತಕ್ಕದ್ದು.**
ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ವಾಸಾಸಂಇ/ವಾ.ಪ್ರ/3279/ಅಡ್ವರ್ಟೋರ್/2025–26

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ**
ಇ–ಮೇಲ್: ka.bengaluru.urban.dudc@gmail.com
ದೂರವಾಣಿ ಸಂಖ್ಯೆ: 080–22211372/352

ಸಂ: ಕೆ.ಎಲ್.ಎಲ್.ಡಿ.ಎಸ್/ಟೆಂಡರ್/ಸಿ.ಆರ್/01/2025–26 ದಿನಾಂಕ: 14.10.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ** (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರ ವ್ಯಾಪ್ತಿಯಲ್ಲಿ ಬರುವ ಸಂಸತ್ ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆಯಡಿ ಮತ್ತು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು 3ನೇ ವ್ಯಕ್ತಿ ತಪಾಸಣೆ ಮಾಡಲು (Third Party) ನೊಂದಾಯಿತ ಅರ್ಹ ದರ್ಜೆಯ ಏಜೆನ್ಸಿದಾರರಿಂದ ಸೇವೆಯನ್ನು ಒದಗಿಸಲು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

**NAME OF WORK**:- Providing Consultancy Services as 3rd Party (Third Party) Inspection for all Development & Maintenance Works, Procurement of Goods & Services Works under MPLADS & KLLADS (MISC.) funds & any other grants for the year 2025-26 (including spill over works of 2024-25) in Bangalore Urban District for ANEKAL, BENGALURU NORTH, BENGALURU SOUTH, BENGALURU EAST, BENGALURU CITY AND MPLAD/KLLADS/MLC'S AND OTHER FUND OF THE DISTRICTS. Estimated Amount-114/- CRORES. INDENT NO: RD/2025-26/SE0469-**Call-2.**

3ನೇ ತನಿಖಾ ವ್ಯಕ್ತಿ ತಪಾಸಣೆ ಮಾಡಲು (Third Party) ನೀಡುವ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ): 69.50 ಲಲಕ್ಷಗಳು. ಇ.ಎಂ.ಡಿ ಮೊತ್ತ: 1.39 ಲಕ್ಷ. ಕಾಲಾವಧಿ: ಬಿಡ್ ದಾಖಲಾತಿಗಳ ರಿತ್ಯ.

1) ಪೂರ್ವಭಾವಿ ಸಭೆಯ ಹಾಗೂ ಆಕ್ಷೇಪಣೆಯ ದಿನಾಂಕ: 18–10–2025 ಸಂಜೆ 3.00 ಗಂಟೆಯವರೆಗೆ. 2) ಟೆಂಡರ್ ಕೆ.ಪಿ.ಪಿ. ಪೋರ್ಟಲ್ ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 24–10–2025 ಸಂಜೆ 5.00 ಗಂಟೆಯವರೆಗೆ. 3) ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 27–10–2025 ಸಂಜೆ 5.10 ಗಂಟೆಗೆ. 4) ಟೆಂಡರ್‌ನ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: 31–10–2025 ಬೆಳಗ್ಗೆ 11.30 ಗಂಟೆಗೆ. 5) ಹೆಚ್ಚಿನ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
ವಾಸಾಸಂಇ/ವಾಪ್ರ/3282/ಸ್ಪ್ಯಾನ್/2025–26

ಕರ್ನಾಟಕ ಸರ್ಕಾರ
**ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ**
ದೂರವಾಣಿ: 08382–220556 ಇ–ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಪಿಬಿ–1/2025–26/20 ದಿ: 14.10.2025

**ಟೆಂಡರ್ ಪ್ರಕಟಣೆ–20/2025–26 (ಕೆ.ಪಿ.ಪಿ.ಪಿ ಮೂಲಕ)**

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document** ನ **K.W-1** ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಪ್ರ ವರ್ಗ 1) (1) 2025–26 ನೇ ಸಾಲಿನ ಜಿ.ಪಂ ಅನಿರ್ಭಂಧಿತ ಯೋಜನೆಯಡಿಯಲ್ಲಿ ಭಟ್ಕಳ ತಾಲೂಕಿನ ಹೆಬಳೆ ಗ್ರಾಪಂ ಸ.ಹಿ.ಪ್ರಾ ಶಾಲೆ ಹೊನ್ನೆಗದ್ದೆಯಲ್ಲಿ ಹೊಸ ಕೊಠಡಿ ನಿರ್ಮಾಣ. **RDPR/2025-26/BD/WORK_INDENT19204/Call-2,** ಅಂದಾಜು ಮೊತ್ತ: ರೂ. 14.50 ಲಕ್ಷ, ಮುಂಗಡ ಠೇವಣಿ: ರೂ. 18125.00, ಕಾಲಮಿತಿ (ಮಳೆಗಾಲ ಸಹಿತ): 04 ತಿಂಗಳು.

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು **Technical Bid** ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 24.10.2025 ರ ಬೆಳಿಗ್ಗೆ 16.30 ಘಂಟೆವರೆಗೆ. (2) ಕಾಮಗಾರಿಯ **Technical Bid** ನ್ನು ತೆರೆಯುವ ದಿನಾಂಕ: 27.10.2025 ಬೆಳಿಗ್ಗೆ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ
DIPR/KWR/KSMCA/614/25-26 dt. 14.10.2025

**ತೋಟಗಾರಿಕೆ ಇಲಾಖೆ**
ತೋಟಗಾರಿಕೆ ನಿರ್ದೇಶನಾಲಯ, ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು – 560 076. ದೂರವಾಣಿ ಸಂಖ್ಯೆ: 080–26582775,
ಇ–ಮೇಲ್: ddhbiotech3@gmail.com

**ಅಲ್ಪಾವಧಿ ಮರುಟೆಂಡರ್**

KPPP ಟೆಂಡರ್ ಪ್ರಕಟಣೆ ಸಂ. KSHD/2025-26/IND0125/CALL-2 ಅನ್ನು ದಿನಾಂಕ:13.10.2025 ರಿಂದ 21.10.2025 ರ ಸಂಜೆ 5.30 ಘಂಟೆಯ ಅವಧಿಗೆ ಮರು–ಟೆಂಡರ್ ಕರೆಯಲಾಗಿದೆ.

ಸಹಿ/–
ತೋಟಗಾರಿಕೆ ಉಪ ನಿರ್ದೇಶಕರು (ಅಂಗಾಂಶ ಕೃಷಿ)
ವಾಸಾಸಂಇ/ವಾ.ಪ್ರ/3285/ಎಂಎಎ/25–26

**ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್)**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.17, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ, (ರಿಚ್‌ಮಂಡ್ ರಸ್ತೆ), ಬೆಂಗಳೂರು–560 025.
ದೂರವಾಣಿ: 080–22271194/22243082, ಇ–ಮೇಲ್: kappec1996@gmail.com
ಸಂಖ್ಯೆ: ಕೆಪೆಕ್:ಬಾಗಲಕೋಟೆ:ಗೋದಾಮು–ಶೀತಲಗೃಹ:2025–2026:
ದಿನಾಂಕ: 14.10.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**
**ಟರ್ನ್‌ಕೀ ಆಧಾರದ ಮೇಲೆ ಬಾಗಲಕೋಟೆ ನವನಗರದ ಕೆ.ಐ.ಎ.ಡಿ.ಬಿ ಕೈಗಾರಿಕಾ ಪ್ರದೇಶದ ಆಗ್ರೋಟೆಕ್ ಪಾರ್ಕ್‌ನ ಪ್ಲಾಟ್ ನಂ.110 ರಲ್ಲಿರುವ ಗೋದಾಮನ್ನು ಶೀತಲಗೃಹವನ್ನಾಗಿ ಪರಿವರ್ತಿಸಲು (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)**

ಕೆಪೆಕ್ ಸಂಸ್ಥೆಯು ರಾಜ್ಯದ ಬಾಗಲಕೋಟೆ ನವನಗರದ ಕೆ.ಐ.ಎ.ಡಿ.ಬಿ ಕೈಗಾರಿಕಾ ಪ್ರದೇಶದ ಆಗ್ರೋಟೆಕ್ ಪಾರ್ಕ್‌ನ ಪ್ಲಾಟ್ ನಂ.110 ರಲ್ಲಿರುವ ಗೋದಾಮನ್ನು ಶೀತಲಗೃಹವನ್ನಾಗಿ ಪರಿವರ್ತಿಸುವ ಕಾಮಗಾರಿಗೆ ನುರಿತ ತಂತ್ರಜ್ಞ ಹಾಗೂ ಅನುಭವೀ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ **(https://kppp.karnataka.gov.in)** ದಲ್ಲಿ ನೋಡಬಹುದಾಗಿದೆ.
ಪೂರ್ಣಗೊಳಿಸಿದ ಟೆಂಡರಿನ ಜೊತೆಗೆ ಇ.ಎಂ.ಡಿ ಮೊತ್ತ **ರೂ. 5,41,000/–** (ಐದು ಲಕ್ಷದ ನಲವತ್ತೊಂದು ಸಾವಿರ ರೂಪಾಯಿಗಳು) ಗಳನ್ನು ದಿನಾಂಕ **12.11.2025 ರಂದು ಸಂಜೆ 5:00 ಘಂಟೆಯೊಳಗೆ** ಅಂತರ್ಜಾಲದ ಮುಖಾಂತರ ಸಲ್ಲಿಸತಕ್ಕದ್ದು. ದಿನಾಂಕ **28.10.2025 ರಂದು ಮಧ್ಯಾಹ್ನ 12:00 ಘಂಟೆಗೆ** ಕೆಪೆಕ್ ಸಂಸ್ಥೆಯಲ್ಲಿ ಪ್ರೀ–ಬಿಡ್ ಸಭೆ ನಡೆಸಲಾಗುವುದು. ತಾಂತ್ರಿಕ ಬಿಡ್‌ಗಳನ್ನು ದಿನಾಂಕ **13.11.2025 ರಂದು ಸಂಜೆ 5:01 ಘಂಟೆಗೆ** ತೆರೆಯಲಾಗುವುದು. ಬೆಲೆಯ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ನಂತರ ತಿಳಿಸಲಾಗುವುದು. ಯಾವುದೇ / ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರವನ್ನು ಕೆಪೆಕ್ ಸಂಸ್ಥೆಯ ಆಡಳಿತ ಮಂಡಳಿ ಹೊಂದಿರುತ್ತದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
**ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ**
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2025–26/2088
ದಿನಾಂಕ:13.10.2025

**ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024–25 ನೇ ಸಾಲಿನ ಶಿಕ್ಷಣ ಇಲಾಖೆಯ ವಿವಿಧ ಅನುದಾನ ಯೋಜನೆಯಡಿಯಲ್ಲಿ **ಸಾಮಾನ್ಯ ಗುತ್ತಿಗೆದಾರರ** 3 ಕಾಮಗಾರಿ (ಇಂಡೆಂಟ ನಂ. RDPR/2025-26/BD/WORK_INDENT 18798,18354 & 19039) **ಪರಿಶಿಷ್ಟ ಜಾತಿ ಗುತ್ತಿಗೆದಾರರ** 1 ಕಾಮಗಾರಿ (ಇಂಡೆಂಟ ನಂ.RDPR/2025-26/BD/WORK_INDENT18383) **ಪ್ರವರ್ಗ–1 ಗುತ್ತಿಗೆದಾರರ** 1 ಕಾಮಗಾರಿ (ಇಂಡೆಂಟ ನಂ. RDPR/2025-26/BD/WORK_INDENT18384) ಹೀಗೆ ಒಟ್ಟು 5 ಕಾಮಗಾರಿಗಳಿಗೆ ರೂ. 10.00 ಲಕ್ಷದಿಂದ 29.00 ಲಕ್ಷದವರೆಗೆ ಕೆ.ಡಬ್ಲೂ– 1 ಮತ್ತು 2 ರ ಪ್ರಕಾರ ಈ ಕಚೇರಿಯ ಟೆಂಡರ್ ಪ್ರಕಟಣೆ **ಸಂಖ್ಯೆ: 2088 ದಿನಾಂಕ: 13.10.2025** ರಂತೆ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಆಹ್ವಾನಿಸಿದ್ದು, ಕೆ.ಪಿ.ಪಿ ಪ್ರೋಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 30.10.2025 ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.

ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/393/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
**ಬೆಂಗಳೂರು ನಗರ ಜಿಲ್ಲಾ ಪಂಚಾಯತಿ**
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080–26716046 ವೆಬ್‌ಸೈಟ್: http://kppp.karnataka.gov.in
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/21/2025–26 ದಿನಾಂಕ: 14.10.2025

**ಕೆ.ಪಿ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ ನೋಟೀಸ್ (ಏಕ–ಲಕೋಟೆ)**

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 4202–01–201–1–08–132/422 Toilet Grants ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಏಕ ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **03.11.2025** ರ ಸಂಜೆ **4.00** ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ **http://www.KPPP.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.
ವಾಸಾಸಂಇ/ವಾಪ್ರ/3277/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
**ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾಯೋಜನೆ**
ಬಾಲಕಿಯರ ಸರ್ಕಾರಿ ಬಾಲಮಂದಿರ, ಸರ್ಕಾರಿ ವಿಶೇಷ ದತ್ತು ಸಂಸ್ಥೆ
ಜಿಲ್ಲಾ ಪಂಚಾಯತಿ ರಸ್ತೆ ಸರ್ಕಾರಿ ವಿಜ್ಞಾನ ಕಾಲೇಜು ಹಿಂಭಾಗ, ಚಿತ್ರದುರ್ಗ–577501
email: chitradurgaadoption@gmail.com ph: 08194-200336

**ಪೋಷಕರ ಪತ್ತೆಗಾಗಿ ಮನವಿ**

ತಂದೆ ತಾಯಿಯವರನ್ನು ಪತ್ತೆ ಹಚ್ಚಲು ನೆರವು ನೀಡಿ ಹೆಣ್ಣು ಶಿಶುವಿನ ವಿವರಗಳನ್ನು ಭಾವಚಿತ್ರದೊಂದಿಗೆ ನೀಡಲಾಗಿದೆ.

(1) ಹೆಸರು:– ನವಜಾತ ಹೆಣ್ಣು ಶಿಶು (2) ವಯಸ್ಸು:– ಸುಮಾರು 1 ದಿನದ ಮಗು (3) ಸಿಕ್ಕಿದ ಸ್ಥಳ:– ಜಿಲ್ಲಾ ಆಸ್ಪತ್ರೆಯ ವಾಂತಿ ಬೇದಿ ವಾರ್ಡ್ ಹತ್ತಿರ ಬೇಲಿಯೊಳಗೆ ರಾತ್ರಿ ಸುಮಾರು ರಾತ್ರಿ 10.45ಕ್ಕೆ ನವಜಾತ ಹೆಣ್ಣು ಶಿಶುವನ್ನು ಬಿಟ್ಟು ಹೋಗಿರುತ್ತಾರೆ. ಅಲ್ಲಿನ ಸಾರ್ವಜನಿಕರು ಹೆಣ್ಣುಶಿಶುವನ್ನು ರಕ್ಷಿಸಿ. ಚಿತ್ರದುರ್ಗ ಮಕ್ಕಳ ಕಲ್ಯಾಣ ಸಮಿತಿಗೆ ವರ್ಗಾಯಿಸಿರುತ್ತಾರೆ. (4) ಶಿಶು ದೊರೆತ ದಿನಾಂಕ:–06–10–2025 (5) ಮೈಬಣ್ಣ:– ಬಳಿಬಣ್ಣ (6) ತೂಕ:– 2.6. (7) ಶಿಶುವಿನ ಆರೋಗ್ಯ ಸ್ಥಿತಿ:–ಉತ್ತಮವಾಗಿದೆ. (8) ಶಿಶುವಿನ ವಿಷಯವಾಗಿ ಯಾರನ್ನು ಸಂಪರ್ಕಿಸಬೇಕು:– ಅಧೀಕ್ಷಕರು, ಸರ್ಕಾರಿ ವಿಶೇಷ ದತ್ತುಕೇಂದ್ರ, ಕೇರಾಫ್ ಬಾಲಕಿಯರ ಬಾಲಮಂದಿರ, ಕಲಾ ಕಾಲೇಜು ಹತ್ತಿರ, ಚಿತ್ರದುರ್ಗ–577501.ದೂರವಾಣಿ ಸಂಖ್ಯೆ:– 9945785784,7259129792 08194–200336

DIPR/CTA/KSMCA/422/2025-26
ಸಹಿ/– ಅಧೀಕ್ಷರು,
ಸರ್ಕಾರಿ ವಿಶೇಷ ದತ್ತು ಸಂಸ್ಥೆ, ಚಿತ್ರದುರ್ಗ.

**OFFICE OF THE PRINCIPAL CHIEF COMMISSIONER OF INCOME TAX**
Karnataka & Goa Region, Bengaluru, Central Revenue Building
No. 01, Queens Road, Bengaluru - 560001

**निर्माण कार्य करने की इच्छा की अभिव्यक्तिका प्रत्याहरण**

इस कार्यालय द्वारा दिनांक 07.10.2025 के समाचार पत्र के विज्ञापन एवं विभाग के आधिकारिक वेबसाइट "www.incometaxkarnatakagoa.gov.in" पर दिए गए विस्तृत जानकारी के क्रम में, 'प्लॉट संख्या 02, इन्फैंट्री रोड, बेंगलूरु - 560 001 पर आयकर विभाग के लिए आवासीय क्वार्टरों के निर्माण हेतु संकल्पनात्मक योजनाओं/डिज़ाइनों' के लिए मांगी गई "इच्छा अभिव्यक्ति" वापस ली जाती है ।

**WITHDRAWAL OF EXPRESSION OF INTEREST**

The 'Expression of Interest' called for "Conceptual plans/designs for construction of Residential Quarters for Income Tax Department at Plot No. 02, Infantry Road, Bengaluru – 560 001" by this office vide newspaper advertisement dated 07.10.2025 and as detailed in the official website of the Department website: **www.incometaxkarnatakagoa.gov.in**, **Stands Withdrawn.**

Sd/-
**Dy. Commissioner of Income Tax (HQ) (Infra.)**
For the Pr. Chief Commissioner of Income Tax
Karnataka and Goa region, Bengaluru.

**ಮೈಸೂರ್ ಸಕ್ಕರೆ ಕಂಪನಿ ಲಿಮಿಟೆಡ್**
CIN: U15428KA1933SGC000142
ನೋಂದಾಯಿತ ಕಚೇರಿ: ಮೈಸೂರು ಓಪನ್ ಏರ್ ಥಿಯೇಟರ್, ಸಕ್ಕರೆ ಟೌನ್, ಮಂಡ್ಯ–571 402,

**(ಷೇರುದಾರರಿಗೆ ಹೆಚ್ಚುವರಿ ಎಚ್ಚರಿಕೆ)**

ಈ ನೋಟಿಸ್ 2013 ರ ಕಂಪನಿಗಳು ಕಾಯ್ದೆ ಮತ್ತು ಅನುಷ್ಠಾನಾತ್ಮಕ ನಿಯಮಾವಳಿಗಳ ಪ್ರಕಾರ ಮೈಸೂರ್ ಸಕ್ಕರೆ ಕಂಪನಿ ಲಿಮಿಟೆಡ್‌ನ ಎಲ್ಲಾ ಷೇರುಹೋಲ್ಡರ್ಗಳಿಗಾಗಿ ಷೇರುಗಳ ವರ್ಗಾವಣೆಯು, KYC ಅನುಸರಣೆ ಮತ್ತು ಷೇರುಹೋಲ್ಡಿಂಗ್ ವಿವರಗಳ ಪರಿಷ್ಕರಣೆ ಕುರಿತು ತಿಳಿಸಲು ಹೊರಡಿಸಲಾಗಿದೆ.

(1) ಷೇರುಗಳ ವರ್ಗಾವಣೆ:– ಹಬ್ಬಿಸಿದ ಷೇರು ಹೋಲ್ಡರ ನಿವೃತ್ತಿ, ಸಾವು ಅಥವಾ ಇತರ ಯಾವುದೇ ಕಾರಣದಿಂದ ಷೇರುಗಳ ವರ್ಗಾವಣೆ ಬಗ್ಗೆ ಕಂಪನಿಗೆ ಯಾವುದೇ ಮಾಹಿತಿಯನ್ನು ನೀಡದಿದ್ದ ಷೇರುಹೋಲ್ಡರ್ಸ್‌ಳು ಅಗತ್ಯವಾದ ದಾಖಲೆಗಳನ್ನು ಶೀಘ್ರದಲ್ಲಿ ಸಲ್ಲಿಸಲು ವಿನಂತಿಸಲಾಗುತ್ತದೆ. As per the provisions of Section 56 of the Companies Act, 2013, and Regulation 40 of SEBI (Listing Obligations and Disclosure Requirements) Regulations, 2015, ಎಲ್ಲಾ ಕಾಯ್ದೆಗಳು ಮತ್ತು ನಿಯಮಾವಳಿಗಳ ಪ್ರಕಾರ ಷೇರುಗಳ ವರ್ಗಾವಣೆ ಪ್ರಕ್ರಿಯೆ ಮುಂದುವರಿಯಬಹುದು. ಷೇರುಹೋಲ್ಡರ್‌ನ ಸಾವು ಪ್ರಕರಣದಲ್ಲಿ, ಉಳಿದ ಸದಸ್ಯ, ಕಾನೂನು ವಾರಸುದಾರರು ಅಥವಾ ನಾಮ ನಿಯೋಜಿತ ವ್ಯಕ್ತಿ ಅಗತ್ಯ ದಾಖಲೆಗಳನ್ನು ಒದಗಿಸಬೇಕಾಗಿರುತ್ತದೆ, ಉದಾಹರಣೆಗೆ ಮರಣ ಪ್ರಮಾಣಪತ್ರ, ಉತ್ತರಾಧಿಕಾರ ಪ್ರಮಾಣಪತ್ರ ಅಥವಾ ಕಾನೂನು ಉತ್ತರಾಧಿಕಾರಿ ಪ್ರಮಾಣಪತ್ರ,

(2) KYC ಅನುಸರಣೆ:– ನಿಯಂತ್ರಕ ಅಗತ್ಯತೆಗಳ ಪ್ರಕಾರ, ಷೇರುದಾರರು ತಮ್ಮ KYC ವಿವರಗಳನ್ನು ನವೀಕರಿಸಬೇಕಾಗುತ್ತದೆ, ಇದರಲ್ಲಿ PAN, ಬ್ಯಾಂಕ್ ಖಾತೆ ವಿವರಗಳು, ಇಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆ, ಕಂಪನಿ ಮತ್ತು ಠೇವಣಿ ಪಾಲುದಾರರೊಂದಿಗೆ (ಡಿಮೆಟಿರಿಯಲೈಸ್ಡ್ ಷೇರುಗಳಿಗಾಗಿ) Depository Participant (for dematerialized shares). ನಿಗದಿತ ಸಮಯದೊಳಗೆ KYC ವಿವರಗಳನ್ನು ಷೇರುದಾರರು ನವೀಕರಿಸದಿದ್ದರೆ, ಕಂಪನಿಯು ಕಾನೂನಿನ ಪ್ರಕಾರ ಅವರ ಪರವಾಗಿ ಅಗತ್ಯ ಅನುಸರಣೆಯೊಂದಿಗೆ ಮುಂದುವರಿಯಬಹುದು.

(3) ಷೇರುದಾರರ ವಿವರಗಳ ನವೀಕರಣ:– ಸರಿಯಾದ ದಾಖಲೆಗಳು ಮತ್ತು ನಿಯಂತ್ರಕ ಮಾನದಂಡಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಷೇರುದಾರರು ತಮ್ಮ ಷೇರುದಾರರ ಮಾದರಿಯನ್ನು ಕಂಪನಿಯೊಂದಿಗೆ ದೃಢೀಕರಿಸಲು ಮತ್ತು ನವೀಕರಿಸಲು ವಿನಂತಿಸಲಾಗಿದೆ.

ಯಾವುದೇ ಅನನುಕೂಲತೆಯನ್ನು ತಪ್ಪಿಸಲು ಷೇರುದಾರರಿಗೆ ಈ ಔಪಚಾರಿಕತೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಸೂಚಿಸಲಾಗಿದೆ.

**ಮಂಡಳಿಯ ಆದೇಶದ ಮೇರೆಗೆ, ಮೈಸೂರ್ ಸಕ್ಕರೆ ಕಂಪನಿ ಲಿಮಿಟೆಡ್.**
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/505/2025–26

**ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)

**ಅಲ್ಪಾವಧಿ ಟೆಂಡರ್ ಪ್ರಕಟಣೆ**
**ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ**

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 2025–26 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಪಡೆಯುವ ಮಾನವ ಸೇವೆಗಳಿಗೆ "ಶೇಕಡಾವಾರು ದರಗಳಲ್ಲಿ" ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರರಿಂದ ಟೆಂಡರ್ ಆಹ್ವಾನಸಲಾಗಿದೆ. ಟೆಂಡರ್ ಗಿಟ್ಟ ಮೊತ್ತ ರೂ.2.42 ಲಕ್ಷಗಳಿಂದ ರೂ 171.03 ಲಕ್ಷಗಳಿದ್ದು, ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ದಿ: 24.10.2025 ರವರೆಗೆ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://kppp.karnataka.gov.in/. ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

**ಸಹಿ/–** ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ– eeypd2tmk@gmail.com

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪೃಥ್ವಿ ಶಾಮನೂರು, ಹೃತಿಕ ಶ್ರೀನಿವಾಸ್

# ತೆರೆಗೆ ಬರಲು ಸಜ್ಜಾದ 'ಉಡಾಳ'

**'ಪದವಿಪೂರ್ವ'** ಸಿನಿಮಾದಲ್ಲಿ ನಾಯಕನಾಗಿ ನಟಿಸಿದ್ದ ಪೃಥ್ವಿ ಶಾಮನೂರು ಹೊಸ ಸಿನಿಮಾ 'ಉಡಾಳ' ತೆರೆಗೆ ಬರಲು ಸಜ್ಜಾಗಿದೆ. ಇತ್ತೀಚೆಗೆ ಸಿನಿಮಾದ ಟೀಸರ್ ಬಿಡುಗಡೆಯಾಗಿದೆ.

ಯೋಗರಾಜ್ ಸಿನಿಮಾಸ್ ಹಾಗೂ ರವಿ ಶಾಮನೂರು ಫಿಲಂಸ್ ಲಾಂಛನದಲ್ಲಿ ದಾವಣಗೆರೆಯ ರವಿ ಶಾಮನೂರು ಹಾಗೂ ಯೋಗರಾಜ್ ಭಟ್ ಈ ಸಿನಿಮಾ ನಿರ್ಮಿಸಿದ್ದಾರೆ. ಯೋಗರಾಜ್ ಭಟ್ ಅವರ ಜೊತೆ ಸಹ ನಿರ್ದೇಶಕರಾಗಿದ್ದ ಅಮೋಲ್ ಪಾಟೀಲ್ ಈ ಸಿನಿಮಾ ನಿರ್ದೇಶಿಸಿದ್ದಾರೆ. ಇದು ಅವರು ನಿರ್ದೇಶಿಸುತ್ತಿರುವ ಚೊಚ್ಚಲ ಸಿನಿಮಾ. ಉತ್ತರ ಕರ್ನಾಟಕದ ಹಿನ್ನೆಲೆ ಧ್ವನಿಯಲ್ಲಿ ಟೀಸರ್ ಮೂಡಿಬಂದಿದೆ. ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಪೂರ್ಣಗೊಳಿಸಿರುವ ಚಿತ್ರತಂಡ ರಿಲೀಸ್‌ಗೆ ತಯಾರಿ ಆರಂಭಿಸಿದೆ. ಇದೊಂದು ಉತ್ತರ ಕರ್ನಾಟಕ ಭಾಗದ ಚಿತ್ರವಾಗಿದ್ದು, ಇಡೀ ಚಿತ್ರೀಕರಣ ವಿಜಯಪುರದಲ್ಲೇ ನಡೆದಿದೆ.

ಈ ಚಿತ್ರದಲ್ಲಿ ಪೃಥ್ವಿ ಗೈಡ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹೃತಿಕ ಶ್ರೀನಿವಾಸ್ 'ಉಡಾಳ' ಚಿತ್ರದ ನಾಯಕಿ. ಬಲ ರಾಜವಾಡಿ, ಮಾಳು ನಿಪ್ನಾಳ್, ಹರೀಶ್ ಹಿರಿಯೂರು, ಬಿರಾದಾರ್, ಸುಮಿತ್ ಸಂಕೋಜಿ, ವಾದಿರಾಜ ಬಬ್ಲಾದಿ, ಪ್ರವೀಣ್ ಗಸ್ತಿ, ದಯಾನಂದ ಬೀಳಗಿ, ರೇಣುಕ, ಶ್ರೀಧರ್, ದಾನಪ್ಪ, ಶಿಲ್ಪ ಶಾಂತಕುಮಾರ್, ಸೋನಿಯಾ ಮುಂತಾದವರು ತಾರಾಬಳಗದಲ್ಲಿದ್ದಾರೆ. ಉತ್ತರ ಕರ್ನಾಟಕ ಭಾಗದ ದೊಡ್ಡ ಮಟ್ಟದ ಪಕ್ಕಾ ಕಮರ್ಷಿಯಲ್ ಜಾನರ್ ಚಿತ್ರ ಇದಾಗಿದೆ ಎಂದಿದೆ ಚಿತ್ರತಂಡ. ಲವ್, ಕಾಮಿಡಿ ಸೇರಿದಂತೆ ಎಲ್ಲಾ ಅಂಶಗಳು ಈ ಚಿತ್ರದಲ್ಲಿದೆ. ಪೃಥ್ವಿಯ 'ಪದವಿಪೂರ್ವ' ಚಿತ್ರವನ್ನೂ ರವಿ ಶಾಮನೂರು ಹಾಗೂ ಯೋಗರಾಜ್ ಭಟ್ ನಿರ್ಮಾಣ ಮಾಡಿದ್ದರು.

ಚಿತ್ರದಲ್ಲಿ ಯೋಗರಾಜ್ ಭಟ್ ಬರೆದಿರುವ ಐದು ಹಾಡುಗಳಿದ್ದು, ಚೇತನ್ ಡ್ಯಾವಿ ಸಂಗೀತ ನೀಡಿದ್ದಾರೆ. 'ದ್ವಾಪರ' ಹಾಡಿದ್ದ ಜಸ್ಕರಣ್ ಸಿಂಗ್, ಉತ್ತರ ಕರ್ನಾಟಕದ ಮಾಳು ನಿಪ್ನಾಳ್, ಬಾಳು ಬೆಳಗುಂದಿ, ಕರಿಬಸವ, ಸೃಷ್ಟಿ ಶಾಮನೂರು ಮತ್ತು ಚೇತನ್ ಸೋಸ್ಕ ಹಾಡಿಗೆ ದನಿಯಾಗಿದ್ದಾರೆ. ಶಿವಶಂಕರ್ ನೂರಂಬಡ ಛಾಯಾಚಿತ್ರಗ್ರಹಣ, ಮಧು ತುಂಬಕೆರೆ ಸಂಕಲನ, ಅರ್ಜುನ್ ರಾಜ್, ವಿನೋದ್ ಸಾಹಸ ನಿರ್ದೇಶನ ಹಾಗೂ ಭಜರಂಗಿ ಮೋಹನ್, ರಘು ಅವರ ನೃತ್ಯ ನಿರ್ದೇಶನ ಚಿತ್ರಕ್ಕಿದೆ.

# ನ.21ಕ್ಕೆ ಮಾರುತ ತೆರೆಗೆ

ದುನಿಯಾ ವಿಜಯ್

**ಎಸ್.ನಾರಾಯಣ್** ನಿರ್ದೇಶಿಸಿ ದುನಿಯಾ ವಿಜಯ್ ನಟಿಸಿರುವ 'ಮಾರುತ' ಚಿತ್ರದ ಬಿಡುಗಡೆ ಮುಂದಕ್ಕೆ ಹೋಗಿದೆ. ಅ.31ಕ್ಕೆ ಚಿತ್ರ ತೆರೆಗೆ ಬರಲಿದೆ ಎಂದು ಈ ಹಿಂದೆ ಚಿತ್ರತಂಡ ಹೇಳಿತ್ತು. ಆದರೆ ಇದೀಗ ಬಿಡುಗಡೆ ದಿನಾಂಕ ಬದಲಾಗಿದ್ದು ನ.21ಕ್ಕೆ ಚಿತ್ರ ತೆರೆ ಕಾಣಲಿದೆ.

'ಪ್ರಸ್ತುತ ಚಿತ್ರಮಂದಿರಗಳ ಅಭಾವವಿರುವ ಕಾರಣ ಚಿತ್ರದ ಬಿಡುಗಡೆಯನ್ನು ಮೂರು ವಾರ ಮುಂದೂಡಲಾಗಿದೆ' ಎಂದು ಚಿತ್ರತಂಡ ತಿಳಿಸಿದೆ. ಕೆ.ಮಂಜು, ರಮೇಶ್ ಯಾದವ್ ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ಚಿತ್ರವನ್ನು ನಿರ್ಮಿಸಿದ್ದಾರೆ. ಶ್ರೇಯಸ್ ಮಂಜುಗೆ ಬೃಂದಾ ಆಚಾರ್ಯ ಜೋಡಿಯಾಗಿದ್ದಾರೆ. ಸಾಧು ಕೋಕಿಲ, ನಿಶ್ವಿಕಾ ನಾಯ್ಡು, ರಂಗಾಯಣ ರಘು, ತಾರಾ ಅನುರಾಧ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಮಂಜು ಪಾವಗಡ, ಚಿತ್ರಾ ಶೆಣೈ, ಸುಜಯ್ ಶಾಸ್ತ್ರಿ ಮುಂತಾದವರ ತಾರಾಬಳಗವಿರುವ ಈ ಚಿತ್ರದ ವಿಶೇಷ ಪಾತ್ರದಲ್ಲಿ ವಿ.ರವಿಚಂದ್ರನ್ ನಟಿಸಿದ್ದಾರೆ.

'ಸಾಮಾಜಿಕ ಜಾಲತಾಣ ಬಳಕೆ ಕುರಿತು ಜಾಗೃತಿ ಮೂಡಿಸುವ ಕಮರ್ಷಿಯಲ್ ಸಿನಿಮಾ. ಸಾಮಾಜಿಕ ಜಾಲತಾಣಗಳಿಂದ ಎಷ್ಟು ಉಪಯೋಗವಿದೆಯೋ, ಅದಕ್ಕಿಂತ ಹೆಚ್ಚು ಅಪಾಯವಿದೆ. ಈ ನಿಟ್ಟಿನಲ್ಲಿ ಪೋಷಕರು ಯುವಜನತೆಯ ಮೇಲೆ ಹೆಚ್ಚು ಗಮನ ನೀಡಬೇಕು ಎಂಬ ಸಂದೇಶವಿದೆ' ಎಂದು ನಿರ್ದೇಶಕ ಎಸ್ ನಾರಾಯಣ್ ಹೇಳಿದ್ದಾರೆ.

ಎಸ್.ನಾರಾಯಣ್ ಹಾಗೂ ಜೆಸ್ಸಿಗಿಫ್ಟ್ ಸಂಗೀತ ನೀಡಿದ್ದು, ಪಿ.ಕೆ.ಹೆಚ್. ದಾಸ್ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಯಾದವ್ ಸಂಕಲನವಿದೆ.

ಅತುಲ್ಯ ರವಿ, ಹರೀಶ್ ಕಲ್ಯಾಣ್

# ಆಯಿಲ್ ಮಾಫಿಯಾ ಸುತ್ತಲಿನ 'ಡೀಸೆಲ್'

**ತಮಿಳಿನ** ಆ್ಯಕ್ಷನ್ ಥ್ರಿಲ್ಲರ್ ಸಿನಿಮಾ 'ಡೀಸೆಲ್' ಅ.17ರಂದು ತೆರೆಕಾಣುತ್ತಿದೆ. ಕನ್ನಡದಲ್ಲಿಯೂ ಡಬ್ ಆಗಿ ಈ ಸಿನಿಮಾ ರಿಲೀಸ್ ಆಗಿಲಿದೆ.

ಷಣ್ಮುಗಂ ಮುತ್ತುಸಾಮಿ ಈ ಸಿನಿಮಾವನ್ನು ಬರೆದು ನಿರ್ದೇಶಿಸಿದ್ದಾರೆ. ಹರೀಶ್ ಕಲ್ಯಾಣ್ ಹಾಗೂ ಅತುಲ್ಯ ರವಿ ಜೋಡಿಯಾಗಿ ಸಿನಿಮಾದಲ್ಲಿ ನಟಿಸಿದ್ದಾರೆ. 'ಡೀಸೆಲ್, ಪೆಟ್ರೋಲ್ ದಿನನಿತ್ಯ ಬಳಸುವ ವಸ್ತುಗಳು. ಇದರೊಳಗಿರುವ ಮಾಫಿಯಾವನ್ನು ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ. ನೈಜ ಘಟನೆ ಕುರಿತ ಕಥೆಯನ್ನು ಚಿತ್ರದಲ್ಲಿ ಹೇಳಲಾಗಿದೆ' ಎಂದರು ಷಣ್ಮುಗಂ.

ಅತುಲ್ಯ ರವಿ ಈ ಸಿನಿಮಾದಲ್ಲಿ ಲಾಯರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಹಿಂದೆ ಪ್ರೇಮಕಥೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ಹರೀಶ್ ಕಲ್ಯಾಣ್ ಈ ಸಿನಿಮಾದಲ್ಲಿ ಆ್ಯಕ್ಷನ್ ಹೀರೊ ಆಗಿದ್ದಾರೆ. ವಿನಯ್ ರೈ, ಸಚಿನ್ ಕೇಧೇಕರ್, ಸಾಯಿ ಕುಮಾರ್, ಅನನ್ಯ, ಕರುಣಾಸ್, ಬೋಸ್ ವೆಂಕಟ್, ರಮೇಶ್ ತಿಲಕ್, ಕಾಳಿ ವೆಂಕಟ್, ವಿವೇಕ್ ಪ್ರಸನ್ನ, ಜಾಕಿರ್ ಹುಸೇನ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರವನ್ನು ಥರ್ಡ್ ಐ ಎಂಟರ್‌ಟೇನ್ಮೆಂಟ್ ಹಾಗೂ ಎಸ್.ಪಿ.ಸಿನಿಮಾಸ್ ನಿರ್ಮಾಣ ಮಾಡಿದೆ. ಧಿಬು ನಿನಾನ್ ಥಾಮಸ್ ಸಂಗೀತ, ಎಂ.ಎಸ್.ಪ್ರಭು ಮತ್ತು ರಿಚರ್ಡ್ ಎಂ.ನಾಥನ್ ಛಾಯಾಚಿತ್ರಗ್ರಹಣ, ಸ್ಯಾನ್ ಲೋಕೇಶ್ ಸಂಕಲನ ಚಿತ್ರಕ್ಕಿದೆ.

# ಚಿಂದಿ ಆಯುವ ಮಹಿಳೆಯ ಕಥೆ

ರೇಖಾ ಸಾಗರ್, ಪುರುಷೋತ್ತಮ್, ಗಣೇಶ್ ರಾವ್

**ಹೊಟ್ಟೆಪಾಡಿಗಾಗಿ** ಚಿಂದಿ ಆಯುವ ಮಹಿಳೆಯ ಕಥೆಯನ್ನು ಹೊಂದಿರುವ 'ಬೀದಿ ಬದುಕು' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪುರುಷೋತ್ತಮ್ ಓಂಕಾರ್ ಚಿತ್ರದ ನಿರ್ದೇಶಕ.

'ನಾನು ಈ ಹಿಂದೆ ಒಂದಷ್ಟು ಭಕ್ತಿ ಪ್ರಧಾನ ಸಿನಿಮಾಗಳನ್ನು ನಿರ್ದೇಶಿಸಿದ್ದೆ. ಈ ಸಲ ಸಾಮಾಜಿಕ ಕಳಕಳಿ ಹೊಂದಿರುವ ಚಿತ್ರವನ್ನು ಕೈಗೆತ್ತಿಕೊಂಡಿದ್ದೇನೆ. ಕುಡುಕ ಗಂಡನ ಉಪಟಳದ ನಡುವೆ ತನ್ನ ಮಗನಿಗಾಗಿ ಕಷ್ಟಪಡುವ ತಾಯಿಯೊಬ್ಬಳ ಕಥೆಯಿದು. ತನ್ನ ಮಗನಿಗಾಗಿ ಆಕೆ ಏನೆಲ್ಲ ಹೋರಾಟ ಮಾಡುತ್ತಾಳೆ, ಅವಮಾನ ಅನುಭವಿಸುತ್ತಾಳೆ ಎಂಬುದೇ ಚಿತ್ರಕಥೆ. ನಿಜವಾದ ಕೊಳೆಗೇರಿ, ಗುಡಿಸಲುಗಳು, ಸ್ಮಶಾನ ಹಾಗೂ ಆಸ್ಪತ್ರೆಯಲ್ಲಿ ಚಿತ್ರೀಕರಿಸಿದ್ದೇವೆ' ಎಂದರು ನಿರ್ದೇಶಕ.

ನಟಿ ರೇಖಾ ಸಾಗರ್ ಚಿತ್ರದ ನಾಯಕಿಯಾಗಿದ್ದು, ಜತೆಗೆ ಬಂಡವಾಳವನ್ನೂ ಹೂಡಿದ್ದಾರೆ. ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರಕ್ಕೆ ರಾಜ್ ಭಾಸ್ಕರ್ ಸಂಗೀತ, ಮುತ್ತುರಾಜ್ ಛಾಯಾಚಿತ್ರಗ್ರಹಣ, ಅನಿಲ್ ಸಂಕಲನವಿದೆ.

# ಗಿರೀಶ ಮಟ್ಟೆಣ್ಣವರಗೆ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಮಾಧ್ಯಮಗಳಿಗೆ ನೀಡಿದ್ದ ಹೇಳಿಕೆಯೊಂದಕ್ಕೆ ಸಂಬಂಧಿಸಿ ಅ.18ರಂದು ತನಿಖಾಧಿಕಾರಿ ಎದುರು ವಿಚಾರಣೆಗೆ ಬರಲು ಸೂಚಿಸಿ ಸೌಜನ್ಯಾ ಪರ ಹೋರಾಟಗಾರ ಗಿರೀಶ ಮಟ್ಟೆಣ್ಣವರ ಅವರಿಗೆ ಬೆಳ್ತಂಗಡಿ ಪೊಲೀಸರು ನೋಟಿಸ್ ಜಾರಿಗೊಳಿಸಿದ್ದಾರೆ.

'ಬೆಂಗಳೂರಿನಲ್ಲಿರುವ ಮಟ್ಟೆಣ್ಣವರ ಮನೆಗೆ ಭೇಟಿ ನೀಡಿ, ನೋಟಿಸ್ ಜಾರಿಗೊಳಿಸಿದ್ದಾರೆ. ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಪ್ರಕರಣ ದಾಖಲಿಸಿದ ವೇಳೆ, ಮಾಧ್ಯಮಗಳ ಜೊತೆ ಮಾತನಾಡಿದ್ದ ಗಿರೀಶ, 'ತಿಮರೋಡಿ ಎಲ್ಲಿಯೂ ಪರಾರಿಯಾಗಿಲ್ಲ, ಅವರ ಜೊತೆ ಮಾತನಾಡಿದ್ದೇನೆ. ತಿಮರೋಡಿ ಅವರನ್ನು ಪತ್ತೆ ಹಚ್ಚಲು ಪೊಲೀಸರಿಗೆ ಸಾಮರ್ಥ್ಯ ಇಲ್ಲ' ಎಂದು ಟೀಕಿಸಿದ್ದರು' ಎಂದು ಮೂಲಗಳು ತಿಳಿಸಿವೆ.

# ಅಂಗವಿಕಲರ ನಕಲಿ ಕಾರ್ಡ್: ಶಿರಾ ಆಸ್ಪತ್ರೆ ನಂಟು?

**ಶಿರಾ:** ನಕಲಿ ದಾಖಲೆ ಸಲ್ಲಿಸಿ ಅಂಗವಿಕಲರ ಕೋಟಾದಡಿ ವೈದ್ಯಕೀಯ ಸೀಟು ಪಡೆಯಲು ಯತ್ನಿಸಿದ್ದ ಹಿರಿಯೂರು ತಾಲ್ಲೂಕಿನ ಜಯದೇವ್ ಎಂಬ ವಿದ್ಯಾರ್ಥಿ ವಿರುದ್ಧ ಶಿರಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿರಿಯೂರು ತಾಲ್ಲೂಕಿನ ಜಯದೇವ್, ಶಿರಾ ತಾಲ್ಲೂಕಿನ ಮದ್ದೇನಹಳ್ಳಿ ಗ್ರಾಮದ ವಿಳಾಸ ನೀಡಿ ಅಂಗವಿಕಲರ ಕಾರ್ಡ್ ಪಡೆದಿರುವುದು ತನಿಖೆಯ ವೇಳೆ ಪತ್ತೆಯಾಗಿದೆ.

ಕಾರ್ಡ್ ವಿತರಿಸಿದ್ದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ಡೇಟಾ ಆಪರೇಟರ್ ನಾಗರಾಜು ಅವರನ್ನು ವಶಕ್ಕೆ ಪಡೆಯಲಾಗಿದೆ. ಪೊಲೀಸರು, ಕಾರ್ಡ್ ವಿತರಿಸುವ ತಂಡದಲ್ಲಿದ್ದ ವೈದ್ಯರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

# ಮತಕಳವು: ಎಸ್ಐಟಿ ಪರಿಶೀಲನೆ

**ಕಲಬುರಗಿ:** ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದ್ದ ಮತಕಳವು ಯತ್ನ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳ ಎಸ್ಐಟಿ ತಂಡ ನಗರದ ಐದು ಕಡೆ ದಾಳಿ ಮಾಡಿ ಮಾಹಿತಿ ಕಲೆಹಾಕಿದೆ.

ನಗರದ ರೋಜಾ ಬಡಾವಣೆ, ಜಂಜಂ ಕಾಲೊನಿ, ರಾಮನಗರ ಬಡಾವಣೆ, ಯಾದುಲ್ ಕಾಲೊನಿಯ ಕೆಲವರ ಮನೆಗಳಿಗೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪಟ್ಟಿಯಿಂದ 6 ಸಾವಿರದಷ್ಟು ಹೆಸರು ತೆಗೆದಿದ್ದ ಆರೋಪ ಕುರಿತು ಪ್ರಕರಣ ದಾಖಲಾಗಿತ್ತು.

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**
ಹಿಂದಿನ ಅಂತ್ಯ: 25,145
ಇಂದಿನ ಅಂತ್ಯ: 25,323
ದಿನದ ಕನಿಷ್ಠ: 25,365
178

**ಮೊಟ್ಟೆ ಧಾರಣೆ** (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹570
12 ಕ್ಕೆ ₹75
ಮೈಸೂರು: 100 ಕ್ಕೆ ₹573

**ರಾಮನಗರ ರೇಷ್ಮೆಗೂಡು**
ಮಿಶ್ರತಳಿ(ಸಿ.ಬಿ) ₹385-633
ದ್ವಿತಳಿ (ಬಿ.ವಿ) ₹336-800

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹178
ಗುಡ್ ಲಾಟ್ ₹165

**ಮುದ್ರಮನೆ ಕಾಫಿ** (50 ಕೆಜಿಗೆ)
ಎಪಿ ₹29500
ಎಸಿ ₹15200
ಆರ್‌ಪಿ ₹19500
ಆರ್‌ಸಿ ₹11150

**ಮುಂಬೈ ಖಾದ್ಯ ತೈಲ** (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1400 (1400)
ಸೋಯಾ (ರಿಫೈನ್ಡ್) ₹1285 (1285)
ಸೂರ್ಯಕಾಂತಿ (ರಿಫೈನ್ಡ್) ₹1475 (1475)
ಪಾಮೋಲಿನ್ ₹1285 (1290)

# ಬೆಂಗಳೂರಿನಲ್ಲಿ ಕೆ.ಜಿ ಬೆಳ್ಳಿ ₹2.06 ಲಕ್ಷ

ಪ್ರಜಾವಾಣಿ ವಾರ್ತೆ/ಪಿಟಿಐ

**ನವದೆಹಲಿ/ಬೆಂಗಳೂರು:** ಬೆಂಗಳೂರಿನ ರಿಟೇಲ್ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಕೆ.ಜಿ ಬೆಳ್ಳಿ ಧಾರಣೆ ₹2.06 ಲಕ್ಷ ಆಗಿದೆ.

'ಬೆಂಗಳೂರಿನಲ್ಲಿ 3,500ಕ್ಕೂ ಹೆಚ್ಚು ಚಿನ್ನಾಭರಣ ಅಂಗಡಿಗಳು ಇವೆ. ರಿಟೇಲ್ ಮಾರುಕಟ್ಟೆಯಲ್ಲಿ ಬೆಳ್ಳಿ ಕೆ.ಜಿಗೆ ₹2.07 ಲಕ್ಷದವರೆಗೂ ಮಾರಾಟವಾಗಿದೆ' ಎಂದು ಬೆಂಗಳೂರು ಜ್ಯುವೆಲರ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿ ಆರ್. ಶ್ರೀನಿವಾಸ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ನವದೆಹಲಿಯ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1 ಸಾವಿರದಷ್ಟು ಹೆಚ್ಚಳವಾಗಿ, ₹1,31,800 ಆಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,31,200ರಂತೆ ಮಾರಾಟವಾಗಿದೆ.

ಆದರೆ, ಬೆಳ್ಳಿ ಧಾರಣೆ ಕೆ.ಜಿಗೆ ₹3 ಸಾವಿರ ಇಳಿಕೆಯಾಗಿ, ₹1.82 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದೀಪಾವಳಿ ಕಾರಣದಿಂದಾಗಿ ಸಣ್ಣ ಹೂಡಿಕೆದಾರರಿಂದ ಮತ್ತು ಆಭರಣ ತಯಾರಕರಿಂದ ಚಿನ್ನದ ಖರೀದಿ ಹೆಚ್ಚಳವಾಗಿದೆ. ಹೀಗಾಗಿ ದರ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

**ಅಡಿಕೆ ಧಾರಣೆ**

| ಕುಮಟಾ | | ಶಿವಮೊಗ್ಗ | | | |
|---|---|---|---|---|---|
| ಚಾಲಿ | 38869-46400 | ಬೆಟ್ಟೆ | 55572-77770 | ಕೆಂಪುಗೋಟು | 31800-42099 |
| ಚಿಪ್ಪು | 27099-33869 | ಗೊರಬಲು | 19000-46199 | ರಾಶಿ | 54099-61939 |
| ಕೋಕ | 9169-29999 | ಹೊಸತು | 48566-66699 | ತಟ್ಟಿಬೆಟ್ಟೆ | 34619-59699 |
| ಫ್ಯಾಕ್ಟರಿ | 6490-26820 | ರಾಶಿ | 51509-66899 | **ಶಿರಸಿ** | |
| ಹಳೆಚಾಲಿ | 41099-45498 | ಸರಕು | 54099-99999 | ಬೆಟ್ಟೆ | 40599-51099 |
| **ಪುತ್ತೂರು** | | **ಸಿದ್ದಾಪುರ** | | ಬಿಳಿಗೋಟು | 30109-36970 |
| ಕೋಕ | 18000-30500 | ಬಿಳಿಗೋಟು | 26999-35489 | ಚಾಲಿ | 42198-48099 |
| ಹೊಸತು | 26000-36000 | ಚಾಲಿ | 37099-45379 | ಕೆಂಪುಗೋಟು | 29169-36299 |
| ಹಳತು | 40000-53000 | ಕೋಕ | 20699-31289 | ರಾಶಿ | 56399-59499 |

# ಭಾರತ ವಿರುದ್ಧ ಚೀನಾ ದೂರು

## ಭಾರತದ ಕ್ರಮ ತನ್ನ ನ್ಯಾಯಸಮ್ಮತ ಹಿತಾಸಕ್ತಿಗೆ ವಿರುದ್ಧ ಎಂದು ತಕರಾರು

**ನವದೆಹಲಿ (ಪಿಟಿಐ):** ವಿದ್ಯುತ್ ಚಾಲಿತ ವಾಹನಗಳಿಗೆ ಹಾಗೂ ಬ್ಯಾಟರಿಗಳಿಗೆ ಭಾರತವು ಸಬ್ಸಿಡಿ ನೀಡುತ್ತಿರುವ ವಿಚಾರವಾಗಿ ಚೀನಾ ದೇಶವು ವಿಶ್ವ ವ್ಯಾಪಾರ ಸಂಘಟನೆಗೆ (ಡಬ್ಲ್ಯುಟಿಒ) ದೂರು ಸಲ್ಲಿಸಿದೆ.

ಭಾರತದ ಹಲವು ಕ್ರಮಗಳು ಡಬ್ಲ್ಯುಟಿಒ ರೂಪಿಸಿರುವ ವಿವಿಧ ನಿಯಮಗಳ ಉಲ್ಲಂಘನೆಯಂತೆ ಇವೆ ಎಂದು ಚೀನಾ ದೂರಿದೆ. ಭಾರತದ ಕ್ರಮಗಳು ಭಾರತದ ಉದ್ಯಮಗಳಿಗೆ ಹೆಚ್ಚು ಅನುಕೂಲಕರ ಆಗುವಂತೆ ಇವೆ, ಚೀನಾದ ನ್ಯಾಯಸಮ್ಮತವಾದ ಹಿತಾಸಕ್ತಿಗಳಿಗೆ ಅವು ಅನುಕೂಲಕರವಾಗಿ ಇಲ್ಲ ಎಂದು ಚೀನಾದ ವಾಣಿಜ್ಯ ಸಚಿವಾಲಯ ಆರೋಪಿಸಿದೆ.

ತಾನು ತಯಾರಿಸುವ ಇ.ವಿ.ಗಳನ್ನು ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲು ಚೀನಾ ಬಯಸಿದ್ದು, ಈ ಸಂದರ್ಭದಲ್ಲಿ ಅದು ಈ ದೂರು ಸಲ್ಲಿಸಿದೆ. ಅಲ್ಲದೆ, ದ್ವಿಪಕ್ಷೀಯ ಸಂಬಂಧವನ್ನು ಸಹಜಗೊಳಿಸಲು ಎರಡೂ ದೇಶಗಳು ಮುಂದಡಿ ಇರಿಸಿದ ನಂತರದಲ್ಲಿ ಚೀನಾ ಈ ರೀತಿಯ ಕ್ರಮಕ್ಕೆ ಮುಂದಾಗಿದೆ.

ಚೀನಾದ ಇ.ವಿ. ತಯಾರಿಕಾ ಕಂಪನಿಗಳು ಭಾರತದ ಮಾರುಕಟ್ಟೆಯನ್ನು ಬಹಳ ಪ್ರಮುಖ ಎಂದು ಪರಿಗಣಿಸಿವೆ. ಈಚೆಗಿನ ಕೆಲವು ವರದಿಗಳ ಪ್ರಕಾರ ಚೀನಾದಲ್ಲಿ ಇ.ವಿ. ತಯಾರಿಕೆಯು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ, ಅಲ್ಲಿನ ಮಾರುಕಟ್ಟೆಯಲ್ಲಿ ಅವುಗಳ ಮಾರಾಟ ಕಡಿಮೆ ಆಗಿದೆ. ಅಲ್ಲಿನ ಇ.ವಿ ಕಂಪನಿಗಳ ಲಾಭವೂ ಕಡಿಮೆ ಆಗಿದೆ. ಹೀಗಾಗಿ ಅವು ಏಷ್ಯಾ ಮತ್ತು ಐರೋಪ್ಯ ಒಕ್ಕೂಟದ ಮಾರುಕಟ್ಟೆ ಮೇಲೆ ಕಣ್ಣಿಟ್ಟಿವೆ.

**ಮುಖ್ಯಾಂಶಗಳು**
- ಇ.ವಿ, ಬ್ಯಾಟರಿಗಳಿಗೆ ಸಬ್ಸಿಡಿ ನೀಡುತ್ತಿರುವ ವಿಚಾರವಾಗಿ ದೂರು
- ಭಾರತದಿಂದ ಡಬ್ಲ್ಯುಟಿಒ ನಿಯಮಗಳ ಉಲ್ಲಂಘನೆ ಎಂದು ಆರೋಪ
- ಟರ್ಕಿ, ಕೆನಡಾ, ಐರೋಪ್ಯ ಒಕ್ಕೂಟದ ವಿರುದ್ಧ ದೂರು

ಚೀನಾ ಸಲ್ಲಿಸಿರುವ ದೂರಿನ ವಿವರಗಳನ್ನು ಪರಿಶೀಲಿಸಲಾಗುತ್ತದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಅವರು ಹೇಳಿದ್ದಾರೆ.

ಟರ್ಕಿ, ಕೆನಡಾ ಮತ್ತು ಐರೋಪ್ಯ ಒಕ್ಕೂಟದ ವಿರುದ್ಧವೂ ಚೀನಾ ಇದೇ ಬಗೆಯ ದೂರು ಸಲ್ಲಿಸಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. 'ಅವರು ಭಾರತದ ಜೊತೆ ಸಮಾಲೋಚನೆ ನಡೆಸಲು ಬಯಸಿದ್ದಾರೆ' ಎಂದು ಅಧಿಕಾರಿ ತಿಳಿಸಿದ್ದಾರೆ.

ಡಬ್ಲ್ಯುಟಿಒ ನಿಯಮಗಳ ಪ್ರಕಾರ ವ್ಯಾಜ್ಯ ಇತ್ಯರ್ಥ ಪ್ರಕ್ರಿಯೆಯಲ್ಲಿ ಮೊದಲ ಹಂತವೆಂದರೆ ಸಮಾಲೋಚನೆ ನಡೆಸುವುದು. ಚೀನಾ ದೇಶವು ಭಾರತದ ಎರಡನೆಯ ಅತಿದೊಡ್ಡ ವಾಣಿಜ್ಯ ಪಾಲುದಾರ.

ಚೀನಾದ ಇ.ವಿ. ತಯಾರಕರು ವಿದೇಶಗಳಲ್ಲಿ ತುಸು ಪ್ರತಿರೋಧ ಎದುರಿಸುತ್ತಿದ್ದಾರೆ. ಐರೋಪ್ಯ ಒಕ್ಕೂಟವು ಚೀನಾದ ಇ.ವಿ.ಗಳ ಮಾರಾಟಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಅವುಗಳಿಗೆ ಶೇಕಡ 27ರಷ್ಟು ತೆರಿಗೆ ವಿಧಿಸಿದೆ.

ಭಾರತದಲ್ಲಿ ಕೇಂದ್ರ ಸರ್ಕಾರವು ಇ.ವಿ. ನೀತಿ ಹಾಗೂ ಉತ್ಪಾದನೆ ಆಧಾರಿತ ಉತ್ತೇಜನ ಯೋಜನೆ ಮೂಲಕ ದೇಶದಲ್ಲಿ ಇ.ವಿ. ತಯಾರಿಕೆಯನ್ನು ಹೆಚ್ಚಿಸಲು ಮುಂದಾಗಿದೆ.

# ಈರುಳ್ಳಿ ಧಾರಣೆ ತೀವ್ರ ಕುಸಿತ

## ಬೆಳಗಾವಿ, ಹುಬ್ಬಳ್ಳಿ ಎಪಿಎಂಸಿಗಳಲ್ಲಿ ಕ್ವಿಂಟಲ್‌ಗೆ ₹100ರಿಂದ ₹1,200 ದರ

• ಇಮಾಮ್‌ಹುಸೇನ್ ಗೂಡುನವರ

**ಬೆಳಗಾವಿ:** ಒಂದೆಡೆ ಅತಿವೃಷ್ಟಿಯಿಂದ ರಾಜ್ಯದಲ್ಲಿ ಈರುಳ್ಳಿ ಬೆಳೆ ಹಾನಿಯಾಗಿದೆ. ಮತ್ತೊಂದೆಡೆ ಜಮೀನಿನಲ್ಲಿ ಉಳಿದ ಅಷ್ಟಿಷ್ಟು ಬೆಳೆಗೂ ಉತ್ತಮ ದರ ಸಿಗುತ್ತಿಲ್ಲ. ಹೀಗಾಗಿ ಬೆಂಬಲ ಬೆಲೆ ಯೋಜನೆಯಡಿ ಈರುಳ್ಳಿ ಖರೀದಿಸಲು ಸರ್ಕಾರದಿಂದ ಕೇಂದ್ರಗಳನ್ನು ತೆರೆಯಬೇಕೆಂಬ ಬೇಡಿಕೆ ಹೆಚ್ಚಿದೆ.

'ಹೆಸರು, ಉದ್ದು, ಸೂರ್ಯಕಾಂತಿ ಮಾದರಿಯಲ್ಲೇ, ಈರುಳ್ಳಿಯನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಬೇಕು. ಕೆ.ಜಿಗೆ ₹50 ದರ ನೀಡಬೇಕು' ಎಂದು ರೈತ ಮುಖಂಡ ಚೂನಪ್ಪ ಪೂಜೇರಿ ಒತ್ತಾಯಿಸಿದ್ದಾರೆ.

**₹100ರಿಂದ ₹1,200 ದರ:** ಬೆಳಗಾವಿ ಎಪಿಎಂಸಿಗೆ ಬುಧವಾರ 15,991 ಕ್ವಿಂಟಲ್ ಈರುಳ್ಳಿ ಆವಕವಾಗಿದೆ. ಹುಬ್ಬಳ್ಳಿ ಎಪಿಎಂಸಿಗೆ ನಿತ್ಯ ಆವಕದ ಪ್ರಮಾಣ 12 ಸಾವಿರ ಕ್ವಿಂಟಲ್ ಇದೆ. ರಾಜ್ಯದಲ್ಲಿ ಬೆಳೆದ ಈರುಳ್ಳಿ ದರ ಎರಡೂ ಎಪಿಎಂಸಿಗಳಲ್ಲಿ ಬುಧವಾರ ₹100ರಿಂದ ₹1,200 ರವರೆಗೆ ಇತ್ತು.

ಮಹಾರಾಷ್ಟ್ರದಿಂದ ಬರುತ್ತಿರುವ ಈರುಳ್ಳಿ (ಹಳೇಗಡ್ಡೆ) ದರ ಮಾತ್ರ ಕ್ವಿಂಟಲ್‌ಗೆ ₹500ರಿಂದ ₹1,800ರವರೆಗೆ ಇದೆ. ಕಳೆದ ವರ್ಷ ಇದೇ ವೇಳೆ ಈರುಳ್ಳಿ ಕ್ವಿಂಟಲ್‌ಗೆ ₹500 ರಿಂದ ₹4,200 ದರಕ್ಕೆ ಮಾರಾಟವಾಗಿತ್ತು.

ಬೆಳಗಾವಿ ಎಪಿಎಂಸಿಗೆ ಬುಧವಾರ ಬಂದಿದ್ದ ಈರುಳ್ಳಿ
ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

'ಮಹಾರಾಷ್ಟ್ರದಲ್ಲಿ ಬೇಸಿಗೆಯಲ್ಲಿ ಬೆಳೆದಿದ್ದ ಈರುಳ್ಳಿಯದ್ದು ಹೇರಳ ಸಂಗ್ರಹವಿದೆ. ಅಲ್ಲಿಂದ ವಿವಿಧ ರಾಜ್ಯಗಳ ಮಾರುಕಟ್ಟೆಗೆ ಸರಬರಾಜು ಆಗುತ್ತಿದೆ. ಬಾಂಗ್ಲಾದೇಶಕ್ಕೆ ರಫ್ತು ನಿಂತಿದ್ದರಿಂದ ರಾಜ್ಯದ ಈರುಳ್ಳಿಗೆ ಬೇಡಿಕೆ ಕುಸಿದಿದೆ' ಎಂದು ಹುಬ್ಬಳ್ಳಿ ಎಪಿಎಂಸಿ ಕಾರ್ಯದರ್ಶಿ ಕೆ.ಎಚ್.ಗುರುಪ್ರಸಾದ ತಿಳಿಸಿದರು.

'ಹಿಂದಿನ ವರ್ಷ ಎಕರೆಗೆ 100 ಚೀಲ (ಒಂದು ಚೀಲ 50 ಕೆ.ಜಿ) ಇಳುವರಿ ಬಂದಿತ್ತು. ಈ ಸಲ ಅತಿವೃಷ್ಟಿಯಿಂದ 35 ಚೀಲ ಇಳುವರಿ ಬಂದಿದೆ. ಅದಕ್ಕೂ ಉತ್ತಮ ಧಾರಣೆ ಸಿಗುತ್ತಿಲ್ಲ' ಎಂದು ಬಾಗಲಕೋಟೆ ಜಿಲ್ಲೆಯ ಯಂಡಿಗೇರಿಯ ರೈತ ತಿರುಪತಿ ಮಾದರ ತಿಳಿಸಿದರು.

> **ಬೆಳಗಾವಿ ಜಿಲ್ಲೆಯಲ್ಲಿ 3,310 ಹೆಕ್ಟೇರ್‌ನಲ್ಲಿ ಈರುಳ್ಳಿ ಬೆಳೆಗೆ ಹಾನಿಯಾಗಿದೆ. ಈಗ ಉಳಿದ ಬೆಳೆಗೆ ಬೆಂಬಲ ಬೆಲೆ ನೀಡುವ ಕುರಿತು ಜಿಲ್ಲಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಮಾಡಲಾಗಿದೆ**
> **ಮಹಾಂತೇಶ ಮುರಗೋಡ,** ಜಂಟಿ ನಿರ್ದೇಶಕ, ತೋಟಗಾರಿಕೆ ಇಲಾಖೆ, ಬೆಳಗಾವಿ

> **ಕ್ವಿಂಟಲ್‌ಗೆ ₹2 ಸಾವಿರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟವಾದರೆ ಮಾತ್ರ ನಮಗೆ ಅನುಕೂಲ. ಈಗ ಕ್ವಿಂಟಲ್‌ಗೆ ₹600ರಿಂದ ₹700ಕ್ಕೆ ಮಾರುತ್ತಿದೆ**
> **ಮಂಜುನಾಥ ತೋಟಗಟ್ಟಿ,** ರೈತ

'₹2 ಲಕ್ಷ ವ್ಯಯಿಸಿ 10 ಎಕರೆಯಲ್ಲಿ ಈರುಳ್ಳಿ ಬೆಳೆದಿರುವೆ. ಸಾಮಾನ್ಯ ದಿನಗಳಲ್ಲಿ 1,000 ಚೀಲಗಳಷ್ಟು ಇಳುವರಿ ಬರುತ್ತಿತ್ತು. ಈ ಬಾರಿ ಅತಿವೃಷ್ಟಿಯಿಂದ ನಿರೀಕ್ಷಿತ ಫಸಲು ಬಂದಿಲ್ಲ' ಎಂದು ರಾಮದುರ್ಗ ತಾಲ್ಲೂಕಿನ ಸಾಲಾಪುರದ ರೈತ ಮಂಜುನಾಥ ತೋಟಗಟ್ಟಿ ಹೇಳಿದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

8th Death Anniversary
Date: 16-10-2025

Loving Memory of
Smt. A.V.Radha
W/o J. Haridasan
DOB: 13.01.1957 - DOD: 16.10.2017
Headmistress Vidhya Jyothi School B.T.M. 2nd Stage, Bengaluru-68

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

Wanted

ಬೇಕಾಗಿದ್ದಾರೆ: ಮಂಗಳೂರಿನ ಮೀನು ಮಾರಾಟ ಅಂಗಡಿಗೆ ಕಟ್ಟಿಂಗ್ ಹಾಗೂ ಕ್ಲೀನಿಂಗ್ ಮಾಡಲು ಹುಡುಗರು. ವೇತನ 20,000/-, ವಸತಿ ಲಭ್ಯವಿದೆ. 9343566638

ಪ್ರವಾಸ

Travel

08.12.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.11.2025 08.12.20225 ದುಬೈ,ಅಬುದಾಬಿ 5 ದಿನಗಳು. 24.12.2025 ಭೂತಾನ್ 8 ದಿನಗಳು. 26.11.2025 21.12.2025 ಗುಜರಾತ್ 8 ದಿನಗಳು. 26.11.2025 12.12.2025 ರಾಜಸ್ಥಾನ 9 ದಿನಗಳು. 22.11.2025 ಅಸ್ಸಾಂ,ಮೇಘಾಲಯ 9 ದಿನಗಳು. 11.11.2025 01.12.2025 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

**ಚಿಟಿಕೆ ಸುದ್ದಿ**

## ರೂಪಾಯಿ ಮೌಲ್ಯ 73 ಪೈಸೆ ಏರಿಕೆ

**ಮುಂಬೈ (ಪಿಟಿಐ):** ಬುಧವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 73 ಪೈಸೆ ಏರಿಕೆ ಆಗಿದೆ. ರೂಪಾಯಿ ಮೌಲ್ಯವು ಡಾಲರ್ ಎದುರು ₹88.08 ಆಗಿದೆ.

ಇದು ಕಳೆದ ನಾಲ್ಕು ತಿಂಗಳಿನಲ್ಲಿ ಒಂದು ದಿನದಲ್ಲಿ ರೂಪಾಯಿ ಕಂಡಿರುವ ಗರಿಷ್ಠ ಹೆಚ್ಚಳವಾಗಿದೆ. ರೂಪಾಯಿ ಮೌಲ್ಯದಲ್ಲಿನ ಏರಿಳಿತದಿಂದಾಗಿ ಆರ್‌ಬಿಐ ಮಧ್ಯ ಪ್ರವೇಶಿಸುವ ನಿರೀಕ್ಷೆ ಹೆಚ್ಚಳವಾಗಿದೆ. ಜೊತೆಗೆ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿರುವುದು, ಭಾರತ ಮತ್ತು ಅಮೆರಿಕದ ನಡುವೆ ವ್ಯಾಪಾರ ಮಾತುಕತೆ ಬಗ್ಗೆ ಆಶಾವಾದವನ್ನು ಹೂಡಿಕೆದಾರರು ಹೊಂದಿರುವುದು, ಕಚ್ಚಾ ತೈಲ ಬೆಲೆ ಇಳಿಕೆ ರೂಪಾಯಿ ಮೌಲ್ಯ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 575 ಅಂಶ ಹೆಚ್ಚಳವಾಗಿ, 82,605ಕ್ಕೆ ವಹಿವಾಟು ಕೊನೆ ಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 178 ಅಂಶ ಏರಿಕೆಯಾಗಿ, 25,323ಕ್ಕೆ ಅಂತ್ಯಗೊಂಡಿದೆ.

## ಚಾರ್ಲಿ ಕಿರ್ಕ್‌ಗೆ ಅಮೆರಿಕ ಅತ್ಯುನ್ನತ ನಾಗರಿಕ ಪುರಸ್ಕಾರ

**ವಾಷಿಂಗ್ಟನ್ (ಎಪಿ):** ಅಮೆರಿಕದ ಪ್ರಮುಖ ಬಲಪಂಥೀಯ ಕಾರ್ಯಕರ್ತ ಚಾರ್ಲಿ ಕಿರ್ಕ್ ಅವರಿಗೆ ಮರಣೋತ್ತರವಾಗಿ ಅಮೆರಿಕದ ಅತ್ಯುನ್ನತ ನಾಗರಿಕ ಪುರಸ್ಕಾರ 'ಪ್ರೆಸಿಡೆನ್ಷಿಯಲ್ ಮೆಡಲ್ ಆಫ್ ಫ್ರೀಡಂ' ಅನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಪ್ರಕಟಿಸಿದ್ದಾರೆ.

ಚಾರ್ಲಿ ಕಿರ್ಕ್

ಚಾರ್ಲಿ ಕಿರ್ಕ್ ಅವರ 32ನೇ ಜನ್ಮದಿನದ ಸಂದರ್ಭದಲ್ಲೇ ಈ ಪ್ರಶಸ್ತಿ ಘೋಷಣೆಯಾಗಿದೆ. ಅಮೆರಿಕದ ಒರೆಮ್ ನಗರದ ಉತಾಹ್ ವ್ಯಾಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಸೆ.10ರಂದು ನಡೆದ 'ದಿ ಅಮೆರಿಕನ್ ಕಮ್‌ಬ್ಯಾಕ್ ಟೂರ್' ಕಾರ್ಯಕ್ರಮದ ಸಂದರ್ಭದಲ್ಲಿ ಕಿರ್ಕ್ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು.

'ಮುಂದಿನ ತಲೆಮಾರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅಪ್ರತಿಮ ಯೋಧನನ್ನು ನಾವು ಸದಾ ಸ್ಮರಿಸುತ್ತೇವೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

## ಕಾನೂನುಬಾಹಿರ ಮಾಹಿತಿ ಸಂಗ್ರಹ: ಆಶ್ಲೆ ಬಂಧನ

**ವಾಷಿಂಗ್ಟನ್ (ಪಿಟಿಐ):** ರಾಷ್ಟ್ರೀಯ ರಕ್ಷಣಾ ಮಾಹಿತಿಗಳನ್ನು ಕಾನೂನುಬಾಹಿರವಾಗಿ ಸಂಗ್ರಹಿಸಿಟ್ಟುಕೊಂಡಿರುವ ಆರೋಪದಡಿ ಭಾರತೀಯ–ಅಮೆರಿಕನ್ ಕಾರ್ಯತಂತ್ರ ತಜ್ಞ ಆಶ್ಲೆ ಜೆ. ಟೆಲ್ಲಿಸ್ ಅವರನ್ನು ಬಂಧಿಸಲಾಗಿದೆ.

64 ವರ್ಷದ ಟೆಲ್ಲಿಸ್ ಅವರನ್ನು ವಿಯೆನ್ನಾದಲ್ಲಿ ಬಂಧಿಸಲಾಗಿದ್ದು, ಅವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಅಮೆರಿಕದ ಅಟಾರ್ನಿ ಕಚೇರಿ ಮಂಗಳವಾರ ಹೇಳಿಕೆಯಲ್ಲಿ ತಿಳಿಸಿದೆ.

ಅವರ ಮೇಲಿನ ಆರೋಪಗಳು ನಮ್ಮ ನಾಗರಿಕರ ಸುರಕ್ಷತೆ ಮತ್ತು ಭದ್ರತೆಗೆ ಗಂಭೀರ ಸ್ವರೂಪದ ಅಪಾಯ ಒಡ್ಡುವಂತಿವೆ ಎಂದು ಅಮೆರಿಕ ಅಟಾರ್ನಿ ಲಿಂಡ್ಸಿ ಹ್ಯಾಲಿಗನ್ ಅವರು ತಿಳಿಸಿದ್ದಾರೆ.

ಅಪರಾಧ ಸಾಬೀತಾದರೆ, ಟೆಲ್ಲಿಸ್ ಅವರಿಗೆ 10 ವರ್ಷ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

**ಸಂಕ್ಷಿಪ್ತ ಸುದ್ದಿ**

## ಪಾಕ್‌ಗೆ ಸಾಲ: ಸಿಬ್ಬಂದಿ ಹಂತದ ಒಪ್ಪಿಗೆ ಪೂರ್ಣ

**ಇಸ್ಲಾಮಾಬಾದ್ (ಪಿಟಿಐ):** ಪಾಕಿಸ್ತಾನಕ್ಕೆ ₹10,500 ಕೋಟಿ (1.2 ಮಿಲಿಯನ್ ಡಾಲರ್) ಸಾಲ ಸೌಲಭ್ಯ ಒದಗಿಸುವ ಸಲುವಾಗಿ ಪಾಕಿಸ್ತಾನ ಹಾಗೂ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ನಡುವೆ ನಡೆಯುತ್ತಿರುವ ಮಾತುಕತೆಯು ಬುಧವಾರ ಸಿಬ್ಬಂದಿ ಹಂತದ ಒಪ್ಪಂದದವರೆಗೆ ತಲುಪಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐಎಂಎಫ್‌ನ ಕಾರ್ಯಕಾರಿ ಮಂಡಳಿಯು ಅನುಮೋದನೆ ನೀಡುವುದಷ್ಟೇ ಬಾಕಿ ಇದ್ದು, ಇದಾಗುತ್ತಿದ್ದಂತೆಯೇ ಪಾಕಿಸ್ತಾನಕ್ಕೆ ಹಣಕಾಸಿನ ನೆರವು ದೊರಕಲಿದೆ. ವಿಸ್ತೃತ ನಿಧಿ ಸೌಲಭ್ಯದ (ಇಎಫ್‌ಎಫ್) ಭಾಗವಾಗಿ ನೀಡುತ್ತಿರುವ ಹಣಕಾಸಿನ ನೆರವಿಗೆ ಸಂಬಂಧಿಸಿದಂತೆ ಪಾಕಿಸ್ತಾನದ ಅಧಿಕಾರಿಗಳ ಜತೆಗೆ ಕಳೆದ ವಾರ ಐಎಂಎಫ್‌ನ ಇವಾ ಪೆಟ್ರೋವಾ ನೇತೃತ್ವದ ನಿಯೋಗ ಅಂತಿಮ ಸುತ್ತಿನ ಮಾತುಕತೆ ನಡೆಸಿತ್ತು.

ಇದೀಗ, ಸಿಬ್ಬಂದಿ ಹಂತದ ಒಪ್ಪಂದದವರೆಗೆ ಮಾತುಕತೆ ತಲುಪಿದೆ. ಇಎಫ್‌ಎಫ್ ಅಡಿಯಲ್ಲಿ ರೂಪಿಸಿರುವ ಆರ್ಥಿಕ ಯೋಜನೆಗಳು ಪಾಕಿಸ್ತಾನದ ಸ್ಥೂಲ ಆರ್ಥಿಕ ಸ್ಥಿರತೆಯನ್ನು ಖಾತರಿ ಪಡಿಸಿಕೊಳ್ಳುತ್ತಿದ್ದು, ಮಾರುಕಟ್ಟೆ ವಿಶ್ವಾಸವನ್ನು ಮರುಸ್ಥಾಪಿಸುತ್ತಿದೆ ಎಂದು ಇವಾ ಪೆಟ್ರೋವಾ ತಿಳಿಸಿದ್ದಾರೆ.

## ಉಕ್ರೇನ್ ನಿಯೋಗದಿಂದ ಅಮೆರಿಕ ಶಸ್ತ್ರಾಸ್ತ್ರ ತಯಾರಕರ ಭೇಟಿ

**ಕೀವ್ (ಉಕ್ರೇನ್) (ಎಪಿ):** ಉಕ್ರೇನ್ ಸರ್ಕಾರದ ನಿಯೋಗವು ಅಮೆರಿಕದ ಪ್ರಮುಖ ಶಸ್ತ್ರಾಸ್ತ್ರ ತಯಾರಕರನ್ನು ಭೇಟಿಯಾಗಿದೆ ಎಂದು ದೇಶದ ಹಿರಿಯ ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ. ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಈ ವಾರಾಂತ್ಯದಲ್ಲಿ ಭೇಟಿಯಾಗಲಿದ್ದು, ಅದಕ್ಕೂ ಮುಂಚೆ ಅಧಿಕಾರಿ ಈ ಹೇಳಿಕೆ ನೀಡಿದ್ದಾರೆ.

ಉಕ್ರೇನ್ ಅಧ್ಯಕ್ಷರ ಕಚೇರಿಯ ಮುಖ್ಯಸ್ಥ ಆ್ಯಂಡ್ರಿ ಎರ್ಮಕ್ ಮತ್ತು ಪ್ರಧಾನಿ ಯುನಿಯಾ ಸ್ವೈರಿಡೆಂಕೊ ನೇತೃತ್ವದ ನಿಯೋಗವು ಲಾಕ್ಹೀಡ್ ಮಾರ್ಟಿನ್ ಮತ್ತು ರೇಥಿಯಾನ್ ಪ್ರತಿನಿಧಿಗಳನ್ನು ಭೇಟಿಯಾಯಿತು ಎಂದು ಯೆರ್ಮಕ್ ಟೆಲಿಗ್ರಾಮ್ ಪೋಸ್ಟ್‌ನಲ್ಲಿ ಬರೆದಿದ್ದಾರೆ. ಮಾತುಕತೆಯಲ್ಲಿ ಏನು ಚರ್ಚಿಸಲಾಯಿತು ಎಂಬುವುದನ್ನು ಎರ್ಮಕ್ ಬಹಿರಂಗಪಡಿಸಲಿಲ್ಲ.

ರಷ್ಯಾದ ದೂರಗಾಮಿ ದಾಳಿಗಳನ್ನು ಎದುರಿಸಲು ಉಕ್ರೇನ್‌ಗೆ ಪೇಟ್ರಿಯಾಟ್ ವಾಯುರಕ್ಷಣಾ ವ್ಯವಸ್ಥೆಗಳು ಮತ್ತು ಟೊಮಹಾಕ್ ಕ್ರೂಸ್ ಕ್ಷಿಪಣಿಗಳು ನೆರವಾಗಲಿವೆ. ಇದನ್ನು ರೇಥಿಯಾನ್ ಉತ್ಪಾದಿಸುತ್ತದೆ. ಲಾಕ್‌ಹೀಡ್ ಮಾರ್ಟಿನ್ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಗಳ ಶ್ರೇಣಿಯನ್ನು ತಯಾರಿಸುತ್ತದೆ.

## ಯುಎನ್‌ಎಚ್‌ಆರ್‌ಸಿಗೆ ಭಾರತ 7ನೇ ಬಾರಿಗೆ ಆಯ್ಕೆ

**ನ್ಯೂಯಾರ್ಕ್ (ಪಿಟಿಐ):** ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಗೆ (ಯುಎನ್‌ಎಚ್‌ಆರ್‌ಸಿ) ಏಳನೇ ಬಾರಿಗೆ, 2026–28ರ ಅವಧಿಗೆ ಭಾರತ ಆಯ್ಕೆಯಾಗಿದೆ.

ಮಂಗಳವಾರ ನಡೆದ ಚುನಾವಣೆಯ ಫಲಿತಾಂಶಗಳನ್ನು ಸಾಮಾಜಿಕ ಮಾಧ್ಯಮದ ಮೂಲಕ ಪ್ರಕಟಿಸಿರುವ ಯುಎನ್‌ಎಚ್‌ಆರ್‌ಸಿ, 2026ರ ಜನವರಿಯಿಂದ ಪ್ರಾರಂಭವಾಗುವ ಮೂರು ವರ್ಷಗಳ ಅವಧಿಗೆ ಭಾರತ ಆಯ್ಕೆಯಾಗಿದೆ ಎಂದು ತಿಳಿಸಿದೆ. ಭಾರತಕ್ಕೆ ತಮ್ಮ ಅಭೂತಪೂರ್ವ ಬೆಂಬಲ ನೀಡಿದ ಎಲ್ಲಾ ನಿಯೋಗಗಳಿಗೆ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಧನ್ಯವಾದ ಹೇಳಿದ್ದಾರೆ.

'ಈ ಚುನಾವಣೆಯು ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯದ ವಿಷಯದಲ್ಲಿ ಭಾರತದ ಅಚಲವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ನಮ್ಮ ಅಧಿಕಾರಾವಧಿಯಲ್ಲಿ ಈ ಉದ್ದೇಶಗಳಿಗೆ ರಚನಾತ್ಮಕವಾಗಿ ಕೆಲಸ ಮಾಡಲು ಉತ್ಸುಕರಾಗಿದ್ದೇವೆ ' ಎಂದು ಅವರು ಹೇಳಿದ್ದಾರೆ.

## ಉಕ್ರೇನ್ ರೈಲುಗಳ ಮೇಲೆ ರಷ್ಯಾ ದಾಳಿ

**ಕೀವ್ (ಎಪಿ):** ರಷ್ಯಾವು ಕಳೆದ ಮೂರು ತಿಂಗಳಿನಿಂದ ಉಕ್ರೇನ್‌ನ ರೈಲು ಜಾಲವನ್ನೇ ಗುರಿಯಾಗಿಸಿ ದಾಳಿ ನಡೆಸುತ್ತಿದೆ. ತನ್ನ ಬಳಿ ಇರುವ ಉತ್ಕೃಷ್ಟ ಗುಣಮಟ್ಟದ ಡ್ರೋನ್‌ಗಳಿಂದ ಅದು ದಾಳಿಯನ್ನು ತೀವ್ರವಾಗಿಸಿದೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

2022ರ ಆರಂಭದಲ್ಲಿ ರಷ್ಯಾ–ಉಕ್ರೇನ್ ಯುದ್ಧ ಪ್ರಾರಂಭವಾದಾಗಿನಿಂದ ಪ್ರತಿ ವಾರ ಕನಿಷ್ಠ ಒಂದು ರೈಲಿನ ಮೇಲೆ ದಾಳಿ ನಡೆದಿದೆ. ಆದರೀಗ ಒಂದು ವಾರದಲ್ಲಿ 2ರಿಂದ 3 ಬಾರಿ ರೈಲುಗಳ ಮೇಲೆ ದಾಳಿ ನಡೆಯುತ್ತಿದೆ ಎಂದು ವರದಿಯಾಗಿದೆ.

ರಷ್ಯಾವು ಹೊಸ ಡ್ರೋನ್‌ಗಳನ್ನು ಅಭಿವೃದ್ಧಿಪಡಿಸುತ್ತಿದೆ. ಇವು ಸುಮಾರು 200 ಕಿ.ಮೀ. ದೂರದವರೆಗೆ ಹಾರುವ ಸಾಮರ್ಥ್ಯ ಹೊಂದಿವೆ. ವಾಣಿಜ್ಯ ಮತ್ತು ಮಿಲಿಟರಿ ಸರಕು ಸಾಗಣೆ ರೈಲುಗಳ ಮೇಲೆ ದಾಳಿ ನಡೆಸಲಾಗುತ್ತಿದೆ.

'ಗಡಿಯಲ್ಲಿ ರೈಲುಗಳ ಮೇಲಿನ ದಾಳಿಯಿಂದ ಉಕ್ರೇನ್ ಜನರ ರೈಲು ಸಂಪರ್ಕವನ್ನು ರಷ್ಯಾ ಕಸಿದುಕೊಳ್ಳುತ್ತಿದೆ' ಎಂದು ಉಕ್ರೇನ್‌ನ ರೈಲ್ವೆ ಇಲಾಖೆಯ ಸಿಇಒ ಒಲೆಕ್ಸಾಂದರ್ ಪರ್ಟ್‌ಸೋವಸ್ಕಿ ಹೇಳಿದರು.

ರಷ್ಯಾದ ಪುನರಾವರ್ತಿತ ದಾಳಿಗಳ ಹೊರತಾಗಿಯೂ ಶೀಘ್ರ ಚೇತರಿಕೆ ಮೂಲಕ ಉಕ್ರೇನ್‌ನ ರೈಲುಗಳ ಓಡಾಟದಲ್ಲಿ ತೊಂದರೆಯಾಗದಂತೆ ಕೆಲಸ ನಿರ್ವಹಿಸಸಲಾಗುತ್ತಿದೆ. ಆದರೆ, ರಷ್ಯಾದ ಡ್ರೋನ್‌ಗಳ ಸಾಮರ್ಥ್ಯ ಇನ್ನಷ್ಟು ಸುಧಾರಿಸಿರುವುದು ಹಾಗೂ ದಾಳಿಯ ವೇಗ ಹೆಚ್ಚಾಗಿರುವುದು ಬೆದರಿಕೆ ಒಡ್ಡಿದೆ ಎಂದು ಹೇಳಿದ್ದಾರೆ.

### 'ಬ್ರಿಕ್ಸ್' ರಾಷ್ಟ್ರಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸುವುದಾಗಿ ಟ್ರಂಪ್ ಎಚ್ಚರಿಕೆ

# 'ಅಮೆರಿಕ ಡಾಲರ್ ಮೇಲೆ 'ಬ್ರಿಕ್ಸ್' ದಾಳಿ'

**ನ್ಯೂಯಾರ್ಕ್ (ಪಿಟಿಐ):** 'ಬ್ರಿಕ್ಸ್' ರಾಷ್ಟ್ರಗಳು ಡಾಲರ್ ಮೇಲೆ ದಾಳಿ ಮಾಡುತ್ತಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಆರೋಪಿಸಿದ್ದಾರೆ.

ಅಮೆರಿಕ ನೀತಿಗಳ ವಿರುದ್ಧವಾಗಿರುವ 'ಬ್ರಿಕ್ಸ್' ರಾಷ್ಟ್ರಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಅರ್ಜೆಂಟೀನಾ ಅಧ್ಯಕ್ಷ ಜಾವಿಯರ್ ಮಿಲ್ಲೈ ಅವರ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಿದ ಟ್ರಂಪ್, 'ನಾನು ಡಾಲರ್ ಜೊತೆಗೆ ನಿಲ್ಲುತ್ತೇನೆ. ಡಾಲರ್‌ನಲ್ಲಿ ವಹಿವಾಟು ನಡೆಸಲು ಬಯಸುವವರಿಗೆ ಹಲವು ಉಪಯೋಗವಾಗಲಿದೆ. ಇತರರಿಗೆ ಆ ಅವಕಾಶ ಸಿಗಲ್ಲ' ಎಂದು ಹೇಳಿದರು.

'ಬ್ರಿಕ್ಸ್‌ನ ಭಾಗವಾಗಲು ಬಯಸುವವವರ ಬಗ್ಗೆ ಆಕ್ಷೇಪವಿಲ್ಲ. ಆದರೆ ಅವರಿಗೆ ನಾವು ಸುಂಕವನ್ನು ವಿಧಿಸುವುದಾಗಿ ಹೇಳಿದ್ದೆ. ಎಲ್ಲರೂ ಬ್ರಿಕ್ಸ್‌ನಿಂದ ಹೊರಬಂದರು' ಎಂದು ಹೇಳಿದರು.

ಏಕಪಕ್ಷೀಯ ಸುಂಕ ಮತ್ತು ಸುಂಕ ರಹಿತ ಕ್ರಮಗಳಿಂದಾಗಿ ಜಾಗತಿಕ ವಹಿವಾಟಿನ ಮೇಲೆ ಆಗುತ್ತಿರುವ ಪರಿಣಾಮಗಳ ಬಗ್ಗೆ 'ಬ್ರಿಕ್ಸ್' ರಾಷ್ಟ್ರಗಳು ಕಳವಳ ವ್ಯಕ್ತಪಡಿಸಿವೆ.

## 'ಅಮೆರಿಕಕ್ಕೆ ಬೇಕಿದೆ ಭಾರತದ ಬೆಂಬಲ'

**ವಾಷಿಂಗ್ಟನ್ (ಪಿಟಿಐ):** ಅಪರೂಪದ ಖನಿಜಗಳ ರಫ್ತುಗಳ ಮೇಲೆ ಚೀನಾ ವಿಧಿಸಿರುವ ನಿರ್ಬಂಧವು ಅಮೆರಿಕ ಮತ್ತು ಚೀನಾ ನಡುವಿನ ವ್ಯಾಪಾರ ಸಂಘರ್ಷಕ್ಕೆ ಕಾರಣವಾಗಿದೆ. ಈ ಸಂದರ್ಭದಲ್ಲಿ ಅಮೆರಿಕವು ಭಾರತ ಸೇರಿದಂತೆ ಇತರ ಮೈತ್ರಿ ದೇಶಗಳ ಬೆಂಬಲವನ್ನು ನಿರೀಕ್ಷಿಸುತ್ತಿದೆ ಎಂದು ಅಮೆರಿಕದ ಹಣಕಾಸು ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಅವರು ತಿಳಿಸಿದ್ದಾರೆ.

ಸಂದರ್ಶನವೊಂದರಲ್ಲಿ ಈ ಬಗ್ಗೆ ಮಾತನಾಡಿದ ಅವರು, ' ಚೀನಾ ತನ್ನ ನಿಲುವಿನಿಂದ ಜಾಗತಿಕ ಪೂರೈಕೆ ಸರಪಳಿಗೆ ಧಕ್ಕೆ ತರುತ್ತಿರುವುದಲ್ಲದೆ, ಜಗತ್ತಿನ ಮುಕ್ತ ಕೈಗಾರಿಕಾ ನೆಲೆಯನ್ನು ಬುಡಮೇಲು ಮಾಡಲು ಪ್ರಯತ್ನಿಸುತ್ತಿದೆ. ಇದು ಚೀನಾ ಮತ್ತು ಇಡೀ ಜಗತ್ತಿನ ನಡುವೆ ನಡೆಯುತ್ತಿರುವ ಸಂಘರ್ಷವಾಗಿದೆ' ಎಂದು ಅವರು ಹೇಳಿದ್ದಾರೆ.

**ಸುದ್ದಿ 2 ನಿಮಿಷ**

## ವ್ಯಾಪಾರ ಕೊರತೆ ಅಂತರ 13 ತಿಂಗಳ ಗರಿಷ್ಠ

**ನವದೆಹಲಿ (ಪಿಟಿಐ):** ಸೆಪ್ಟೆಂಬರ್ ತಿಂಗಳಲ್ಲಿ ಭಾರತದಿಂದ ಆಗಿರುವ ರಫ್ತು ಶೇಕಡ 6.74ರಷ್ಟು ಹೆಚ್ಚಳ ಕಂಡು, 36.38 ಬಿಲಿಯನ್ ಡಾಲರ್‌ಗೆ (₹3.20 ಲಕ್ಷ ಕೋಟಿ) ತಲುಪಿದೆ. ಆಮದು ಪ್ರಮಾಣವು ಶೇ 16.6ರಷ್ಟು ಹೆಚ್ಚಳ ಕಂಡಿದ್ದು, ವ್ಯಾಪಾರ ಕೊರತೆ ಅಂತರವು 31.15 ಬಿಲಿಯನ್ ಡಾಲರ್‌ಗೆ (₹2.74 ಲಕ್ಷ ಕೋಟಿ) ತಲುಪಿದೆ.

ಈ ವ್ಯಾಪಾರ ಕೊರತೆಯು ಒಂದು ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಅತಿಹೆಚ್ಚಿನದ್ದಾಗಿದೆ. ಚಿನ್ನ, ರಸಗೊಬ್ಬರ ಮತ್ತು ಬೆಳ್ಳಿಯ ಆಮದು ಹೆಚ್ಚಾದ ಕಾರಣದಿಂದಾಗಿ ಸೆಪ್ಟೆಂಬರ್‌ನಲ್ಲಿ ಆಮದು ಮೊತ್ತವು 68.53 ಬಿಲಿಯನ್ ಡಾಲರ್‌ಗೆ (₹6.03 ಲಕ್ಷ ಕೋಟಿ) ಏರಿಕೆ ಆಗಿದೆ.

ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ರಫ್ತು ಪ್ರಮಾಣವು ಶೇ 3.02ರಷ್ಟು ಹೆಚ್ಚಳ ಆಗಿದೆ. ಆಮದು ಪ್ರಮಾಣವು ಇದೇ ಅವಧಿಯಲ್ಲಿ ಶೇ 4.53ರಷ್ಟು ಜಾಸ್ತಿ ಆಗಿದೆ.

ಜಾಗತಿಕ ಮಟ್ಟದಲ್ಲಿ ಅರ್ಥ ವ್ಯವಸ್ಥೆಯಲ್ಲಿ ಅಸ್ಥಿರತೆ ಇದ್ದರೂ ಭಾರತದ ಸರಕು ಮತ್ತು ಸೇವೆಗಳ ರಫ್ತು ಚೆನ್ನಾಗಿ ಆಗುತ್ತಿದೆ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ತಿಳಿಸಿದ್ದಾರೆ.

ದೇಶದ ಉದ್ಯಮ ವಲಯವು ತನ್ನ ವಾಣಿಜ್ಯ ಸಂಬಂಧವನ್ನು ಕಾಪಾಡಿಕೊಂಡಿದೆ, ಪೂರೈಕೆ ವ್ಯವಸ್ಥೆಯನ್ನು ಕೂಡ ಅದು ರಕ್ಷಿಸಿಕೊಂಡಿದೆ. ಹೀಗಾಗಿ ರಫ್ತು ಹೆಚ್ಚಳ ಆಗಿದೆ ಎಂದು ಅಗರ್ವಾಲ್ ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

ಭಾರತದಿಂದ ಅಮೆರಿಕಕ್ಕೆ ಆಗುವ ರಫ್ತಿನಲ್ಲಿ ಶೇ 45ರಷ್ಟು ಪಾಲು ಈಗಲೂ ಶೇ 50 ಪ್ರಮಾಣದ ಸುಂಕದ ವ್ಯಾಪ್ತಿಯಿಂದ ಹೊರಗಿದೆ ಎಂದಿದ್ದಾರೆ.

## ಎಕ್ಸಿಸ್ ಬ್ಯಾಂಕ್ ಲಾಭ ಇಳಿಕೆ

**ನವದೆಹಲಿ (ಪಿಟಿಐ):** ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಖಾಸಗಿ ವಲಯದ ಎಕ್ಸಿಸ್ ಬ್ಯಾಂಕ್ ನಿವ್ವಳ ಲಾಭ ಶೇ 26ರಷ್ಟು ಇಳಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹6,917 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹5,089 ಕೋಟಿ ಲಾಭ ಗಳಿಸಲಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಬುಧವಾರ ತಿಳಿಸಿದೆ.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನ (ಎನ್‌ಐಐ) ₹13,745 ಕೋಟಿ ಆಗಿದೆ. ಕಾರ್ಯಾಚರಣೆ ಲಾಭವು ಶೇ 3ರಷ್ಟು ಇಳಿಕೆಯಾಗಿ, ₹10,413 ಕೋಟಿಯಾಗಿದೆ.

ವೆಚ್ಚವು ಶೇ 5ರಷ್ಟು ಏರಿಕೆ ಆಗಿದೆ. ಒಟ್ಟು ವಸೂಲಾಗದ ಸಾಲದ ಪ್ರಮಾಣವು (ಜಿಎನ್‌ಪಿಎ) ಶೇ 1.46ರಷ್ಟಾಗಿದೆ. ನಿವ್ವಳ ಎನ್‌ಪಿಎ ಶೇ 0.44ರಷ್ಟಿದ್ದು, ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 0.34ರಷ್ಟಿತ್ತು ಎಂದು ಬ್ಯಾಂಕ್ ತಿಳಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದ್ದ ಕಾರಣವೊಂದಕ್ಕೆ ತೆಗೆದಿರಿಸಬೇಕಿರುವ ಮೊತ್ತವು ಜಾಸ್ತಿಯಾದ ಪರಿಣಾಮವಾಗಿ ಲಾಭದ ಪ್ರಮಾಣ ಇಳಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

**ಮುಂಬೈ ಧಾರಣೆ (ಶೇಂಗಾ)**
15-10-2025

| | |
|---|---|
| ಜಾವಾ 70/80(ಹೊಸ) | 10400-10500 |
| ಜಾವಾ 80/90(ಹೊಸ) | 9700-9800 |
| ದಪ್ಪ ಮಧ್ಯಪ್ರದೇಶ (ಹೊಸ) | 7600-7700 |
| ದಪ್ಪ ಗುಜರಾತ್ (ಹೊಸ) | 8500-8600 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1410 (1410) |
| ಒಂದು ವಾರದ ಡೆಲಿವರಿ | 1405 (1405) |
| ಪಾಮ್ ವಾರದ ಡೆಲಿವರಿ | 1283 (1288) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1415 (1420) |
| **ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,26,500 (1,25,450) |
| ಬೆಳ್ಳಿ ಕೆ.ಜಿಗೆ | 1,78,000 (1,77,400) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

**ಈರುಳ್ಳಿ ಧಾರಣೆ**
ಬೆಂಗಳೂರು (ಕ್ವಿಂಟಲ್‌ಗೆ)

| | |
|---|---|
| ದೊಡ್ಡ | ₹1000-1600 |
| ಮಧ್ಯಮ | ₹500-1000 |
| ಸಣ್ಣ | ₹100-500 |

## ಇತಿಹಾಸ ತಿರುಚಲು ಭಾರತ ಯತ್ನ: ಪಾಕ್

**ಇಸ್ಲಾಮಾಬಾದ್ (ಪಿಟಿಐ):** ವಿಲಕ್ಷಣವಾದ ಮತ್ತು ಬಾಲಿವುಡ್ ಸಿನಿಮಾ ಕತೆಗಳಂತೆ ಇತಿಹಾಸವನ್ನು ತನಗೆ ಬೇಕಾದ ರೀತಿಯಲ್ಲಿ ತಿರುಚಲು ಭಾರತ ಯತ್ನಿಸುತ್ತಿದೆ ಎಂದು ಪಾಕಿಸ್ತಾನ ಸೇನೆ ಬುಧವಾರ ಆರೋಪಿಸಿದೆ.

ಭಾರತ ಸೇನೆಯ ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಅವರು, 'ಆಪರೇಷನ್ ಸಿಂಧೂರ' ಸಂದರ್ಭದಲ್ಲಿ ಪಾಕಿಸ್ತಾನ ಸೇನೆಯು ಸುಮಾರು 100 ಸೈನಿಕರನ್ನು ಕಳೆದುಕೊಂಡಿದೆ ಎಂದು ಹೇಳಿಕೆ ನೀಡಿದ್ದರು. ಈ ಬೆನ್ನಲ್ಲೇ ಪಾಕಿಸ್ತಾನ ಸೇನೆ ಪ್ರತಿಕ್ರಿಯೆ ನೀಡಿದೆ.

ಪರಮಾಣು ಶಕ್ತಿಯನ್ನು ಹೊಂದಿರುವ ದೇಶದ ಸೇನಾ ನಾಯಕರು ಇಂಥ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುವುದು ವಿಷಾದನೀಯ ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ.

**ರಾಜ್ಯ ಸಚಿವರ ದರ್ಜೆ ಸಚಿವರೊಬ್ಬರಿಗೆ ವೆಚ್ಚ**

| | |
|---|---|
| ವೇತನ | ₹75 ಸಾವಿರ |
| ಮನೆ ಬಾಡಿಗೆ | ₹2 ಲಕ್ಷ |
| ಇಂಧನ ಭತ್ಯೆ | 1,500 ಲೀ (ತಿಂಗಳಿಗೆ) |
| ಸಿಬ್ಬಂದಿ | 12 ಸಿಬ್ಬಂದಿ (ಆಪ್ತ ಕಾರ್ಯದರ್ಶಿ, ಆಪ್ತ ಸಹಾಯಕ (4), ಕನ್ನಡ ಶೀಘ್ರ ಲಿಪಿಗಾರರು (1), ದಲಾಯತ್ (4), ಚಾಲಕರು (2)) |
| ಪ್ರವಾಸ ಭತ್ಯೆ | ದಿನಕ್ಕೆ ₹2,500 (ರಾಜ್ಯ), ದಿನಕ್ಕೆ ₹3,000 (ಹೊರರಾಜ್ಯ) |
| ಪ್ರಯಾಣ ಭತ್ಯೆ | ₹40 ಕಿ.ಮೀಗೆ |
| ಆತಿಥ್ಯ ಭತ್ಯೆ | ₹ 4.50 ಲಕ್ಷ (ವಾರ್ಷಿಕ) |
| ವಾಹನ ಸೌಕರ್ಯ | ₹26 ಲಕ್ಷದ ಮಿತಿಯ ವಾಹನ ಖರೀದಿಗೆ ಅವಕಾಶ (ಒಂದು ಬಾರಿ) |
| ಪೀಠೋಪಕರಣ | ₹10 ಲಕ್ಷ ಮಿತಿಯ ಗೃಹೋಪಯೋಗಿ ವಸ್ತು, ಪೀಠೋಪಕರಣ ಖರೀದಿ (ಒಂದು ಬಾರಿ) |

## 'ಸಂಪುಟ'ಕ್ಕಿಂತ ಸಚಿವ ದರ್ಜೆ ಭಾರ

ಎರಡನೇ ಮುಖಪುಟದಿಂದ...

ರಾಜ್ಯ ಸಚಿವ ಸ್ಥಾನಮಾನ ಪಡೆದವರಿಗೆ ಸಂಪುಟ ಸಚಿವ ಸ್ಥಾನಮಾನಕ್ಕಿಂತ ವೇತನ, ಮನೆ ಬಾಡಿಗೆ, ಇಂಧನ, ವಾರ್ಷಿಕ ಅತಿಥಿ ಭತ್ಯೆಯಲ್ಲಿ ಅಲ್ಪ ಕಡಿಮೆ ಇರುವುದು ಬಿಟ್ಟರೆ, ಉಳಿದ ಸೌಲಭ್ಯಗಳಲ್ಲಿ ವ್ಯತ್ಯಾಸವಿಲ್ಲ.

ವೇತನ, ಮನೆ ಬಾಡಿಗೆಗೆ ಲಕ್ಷಾಂತರ ರೂಪಾಯಿ ತಿಂಗಳಿಗೆ ವೆಚ್ಚಾಗುವ ಜೊತೆಗೆ, 12 ಸಿಬ್ಬಂದಿಯನ್ನೂ 'ಸಚಿವ ಸ್ಥಾನಮಾನ' ಹೊಂದಿರುವವರು ಪಡೆಯುತ್ತಾರೆ. ಸರಾಸರಿ ₹30 ಸಾವಿರ ವೇತನವಾದರೆ, ಈ ಬಾಬ್ತಿನಲ್ಲೇ ₹3.6 ಲಕ್ಷ ವೆಚ್ಚವಾಗುತ್ತದೆ.

## 40ಕ್ಕೂ ಹೆಚ್ಚು ತಾಲಿಬಾನಿಗಳನ್ನು ಕೊಂದ ಪಾಕ್

ಒಂದನೇ ಮುಖಪುಟದಿಂದ...

ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಬಲೂಚಿಸ್ತಾನ ಪ್ರಾಂತ್ಯದ ಸ್ಪಿನ್ ಬೋಲ್ಡಕ್ ಪ್ರದೇಶದ ನಾಲ್ಕು ಸ್ಥಳಗಳ ಮೇಲೆ ಅಫ್ಗನ್ ತಾಲಿಬಾನ್ ದಾಳಿ ನಡೆಸಿದ್ದು, ಅವುಗಳನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಲಾಗಿದೆ. ಈ ವೇಳೆ 15–20 ಅಫ್ಗನ್ ತಾಲಿಬಾನಿಗಳು ಸತ್ತಿದ್ದಾರೆ ಮತ್ತು ಅನೇಕರು ಗಾಯಗೊಂಡಿದ್ದಾರೆ ಎಂದು ಸೇನೆ ಹೇಳಿದೆ.

ಫಿತ್ನಾ ಅಲ್ ಖವಾರಿಜ್ ಮತ್ತು ಅಫ್ಗನ್ ತಾಲಿಬಾನ್ ನೆಲೆಗಳಲ್ಲಿ ದಾಳಿಗಳ ಮತ್ತಷ್ಟು ಬೆಳವಣಿಗೆ ವರದಿಯಾಗಿದೆ ಎಂದು ಸೇನೆ ಹೇಳಿದೆ. ಪಾಕಿಸ್ತಾನಿ ಅಧಿಕಾರಿಗಳು ಫಿತ್ನಾ ಅಲ್ ಖವಾರಿಜ್ ಎಂಬ ಪದವನ್ನು ನಿಷೇಧಿತ ತೆಹ್ರೀಕ್–ಇ–ತಾಲಿಬಾನ್ ಪಾಕಿಸ್ತಾನ್‌ನ (ಟಿಟಿಪಿ) ಉಗ್ರಗಾಮಿಗಳನ್ನು ಉಲ್ಲೇಖಿಸಲು ಬಳಸುತ್ತಾರೆ.

## ಅಫ್ಗನ್ ನಿರಾಶ್ರಿತರ ಶಿಬಿರ ಧ್ವಂಸ

ಒಂದನೇ ಮುಖಪುಟದಿಂದ...

ಶಿಬಿರದಲ್ಲಿ ವಾಸಿಸುತ್ತಿದ್ದ ಸುಮಾರು 8000 ಅಫ್ಗನ್ನರು ತಮ್ಮ ದೇಶಕ್ಕೆ ಮರಳಿದ್ದರಿಂದ ಅಲ್ಲಿನ ಮನೆ ಮತ್ತು ಅಂಗಡಿಗಳು ಸೇರಿದಂತೆ ಕಾಂಕ್ರೀಟ್ ಕಟ್ಟಡಗಳು ಹಾಗೆಯೇ ಇದ್ದವು. ಅವುಗಳನ್ನು ಈಗ ಭೂಗಳ್ಳರು ಒತ್ತುವರಿ ಮಾಡಿಕೊಂಡಿದ್ದು, ಅದಕ್ಕಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಕಾನೂನು ಪ್ರಕಾರ ವಾಸಿಸುತ್ತಿದ್ದ ಅಫ್ಗನ್ನರನ್ನು ಗುರಿಯಾಗಿಸಲಾಗುತ್ತಿದೆ ಎಂಬ ವದಂತಿಗಳಿಂದಾಗಿ ಧ್ವಂಸ ಕಾರ್ಯಾಚರಣೆಯ ವೇಳೆ ಸಣ್ಣಪುಟ್ಟ ಘರ್ಷಣೆಗಳು ನಡೆದವು. ಆದರೆ ನಾವು ಅವರಿಗೆ ವಿವರಿಸಿದ ನಂತರ ಶಾಂತಿ ಮರಳಿತು ಎಂದು ಅವರು ಹೇಳಿದ್ದಾರೆ.

# ಅಹಮದಾಬಾದ್‌ನಲ್ಲಿ 2030ರ ಸಿಡಬ್ಲ್ಯುಜಿ

## ‘ಕಾಮನ್‌ವೆಲ್ತ್ ಸ್ಪೋರ್ಟ್ಸ್’ ಕಾರ್ಯಕಾರಿ ಮಂಡಳಿ ಶಿಫಾರಸು

**ನವದೆಹಲಿ (ಪಿಟಿಐ):** ಭಾರತದಲ್ಲಿ ಎರಡು ದಶಕಗಳ ನಂತರ ಕಾಮನ್‌ವೆಲ್ತ್ ಕ್ರೀಡಾಕೂಟ (ಸಿಡಬ್ಲ್ಯುಜಿ) ಆಯೋಜನೆಗೊಳ್ಳುವುದು ಬಹುತೇಕ ಖಚಿತವಾಗಿದೆ.

2030ರಲ್ಲಿ ಕಾಮನ್‌ವೆಲ್ತ್ ಕೂಟ ನಡೆಸುವ ತಾಣವಾಗಿ ಅಹಮದಾಬಾದ್ ನಗರಕ್ಕೆ ಆದ್ಯತೆ ನೀಡಬೇಕು ಎಂದು ‘ಕಾಮನ್‌ವೆಲ್ತ್ ಸ್ಪೋರ್ಟ್ಸ್’ ಕಾರ್ಯಕಾರಿ ಮಂಡಳಿ ಶಿಫಾರಸು ಮಾಡಿದೆ. ಗ್ಲಾಸ್ಗೋದಲ್ಲಿ ನವೆಂಬರ್ 26ರಂದು ನಡೆಯಲಿರುವ ಮಂಡಳಿಯ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಅಂತಿಮ ನಿರ್ಧಾರವನ್ನು ಪ್ರಕಟಿಸಲಾಗುವುದು. ಅಹಮದಾಬಾದ್ ನಗರಕ್ಕೇ ಕೂಟದ ಆತಿಥ್ಯ ಒಲಿಯುವುದು ಬಹುತೇಕ ಖಚಿತವಾಗಿದ್ದು, ಸಭೆಯಲ್ಲಿ ಪ್ರಕಟಿಸುವುದು ಕೇವಲ ಔಪಚಾರಿಕವಾಗುವ ನಿರೀಕ್ಷೆ ಇದೆ.

ಆದರೆ, ನೈಜೀರಿಯಾದ ಅಬುಜಾ ನಗರವೂ ಈ ಕೂಟದ ಆತಿಥ್ಯ ಪಡೆಯುವ ರೇಸ್‌ನಲ್ಲಿದೆ. ಆಫ್ರಿಕಾ ದೇಶಗಳಿಗೆ ‘ಅಭಿವೃದ್ಧಿಯನ್ನು ಉತ್ತೇಜಿಸುವ ತಂತ್ರಗಾರಿಕೆ’ಯಾಗಿ ಭವಿಷ್ಯದಲ್ಲಿ ಗೇಮ್ಸ್ ಆಯೋಜನೆ ನೀಡುವ ಸಾಧ್ಯತೆ ಇದೆ. 2034ರ ಕೂಟ ಮಂಜೂರು ಮಾಡುವ ನಿರೀಕ್ಷೆ ಇದೆ.

2010ರಲ್ಲಿ ನವದೆಹಲಿಯಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಆಯೋಜನೆಗೊಂಡಿತ್ತು. 2036ರಲ್ಲಿ ಒಲಿಂಪಿಕ್ ಕೂಟದ ಆಯೋಜನೆಗೆ ಭಾರತವು ಪ್ರಸ್ತಾವ ಸಲ್ಲಿಸಿದೆ. ಆ ಹಿನ್ನೆಲೆಯಲ್ಲಿ ಕಾಮನ್‌ವೆಲ್ತ್ ಕೂಟ ಲಭಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ.



ಲಂಡನ್‌ನಲ್ಲಿರುವ ಕಾಮನ್‌ವೆಲ್ತ್ ಸ್ಪೋರ್ಟ್ಸ್ ಮೌಲ್ಯಮಾಪನ ಸಮಿತಿಗೆ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷೆ ಪಿ.ಟಿ. ಉಷಾ, ಗುಜರಾತ್ ಗೃಹ ಸಚಿವ ಹರ್ಷ ಸಾಂಘವಿ ಮತ್ತಿತರರು ಪ್ರಸ್ತಾವ ಸಲ್ಲಿಸಿದರು ಪಿಟಿಐ ಚಿತ್ರ

‘ಕಾಮನ್‌ವೆಲ್ತ್ ಸ್ಪೋರ್ಟ್ ಕಾರ್ಯಕಾರಿ ಮಂಡಳಿಯು 2030ರ ಕೂಟದ ಆತಿಥ್ಯವನ್ನು ಅಹಮದಾಬಾದ್‌ಗೆ ನೀಡಲು ಇಂದು (ಬುಧವಾರ) ಶಿಫಾರಸು ಮಾಡಿದೆ’ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಭಾರತದ ಅಹಮದಾಬಾದ್ ಮತ್ತು ನೈಜೀರಿಯಾದ ಅಬುಜಾ ನಗರಗಳು ಆತಿಥ್ಯಕ್ಕಾಗಿ ಪ್ರಸ್ತಾವ ಸಲ್ಲಿಸಿದ್ದವು’ ಎಂದೂ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

‘ಭಾರತದ ಕ್ರೀಡಾಕ್ಷೇತ್ರಕ್ಕೆ ಇದು ಬಹುದೊಡ್ಡ ಸಂತಸದ ಕ್ಷಣವಾಗಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಕ್ರೀಡೆಯು ಬೆಳೆಯುತ್ತಿರುವುದರ ಸಂಕೇತ ಇದು. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಹಾಗೂ ಬದ್ಧತೆಯಿಂದಾಗಿ ಭಾರತವು ವಿಶ್ವ ಕ್ರೀಡಾ ಭೂಪಟದಲ್ಲಿ ಪ್ರಮುಖ ಸ್ಥಾನ ಪಡೆದಿದೆ’ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ‘ಎಕ್ಸ್’ನಲ್ಲಿ ಸಂದೇಶ ಹಾಕಿದ್ದಾರೆ.

# ಆಸ್ಟ್ರೇಲಿಯಾಕ್ಕೆ ವಿರಾಟ್, ರೋಹಿತ್

**ನವದೆಹಲಿ (ಪಿಟಿಐ):** ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಬುಧವಾರ ಆಸ್ಟ್ರೇಲಿಯಾಗೆ ತೆರಳಿದರು. ಅವರೊಂದಿಗೆ ಭಾರತ ತಂಡದ ಇನ್ನೂ ಕೆಲವು ಆಟಗಾರರೂ ಇದ್ದರು.

ಇದೇ 19ರಿಂದ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ತಂಡವು ಆಡಲಿದೆ. ಮೊದಲ ಬ್ಯಾಚ್ ಆಟಗಾರರು ಅಲ್ಲಿಗೆ ತೆರಳಿದರು. ಇವರಲ್ಲಿ ಕೊಹ್ಲಿ ಮತ್ತು ರೋಹಿತ್ ಜೊತೆಗೆ ನಾಯಕ ಶುಭಮನ್ ಗಿಲ್, ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್, ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ, ವೇಗದ ಬೌಲರ್‌ಗಳಾದ ಅರ್ಷದೀಪ್ ಸಿಂಗ್ ಮತ್ತು ಪ್ರಸಿದ್ಧ ಕೃಷ್ಣ ಅವರೂ ಒಳಗೊಂಡಿದ್ದರು.

ಬುಧವಾರ ಬೆಳಿಗ್ಗೆ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಆಸ್ಟ್ರೇಲಿಯಾ ವಿಮಾನ ಏರಿದರು. ವಿಮಾನ ನಿಲ್ದಾಣದ ಪ್ರವೇಶದ್ವಾರದ ಬಳಿ ಕೆಲವು ಅಭಿಮಾನಿಗಳು ಆಟಗಾರರನ್ನು ನೋಡಲು ಸಾಲುಗಟ್ಟಿದ್ದರು.

ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡುವ ಭಾರತ ತಂಡದ ನಾಯಕ ಶುಭಮನ್ ಗಿಲ್ ಮತ್ತು ಬ್ಯಾಟರ್ ವಿರಾಟ್ ಕೊಹ್ಲಿ ಮತ್ತಿತರರು ಬುಧವಾರ ನವದೆಹಲಿಯಿಂದ ವಿಮಾನ ಮೂಲಕ ಪ್ರಯಾಣ ಬೆಳೆಸಿದರು ‘ಎಕ್ಸ್’ ಚಿತ್ರ

ಎರಡನೇ ಬ್ಯಾಚ್‌ನಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಇನ್ನುಳಿದ ಆಟಗಾರರು ಸಂಜೆಯ ವಿಮಾನಕ್ಕೆ ತೆರಳಿದರು.

ಭಾರತ ತಂಡವು ಸರಣಿಯಲ್ಲಿ ಮೂರು ಪಂದ್ಯಗಳನ್ನು ಆಡಲಿದೆ. ನಂತರ ಐದು ಟಿ20 ಪಂದ್ಯಗಳ ಸರಣಿ ಕೂಡ ನಡೆಯಲಿದೆ. ಈ ಮಾದರಿಯಲ್ಲಿ ಆಡುವ ಪರಿಣತರು ಅ. 22ರಂದು ಆಸ್ಟ್ರೇಲಿಯಾಕ್ಕೆ ತೆರಳುವರು.

# ಬ್ಯಾಡ್ಮಿಂಟನ್: ಶ್ರೇಯಾಂಕಿತರ ಗೆಲುವಿನ ಓಟ

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ಶ್ರೇಯಾಂಕಿತ ಆಟಗಾರರು ಹಾಗೂ ಆಟಗಾರ್ತಿಯರು ಇಲ್ಲಿ ನಡೆಯುತ್ತಿರುವ 15 ಹಾಗೂ 17 ವರ್ಷ ದೊಳಗಿನವರ ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಜಯದ ಓಟ ಮುಂದುವರಿಸಿದ್ದಾರೆ.

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ ಹಾಗೂ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆಯ ಆಶ್ರಯದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ 32ನೇ ಸುತ್ತಿನ ಮೊದಲ ಪಂದ್ಯದಲ್ಲಿ 5ನೇ ಶ್ರೇಯಾಂಕಿತ ಆಟಗಾರ ಯಶಸ್ ಎಂ. ರೆಡ್ಡಿ 21–12, 21–11ರಿಂದ ತಮನ್ ಶ್ರೀಧರ್ ಅವರನ್ನು ಸೋಲಿಸಿದರು.

ಈ ವಿಭಾಗದ ಇತರ ಪಂದ್ಯಗಳಲ್ಲಿ 7ನೇ ಶ್ರೇಯಾಂಕದ ಶ್ಯಾಮ್ ಬಿ. 21–12, 21–10ರಿಂದ ಸ್ವರಿತ್ ಎಸ್. ಶೆಟ್ಟಿ ವಿರುದ್ಧ, ಪರೀಕ್ಷಿತ್ ಪ್ರಸಾದ್ 21–19, 21–12ರಿಂದ ಅನುಜ್ ಶ್ರೇಯಕರ್ ವಿರುದ್ಧ, ಸಾತ್ವಿಕ್ ಎಸ್. ಪ್ರಭು 10–21, 21–16, 21–13ರಿಂದ ಪ್ರದ್ಯೋತ್ ರವಿ ವಿರುದ್ಧ, ಶಿವರಾಜ್ ಕಬ್ಬೇರಹಳ್ಳಿ 15–21, 21–12, 21–14ರಿಂದ ನಿಶಾನ್ ಆರ್ಯ ವಿರುದ್ಧ ಗೆಲುವು ಸಾಧಿಸಿದರು.

17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದ 32ನೇ ಸುತ್ತಿನ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ಹಿತೈಶ್ರೀ ಎಲ್. ರಾಜಯ್ಯ 21–8, 21–10ರಿಂದ ದೀಪ್ತಿಕಾ ಎದುರು ವಿಜಯಿಯಾದರು.

17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿದ ಶಿವರಾಜ್ ಕಬ್ಬೇರಹಳ್ಳಿ ಚಿತ್ರ: ಸತೀಶ್ ಬಡಿಗೇರ

ಇತರೆ ಪಂದ್ಯಗಳಲ್ಲಿ 8ನೇ ಶ್ರೇಯಾಂಕಿತೆ ದೀಪ್ತಿ ಬಾಲಾಜಿ 21–19, 16–21, 21–17ರಿಂದ ಅದಿತಿ ಸುಶಾಂತ್ ಎದುರು, 3ನೇ ಶ್ರೇಯಾಂಕಿತೆ ಆಶಿ ದಾಸ್ 21–10, 21–17ರಿಂದ ರುಥಿ ಎಂ.ಪಿ. ಎದುರು, 7ನೇ ಶ್ರೇಯಾಂಕಿತೆ ಕಾಮಾಕ್ಯ ರೆಡ್ಡಿ 19–21, 21–6, 21–18ರಿಂದ ಹನ್ಸಿಕಾ ರಾಕೇಶ್ ಎದುರು, ರಚನಾ ಎಂ. 18–21, 22–20, 21–13ರಿಂದ ಎ.ನಿತ್ಯಾ ವಿರುದ್ಧ ಗೆಲುವು ಕಂಡರು.

**ವಿಹಾನ್, ಆದಿತ್ಯಗೆ ಜಯ:** 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ 32ನೇ ಸುತ್ತಿನ ಪಂದ್ಯಗಳಲ್ಲಿ ಅಗ್ರ ಶ್ರೇಯಾಂಕಿತ ವಿಹಾನ್ ಸಿ. ಹಾಗೂ 8ನೇ ಶ್ರೇಯಾಂಕದ ಆದಿತ್ಯ ಜೋಶಿ ವಿಜಯ ಸಾಧಿಸಿದರು.

ವಿಹಾನ್ 21–3, 21–11ರಿಂದ ದೇವಿಚಂದ್ರ ಜಿ.ಸಿ. ವಿರುದ್ಧ ಗೆದ್ದರೆ, ಆದಿತ್ಯ 21–17, 26–24ರಿಂದ ಯಶವರ್ಧನ್ ಎಸ್.ಆರ್. ಅವರನ್ನು ಮಣಿಸಿದರು.

3ನೇ ಶ್ರೇಯಾಂಕದ ಆಡ್ರಿಯನ್ ಎಡ್ವರ್ಡ್ 21–12, 21–10ರಿಂದ ರಾಘವ ಗೌಡ ವಿರುದ್ಧ, 6ನೇ ಶ್ರೇಯಾಂಕದ ಗೌತಮ್ ಎಸ್. ನಾಯರ್ 21–10, 21–11ರಿಂದ ಮಾಧವ ಸತೀಶ್ ವಿರುದ್ಧ, ಆಯುಷ್ ಮಿಶ್ರಾ 21–15, 21–23, 23–21ರಿಂದ ಹರ್ಷಿತ್ ಶಂಕರ್ ವಿರುದ್ಧ, ಅರ್ಜುನ್ ಅಗರವಾಲ್ 14–21, 24–22, 21–10ರಿಂದ ಋಗ್ವೇದ್ ಆರ್. ವಿರುದ್ಧ ಜಯ ಸಾಧಿಸಿದರು.

15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಪಂದ್ಯಗಳಲ್ಲಿ ಅಗ್ರ ಶ್ರೇಯಾಂಕಿತೆ ಧನ್ಯಾ ಮಂಜುನಾಥ್ 13–21, 21–10, 21–10ರಿಂದ ನಿಹಾರಿಕಾ ಎ.ಪಿ. ವಿರುದ್ಧ, 8ನೇ ಶ್ರೇಯಾಂಕದ ಸುಪ್ರಿತಾ ದೀಪಕ್ 21–7, 21–11ರಿಂದ ದಕ್ಷಿತಾ ಎಂ. ವಿರುದ್ಧ, 3ನೇ ಶ್ರೇಯಾಂಕದ ಸ್ಮೃತಿ ಎಸ್. 21–18, 21–14ರಿಂದ ಪ್ರಿಯಾಂಕಾ ಪಾರ್ಮರ್ ವಿರುದ್ಧ, 5ನೇ ಶ್ರೇಯಾಂಕದ ಶ್ರೀನಾಗಲಕ್ಷ್ಮಿ 21–17, 21–19ರಿಂದ ಸಿರಿ ಟಿ.ಆರ್. ವಿರುದ್ಧ, ಲೇಖನಿ ಶ್ರೀನಿವಾಸ್ 16–21, 21–13, 25–23ರಿಂದ ಅನ್ವಿತಾ ಶೇಖರ್ ವಿರುದ್ಧ, ಶ್ರೇಯಾ ಗುಂಟೂರಿ 21–17, 14–21, 21–14ರಿಂದ ಚೇತನಾ ಸಂತೋಷ್ ವಿರುದ್ಧ ಗೆಲುವು ಸಾಧಿಸಿದರು.

# ಟಿ.ಟಿ: ಚೀನಾ ಪಾರಮ್ಯ

**ಭುವನೇಶ್ವರ (ಪಿಟಿಐ):** ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಪುರುಷರ ಮತ್ತು ಮಹಿಳೆಯರ ವಿಭಾಗದ ತಂಡ ಪ್ರಶಸ್ತಿಗಳನ್ನು ಗೆಲ್ಲುವ ಮೂಲಕ ಚೀನಾ, ವಿಶ್ವ ಟೇಬಲ್ ಟೆನಿಸ್‌ನಲ್ಲಿ ತನ್ನ ಪ್ರಾಬಲ್ಯವನ್ನು ಮುಂದುವರಿಸಿತು.

ಆ ಮೂಲಕ ಈ ಆಟದಲ್ಲಿ ತನ್ನ ಸಾಮರ್ಥ್ಯ, ಒತ್ತಡವನ್ನು ತಾಳಿಕೊಳ್ಳುವ ಗುಣವನ್ನು ಚೀನಾ ತೋರಿಸಿತು. ಪುರುಷರ ತಂಡ 3–0 ಯಿಂದ ಹಾಂಗ್‌ಕಾಂಗ್ ತಂಡವನ್ನು ಸೋಲಿಸಿದರೆ, ಮಹಿಳೆಯರ ತಂಡವು ಇದೇ ಅಂತರದಿಂದ ಜಪಾನ್ ಮೇಲೆ ಜಯಗಳಿಸಿತು.

# ಎರಡನೇ ಸುತ್ತಿಗೆ ಸಾತ್ವಿಕ್–ಚಿರಾಗ್ ಜೋಡಿ

**ಒಡೆನ್ಸ್ (ಪಿಟಿಐ):** ಆರನೇ ಶ್ರೇಯಾಂಕದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ, ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಸೂಪರ್ 750 ಟೂರ್ನಿಯಲ್ಲಿ ಸ್ಕಾಟ್ಲೆಂಡ್‌ನ ಕ್ರಿಸ್ಟೋಫರ್ ಗ್ರಿಮ್ಲಿ– ಮ್ಯಾಥ್ಯೂ ಜೋಡಿಯನ್ನು ತೀವ್ರ ಹೋರಾಟದ ನಂತರ ಸೋಲಿಸಿ ಎರಡನೇ ಸುತ್ತು ತಲುಪಿತು.

ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಆಟಗಾರರು 17–21, 21–11, 21–17 ರಿಂದ ಸ್ಕಾಟೆಂಡ್‌ನ ಜೋಡಿಯ ಮೇಲೆ ಜಯಗಳಿಸಿದರು. ಸಾತ್ವಿಕ್–ಚಿರಾಗ್ ಮುಂದಿನ ಸುತ್ತಿನಲ್ಲಿ ತೈವಾನ್‌ನ ಲೀ ಝು–ಹಯಿ– ಯಾಂಗ್ ಪೊ–ಸುವಾನ್ ಜೋಡಿಯನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಹಿನ್ನಡೆಯಿಂದ ಚೇತರಿಸಿ ಐರ್ಲೆಂಡ್‌ನ ನ್ಹಾಟ್ ನುಯೆನ್ ಅವರನ್ನು 10–21, 21–8, 21–8 ರಿಂದ ಸೋಲಿಸಿ ಶುಭಾರಂಭ ಮಾಡಿದರು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ಮೋಹಿತ್ ಜಗ್ಲಾನ್– ಲಕ್ಷಿತಾ ಜಗ್ಲಾನ್ ಜೋಡಿ 14–21, 11–21 ರಲ್ಲಿ ಇಂಡೊನೇಷ್ಯಾದ ಅದ್ನಾನ್ ಮೌಲಾನಾ– ಇನ್‌ದಾ ಕಹ್ಯ ಜೋಡಿಗೆ ಮಣಿಯಿತು.

## ಮೈಸೂರು ರೇಸ್

### ಮೆರೋಪಿ ಗೆಲ್ಲುವ ನಿರೀಕ್ಷೆ

ಮೈಸೂರು ದಸರಾ ಸ್ಪ್ರಿಂಟ್ ಚಾಂಪಿಯನ್‌ಷಿಪ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೆರೋಪಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

**1ನೇ ರೇಸ್:** ಶಿ ರೂಲ್ಸ್ 2, ಸದರ್ನ್ ಅರಿಸ್ಟೊಕ್ರಾಟ್ 11, ಟರ್ಕೊಮ್ಯಾನ್ 5
**2ನೇ ರೇಸ್:** ಸೆರಾಯ್ 2, ಸೀ ಆಫ್ ಅಡ್ವೆಂಚರ್ 4, ಶೀಬಾ 1
**3ನೇ ರೇಸ್:** ಲೇಡಿ ಲಯನ್ 8, ಟ್ರೂ ಪಂಚ್ 6, ರೀನ್ ಆಫ್ ಟೆರರ್ 7
**4ನೇ ರೇಸ್:** ಸಿಯೆನಾ ಪ್ರಿನ್ಸೆಸ್ 8, ಮೈ ಲೈಫ್ ಮೈ ರೂಲ್ಸ್ 7, ಇಸಾಬೆಲ್ 1
**5ನೇ ರೇಸ್:** ಮೆರೋಪಿ 2, ಇಂಪೀರಿಯಲ್ ಬ್ಲೂ 5, ಆಲ್ಡ್‌ಗೇಟ್ 3
**6ನೇ ರೇಸ್:** ಓ ಮಂಚಲಿ 8, ಕ್ಲೌಡಿ ಹಿಲ್ಸ್ 6, ಸೌಂಡ್ ಆಫ್ ಕೆನನ್ಸ್ 5
**7ನೇ ರೇಸ್:** ಸಿಲಿಕಾನ್ ಸ್ಟಾರ್ 7, ಎನ್‌ಆರ್‌ಐ ವಿಕ್ಟರಿ 5, ಮಿಸ್ಟಿಕೋಸ್ 6

**ಉತ್ತಮ ಬೆಟ್: ಸೆರಾಯ್**

| ಜಾಕ್‌ಪಾಟ್‌ಗೆ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5,6,7 |

# ಟೈಬ್ರೇಕರ್‌ನಲ್ಲಿ ಬೆಂಗಾಲ್‌ಗೆ ಜಯ

**ನವದೆಹಲಿ (ಪಿಟಿಐ):** ರೋಚಕವಾಗಿದ್ದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ತಂಡವು ‘ಟೈಬ್ರೇಕರ್’ನಲ್ಲಿ 7–5ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣ ದಲ್ಲಿ ಬುಧವಾರ ನಡೆದ ಮೊದಲ ಪಂದ್ಯದಲ್ಲಿ, ನಾಯಕ ದೇವಾಂಕ್ ದಲಾಲ್ ಅವರ ಆಟದ ಬಲದಿಂದ ಬೆಂಗಾಲ್ ತಂಡವು ನಿಗದಿತ ಅವಧಿಯಲ್ಲಿ 45–45ರಲ್ಲಿ ಸಮಬಲ ಸಾಧಿಸಿತ್ತು.

ಅತ್ಯುತ್ತಮ ಲಯದಲ್ಲಿರುವ ದೇವಾಂಕ್ ಅವರು 18 ಪಾಯಿಂಟ್ಸ್‌ಗಳನ್ನು ಕಲೆಹಾಕಿ ಮಿಂಚಿದರು. ಅವರು ಈ ಆವೃತ್ತಿಯಲ್ಲಿ 14ನೇ ಬಾರಿ ಸೂಪರ್ ಟೆನ್ ಸಾಧನೆ ಮಾಡಿದರು. ಟೈಟನ್ಸ್ ತಂಡದ ಭರತ್ ಹೂಡಾ (16 ಅಂಕ) ಅವರ ಹೋರಾಟದ ಫಲವಾಗಿ ಪಂದ್ಯವು ರೋಚಕ ಹಣಾಹಣಿಯನ್ನು ಕಂಡಿತು.

**ಅಗ್ರಸ್ಥಾನಕ್ಕೇರಿದ ಪುಣೇರಿ ಪಲ್ಟನ್:** ಸಾಂಘಿಕ ಆಟವಾಡಿದ ಪುಣೇರಿ ಪಲ್ಟನ್ ತಂಡವು ಬುಧವಾರ ನಡೆದ ಇನ್ನೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು 57–33ರಿಂದ ಸುಲಭವಾಗಿ ಸೋಲಿಸಿತು. 16 ಪಂದ್ಯಗಳಲ್ಲಿ 13ನೇ ಗೆಲುವಿನೊಡನೆ 24 ಅಂಕ ಕಲೆಹಾಕಿದ ಪುಣೇರಿ ತಂಡ ಲೀಗ್‌ನಲ್ಲಿ ಮೊದಲ ಬಾರಿ ಅಗ್ರಸ್ಥಾನಕ್ಕೂ ಏರಿತು. ಮತ್ತೊಂದು ಪಂದ್ಯದಲ್ಲಿ ಹಿಮಾಂಶು ಸಿಂಗ್ (13 ಪಾಯಿಂಟ್ಸ್) ಅವರ ಆಟದ ಬಲದಿಂದ ಗುಜರಾತ್ ಜೈಂಟ್ಸ್ ತಂಡವು 42–35ರಲ್ಲಿ ತಮಿಳು ತಲೈವಾಸ್ ತಂಡವನ್ನು ಮಣಿಸಿತು.

# ಮಳೆಯಲ್ಲಿ ಮುಳುಗಿದ ಪಾಕ್ ಜಯದಾಸೆ

## ಸನಾಗೆ 4 ವಿಕೆಟ್; ಉಭಯ ತಂಡಗಳಿಗೆ ಒಂದೊಂದು ಅಂಕ

**ಕೊಲಂಬೊ (ಪಿಟಿಐ):** ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಜಯ ಸಾಧಿಸುವ ಪಾಕಿಸ್ತಾನ ತಂಡದ ಆಸೆಗೆ ಮಳೆ ಅಡ್ಡಿಯಾಯಿತು.

ಬುಧವಾರ ನಡೆದ ಪಂದ್ಯವು ಮಳೆಯಿಂದಾಗಿ ಸ್ಥಗಿತಗೊಂಡ ಕಾರಣ ಪಾಕ್ ಮತ್ತು ಇಂಗ್ಲೆಂಡ್ ತಂಡಗಳಿಗೆ ತಲಾ ಒಂದು ಅಂಕ ನೀಡಲಾಯಿತು.

ಪಂದ್ಯದಲ್ಲಿ ಟಾಸ್ ಗೆದ್ದ ಪಾಕ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪಾಕ್ ತಂಡದ ನಾಯಕಿ ಫಾತಿಮಾ ಸನಾ (27ಕ್ಕೆ4) ಅವರ ಅಮೋಘ ಬೌಲಿಂಗ್ ಎದುರು ಇಂಗ್ಲೆಂಡ್ ಮಹಿಳೆಯರ ಕ್ರಿಕೆಟ್ ತಂಡವು ಮಂಕಾಯಿತು. ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಳೆಯಿಂದಾಗಿ ಸಮಯ ನಷ್ಟವಾದ ಕಾರಣ (ಡಕ್ವರ್ತ್ ಲೂಯಿಸ್ ನಿಯಮ) ಪ್ರತಿ ಇನಿಂಗ್ಸ್‌ಗೆ 31 ಓವರ್ ನಿಗದಿ ಮಾಡಲಾಯಿತು. ಇಂಗ್ಲೆಂಡ್ ತಂಡವು 133 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಗುರಿ ಬೆನ್ನಟ್ಟಿದ ಪಾಕ್ ತಂಡವು 6.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 34 ರನ್ ಗಳಿಸಿತು. ಇದೇ ಸಂದರ್ಭದಲ್ಲಿ ಮತ್ತೆ ಮಳೆ ಸುರಿಯಿತು. ರಾತ್ರಿ 10 ಗಂಟೆಯ ಸುಮಾರಿಗೆ ಅಂಪೈರ್‌ಗಳು ಪಂದ್ಯ ಸ್ಥಗಿತಗೊಳಿಸಿ ಅಂಕಗಳನ್ನು ಹಂಚಿದರು.

ಇಂಗ್ಲೆಂಡ್‌ನ ಹೀದರ್ ನೈಟ್ ವಿಕೆಟ್ ಗಳಿಸಿ ಸಂಭ್ರಮಿಸಿದ ಪಾಕಿಸ್ತಾನ ತಂಡದ ನಾಯಕಿ ಫಾತಿಮಾ ಸನಾ ಎಪಿ ಚಿತ್ರ

ಪಾಕ್ ತಂಡವು ಟೂರ್ನಿಯಲ್ಲಿ ಇದುವರೆಗೆ ಆಡಿರುವ ಮೂರು ಪಂದ್ಯಗಳಲ್ಲಿಯೂ ಸೋತಿದೆ. ಆದರೆ ಈ ಪಂದ್ಯದಲ್ಲಿ ಆರಂಭಿಕ ಹಂತದಿಂದಲೇ ಛಲದ ಆಟವಾಡಿತು. ಸ್ವತಃ ಸನಾ ಅವರೇ (27ಕ್ಕೆ4) ಪರಿಣಾಮಕಾರಿ ದಾಳಿ ಮಾಡಿದರು. ಮಧ್ಯಮವೇಗಿ ಸನಾ ಅವರು ಇಂಗ್ಲೆಂಡ್ ತಂಡದ ಎಮಿ ಜೋನ್ಸ್ (8; 8ಎ), ಹೀದರ್ ನೈಟ್ (18; 17ಎ, 4X4), ನ್ಯಾಟ್ ಶಿವರ್ ಬ್ರಂಟ್ (4 ರನ್) ಅವರ ವಿಕೆಟ್‌ಗಳನ್ನು ಬೇಗನೆ ಉರುಳಿಸಿದರು. ಅದರಿಂದಾಗಿ ಇಂಗ್ಲೆಂಡ್ ತಂಡವು 57 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತು. ಆದರೆ ಕೆಳಕ್ರಮಾಂಕದ ಬ್ಯಾಟರ್‌ಗಳಾದ ಅಲೈಸ್ ಕ್ಯಾಪ್ಸಿ (16; 43ಎ), ಚಾರ್ಲಿ ಡೀನ್ (33; 51ಎ) ಹಾಗೂ ಎಮ್ ಅರ್ಲಾಟ್ (18; 23ಎ) ಅವರು ಇಂಗ್ಲೆಂಡ್ ತಂಡವು ಅಲ್ಪ ಮೊತ್ತಕ್ಕೆ ಕುಸಿಯದಂತೆ ನೋಡಿಕೊಂಡರು.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

# ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆ ಜಾರಿಗೆ ಕರಡು ನಿಯಮ

**ನವದೆಹಲಿ (ಪಿಟಿಐ):** ನೂತನ ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆಗೆ ಕೇಂದ್ರ ಕ್ರೀಡಾ ಸಚಿವಾಲಯವು ಕರಡು ನಿಯಮಗಳನ್ನು ರೂಪಿಸಿದೆ. ಈ ಕಾಯ್ದೆಯಡಿ ಮೂವರು ಸದಸ್ಯರ ರಾಷ್ಟ್ರೀಯ ಕ್ರೀಡಾ ಮಂಡಳಿ (ಎನ್‌ಎಸ್‌ಬಿ) ಅಸ್ತಿತ್ವಕ್ಕೆ ಬರಲಿದೆ.

ಕ್ರೀಡಾ ಮಂಡಳಿಯ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ಮಾನ್ಯತೆ ನೀಡುವ ಮತ್ತು ಅವುಗಳ ಮಾನ್ಯತೆ ರದ್ದುಗೊಳಿಸುವ ಅಧಿಕಾರ ಹೊಂದಿದೆ. ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಅರ್ಹತೆ ಹೊಂದಿರುವ ಕ್ರೀಡಾಪಟುಗಳನ್ನು ಒಳಗೊಳಿಸಲು ಅರ್ಹತಾ ಮಾನದಂಡ ನಿಗದಿಪಡಿಸಲಿದೆ.

ನೂತನ ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆಯ ಅಡಿ ಸಚಿವಾಲಯವು ರಾಷ್ಟ್ರೀಯ ಕ್ರೀಡಾ ಮಂಡಳಿ, ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ ಮತ್ತು ರಾಷ್ಟ್ರೀಯ ಕ್ರೀಡಾ ಚುನಾವಣಾ ಸಮಿತಿ ಸ್ಥಾಪನೆ ಸಂಬಂಧ ಕರಡು ನಿಯಮಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಸಾರ್ವಜನಿಕರ ಅಭಿಪ್ರಾಯ, ಸಲಹೆ ಸಲ್ಲಿಕೆಗೆ 30 ದಿನಗಳ ಅವಕಾಶ ನೀಡಿದೆ.

# ಜೋಹರ್ ಕಪ್: ಆಸ್ಟ್ರೇಲಿಯಾಕ್ಕೆ ಮಣಿದ ಭಾರತ

**ಜೋಹರ್ (ಮಲೇಷ್ಯಾ), (ಪಿಟಿಐ):** ಭಾರತ ಜೂನಿಯರ್ ಪುರುಷರ ತಂಡವು, ಸುಲ್ತಾನ್ ಆಫ್ ಜೋಹರ್ ಕಪ್ ಹಾಕಿ ಟೂರ್ನಿ ಪಂದ್ಯದಲ್ಲಿ ಬುಧವಾರ 2–4 ರಿಂದ ಆಸ್ಟ್ರೇಲಿಯಾ ಎದುರು ಸೋತಿತು.

ಇದು ಈ ಟೂರ್ನಿಯ ಗುಂಪು ಹಂತದಲ್ಲಿ ಭಾರತಕ್ಕೆ ಮೊದಲ ಸೋಲು.

ಭಾರತ ತಂಡವು 4 ಪಂದ್ಯಗಳಿಂದ ಏಳು ಪಾಯಿಂಟ್ಸ್ ಗಳಿಸಿದ್ದು (ಎರಡು ಗೆಲುವು, ಒಂದು ಡ್ರಾ, ಒಂದು ಸೋಲು) ಎರಡನೇ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ 4 ಪಂದ್ಯಗಳಿಂದ 10 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿದೆ.

ಭಾರತ ತಂಡವು ಮುಂದಿನ ಪಂದ್ಯವನ್ನು ಅಕ್ಟೋಬರ್ 17ರಂದು ಮಲೇಷ್ಯಾ ವಿರುದ್ಧ ಆಡಲಿದೆ.

**ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ**
ಉಪ ಪ್ರಧಾನ ವ್ಯವಸ್ಥಾಪರು–3 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.
ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/13/25–26 ದಿನಾಂಕ: 15.10.2025
**ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)** (ಜಿಟಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
**ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಗಳೂರು** ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ವ್ಯವಸ್ಥಾಪಕ ನಿರ್ದೇಶಕರು, ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್‌ನ ಬೆಂಗಳೂರು **(ಖರೀದಿದಾರರು)** ಇವರ ಪರವಾಗಿ ಅರ್ಹ ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಸರಕುಗಳ ಪೂರೈಕೆಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸರಕುಗಳ ಪೂರೈಕೆಗಾಗಿ ಟೆಂಡರ್‌ಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (ಉದಾ. **https://kppp.karnataka.gov.in**). ಟೆಂಡರ್‌ದಾರರು ಪ್ರಮಾಣಿತ ಬಿಡ್ ದಾಖಲೆಯ ಪ್ರಕಾರ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಇತರ ವಿವರಗಳನ್ನು ಬಿಡ್ಡಿಂಗ್ ದಾಖಲೆಗಳಲ್ಲಿ ಕಾಣಬಹುದು.

| ಕಾಮಗಾರಿಯ ಹೆಸರು | ಕಾಮಗಾರಿಯ ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ. ಗಳಲ್ಲಿ) | ಅವಧಿ |
|---|---|---|---|
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಈಗ ಜಿಬಿಎ) ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿನ ಧೂಳಿನ ಕಣಗಳನ್ನು ನಿಯಂತ್ರಿಸಲು ಸ್ಥಳೀಯ ಬೀದಿಗಳನ್ನು ಗುಡಿಸಲು ಕನಿಷ್ಠ 5 ಘನ ಮೀಟರ್ ಸಾಮರ್ಥ್ಯದ ಟ್ರಕ್ ಮೌಂಟೆಡ್ ವ್ಯಾಕ್ಯೂಮ್ ಆಧಾರಿತ ಯಾಂತ್ರೀಕೃತ ಕಸ ಗುಡಿಸುವ ವಾಹನಗಳನ್ನು ಖರಿದಿಸುವ ಬಗ್ಗೆ. | 2015.00 | 1,00,000 | 3 ತಿಂಗಳುಗಳು |

**ಟೆಂಡರ್ ವೇಳಾಪಟ್ಟಿ :** (1) ಬಿಡ್ ಪೂರ್ವಭಾವಿ ವಿಚಾರಣೆಗಳಿಗೆ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 28.10.2025 ರಂದು ಸಂಜೆ 5.30 ಗಂಟೆಯವರೆಗೆ. ಕೆಪಿಪಿ ಪೋರ್ಟಲ್‌ನಲ್ಲಿ.** (2) ಬಿಡ್ ಪೂರ್ವಭಾವಿ ಸಭೆಯ **ದಿನಾಂಕ: 29.10.2025 ರಂದು ಮಧ್ಯಾಹ್ನ 3.00 ಗಂಟೆಗೆ** ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ರವರ ಕಚೇರಿ, ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು ಕಚೇರಿಯಲ್ಲಿ ನಡೆಸಲಾಗುವುದು. (3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 18.11.2025 ರಂದು ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ **ದಿನಾಂಕ: 19.11.2025 ರಂದು ಸಂಜೆ 4.30 ಗಂಟೆಗೆ ತೆರೆಯಲಾಗುವುದು.**
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು.
ವಾಸಾಸಂಇ/ವಾ.ಪ್ರ/3296/ಶಿರಡಿ ಸಾಯಿ/2025–26

**ಪ್ರಸಾರ ಭಾರತಿ**
(ಭಾರತದ ಸಾರ್ವಜನಿಕ ಸೇವಾ ಪ್ರಸಾರಕ)
ದೂರದರ್ಶನ ಕೇಂದ್ರ, ಪ್ರಾದೇಶಿಕ ಸುದ್ದಿ ವಿಭಾಗ, ಬೆಂಗಳೂರು
ಬೆಂಗಳೂರು ದೂರದರ್ಶನ ಕೇಂದ್ರದ ಪ್ರಾದೇಶಿಕ ಸುದ್ದಿ ವಿಭಾಗದಲ್ಲಿ ಈ ಕೆಳಗಿನ ಹುದ್ದೆಗಳಿಗೆ ಸಂಪೂರ್ಣವಾಗಿ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
1) ವಾರ್ತಾವಾಚಕರು-ವರದಿಗಾರರು (ಗ್ರೇಡ್-II) ಮತ್ತು (ಗ್ರೇಡ್-III) Anchor cum Correspondent ( Grade - II) & (Grade -III) 2) ಸುದ್ದಿ ಸಂಪಾದಕರು - Bulletin Editor 3) ಕಾಪಿ ಎಡಿಟರ್- Copy Editor 4) ಸಂಪಾದನಾ ಸಹಾಯಕ - Packaging Assistant 5) ಸುದ್ದಿ ಸಂಯೋಜಕರು- Content Executive
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ, ಅರ್ಹತೆ, ಶೈಕ್ಷಣಿಕ ಹಿನ್ನೆಲೆ, ಅನುಭವ ಹಾಗೂ ಅರ್ಜಿ ನಮೂನೆ ಹೊಂದಿರುವ ಮಾಹಿತಿ https://prasarbharati.gov.in/pbvacancies/ ಜಾಲತಾಣದಲ್ಲಿ ಲಭ್ಯವಿದೆ ಅರ್ಜಿಗಳನ್ನು https://avedan.prasarbharati.org/ ಜಾಲತಾಣದಲ್ಲಿ ಸಲ್ಲಿಸಬಹುದು
ಸಹಿ/-, ನಿರ್ದೇಶಕರು (ಸುದ್ದಿ)
ದೂರದರ್ಶನ ಕೇಂದ್ರ, ಬೆಂಗಳೂರು.

**ಶಾಲಾ ಶಿಕ್ಷಣ ಇಲಾಖೆ**
ಆಯುಕ್ತರ ಕಛೇರಿ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು–01.
ದೂರವಾಣಿ: 080–22291847
ಸಂಖ್ಯೆ: ದೈ.ಶಿ/ಕ್ರೀಡಾ.ಸಮವಸ್ತ್ರ.ಟೆಂಡರ್17/2025–26 ದಿನಾಂಕ: 14.10.2025
**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ** (ಇ–ಟೆಂಡರ್ ಮೂಲಕ ಮಾತ್ರ)
ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು–01 ಇವರು ಕೆ.ಟಿ.ಪಿ.ಪಿ ಕಾಯ್ದೆ 1999ರ ಅನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) 2025–26ನೇ ಸಾಲಿಗೆ ಸ್ಪೋರ್ಟ್ಸ್ ಡ್ರೆಸ್ ಮೆಟೀರಿಯಲ್‌ನ ತಯಾರಕರು/ಡೀಲರ್/ಪೂರೈಕೆದಾರ ಸಂಸ್ಥೆಗಳಿಂದ ವಿದ್ಯಾರ್ಥಿಗಳಿಗೆ ಕ್ರೀಡಾ ಉಡುಪುಗಳ ಸರಬರಾಜಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಿದೆ.
ಈ ಟೆಂಡರ್‌ನಲ್ಲಿ ನೋಂದಾಯಿತ ಸಂಸ್ಥೆಗಳು ಭಾಗವಹಿಸಬಹುದು. ವಿವರವಾದ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಂಡು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಬೇಕು.
ಸಹಿ/–
ನಿರ್ದೇಶಕರು (ಮೈನಾರಿಟಿ)
ಶಾಲಾ ಶಿಕ್ಷಣ ಇಲಾಖೆ
ವಾ.ಸಾ.ಸಂ.ಇ/ವಾಪ್ರ/3299/ಆಕಾರ್/2025–26

**ಪೊಲೀಸ್ ಇಲಾಖೆ,**
ಪೊಲೀಸ್ ಆಯುಕ್ತರವರ ಕಛೇರಿ,
ಬೆಂಗಳೂರು ನಗರ
ಸಂಖ್ಯೆ: COPBCP/EST/EST3(MISC)/70/2023 ದಿನಾಂಕ: 10.10.2025
**ಪೊಲೀಸ್ ಇಲಾಖೆಯ ತಾಂತ್ರಿಕ ಹುದ್ದೆಗಳ ನೇಮಕಾತಿ ಪ್ರಕಟಣೆ**
ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದಲ್ಲಿನ Cyber Crime ಪೊಲೀಸ್ ಠಾಣೆಗಳಲ್ಲಿ ಖಾಲಿ ಇರುವ 05 ತಾಂತ್ರಿಕ ಹುದ್ದೆಗಳನ್ನು ಒಪ್ಪಂದದ ಆಧಾರದ (Contract Basis) ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಹುದ್ದೆ | ಹುದ್ದೆಗಳ ಸಂಖ್ಯೆ |
|---|---|
| ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ | 5 |

ಅರ್ಜಿ ಸಲ್ಲಿಸಲು ಪ್ರಾರಂಭ **ದಿನಾಂಕ: 15.10.2025 ಬೆಳಿಗ್ಗೆ 10.00 ಗಂಟೆಯಿಂದ.** ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 29.10.2025 ಸಂಜೆ 6.00 ಗಂಟೆಯವರೆಗೆ.** ಮೇಲ್ಕಂಡ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಪೊಲೀಸ್ ಇಲಾಖೆಯ ಅಂತರ್ಜಾಲ: **https://ksp.karnataka.gov.in** ರಲ್ಲಿ ಮತ್ತು ಪೊಲೀಸ್ ಆಯುಕ್ತರ ಅಂತರ್ಜಾಲ **www.bcp.gov.in** ರಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ವೆಬ್‌ಸೈಟ್‌ಗಳ ಮುಖಾಂತರ ವಿವರಗಳನ್ನು ಪಡೆದು ಅರ್ಜಿಗಳನ್ನು ಈ ಕಛೇರಿಯ ವಿಳಾಸ: ನಂ. 01, ಇನ್‌ಫೆಂಟ್ರಿ ರಸ್ತೆ, ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು–560001 ಕ್ಕೆ ಅಥವಾ ಇಲಾಖೆಯ ಇ–ಮೇಲ್ **dcpadminbcp@ksp.gov.in** ಗೆ ಸಲ್ಲಿಸುವುದು.
ಸಹಿ/- (ಅಜಯ್ ಹಿಲೋರಿ, ಐಪಿಎಸ್),
ಜಂಟಿ ಪೊಲೀಸ್ ಆಯುಕ್ತರು (ಅಪರಾಧಗಳು), ಬೆಂಗಳೂರು ನಗರ.
ವಾಸಾಸಂಇ/ಉನಿ-ಸಿ.ಪಿ/3221/ಕೆಎಸ್‌ಎಂಸಿಎ/2025-26

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002
ದೂರವಾಣಿ: 080–22213530/22241325
ಇ–ಮೇಲ್: kanbhavblr@gmail.com
ವೆಬ್‌ಸೈಟ್: www.kannadasiri.in, www.kanaja.in
ಸಂಖ್ಯೆ : ಡಿಕೆಸಿ–40025/42/2025 ದಿನಾಂಕ: 15.10.2025
**ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಏರ್ಪಡಿಸುವ ಜಯಂತಿಗಳು, ಪ್ರಶಸ್ತಿ ಪ್ರದಾನ, ಇತ್ಯಾದಿ ಕಾರ್ಯಕ್ರಮಗಳಿಗೆ ಅಗತ್ಯವಿರುವ ವೇದಿಕೆ, ಎಲ್.ಇ.ಡಿ, ಸೌಂಡ್–ಸಿಸ್ಟಮ್, ಲೈಟಿಂಗ್ಸ್, ಬ್ಯಾನರ್, ಶಾಮಿಯಾನ ಫೋಟೋ / ವಿಡಿಯೋ ಚಿತ್ರೀಕರಣ ಆಮಂತ್ರಣ ಪತ್ರಿಕೆ ಮುದ್ರಣ ಮತ್ತು ಹೂವಿನ ಅಲಂಕಾರ ಇತ್ಯಾದಿಗಳನ್ನು ವ್ಯವಸ್ಥೆ ಮಾಡಲು ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ನಿಗದಿತ ನಮೂನೆಯಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ವಿಧಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.
**1) ಟೆಂಡರ್‌ಗೆ ಇಟ್ಟ ಮೊತ್ತ :** ರೂ. 2,00,00,000/–. **2) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್** : https://kppp.karnataka.gov.in ದಿನಾಂಕ: 16.10.2025. **3) ಇಎಂಡಿ ಮೊತ್ತ:** ರೂ.4,00,000/–. **4) ಅಂತರ್ಜಾಲದಲ್ಲಿ ಟೆಂಡರ್ ಡಾಕ್ಯುಮೆಂಟ್ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ :** 31.10.2025 ಸಂಜೆ 5.00 ಗಂಟೆ. **5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ** : 03.11.2025 ಬೆಳಿಗ್ಗೆ 11.00 ಗಂಟೆ. **6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** 05.11.2025 ಬೆಳಿಗ್ಗೆ 11.00 ಗಂಟೆ. **7) ಯಾವುದೇ ವಿಚಾರಣೆ, ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಬಹುದಾದ ಅಧಿಕಾರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ:** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002. ದೂರವಾಣಿ : 080–22213530.
**ಟೆಂಡರ್ ಸಂಖ್ಯೆ : DKC/2025-26/SE0046**
ಸಹಿ/– ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/3294/ಆಕಾರ್/2025–26 ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

**ಪ್ರಜಾವಾಣಿ**
**ಬೇಕಾಗಿದ್ದಾರೆ**
**ಡಿಜಿಟಲ್ ಎಡಿಟರ್**
■ ಅರ್ಹತೆಗಳು ■
ಯಾವುದೇ ವಿಷಯದಲ್ಲಿ ಸ್ನಾತಕೋತ್ತರ ಪದವೀಧರರಾಗಿರಬೇಕು. ಪತ್ರಿಕೋದ್ಯಮದಲ್ಲಿ ಕನಿಷ್ಠ 10–15 ವರ್ಷ ಕಾರ್ಯನಿರ್ವಹಿಸಿರಬೇಕು ಮತ್ತು ಡಿಜಿಟಲ್ ಮಾಧ್ಯಮದಲ್ಲಿ ಕನಿಷ್ಠ 5 ವರ್ಷ ಕೆಲಸ ಮಾಡಿರಬೇಕು.
■ ಕೆಲಸದ ಸ್ವರೂಪ ■
- ಡಿಜಿಟಲ್ ತಂಡದ ಮುಖ್ಯಸ್ಥರಾಗಿ ಸುದ್ದಿಗಳ ಆಯ್ಕೆ ಮತ್ತು ಅವುಗಳ ಪ್ರಸ್ತುತಿಯ ಬಗ್ಗೆ ನಿರ್ಧಾರ ಕೈಗೊಳ್ಳುವುದು
- ಹೊಸ ಓದುಗರನ್ನು ಸೆಳೆಯುವುದು ಮತ್ತು ಅವರ ಆಸಕ್ತಿ–ಕುತೂಹಲಕ್ಕೆ ತಕ್ಕಂತೆ ಸುದ್ದಿ–ವರದಿ ನೀಡುವುದು
- ವಿಡಿಯೊ ತಂಡದ ಜೊತೆಗೂಡಿ ಸಮಗ್ರ ಸುದ್ದಿ ನೀಡುವ ಜಾಲತಾಣ ರೂಪಿಸುವುದು
- ಪತ್ರಿಕೆಯ ತಂಡದೊಂದಿಗೆ ನಿತ್ಯದ ವಿದ್ಯಮಾನಗಳ ಬಗ್ಗೆ ಸುದ್ದಿ–ವರದಿ ಯೋಜಿಸುವುದು
- ಘಟನಾವಳಿಗಳಿಗೆ ತಕ್ಕಂತೆ ವಿಶೇಷ ಸಂಪಾದಕೀಯ ಯೋಜನೆಗಳನ್ನು ರೂಪಿಸುವುದು
- ಎಸ್‌ಇಒ ಕುರಿತು ಸಂಪೂರ್ಣ ತಿಳಿವಳಿಕೆ ಹೊಂದಿರುವುದು ಮತ್ತು ಜಾಲತಾಣದಲ್ಲಿ ಓದುಗರ ಸಂದಣಿ (ಟ್ರಾಫಿಕ್) ಹೆಚ್ಚಿಸಲು ಹೊಸ ಅವಕಾಶಗಳನ್ನು ಸೃಷ್ಟಿಸುವುದು
- ಜಾಹೀರಾತು ವಿಭಾಗದೊಂದಿಗೆ ಸಮನ್ವಯದಿಂದ ಕೆಲಸ ಮಾಡುವುದು
■ ಬೇಕಾದ ಕೌಶಲ ■
- ಭಾಷಾ ಪರಿಣತಿ ಮತ್ತು ಸುದ್ದಿ ನಿರ್ಣಯದ ಅರಿವು ಹೊಂದಿರಬೇಕು
- ಸುದ್ದಿ ನಿರೂಪಣೆಯ ವಿವಿಧ ರೀತಿಗಳ ಬಗ್ಗೆ ಪರಿಣತಿ ಇರಬೇಕು
- ಸಿಎಂಎಸ್‌ನಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಗಳನ್ನು ಪರಿಹರಿಸುವಷ್ಟು ತಾಂತ್ರಿಕ ತಿಳಿವಳಿಕೆ ಇರಬೇಕು
- ತಂತ್ರಜ್ಞಾನದ ತಿಳಿವಳಿಕೆ ಇದ್ದು, ಡಿಜಿಟಲ್ ಮಾಧ್ಯಮದಲ್ಲಿ ಅದರ ಬಳಕೆ ಗೊತ್ತಿರಬೇಕು
- ಎಂಎಸ್ ಆಫೀಸ್ ಮತ್ತು ಫೋಟೊ ಎಡಿಟಿಂಗ್ ಜ್ಞಾನ ಹೊಂದಿರಬೇಕು
- ವೆಬ್ ಅನಾಲಿಟಿಕ್ಸ್‌ನಲ್ಲಿ ಪರಿಣತಿ ಇರಬೇಕು
- ಡಿಜಿಟಲ್ ಸುದ್ದಿಮನೆಯಲ್ಲಿ ಎಐ ಸೇರಿ ತಾಂತ್ರಿಕ ಬೆಳವಣಿಗೆಗಳ ಬಗ್ಗೆ ತಿಳಿವಳಿಕೆ ಹೊಂದಿರಬೇಕು

ಆಸಕ್ತರು ಅ. 18ರೊಳಗಾಗಿ ವಿವರಗಳೊಂದಿಗೆ ಅರ್ಜಿ ಸಲ್ಲಿಸಬಹುದು
careers@prajavani.co.in

**(RULE 8(1) & (III) of ORDER XIX, S.C.R. 2013)**
**IN THE SUPREME COURT OF INDIA**
**CIVIL APPELLATE JURISDICTION**
**CIVIL APPEAL NO. 4838 OF 2016 ARISING OUT OF CIVIL APPEAL No(s) 4823-4840 OF 2016**
(Appeal by Special Leave granted by this Court's Order dated the **25th April, 2016** in Petition for SLP(C) No. 012231-12248/2016 from the Judgment and Order dated the **08th December, 2015** of the **High Court of Karnataka at Bengaluru,** KARNATAKA in **WP** No. **23953** of 2015, **WP** No. **25237** of **2015**, **WP** No. **25419 of 2015, WP** No. **25422** of **2015, WP** No. **25499** of **2015, WP** No. **25536** of **2015, WP** No. **25559** of **2015, WP** No. **25560** of **2015, WP** No. **25561** of **2015**, **WP** No. **25562** of **2015**, **WP** No. **25782** of **2015**, **WP** No. **25786** of **2015**, **WP** No. **25788** of **2015**, **WP** No. **26349** of **2015**, **WP** No. **27214** of **2015**, **WP** No. **28359** of **2015**, **WP** No. **29033** of **2015**, **WP** No. **29036** of **2015**)
THE STATE OF KARNATAKA AND ETC. ETC. ... Petitioner(s)/Appellant(s)
**VERSUS**
R. PRAVEEN CHANDRA AND ETC. ETC. ... Respondent(s)
**SMT. K.M PARVATHAMMA, W/O LATE SHRI K.M. RUDRAIAH AGED ABOUT 75 YEARS R/O "SHREE PRABHU NILAYA" XVIII/35, LINK ROAD, PARVATHINGAR, BELLARY-583103, KARNATAKA**
**PID: 221541/2025 IN C.A. NO.4823-4840/2016 (SEC IV-A)**
TAKE NOTICE that the Appellant above-named has on the **17th March, 2016** filed in the Registry of the Supreme Court, Petition for SLP(C) No. 012231-12248/2016 from the Judgment and Order of the High Court above mentioned and pursuant to this Court's order dated granting Special Leave to Appeal the case has been registered as **CIVIL APPEAL** No. **4823-4840 of 2016.**
NOTICE IS HEREBY given to you that if you wish to contest the appeal, you may appear before this Court within thirty days of the receipt of this Notice either in person or by an Advocate-on-Record of this Court appointed by you in that behalf and take such part in the proceedings as you may be advised.
TAKE FURTHER NOTICE that the instant Appeal is directed to tag with **C.A. No. 3974-4068/2016** entitled **"STATE OF KARNATAKA AND ANR. ETC. ETC. vs NATIONAL MINERAL DEVELOPMENT CORPORATION LTD. ETC. ETC."**
TAKE FURTHER NOTICE THAT in default of your appearance within the time prescribed, the appeal will be proceeded with and determined in your absence and no further notice in relation thereto shall be given to you.
Dated: **15th September, 2025**
**By order of the Court**
**Sd/-**
**Assistant Registrar**
DIPR/CP/JA/3289/2025-26

ಕಲ್ಯಾಣ್ ಜ್ಯುವೆಲ್ಲರ್ಸ್
TRULY Deepavali
FLAT 30% TO 50% OFF ON MAKING CHARGES*
FOR PLAIN, TEMPLE & ANTIQUE JEWELLERY
FLAT 50% OFF ON MAKING CHARGES* FOR PREMIUM GOLD — JEWELLERY —
FLAT 50% OFF ON MAKING CHARGES FOR UNCUT, PRECIOUS & DIAMOND — JEWELLERY —
FLAT 25%OFF ON MAKING CHARGES — FOR EVERY PURCHASE BELOW 30 GRAMS —
T&C apply. Limited period offer. *For purchases above 30 grams.
OPEN ON ALL DAYS
FLAGSHIP STORE: BANGALORE - DICKENSON ROAD - PH: 080-25550533 | ALSO AT: KORAMANGALA - PH: 95133 05333 | JAYANAGAR - PH: 080-26647733 95133 06333 | MALLESHWARAM WEST - PH: 080-23360533 | MARATHAHALLI - PH: 080-25400533 | HSR LAYOUT - PH: 99005 73633 | PHOENIX MARKET CITY PH: 080-49626533 | KAMMANAHALLI - PH: 080-41751647 | RAJAJINAGAR - PH: 76763 64991 | BANASHANKARI - PH.: 73490 79433 | KENGERI - PH: 88846 26033 HESARAGHATTA ROAD - PH : 93537 02767 | WHITEFIELD - PH: 93802 35473
FOR MORE DETAILS CONTACT US ON TOLL FREE NUMBER: 1800 425 7333 I WWW.KALYANJEWELLERS.NET I FOLLOW US ON
BUY ONLINE @ WWW.CANDERE.COM I FOR INSTITUTIONAL REQUIREMENTS, WRITE TO B2BINDIA@KALYANJEWELLERS.NET

TANEIRA
A TATA PRODUCT
TANEIRA
ನಿಜವಾದ ಪ್ರೀತಿ
ಬರೀ ಕಾಣುವುದಷ್ಟೆ ಅಲ್ಲ,
ಅದೊಂದು ಅನುಭವ.
*T&C Apply
Up to 25% off* ಆಯ್ದ ಉತ್ಪನ್ನಗಳ ಮೇಲೆ
ಖರೀದಿಯ ಮೇಲೆ ಅತ್ಯಾಕರ್ಷಕ ಉಡುಗೊರೆ ವೌಚರ್‌ಗಳು ಮತ್ತು ಚಿನ್ನದ ನಾಣ್ಯ*
ಸಾರೀಸ್ | ಕುರ್ತಾಸ್ | ಕುರ್ತಾ ಸೆಟ್ಸ್ | ಬ್ಲೌಸೆಸ್ | ಡ್ರೆಸ್ ಮೆಟೀರಿಯಲ್ಸ್
Shop online at TANEIRA.com TATACLiQ Myntra SHOPPERS STOP Bannerghatta Road taneira_sarees +91 8147 349 464 Shop on call 1800 266 0123
BANGALORE: Indiranagar: 283, 100 Feet Road, HAL 2nd Stage, Ph: 8951914621 | Jayanagar: 3rd Block, 11th Main Road, Ph: 8951914620 | Banashankari 3rd stage: 298, 7th Block, 100ft Ring Road, Ph: 8904431212 | HSR Layout: No. 818, 27th Main Road, 1st Sector, Ph: 9108924286 | Kammanahalli: 401/B, Kammanahalli Main Road, HRBR Layout 2nd Block, Near Tanishq Showroom, Ph: 080-46014779 | Malleshwaram: 116/5, 11th Cross, Margosa Road, Ph: 080-49703080 | Orion Mall: 116, 2nd Floor, Dr. Rajkumar Road, Ph: 080-22682310 | Phoenix Mall of Asia: S-10, Second Floor, Ph: 080 68572691 | Sarjapur: No. 60, Plot No 1, Opp Wipro Gate, Ph: 9591934592 I Phoenix Market City: G – 28, Lower Gr. Floor, Mahadevpura, Nr, Krishnarajapura, Ph: 080-6366944404 | HOSUR: Plot No. 20 (P), Electrical and Electronic Estate, Near Anand Bhavan Hotel, Ph 9884512789, 04344-244036
HDFC BANK FESTIVE TREATS
10% Instant discount* on credit cards

TATA MOTORS
Connecting Aspirations
TATA
FESTIVAL OF GST GREATEST SAVINGS FROM TATA MOTORS
ಭಾರತದ ಅತ್ಯಂತ ಮೆಚ್ಚಿನ ಹಾಗೂ ಸುರಕ್ಷಿತ CSUV ಆರಿಸಿಕೊಳ್ಳಿ. NEXON ಆರಿಸಿಕೊಳ್ಳಿ.
ಹಿಂದೆಂದಿಗಿಂತಲೂ ಅತ್ಯುತ್ತಮ ಬೆಲೆ, ₹7.31 Lakhಗಳಿಂದ## ಆರಂಭ.
ನಿಮ್ಮ ಫೆಸ್ಟಿವ್ ಡೆಲಿವರಿ ಸ್ಲಾಟ್-ಅನ್ನು ಕಾಯ್ದಿರಿಸಲು, ಇಂದೇ ಬುಕ್ ಮಾಡಿ.
◆ 1 Nexon sold every 5 mins
◆ India's first turbo CNG
◆ Premium and most powerful Dual Cylinder CNG SUV
◆ 1.2L Turbocharged Petrol MT, AMT, 7 Speed DCA (dual clutch)
◆ Best in segment fuel economy of 24.07 KMPL in Diesel AT
◆ India's only SUV with 5-star GNCAP & BNCAP safety rating**
◆ Tailor-made for Indian roads: 208mm Ground Clearance
NEXON
New Price ₹7.31 Lakh##
Reduction In Ex-Showroom Price Post GST 2.0 ₹1.55 Lakh#
Additional Benefits Up To ₹0.70 Lakh#
BIGGER CELEBRATIONS WITH BIGGEST OFFERS. FOR LIMITED PERIOD. HURRY.

| Persona | Special Price Post GST 2.0@ | Reduction In Ex-Showroom Price# | Additional Benefits# |
|---|---|---|---|
| Smart | ₹7.31 L | ₹0.68 L | ₹0.60 L |
| Pure+ Petrol | ₹8.87 L | ₹0.82 L | ₹0.60 L |
| Creative | ₹9.99 L | ₹1.00 L | ₹0.55 L |
| Pure+ S CNG | ₹9.99 L | ₹1.00 L | ₹0.60 L |
| Pure+ Diesel | ₹9.90 L | ₹1.09 L | ₹0.60 L |

NEXON
book TATA Nexon
Safety at your fingertips: 26.03 cm touchscreen infotainment by Harman™ with 360° camera
JBL Audio System with 9 Speakers and a Subwoofer
iCNG with full usable 321L Boot Space
Panoramic Sunroof
Ventilated Leatherette Seats
India's ONLY vehicle available in Petrol, Diesel, CNG & EV
Up to 100% On-road Financing^
Zero Processing Fees~
9 lakh Nexons◊, One strong family
TATA MOTORS SAFETY DOME 360° PROTECTION
BHARAT NCAP
GLOBAL NCAP FOR SAFER CARS
ADISHAKTI CARS Hebbal: 7506023837; Dasarahalli: 9167982568; Kalyana Nagar: 9167163087
BELLAD ENTERPRISES PVT LTD Bommsandra 8238883535, 9035354160; Sarajpura: 8879932503
CAUVERY MOTORS: Avalahalli: 8879156068; Mekhri Circle: 8422849049; Devanahalli: 8879078454
KEY MOTORS JP Nagar Kanakapura Road: 7506023980, Mysore Road: 9167395034, Kanakapura City: 8879145649, BG Road: 9167395164, Nelamangala: 9167881890, Sunkadakatte Magadi Road: 9167882027
KHT MOTORS Whitefield: 7506023988; Domlur: 7506024006, Kolar: 9731149668
KROPEX AUTO Hosur Road: 7506024016, Koramangala: 9167395364, Sarjapur road: 8291202713, Mahadevapura: 8291052641
PRERANA MOTORS Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334
SREE AUTO Tumkur: 7506024318,Tiptur: 9619050469, Chitradurga: 9619033465, Kunigal: 8879046819, Chikkaballapur: 9167082428, Chintamani: 8291927028
Images and illustrations are indicative and for information purposes only. All features/specifications/colors are not available in all variants and may vary for different variants and are subject to change without prior information. Colours may vary due to printing limitations. ^ Offers are from multiple Financiers. ~Finance at sole discretion of Financier. #The benefits mentioned are of particular model and variant. Benefits will vary depending on the model and variant selected. For exact details, please contact your nearest authorized TATA Motors dealership. Additional benefits include consumer offer, exchange offer, loyalty, intervention consumer, intervention exchange. #Old ESP & New ESP refers to prices before and after GST 2.0 change. 100% GST Benefits have been passed on in the New Prices. ##Price mentioned is Nexon Smart MT Petrol, ex showroom Delhi Local taxes extra. Nexon GNCAP tested in Feb'24 & BNCAP tested in Oct'24. TATA Nexon scored highest adult occupant score as per test conducted by Bharat NCAP and Global NCAP in category of SUV less than 4 meter & engine less than 1.5L as per GNCAP & BNCAP test result. Only Compact SUV. Nexon is available in petrol, diesel, CNG and EV in India. Flame Red colour is available with limited stock. Please confirm the exact price of your preferred car/SUV variant from an authorized Tata Motors showroom near you. @Prices mentioned in the table are for petrol manual transmission. ◊9 lakh Nexon includes EV and ICE. ΩOnly in the compact SUV segment (under 4meter, 12liter engine). The mileage figures quoted 24.07 kmpl for the Nexon diesel AMT are ARAI certified test figures under controlled conditions. Actual mileage may vary significantly as per driving conditions. Only in the compact SUV segment under 4meter. 1.5liter diesel engine). Terms and Conditions apply.

ಗುರುವಾರ, ಅಕ್ಟೋಬರ್ 16, 2025 | ₹ 7.00
prajavani.net prajavani • www.prajavani.net

**ನಕ್ಸಲ್ ಶರಣಾಗತಿ**
ಹಿರಿಯ ನಕ್ಸಲ್ ನಾಯಕ ಮಲ್ಲೋಜುಲ ವೇಣುಗೋಪಾಲ್ ರಾವ್ ಅಲಿಯಾಸ್ ಭೂಪತಿ ಸಂವಿಧಾನದ ಪ್ರತಿ ಹಿಡಿದು ಮಹಾರಾಷ್ಟ್ರದ ಗಢಚಿರೋಲಿಯಲ್ಲಿ ಬುಧವಾರ ಶರಣಾದರು

# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ


**ಓದುಗರ ಗಮನಕ್ಕೆ**
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

ಜಲಯಾನದಲ್ಲಿ ಭಾರತ ಸೂಪರ್ ಪವರ್ 2
ಗಲ್ಲುಶಿಕ್ಷೆಗೆ ಪರ್ಯಾಯ ಆಯ್ಕೆ: ಒಪ್ಪದ ಕೇಂದ್ರ 5

# ನೌಕರರಿಗೆ ‘ಸರ್ಕಾರಿ ಮಾರ್ಕೆಟ್’

## ಪೊಲೀಸ್, ಸೇನಾ ಕ್ಯಾಂಟೀನ್ ಮಾದರಿಯ ಮಳಿಗೆ ಕಾರ್ಯಸಾಧ್ಯತೆ ವರದಿ ಸಲ್ಲಿಸಲು ಎಂಎಸ್ಐಎಲ್‌ಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೊಲೀಸ್ ಮತ್ತು ಸೇನಾ ಕ್ಯಾಂಟೀನ್ ಮಾದರಿಯಲ್ಲೇ ರಾಜ್ಯ ಸರ್ಕಾರದ ನೌಕರರಿಗೂ ಎಂಎಸ್ಐಎಲ್ ವತಿಯಿಂದ ಸೂಪರ್ ಮಾರ್ಕೆಟ್ ಆರಂಭಿಸುವ ಚಿಂತನೆ ಇದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ (ಎಂಎಸ್ಐಎಲ್) ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್ ಅವರ ಜತೆ ಎಂ.ಬಿ. ಪಾಟೀಲ ಅವರು ಬುಧವಾರ ಸಭೆ ನಡೆಸಿದರು.

ಬಳಿಕ ಮಾಹಿತಿ ನೀಡಿದ ಅವರು, ‘ಪೊಲೀಸ್ ಮತ್ತು ಸೇನಾ ಕ್ಯಾಂಟೀನ್‌ನಲ್ಲಿ ರಿಯಾಯಿತಿ ದರದಲ್ಲಿ ದಿನಸಿ, ಗೃಹಬಳಕೆ ವಸ್ತುಗಳು ದೊರೆಯುತ್ತವೆ. ರಾಜ್ಯದಲ್ಲಿ ಆರು ಲಕ್ಷ ಸರ್ಕಾರಿ ನೌಕರರು ಇದ್ದು, ಅವರಿಗೂ ರಿಯಾಯಿತಿ ದರದಲ್ಲಿ ದಿನಸಿ ಮತ್ತಿತರ ವಸ್ತುಗಳನ್ನು ಒದಗಿಸುವ ಸೂಪರ್‌ಮಾರ್ಕೆಟ್ ಆರಂಭಿಸುವ ಬಗ್ಗೆ ಪ್ರಾಥಮಿಕ ಸಭೆಯನ್ನು ನಡೆಸಲಾಗಿದೆ’ ಎಂದು ವಿವರಿಸಿದರು.

ಎಂ.ಬಿ. ಪಾಟೀಲ

‘ದಿನಸಿ ಮತ್ತಿತರ ವಸ್ತುಗಳನ್ನು ರಿಯಾಯಿತಿ ಅಥವಾ ಸಹಾಯಧನ ಸಹಿತ ದರದಲ್ಲಿ ಒದಗಿಸುವ ಸಾಧ್ಯತೆಗಳು ಹಾಗೂ ಅದರ ಆರ್ಥಿಕ ಪರಿಣಾಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಈ ಬಗ್ಗೆ ಒಂದು ತಿಂಗಳಲ್ಲಿ ವಿಸ್ತೃತ ವರದಿ ಸಲ್ಲಿಸಿ ಎಂದು ಎಂಎಸ್ಐಎಲ್ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಮಾಹಿತಿ ನೀಡಿದರು.

‘ಮೊದಲ ಹಂತದಲ್ಲಿ, ಬೆಂಗಳೂರಿನಲ್ಲಿ 4–5 ಮಳಿಗೆಗಳನ್ನು ಆರಂಭಿಸುವ ಯೋಚನೆ ಇದೆ. ನಂತರದ ದಿನಗಳಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಿಗೂ ಇಂತಹ ಮಳಿಗೆಗಳನ್ನು ವಿಸ್ತರಿಸಲು ಅವಕಾಶವಿರಲಿದೆ. ಕಾರ್ಯಸಾಧ್ಯತಾ ವರದಿ ಬಂದ ನಂತರ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಹೇಳಿದರು.

**ಎಂಎಸ್ಐಎಲ್‌ಗೂ ಅನುಕೂಲ:** ‘ಈ ಯೋಜನೆ ಕಾರ್ಯಾರಂಭ ಮಾಡಿದರೆ, ಎಂಎಸ್ಐಎಲ್‌ಗೂ ಅನುಕೂಲವಾಗಲಿದೆ. ಈಗ ಎಂಎಸ್ಐಎಲ್‌ನ ಚಟುವಟಿಕೆಗಳು ಸೀಮಿತವಾಗಿವೆ. ಅದಕ್ಕೆ ಮತ್ತಷ್ಟು ಕಸುವು ತುಂಬಿ, ಆರ್ಥಿಕವಾಗಿ ಸದೃಢಗೊಳಿಸಬೇಕು ಎಂಬ ಆಲೋಚನೆ ನಮ್ಮದು. ಈ ಯೋಜನೆಯಿಂದ ಅಪಾರ ಸಂಖ್ಯೆಯಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗಗಳೂ ಸೃಷ್ಟಿಯಾಗಲಿವೆ’ ಎಂದು ಎಂ.ಬಿ.ಪಾಟೀಲ ಹೇಳಿದರು.

### ಪರಿಶೀಲನಾ ಹಂತದಲ್ಲಿ ಯೋಜನೆ

- ದಿನಬಳಕೆ ವಸ್ತುಗಳು, ದಿನಸಿಯನ್ನು ರಿಯಾಯಿತಿ ದರ ಅಥವಾ ಸಹಾಯಧನ ಸಹಿತ ದರದಲ್ಲಿ ಮಾರಾಟ ಮಾಡಲು ಚಿಂತನೆ
- ರಾಜ್ಯ ಸರ್ಕಾರದ ಆರು ಲಕ್ಷ ನೌಕರರು, ಕುಟುಂಬದ ಸದಸ್ಯರು ಸೂಪರ್‌ಮಾರ್ಕೆಟ್‌ನಲ್ಲಿ ಖರೀದಿಸಲು ಅವಕಾಶ
- ನಿಗಮ ಮಂಡಳಿಗಳ ನೌಕರರು, ಸರ್ಕಾರದ ಎಲ್ಲ ಇಲಾಖೆ/ಪ್ರಾಧಿಕಾರಗಳ ಗುತ್ತಿಗೆ ನೌಕರರಿಗೂ ಖರೀದಿಗೆ ಅವಕಾಶ
- ರಾಜ್ಯ ಸರ್ಕಾರದ ನಿವೃತ್ತ ನೌಕರರು ಮತ್ತು ಕುಟುಂಬದವರಿಗೂ ಈ ಸೇವೆ ವಿಸ್ತರಿಸುವ ಬಗ್ಗೆ ಪರಿಶೀಲಿಸಲು ಸೂಚನೆ
- ಆರಂಭಿಕ ಹಂತದಲ್ಲಿ ಬೆಂಗಳೂರಿನಲ್ಲಿ ಮಳಿಗೆಗಳ ಆರಂಭಕ್ಕೆ ಯೋಜನೆ. ನಂತರದ ದಿನಗಳಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಿಗೆ ವಿಸ್ತರಿಸಲು ಅವಕಾಶ

### ‘ಲಾಭಾಂಶ ಕಡಿಮೆ ಇರಿಸಿ ಮಾರಾಟ’

‘ರಾಜ್ಯ ಪೊಲೀಸ್ ಇಲಾಖೆಯು ತನ್ನ ಸಿಬ್ಬಂದಿಗಾಗಿ ‘ಪೊಲೀಸ್ ಕ್ಯಾಂಟೀನ್’ ನಡೆಸುತ್ತಿದೆ. ಪೊಲೀಸ್ ಸಿಬ್ಬಂದಿಯು ತಮ್ಮ ತಿಂಗಳ ದಿನಸಿಯನ್ನು ಈ ಕ್ಯಾಂಟೀನ್‌ಗಳಲ್ಲಿ ಸಹಾಯಧನ ಸಹಿತ ದರದಲ್ಲಿ ಖರೀದಿಸಬಹುದಾಗಿದೆ. ಲಾಭಾಂಶವನ್ನು ಕಡಿಮೆ ಇರಿಸಿಕೊಂಡು ಈ ಕ್ಯಾಂಟೀನ್‌ಗಳು ವಹಿವಾಟು ನಡೆಸುತ್ತಿವೆ. ಇದೇ ಮಾದರಿಯಲ್ಲಿ ಎಂಎಸ್ಐಎಲ್ ಸೂಪರ್ ಮಾರ್ಕೆಟ್‌ಗಳನ್ನು ರೂಪಿಸಬಹುದಾಗಿದೆ’ ಎಂದು ಸಚಿವ ಎಂ.ಬಿ.ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈಗ ಎಂಎಸ್ಐಎಲ್ ಪುಸ್ತಕ ಮತ್ತಿತರ ವಸ್ತುಗಳನ್ನು ಅತ್ಯಂತ ಕಡಿಮೆ, ಶೇ 3.50ರಷ್ಟು ಲಾಭಾಂಶ ಇರಿಸಿಕೊಂಡು ವಹಿವಾಟು ನಡೆಸುತ್ತಿದೆ. ವ್ಯಾಪಾರಿಗಳು, ಇತರ ಸೂಪರ್ ಮಾರ್ಕೆಟ್‌ಗಳು ಶೇ 30ರಿಂದ ಶೇ 40ರಷ್ಟು ಲಾಭಾಂಶ ಇರಿಸಿಕೊಂಡಿರುತ್ತವೆ’ ಎಂದು ವಿವರಿಸಿದರು.

‘ಜತೆಗೆ ಪೂರೈಕೆದಾರರೂ ಸಾಧ್ಯವಾದಷ್ಟು ಕಡಿಮೆ ದರದಲ್ಲಿ ಪೂರೈಸುವಂತೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಲು ಒತ್ತು ನೀಡಲಾಗುತ್ತದೆ’ ಎಂದರು.

### ತುಟ್ಟಿಭತ್ಯೆ ಶೇ 2ರಷ್ಟು ಹೆಚ್ಚಳ

ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆಯನ್ನು ಜುಲೈ 1ರಿಂದಲೇ ಪೂರ್ವಾನ್ವಯವಾಗುವಂತೆ ಶೇ 2ರಷ್ಟು ಹೆಚ್ಚಳ ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ನೌಕರರು ಈಗ ತಮ್ಮ ಮೂಲ ವೇತನದ ಶೇ 12.25ರಷ್ಟು ತುಟ್ಟಿಭತ್ಯೆ ಪಡೆಯುತ್ತಿದ್ದು, ಹೊಸ ಆದೇಶದಿಂದಾಗಿ ಒಟ್ಟು ತುಟ್ಟಿಭತ್ಯೆ ಪ್ರಮಾಣ ಶೇ 14.25ಕ್ಕೆ ಏರಿಕೆಯಾಗಲಿದೆ. ಈ ಆದೇಶ ನಿವೃತ್ತ ಸರ್ಕಾರಿ ನೌಕರರು, ಅವಲಂಬಿತ ಪಿಂಚಣಿದಾರರು, ಜಿಲ್ಲಾ ಪಂಚಾಯಿತಿ ಪೂರ್ಣಾವಧಿ ನೌಕರರು, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು, ನಿವೃತ್ತ ವೇತನದಾರಿಗೂ ಈ ನಿಯಮ ಅನ್ವಯವಾಗಲಿದೆ. ಯುಜಿಸಿ ವೇತನಶ್ರೇಣಿ ಪಡೆಯುವ ನೌಕರರು, ಎನ್‌ಜಿಪಿಸಿ ವೇತನ ಶ್ರೇಣಿ ಪಡೆಯುವ ನ್ಯಾಯಾಂಗ ಇಲಾಖೆ ಅಧಿಕಾರಿಗಳಿಗೆ ಈ ಆದೇಶ ಅನ್ವಯ ಆಗುವುದಿಲ್ಲ.

‘ಶೇ 2ರಷ್ಟು ತುಟ್ಟಿಭತ್ಯೆ ಹೆಚ್ಚಳದಿಂದ ರಾಜ್ಯದ ಸುಮಾರು 5.25 ಲಕ್ಷ ಸರ್ಕಾರಿ ನೌಕರರು, ನಿಗಮ, ಮಂಡಳಿ, ಅನುದಾನಿತ ಸಂಸ್ಥೆಗಳ 3 ಲಕ್ಷ ಸಿಬ್ಬಂದಿ, 4.50 ಲಕ್ಷ ನಿವೃತ್ತ ನೌಕರರಿಗೆ ಅನುಕೂಲವಾಗಲಿದೆ’ ಎಂದು ರಾಜ್ಯ ಸರ್ಕಾರ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದ್ದಾರೆ.

## ಬೌದ್ಧ ಮಹಾ ಸಮ್ಮೇಳನ

ಪ್ರಜಾವಾಣಿ ಚಿತ್ರ

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬುಧವಾರ ನಡೆದ ಬೌದ್ಧ ಮಹಾ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುದ್ಧನ ಉಬ್ಬುಶಿಲ್ಪದ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಸಚಿವರಾದ ಸತೀಶ ಜಾರಕಿಹೊಳಿ, ಡಾ. ಎಚ್.ಸಿ. ಮಹದೇವಪ್ಪ, ವಿಶ್ವಮೈತ್ರಿ ಬುದ್ಧ ವಿಹಾರದ ಸಂಚಾಲಕ ವಿ. ಪುರುಷೋತ್ತಮ್, ಗೃಹ ಸಚಿವ ಡಾ. ಜಿ. ಪರಮೇಶ್ವರ ಹಾಗೂ ಜ್ಞಾನಪ್ರಕಾಶ ಸ್ವಾಮೀಜಿ ಜೊತೆಗಿದ್ದರು

ಸುದ್ದಿ ಪುಟ 2

# ಧರಣಿ ಕೈಬಿಟ್ಟ ಅಲೆಮಾರಿಗಳು

## ಶೇ 1 ಮೀಸಲಾತಿ ನೀಡುವುದಾಗಿ ‘ಕೈ’ ಭರವಸೆ: ಸಮುದಾಯದ ಮುಖಂಡರು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕದಲ್ಲಿ ಅಲೆಮಾರಿಗಳಿಗೆ ಶೇ 1ರಷ್ಟು ಒಳಮೀಸಲಾತಿ ಕೊಡಿಸುವುದಾಗಿ ಕಾಂಗ್ರೆಸ್ ನಾಯಕರು ಭರವಸೆ ನೀಡಿದ ಕಾರಣ ಎಐಸಿಸಿ ಕಚೇರಿ ಆವರಣದಲ್ಲಿ ನಡೆಸುತ್ತಿದ್ದ ಧರಣಿಯನ್ನು ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಬುಧವಾರ ಅಂತ್ಯಗೊಳಿಸಿತು.

‘ಪರಿಶಿಷ್ಟರ ಒಳಮೀಸಲಾತಿಯಲ್ಲಿ ನ್ಯಾ.ನಾಗಮೋಹನ್‌ದಾಸ್ ನೇತೃತ್ವದ ವರದಿಯಂತೆ ಅಲೆಮಾರಿ ಸಮುದಾಯಕ್ಕೆ ಶೇ 1ರಷ್ಟು ಮೀಸಲಾತಿ ನೀಡಲು ಮತ್ತು ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆ ಹಾಗೂ ವಿಶೇಷ ಆರ್ಥಿಕ ಪ್ಯಾಕೇಜ್‌ಗೆ ರಾಜ್ಯ ಸರ್ಕಾರದಿಂದ ತಾತ್ವಿಕ ಒಪ್ಪಿಗೆ ದೊರಕಿದೆ’ ಎಂದು ಒಕ್ಕೂಟವು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

**ಒಳಮೀಸಲು**

ಎಐಸಿಸಿ ಕೇಂದ್ರ ಕಚೇರಿಯಲ್ಲಿ ಸಮುದಾಯದ ಮುಖಂಡರ ಜತೆಗೆ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮಾತುಕತೆ ನಡೆಸಿದರು. ‘ಸಮುದಾಯದ ಬೇಡಿಕೆ ಈಡೇರಿಸಲು ಸರ್ಕಾರ ಸಿದ್ಧವಿದೆ. ದೀಪಾವಳಿ ಮುಗಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸಭೆ ನಡೆಸಲಾಗುತ್ತದೆ. ಸಮಸ್ಯೆ ಬಗೆಹರಿಯದಿದ್ದರೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜತೆಗೆ ಸಭೆ ನಿಗದಿ ಮಾಡಿಸುವೆ’ ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಜತೆಗೆ ದೂರವಾಣಿಯಲ್ಲಿ ಚರ್ಚಿಸಿದರು. ‘ದಯವಿಟ್ಟು ರಾಜ್ಯಕ್ಕೆ ವಾಪಸ್ ಬನ್ನಿ. ಅಲೆಮಾರಿ ಸಮುದಾಯಗಳ ಸಮಸ್ಯೆ ಬಗೆಹರಿಸುತ್ತೇವೆ’ ಎಂದು ಮಹದೇವಪ್ಪ ಅವರು ಹೋರಾಟಗಾರರಿಗೆ ಮನವಿ ಮಾಡಿದರು.

ಮಾತುಕತೆ ಸಂದರ್ಭದಲ್ಲಿ ಅಲೆಮಾರಿ ಸಮುದಾಯದ ಮುಖಂಡರಾದ ಎ.ಎಸ್.ಪ್ರಭಾಕರ್, ಮಂಜುನಾಥ್ ದಾಯತ್ಕರ್, ಬಸವರಾಜ್ ನಾರಾಯಣಕರ್, ಚಾವಡಿ ಲೋಕೇಶ್, ಮಂಡ್ಯ ರಾಜಣ್ಣ, ಸಂದೀಪ್ ಕುಮಾರ್ ದಾಸರ್, ಶರಣಪ್ಪ ಚನ್ನದಾಸರ್, ಸಿಂದೋಳು ಸಮುದಾಯದ ಹನುಮಂತು, ಒಳ ಮೀಸಲಾತಿ ಹೋರಾಟ ಸಮಿತಿಯ ರಾಜ್ಯ ಸಂಚಾಲಕ ಕರಿಯಪ್ಪ ಗುಡಿಮನಿ, ಕರ್ನಾಟಕ ಜನಶಕ್ತಿಯ ಅಧ್ಯಕ್ಷ ನೂರ್ ಶ್ರೀಧರ್ ಹಾಗೂ ‘ಎದ್ದೇಳು ಕರ್ನಾಟಕ’ದ ತಾರಾ ರಾವ್ ಹಾಜರಿದ್ದರು.

‘ಧರಣಿ ಅಂತ್ಯಗೊಳಿಸಿ ರಾಜ್ಯಕ್ಕೆ ಮರಳಲು ಒಕ್ಕೂಟ ತೀರ್ಮಾನಿಸಿದೆ. ಕೊಟ್ಟ ಮಾತಿನಂತೆ ರಾಜ್ಯ ಸರ್ಕಾರ ಹಾಗೂ ಎಐಸಿಸಿ ಮುಖಂಡರು ನಡೆದುಕೊಳ್ಳುತ್ತಾರೆಂಬ ವಿಶ್ವಾಸವಿದೆ. ಒಂದು ವೇಳೆ ನಮ್ಮ ನಿರೀಕ್ಷೆ ಹುಸಿಯಾದರೆ, ಮತ್ತೆ ನವದೆಹಲಿಗೆ ಬರುವುದು ಖಚಿತ’ ಎಂದು ಸಮುದಾಯದ ಮುಖಂಡರು ಎಚ್ಚರಿಕೆ ನೀಡಿದರು.

### ಮುಖ್ಯಾಂಶಗಳು

- ‘ವಿಶೇಷ ಆರ್ಥಿಕ ಪ್ಯಾಕೇಜ್‌ಗೆ ಸರ್ಕಾರದಿಂದ ತಾತ್ವಿಕ ಒಪ್ಪಿಗೆ’
- ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟ ಹೇಳಿಕೆ
- ಮುಖಂಡರ ಜತೆ ಬಿ.ಕೆ. ಹರಿಪ್ರಸಾದ್ ಮಾತುಕತೆ

## ದೂರುದಾರರ ಮೇಲೆ ಹಲ್ಲೆ: ಪಿಎಸ್ಐ ಅಮಾನತು

ಪ್ರಜಾವಾಣಿ ವಾರ್ತೆ

**ಕುಕನೂರು (ಕೊಪ್ಪಳ ಜಿಲ್ಲೆ):** ದೂರು ನೀಡಲು ಬಂದಾತನ ಮೇಲೆಯೇ ಹಲ್ಲೆ ಮಾಡಿದ್ದ ಆರೋಪದಡಿ ಜಿಲ್ಲೆಯ ಕುಕನೂರು ಠಾಣೆಯ ಸಬ್ ಇನ್‌ಸ್ಪೆಕ್ಟರ್ ಗುರುರಾಜ್ ಟಿ. ಅವರನ್ನು ಅಮಾನತು ಮಾಡಲಾಗಿದೆ.

ಗುರುರಾಜ್

‘ನನ್ನ ಮೇಲೆ ಹಲ್ಲೆ ಮಾಡಿ ಪಿಎಸ್ಐ ದೌರ್ಜನ್ಯ ಎಸಗಿದ್ದಾರೆ’ ಎಂದು ಕೊಪ್ಪಳ ತಾಲ್ಲೂಕಿನ ಯಲಮಗೇರಿಯ ಗಾಳೆಪ್ಪ ಹಿರೇಮನಿ ದೂರು ನೀಡಿದ್ದರು.

‘ದಲಿತ ಸಮುದಾಯದ ಮುಖಂಡರು ಮಂಗಳವಾರ ತಡರಾತ್ರಿ ತನಕ ಠಾಣೆ ಎದುರು ಪ್ರತಿಭಟಿಸಿದ್ದು, ಪಿಎಸ್ಐ ಅಮಾನತು ತನಕ ಹೋರಾಟ ನಿಲ್ಲಿಸುವುದಿಲ್ಲ’ ಎಂದು ಪಟ್ಟು ಹಿಡಿದಿದ್ದರು. ಬಳಿಕ ಬಳ್ಳಾರಿ ವಲಯದ ಐಜಿಪಿ ವರ್ತಿಕಾ ಕಟಿಯಾರ್ ಜೊತೆ ದೂರವಾಣಿ ಮೂಲಕ ಚರ್ಚಿಸಿದ ಎಸ್‌ಪಿ ಡಾ. ರಾಮ್ ಎಲ್. ಅರಸಿದ್ದಿ, ಅಮಾನತು ಆದೇಶ ಹೊರಡಿಸಿದರು.

# ಅರಿವಳಿಕೆ ನೀಡಿ ವೈದ್ಯೆ ಪತ್ನಿ ಕೊಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿಗೆ ಅನಸ್ತೇಶಿಯಾ ನೀಡಿ ಕೊಂದು, ಸಹಜ ಸಾವು ಎಂದು ಬಿಂಬಿಸಿದ್ದ ವಿಕ್ಟೋರಿಯಾ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಮಹೇಂದ್ರ ರೆಡ್ಡಿ ಅವರನ್ನು ಮಾರತ್‌ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮುನೇನಕೊಳಲು ಅಯ್ಯಪ್ಪಸ್ವಾಮಿ ಲೇಔಟ್ ನಿವಾಸಿ ಡಾ.ಕೃತಿಕಾ ರೆಡ್ಡಿ(30) ಅವರು ಕೊಲೆಯಾದವರು. ಮೃತರ ತಂದೆ ಕೆ.ಮುನಿರೆಡ್ಡಿ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ಈಕೆಯ ಪತಿ ವರ್ತೂರಿನ ಗುಂಜೂರು ನಿವಾಸಿ ಡಾ. ಮಹೇಂದ್ರ ರೆಡ್ಡಿ ಅವರನ್ನು ಬಂಧಿಸಲಾಗಿದೆ.

ಆರೋಪಿ ಆರು ತಿಂಗಳ ಹಿಂದೆ ಪತ್ನಿ ಕೃತಿಕಾ ರೆಡ್ಡಿ ಅವರಿಗೆ ಅನಸ್ತೇಶಿಯಾ ಕೊಟ್ಟು ಹತ್ಯೆಗೈದಿದ್ದರು. ಇದೀಗ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಆಧರಿಸಿ ಆರೋಪಿ ಮಹೇಂದ್ರ ರೆಡ್ಡಿ ಅವರನ್ನು ಉಡುಪಿ ಜಿಲ್ಲೆಯ ಮಣಿಪಾಲದಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

2024ರ ಮೇ 24ರಂದು ಮಹೇಂದ್ರ ರೆಡ್ಡಿ ಮತ್ತು ಕೃತಿಕಾ ರೆಡ್ಡಿ ಹಿರಿಯರ ಸಮ್ಮುಖದಲ್ಲೇ ಮದುವೆಯಾಗಿದ್ದರು. ಕೃತಿಕಾ ರೆಡ್ಡಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚರ್ಮರೋಗ ತಜ್ಞರಾಗಿದ್ದು, ಮಹೇಂದ್ರ ರೆಡ್ಡಿ ಅದೇ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಕರು. ಈ ಮಧ್ಯೆ ಕೃತಿಕಾ ರೆಡ್ಡಿ ಅಜೀರ್ಣ, ಗ್ಯಾಸ್ಟ್ರಿಕ್ ಮತ್ತು ಲೋ ಶುಗರ್ ಸಮಸ್ಯೆಯಿಂದ ಬಳಲುತ್ತಿದ್ದರು. ಆದರೆ, ಪತಿಗೆ ಗೊತ್ತಾಗದಂತೆ ಔಷಧ ತೆಗೆದುಕೊಳ್ಳುತ್ತಿದ್ದರು.

ಡಾ.ಕೃತಿಕಾ ರೆಡ್ಡಿ ಮತ್ತು ಡಾ.ಮಹೇಂದ್ರ ರೆಡ್ಡಿ

ಮದುವೆಯಾದ ಕೆಲ ತಿಂಗಳ ಬಳಿಕ ಅವರ ಆರೋಗ್ಯ ಸಮಸ್ಯೆ ಹೆಚ್ಚಾಗಿತ್ತು. ಹೀಗಾಗಿ ಅವರನ್ನು ತವರು ಮನೆಗೆ ಕಳುಹಿಸಲಾಗಿತ್ತು. ಅಲ್ಲಿಗೆ ಹೋಗಿ ಪತ್ನಿಗೆ ಆರೋಪಿಯೇ ಚಿಕಿತ್ಸೆ ನೀಡುತ್ತಿದ್ದರು. 2025ರ ಏಪ್ರಿಲ್ 2ರಂದು ಪತ್ನಿ ಕೃತಿಕಾಗೆ ಹೆಚ್ಚುವರಿ ಅನಸ್ತೇಶಿಯಾ ನೀಡಿದ್ದು, ಅವರು ಕೋಮಾ ಸ್ಥಿತಿ ತಲುಪಿದ್ದಾರೆ. ಕೂಡಲೇ ಅವರನ್ನು ಹತ್ತಿರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಅಲ್ಲಿ ಮೃತಪಟ್ಟಿದ್ದರು. ಹೀಗಾಗಿ ಮೃತರ ಪೋಷಕರು ಯಾವುದೇ ಅನುಮಾನ ಇಲ್ಲ ಎಂದು ದೂರು ನೀಡಿದ್ದರಿಂದ ಯುಡಿಆರ್ ದಾಖಲಾಗಿತ್ತು.

**ಎಫ್‌ಎಸ್‌ಎಲ್ ವರದಿ ಆಧರಿಸಿ ಬಂಧನ:** ಬಳಿಕ ಮರಣೋತ್ತರ ಪರೀಕ್ಷೆ ನಡೆಸಲಾಗಿತ್ತು. ಜತೆಗೆ ಘಟನಾ ಸ್ಥಳದಲ್ಲಿ ದೊರೆತಿದ್ದ ಕೆನಾಲ್, ಇಂಜೆಕ್ಷನ್‌ಗಳು ಹಾಗೂ ಇತರೆ ವೈದ್ಯಕೀಯ ಪರಿಕರಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಅಲ್ಲದೇ, ಮೃತದೇಹದ ಕೆಲ ಮಾದರಿಗಳನ್ನು ಎಫ್‌ಎಸ್‌ಎಲ್‌ಗೆ ಕಳಿಸಲಾಗಿತ್ತು. ಎಫ್‌ಎಸ್‌ಎಲ್ ವರದಿಯಲ್ಲಿ ಅನಸ್ತೇಶಿಯಾ ಅಂಶಗಳು ಹೆಚ್ಚಾಗಿದ್ದರಿಂದ ಅವರು ಮೃತಪಟ್ಟಿದ್ದಾರೆ ಎಂದು ದೃಢವಾಗಿತ್ತು. ಹಾಗಾಗಿ ಕೃತಿಕಾ ಅವರ ತಂದೆಯಿಂದ ದೂರು ಪಡೆದು, ಪ್ರಕರಣ ದಾಖಲಿಸಿಕೊಂಡು ಆರೋಪಿ ಮಹೇಂದ್ರ ರೆಡ್ಡಿ ಅವರನ್ನು ಬಂಧಿಸಿ, ಒಂಬತ್ತು ದಿನ ಕಸ್ಟಡಿಗೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಈ ಸಂಬಂಧ ಮಾರತ್ತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮೀಕ್ಷೆಗೆ ತೆರಳಿ ನಾಪತ್ತೆ ಆಗಿದ್ದ ಶಿಕ್ಷಕಿ ಮೃತದೇಹ ಕೆರೆಯಲ್ಲಿ ಪತ್ತೆ 2
ಚರಂಡಿ ಕಸ ತೆಗೆದ ಕೊಡಗು ಜಿಲ್ಲಾಧಿಕಾರಿ 2
ಕೃತಿಸ್ವಾಮ್ಯ: ಇಳಯರಾಜ ಸಂಸ್ಥೆಗೆ ನೋಟಿಸ್ 5

ಚಿಟಿಕೆ ಸುದ್ದಿ

## ‘ಈ ಹೊತ್ತಿಗೆ’ ಪ್ರಶಸ್ತಿ: ಕಥಾ–ಕವನ ಸಂಕಲನ ಆಹ್ವಾನ

ಬೆಂಗಳೂರು: ‘ಈ ಹೊತ್ತಿಗೆ’ ಟ್ರಸ್ಟ್ 2026ನೇ ಸಾಲಿನ ‘ಈ ಹೊತ್ತಿಗೆ ಪ್ರಶಸ್ತಿ’ಗೆ ಕನ್ನಡದ ಅಪ್ರಕಟಿತ ಕಥಾ ಸಂಕಲನ ಮತ್ತು ಕವನ ಸಂಕಲನಗಳನ್ನು ಆಹ್ವಾನಿಸಿದೆ.

ಈ ಪ್ರಶಸ್ತಿಯು ತಲಾ ₹10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಕಥಾ ಸಂಕಲನವು 8ರಿಂದ 10 ಕಥೆಗಳನ್ನು, ಕವನ ಸಂಕಲನವು 35ರಿಂದ 40 ಕವನಗಳನ್ನು ಒಳಗೊಂಡಿರಬೇಕು. ಪ್ರಶಸ್ತಿ ಘೋಷಣೆಯಾದ 30 ದಿನಗಳಲ್ಲಿ ಆಯ್ಕೆಯಾದ ಕೃತಿಯು ಮುದ್ರಣ-ಗೊಳ್ಳಬೇಕು. ಆಗ ಮಾತ್ರ ಘೋಷಿತ ಬಹುಮಾನದ ಮೊತ್ತ ಹಾಗೂ ಪ್ರಶಸ್ತಿ ಫಲಕವನ್ನು ಈ ಹೊತ್ತಿಗೆಯ ‘ಹೊನಲು’ ಸಮಾರಂಭದಲ್ಲಿ ನೀಡಲಾಗುತ್ತದೆ. ಪ್ರಶಸ್ತಿ ಪಡೆದ ಕೃತಿಯನ್ನು ಮುದ್ರಿಸುವಾಗ ಮುಖಪುಟ ಹಾಗೂ ಒಳಪುಟದಲ್ಲಿ ಈ ಹೊತ್ತಿಗೆ (ಕಥೆ/ಕಾವ್ಯ) ಪ್ರಶಸ್ತಿ ವಿಜೇತ ಕೃತಿ ಎಂದು ಮುದ್ರಿಸಬೇಕು ಎಂದು ಟ್ರಸ್ಟ್‌ನ ಅಧ್ಯಕ್ಷೆ ಜಯಲಕ್ಷ್ಮಿ ಪಾಟೀಲ ತಿಳಿಸಿದ್ದಾರೆ.

ಅಪ್ರಕಟಿತ ಸಂಕಲನಗಳನ್ನು ಇದೇ 20ರೊಳಗೆ ‘ಈ ಹೊತ್ತಿಗೆ’, #65, ಮುಗುಳ್ನಗೆ, 3ನೇ ಅಡ್ಡ ರಸ್ತೆ, ಪಿ.ಎನ್.ಬಿ. ನಗರ, ಕೋಣನಕುಂಟೆ, ಬೆಂಗಳೂರು–560062 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಹೇಳಿದ್ದಾರೆ. ಸಂಪರ್ಕಕ್ಕೆ: 9611782621

## ಸಾರಿಗೆ ನೌಕರರ ಉಪವಾಸ ಸತ್ಯಾಗ್ರಹ ಮುಂದೂಡಿಕೆ

ಬೆಂಗಳೂರು: ಸಾರಿಗೆ ನಿಗಮಗಳ ನೌಕರರ ಬೇಡಿಕೆ ಈಡೇರಿಸಲು ಸರ್ಕಾರ ಮಾತುಕತೆ ನಡೆಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಅ.15ರಿಂದ 19ರವರೆಗೆ ನಡೆಸಲು ಉದ್ದೇಶಿಸಿದ್ದ ಉಪವಾಸ ಸತ್ಯಾಗ್ರಹವನ್ನು ಮುಂದೂಡಿದೆ.

ಬೆಂಗಳೂರು, ಹುಬ್ಬಳ್ಳಿ ಮತ್ತು ಕಲಬುರಗಿಯಲ್ಲಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಗಿತ್ತು. ಸತ್ಯಾಗ್ರಹದ ಬಗ್ಗೆ ಮುಖ್ಯಮಂತ್ರಿಯವರ ಗಮನಕ್ಕೆ ತಂದಾಗ 15 ದಿನಗಳ ಒಳಗೆ ಸಭೆ ಕರೆಯುವುದಾಗಿ ತಿಳಿಸಿದ್ದಾರೆ. ಹಾಗಾಗಿ ಸತ್ಯಾಗ್ರಹ ಕೈಬಿಡಬೇಕು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು ಜಂಟಿ ಕ್ರಿಯಾ ಸಮಿತಿಗೆ ಪತ್ರ ಬರೆದಿರುವುದರಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಸಮಿತಿಯ ಪದಾಧಿಕಾರಿಗಳು ತಿಳಿಸಿದ್ದಾರೆ.

## ಬಾಲಕಿ ಆತ್ಮಹತ್ಯೆಗೆ ಪ್ರಚೋದನೆ: ಮೂವರ ಬಂಧನ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರ ಪರಿಶಿಷ್ಟ ಜಾತಿಯ ಬಾಲಕಿಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಮೂವರನ್ನು ಬಂಧಿಸಲಾಗಿದೆ.

‘ಪ್ರೀತಿಸುವುದಾಗಿ 3 ತಿಂಗಳಿನಿಂದ ಮಾಳಿಂಗರಾಯ ದಂಡೋಜಿ ಪೀಡಿಸುತ್ತಿದ್ದ. ಮಗಳಿಗೆ ಬೇರೊಬ್ಬರ ಜೊತೆ ಮದುವೆಗೆ ಮಾತುಕತೆ ನಡೆಸಿದ್ದೆವು. ಇದನ್ನು ತಿಳಿದು ಆರೋಪಿ ನನ್ನನ್ನೇ ಮದುವೆ ಆಗಬೇಕು ಎಂದು ಮಗಳಿಗೆ ದೈಹಿಕ, ಮಾನಸಿಕ ಹಿಂಸೆ ನೀಡಿದ. ಬೇಸತ್ತ ಮಗಳು ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ’ ಎಂದು ಬಾಲಕಿಯ ಪೋಷಕರು ದೂರಿನಲ್ಲಿ ಆರೋಪಿಸಿದ್ದಾರೆ.

‘ಆರೋಪಿ ಮಾಳಿಂಗರಾಯ ಮತ್ತು ಪ್ರಕರಣಕ್ಕೆ ಕುಮ್ಮಕ್ಕು ನೀಡಿದ ಆತನ ಸ್ನೇಹಿತ ಶಿವನಗೌಡ ಬಿರಾದಾರ ಮತ್ತು ಇನ್ನೊಬ್ಬನ ವಿರುದ್ಧ ಪೋಕ್ಸೊ ಮತ್ತು ದೌರ್ಜನ್ಯ ಪ್ರಕರಣ ದಾಖಲಿಸಿಕೊಂಡು, ಬಂಧಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ

**ಪರಿಹಾರ ವಿತರಣೆ:** ಜಿಲ್ಲಾಡಳಿತವು ಸಂತ್ರಸ್ತೆ ಕುಟುಂಬಕ್ಕೆ ದೌರ್ಜನ್ಯ ತಡೆ ಕಾಯ್ದೆಯಡಿ ₹ 8.25 ಲಕ್ಷ ಮಂಜೂರು ಮಾಡಿದ್ದು, ಮೊದಲ ಹಂತದಲ್ಲಿ ₹4,12,500 ಚೆಕ್ ಅನ್ನು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಹೇಶ ಪೊದ್ದಾರ ವಿತರಿಸಿದರು.

## ನಮೋ ಭಾರತ್ ರೈಲು: ಅಧ್ಯಯನಕ್ಕೆ ರಾಜ್ಯ ಪ್ರಸ್ತಾವ

ನವದೆಹಲಿ: ನಗರಗಳ ನಡುವಿನ ಸಂಪರ್ಕ ಜಾಲ ಹೆಚ್ಚಿಸುವ ಉದ್ದೇಶದಿಂದ ರಾಜ್ಯದಲ್ಲಿ ನಾಲ್ಕು ನಮೋ ಭಾರತ್ ರೈಲ್ವೆ ಕಾರಿಡಾರ್ ಯೋಜನೆ ನಿರ್ಮಿಸಲು ವಿವರವಾದ ಅಧ್ಯಯನ ನಡೆಸುವಂತೆ ರಾಷ್ಟ್ರೀಯ ರಾಜಧಾನಿ ವಲಯ ಸಾರಿಗೆ ನಿಗಮಕ್ಕೆ (ಎನ್‌ಸಿಆರ್‌ಟಿಸಿ) ಕರ್ನಾಟಕ ಸರ್ಕಾರ ಪ್ರಸ್ತಾವ ಸಲ್ಲಿಸಿದೆ.

ಬೆಂಗಳೂರು–ಹೊಸಕೋಟೆ–ಕೋಲಾರ (65 ಕಿ.ಮೀ), ಬೆಂಗಳೂರು–ಮೈಸೂರು (145 ಕಿ.ಮೀ), ಬೆಂಗಳೂರು–ತುಮಕೂರು (60 ಕಿ.ಮೀ) ಹಾಗೂ ಬೆಂಗಳೂರು–ಹೊಸೂರು–ಕೃಷ್ಣಗಿರಿ–ಧರ್ಮಪುರಿ (138 ಕಿ.ಮೀ) ನಡುವೆ ಕಾರಿಡಾರ್ ನಿರ್ಮಾಣಕ್ಕೆ ಯೋಜಿಸಲಾಗಿದೆ.

# ‘ಪ್ರಿಯಾಂಕ್ ಕೋರಿದ್ದರಲ್ಲಿ ತಪ್ಪೇನಿದೆ?’

### ಸಿದ್ದರಾಮಯ್ಯ ಪ್ರಶ್ನೆ • ವರದಿ ಆಧರಿಸಿ ಕ್ರಮ, ಬೆದರಿಕೆಗಳಿಗೆ ಜಗ್ಗುವುದಿಲ್ಲ ಎಂದು ಸ್ಪಷ್ಟನುಡಿ

ಪ್ರಜಾವಾಣಿ ವಾರ್ತೆ

ಮೈಸೂರು/ಹಾಸನ: ‘ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ವಿಷಯಕ್ಕೆ ಸಂಬಂಧಿಸಿ ತಮಿಳುನಾಡಿನಲ್ಲಿ ಕೈಗೊಂಡಿರುವ ಕ್ರಮಗಳ ಕುರಿತ ವರದಿ ಆಧರಿಸಿ ಮುಂದಿನ ಕ್ರಮದ ಬಗ್ಗೆ ನಿರ್ಧರಿಸುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಸರ್ಕಾರಿ ಜಾಗಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ-ಗಳನ್ನು ನಿಷೇಧಿಸಬೇಕೆಂದು ಪ್ರಿಯಾಂಕ್ ಖರ್ಗೆ ಕೋರಿರುವುದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದರು.

‘ಪ್ರಿಯಾಂಕ್ ಅವರಿಗೆ ಬೆದರಿಕೆ ಹಾಕುತ್ತಿರುವ ದುಷ್ಟ ಶಕ್ತಿಗಳು ಯಾವಾಗಲೂ ಇಂತಹದ್ದೇ ಕೆಲಸ ಮಾಡುತ್ತಿವೆ. ಬೆದರಿಕೆಗಳಿಗೆ ಹೆದರುವುದಿಲ್ಲ. ಅವರಿಗೆ ಭದ್ರತೆ ಒದಗಿಸಲಾಗುವುದು’ ಎಂದರು.

‘ತಾಕತ್ತಿದ್ದರೆ ಆರ್‌ಎಸ್‌ಎಸ್ ನಿಷೇಧಿಸಿ’ ಎಂಬ ಬಿಜೆಪಿ ನಾಯಕರ ಸವಾಲಿಗೆ ಪ್ರತಿಕ್ರಿಯಿಸಿ, ‘ಬಿಜೆಪಿಯವರು ಚುನಾವಣೆ ವೇಳೆ, ತಾಕತ್ತಿದ್ದರೆ ಬನ್ನಿ ಎಂದು ಸವಾಲು ಹಾಕಿದ್ದರು. ನಂತರ ಸೋಲಲಿಲ್ಲವೇ?’ ಎಂದರು.

**ಚುನಾವಣೆ ನಡೆಸಲು ಸಿದ್ಧ:** ‘ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸರ್ಕಾರ ಸಿದ್ಧ. ಕೋರ್ಟ್ ಹೇಳಿದ ತಕ್ಷಣ ಚುನಾವಣೆ ನಡೆಸುತ್ತೇವೆ’ ಎಂದು ಹಾಸನದಲ್ಲಿ ಮಾತನಾಡಿದ ಸಿದ್ದರಾಮಯ್ಯ ಹೇಳಿದರು.

‘ಎಲ್ಲ ಚುನಾವಣೆಗಳನ್ನು ಹಂತಹಂತವಾಗಿ ಮಾಡಲಾಗುವುದು. ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಪರವಾಗಿದೆ. ಪ್ರಜಾಪ್ರಭುತ್ವವು ಗಟ್ಟಿಯಾಗುವುದೇ ಚುನಾವಣೆಗಳಿಂದ’ ಎಂದರು.

**ಸಮೀಕ್ಷೆ- ಶೇ 90 ಗುರಿ ಸಾಧನೆ:** ‘ಜಾತಿವಾರು ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಸಮೀಕ್ಷೆಯು ಬೆಂಗಳೂರು ನಗರ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲೂ ವೇಗವಾಗಿ ನಡೆದಿದ್ದು, ಶೇ 90ಕ್ಕಿಂತ ಹೆಚ್ಚು ಗುರಿ ಸಾಧನೆಯಾಗಿದೆ’ ಎಂದರು. ‘ಜೆಡಿಎಸ್ ಅಧಿಕಾರದಲ್ಲಿದ್ದಾಗ ನಮ್ಮ ಶಾಸಕರಿಗೆ ಅನುದಾನ ಕೊಟ್ಟಿದ್ದರಾ? ನಾವು ತಾರತಮ್ಯ ಮಾಡುವುದಿಲ್ಲ. ರಾಜ್ಯದ ಸರ್ವತೋಮುಖ ಅಭಿವೃದ್ಧಿ ಗಾಗಿ ಎಲ್ಲರಿಗೂ ಅನುದಾನ ಒದಗಿಸಲಾಗುತ್ತಿದೆ’ ಎಂದು ಪ್ರತಿಕ್ರಿಯಿಸಿದರು.

**ಮುಖ್ಯಾಂಶಗಳು**

- ಪ್ರಿಯಾಂಕ್‌ಗೆ ಭದ್ರತೆ
- ಕೋರ್ಟ್ ಸೂಚನೆ ಬಳಿಕ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ

**ಕಾನೂನಿಗೆ ಅನುಗುಣವಾಗಿ ಸಂಘಟನೆ ಕಟ್ಟುವ ಅಧಿಕಾರವನ್ನು ಸಂವಿಧಾನವೇ ಕೊಟ್ಟಿದೆ. ಸಂವಿಧಾನದ ಬಗ್ಗೆ ತಿಳಿವಳಿಕೆ ಇಲ್ಲದ ಅಜ್ಞಾನಿಗಳು ಮಾತ್ರ ನಿಷೇಧ ಕುರಿತು ಮಾತನಾಡಲು ಸಾಧ್ಯ**

**ಸಿ.ಟಿ.ರವಿ,** ಶಾಸಕ

### ‘ಸಂಘ ರಾಜಕೀಯ ಮೀರಿದ ಸಂಘಟನೆ’

ಹುಬ್ಬಳ್ಳಿ: ‘ಆರ್‌ಎಸ್‌ಎಸ್ ರಾಜಕೀಯ ಮೀರಿದ ಸಂಘಟನೆ. ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ಚಟುವಟಿಕೆಗೆ ಜಾಗ ನೀಡದಂತೆ ಮುಖ್ಯಮಂತ್ರಿಗೆ ಪತ್ರ ಬರೆದಿರುವುದು ಬಿಜೆಪಿ ಖಂಡಿಸುತ್ತದೆ’ ಎಂದು ವಿಧಾನ ಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಹೇಳಿದರು.

‘ಸಮಾಜದಲ್ಲಿ ದೇಶಭಕ್ತಿ ಭಾವನೆ ಮೂಡಿಸಲು ಶ್ರಮಿಸುತ್ತಿರುವ ಆರ್‌ಎಸ್‌ಎಸ್ ಬಗ್ಗೆ ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಸಕಾರಾತ್ಮಕ-ವಾಗಿ ಮಾತನಾಡಿದ್ದರು. ಬಿಜೆಪಿ, ಕಾಂಗ್ರೆಸ್ ಸೇರಿ ವಿವಿಧ ಪಕ್ಷಗಳಲ್ಲಿ ಇರುವವರೂ ಸಂಘದ ಸ್ವಯಂಸೇವಕರಾಗಿದ್ದಾರೆ’ ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಪ್ರಿಯಾಂಕ್ ಖರ್ಗೆ ಅವರಿಗೆ ಬೆದರಿಕೆ ಕರೆಗಳು ಬರುತ್ತಿರುವ ಕುರಿತು ಪ್ರತಿ-ಕ್ರಿಯಿಸಿದ ಅವರು, ‘ಆರ್‌ಎಸ್‌ಎಸ್ ಬೆದರಿಕೆ ಒಡ್ಡುವ, ಉಗ್ರವಾದಿ ಚಟುವಟಿಕೆ ಮಾಡುವ ಸಂಘಟನೆಯಲ್ಲ. ಬೆದರಿಕೆ ಒಡ್ಡುವಂತಹ ಸಂಘಟನೆಗಳ ಮೇಲಿನ ಪ್ರಕರಣಗಳನ್ನು ರಾಜ್ಯ ಸರ್ಕಾರವೇ ಹಿಂಪಡೆದಿದೆ’ ಎಂದರು.

‘ರಾಜ್ಯದಲ್ಲಿ ನಿರಂತರ ಮಳೆಯಿಂದಾದ ಬೆಳೆ ಹಾನಿಗೆ ಸರ್ಕಾರ ಈವರೆಗೆ ಪರಿಹಾರ ನೀಡಿಲ್ಲ. ಕೂಡಲೇ ರೈತ ಮುಖಂಡರು, ಸರ್ವಪಕ್ಷಗಳ ಸಭೆ ಕರೆಯಬೇಕು. ರೈತರಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು’ ಎಂದು ಅವರು ಹೇಳಿದರು.

**‘ಔತಣಕೂಟದಲ್ಲಿ ಸರ್ಕಾರ, ಪಕ್ಷದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ಬಿಹಾರ ಚುನಾವಣೆಯಲ್ಲಿ ಹೈಕಮಾಂಡ್ ಬ್ಯುಸಿ ಆಗಿದ್ದು, ನವೆಂಬರ್ ನಂತರ ಸಂಪುಟ ವಿಸ್ತರಣೆ ಕುರಿತು ಚರ್ಚಿಸಲಾಗುವುದು**

**ಸಿದ್ದರಾಮಯ್ಯ,** ಮುಖ್ಯಮಂತ್ರಿ

**ವೇತನ ಬಂದಿಲ್ಲ ಎಂದು ಕಲಬುರಗಿಯಲ್ಲಿ ಗ್ರಂಥಪಾಲಕಿ ಆತ್ಮಹತ್ಯೆಗೆ ಮಾಡಿಕೊಳ್ಳಲು ಪ್ರಿಯಾಂಕ್ ಅವರೇ ಹೊಣೆ. ಅವರು ಆರ್‌ಎಸ್‌ಎಸ್ ಬಗ್ಗೆ ಮಾತನಾಡದೇ ಕ್ಷೇತ್ರ, ಇಲಾಖೆ, ಜಿಲ್ಲೆಯತ್ತ ಗಮನ ಹರಿಸಲಿ**

**ಎನ್.ರವಿಕುಮಾರ್,** ಶಾಸಕ

## ಕಾಂಗ್ರೆಸ್‌ನಿಂದಲೂ ಪೋಸ್ಟರ್ ಅಭಿಯಾನ

ಕಲಬುರಗಿ: ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಡೆಸಿದ್ದ ‘ಪೋಸ್ಟರ್’ ಅಭಿಯಾನಕ್ಕೆ ಪ್ರತಿಯಾಗಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಘಟಕದಿಂದ ಬುಧವಾರ ‘ಪೋಸ್ಟರ್’ ಅಂಟಿಸಿ ತಿರುಗೇಟು ನೀಡಲಾಯಿತು.

‘ಯಾರು ಭಾರತವನ್ನು ಪ್ರೀತಿಸುತ್ತಾರೋ ಅವರು ಆರ್‌ಎಸ್‌ಎಸ್ ಅನ್ನೂ ಪ್ರೀತಿಸುತ್ತಾರೆ’ ಎಂಬ ಬರಹವುಳ್ಳ ಪೋಸ್ಟರ್‌ಗಳನ್ನು ಬಿಜೆಪಿ ಅಂಟಿಸಿತ್ತು. ಪ್ರತಿಯಾಗಿ ಕಾಂಗ್ರೆಸ್‌ನವರು ‘ಯಾರು ಸಂವಿಧಾನ ಪ್ರೀತಿಸುತ್ತಾರೋ, ಅವರು ದೇಶವನ್ನೂ ಪ್ರೀತಿಸುತ್ತಾರೆ’, ‘ಯಾರು ದೇಶವನ್ನು ಪ್ರೀತಿಸುತ್ತಾರೋ ಅವರು ಆರ್‌ಎಸ್‌ಎಸ್ ಅನ್ನು ಧಿಕ್ಕರಿಸುತ್ತಾರೆ’ ಎಂಬ ಪೋಸ್ಟರ್‌ಗಳನ್ನು ಅಂಟಿಸಿ ಪ್ರಿಯಾಂಕ್ ಖರ್ಗೆಗೆ ಬೆಂಬಲ ನೀಡಿದರು.

**ಪೊಲೀಸರಿಗೆ ದೂರು:** ಸಚಿವ ಪ್ರಿಯಾಂಕ್ ನಿಂದಿಸಿದ್ದ, ಬೆದರಿಕೆ ಹಾಕಿದವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಕಲಬುರಗಿ ಪೊಲೀಸ್ ಆಯುಕ್ತರಿಗೆ ದೂರು ನೀಡಲಾಗಿದೆ.

ಕಲಬುರಗಿಯಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್‌ನಿಂದ ಪೋಸ್ಟರ್ ಅಂಟಿಸಲಾಯಿತು

ಸುದ್ದಿ 2 ನಿಮಿಷ

## ‘ಮಾಜಿ ದೇವದಾಸಿಯರ ಸಮೀಕ್ಷೆ ಅವಧಿ ವಿಸ್ತರಿಸಿ’

ಬೆಂಗಳೂರು: ‘ಸಮರ್ಪಕ ದಾಖಲೆಗಳು ಇಲ್ಲದ ಕಾರಣ ಅನೇಕ ಮಾಜಿ ದೇವದಾಸಿಯರಿಗೆ ಮರು ಸಮೀಕ್ಷೆಯಲ್ಲಿ ಭಾಗವಹಿಸಲು ಆಗುತ್ತಿಲ್ಲ. ಆದ್ದರಿಂದ ಮರು ಸಮೀಕ್ಷೆಯ ಅವಧಿಯನ್ನು ವಿಸ್ತರಿಸಬೇಕು ಎಂದು ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಆಗ್ರಹಿಸಿದೆ.

ವೇದಿಕೆಯ ರಾಜ್ಯ ಘಟಕದ ಸಂಚಾಲಕ ಯಮನೂರಪ್ಪ, ಸದಸ್ಯರಾದ ದಂಡೆಮ್ಮ, ಸೋನಾಬಾಯಿ ಮಾತನಾಡಿ, ‘ಸಮೀಕ್ಷೆಯಲ್ಲಿ ಕೇಳುತ್ತಿರುವ ದಾಖಲೆಗಳನ್ನು ಮಾಜಿ ದೇವದಾಸಿಯರು ವಿವಿಧ ಇಲಾಖೆಗಳಿಂದ ಪಡೆದುಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಸಮಯಾವಕಾಶ ನೀಡುವುದರ ಜೊತೆಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಕಾಲಮಿತಿಯಲ್ಲಿ ದಾಖಲೆಗಳನ್ನು ನೀಡುವಂತೆ ನಿರ್ದೇಶನ ನೀಡಬೇಕು’ ಎಂದು ಒತ್ತಾಯಿಸಿದರು.

‘ಮಾಜಿ ದೇವದಾಸಿಯರ ಮರು ಸಮೀಕ್ಷೆಗೆ 45 ವರ್ಷ ಆದವರನ್ನು ಮಾತ್ರ ಪರಿಗಣಿಸುವ ನಿರ್ಧಾರವನ್ನು ಸರ್ಕಾರ ಕೈಬಿಡಬೇಕು. ಯಾವುದೇ ರೀತಿಯ ವಯೋಮಿತಿ ನಿಗದಿಪಡಿಸದೇ, ಎಲ್ಲರನ್ನೂ ಪರಿಗಣಿಸಬೇಕು. ಕೆಲವು ಜಿಲ್ಲೆಗಳಲ್ಲಿ ಮಾಜಿ ದೇವದಾಸಿಯರ ಸಂಖ್ಯೆ ಹೆಚ್ಚಿದೆ. ಅಂತಹ ಜಿಲ್ಲೆಗಳಲ್ಲಿ ಇಬ್ಬರು ಸಮೀಕ್ಷಕರನ್ನು ನೇಮಿಸಬೇಕು’ ಎಂದು ಹೇಳಿದರು.

‘ಮಾಜಿ ದೇವದಾಸಿಯರು ಮತ್ತು ಅವರ ಕುಟುಂಬಕ್ಕೆ ಸಮೀಕ್ಷೆ ಪ್ರಾರಂಭಿಸುವುದರ ಕುರಿತು ಮಾಹಿತಿ ನೀಡಿಲ್ಲ. ಈ ಬಗ್ಗೆ ಹೆಚ್ಚು ಜಾಗೃತಿ ಮತ್ತು ಪ್ರಚಾರ ನಡೆಸಬೇಕು ಎಂದರು.

‘ಎಲ್ಲ ಜಿಲ್ಲೆಗಳಲ್ಲಿ ಮರುಸಮೀಕ್ಷೆಗೆ ಒಂದೇ ರೀತಿಯ ನಿಯಮಗಳನ್ನು ಅಥವಾ ಮಾನದಂಡಗಳನ್ನು ಅನುಸರಿಸಬೇಕು. ಮಾಜಿ ದೇವದಾಸಿ ಮಹಿಳೆಯರ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಮರು ಸಮೀಕ್ಷೆಯ ಮೌಲ್ಯಮಾಪನ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಬೇಕು. ಅನಾರೋಗ್ಯದಿಂದ ಬಳಲುತ್ತಿರುವ ಮಾಜಿ ದೇವದಾಸಿಯರ ಸಮೀಕ್ಷೆಯನ್ನು ಅವರ ಮನೆಗಳಿಗೆ ತೆರಳಿ ಮಾಡುವಂತೆ ಸಮೀಕ್ಷೆದಾರರಿಗೆ ಸೂಚಿಸಬೇಕು’ ಎಂದು ವೇದಿಕೆಯ ಮುಖಂಡರಾದ ಷರೀಫ್, ಮಂಜುಳಾ ಮಾಳಗಿ ಆಗ್ರಹಿಸಿದರು.

### ಚರಂಡಿ ಕಸ ತೆಗೆದ ಡಿ.ಸಿ

ಮಡಿಕೇರಿ: ಕೊಡಗು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಬುಧವಾರ ನಗರದ ಜನರಲ್ ತಿಮ್ಮಯ್ಯ ವೃತ್ತದ ಬಳಿಯ ಚರಂಡಿಗೆ ಇಳಿದು ಕಸ ತೆಗೆದರು.

ಕೂರ್ಗ್ ಹೋಟೆಲ್, ರೆಸಾರ್ಟ್ ಅಸೋಸಿಯೇಷನ್ ಕರೆ ನೀಡಿದ್ದ ‘ಸ್ವಚ್ಛ ಕೊಡಗು - ಸುಂದರ ಕೊಡಗು’ ಅಭಿಯಾನದಲ್ಲಿ ಭಾಗಿಯಾದ ಅವರು ಸ್ವಚ್ಛತಾ ಕಾರ್ಯದಲ್ಲಿ ತೊಡಗಿದರು.

ಇವರೊಂದಿಗೆ ಶಾಸಕ ಡಾ.ಮಂತರ್‌ಗೌಡ ಸಹ ಕಸ ಗುಡಿಸಿ ಗಮನ ಸೆಳೆದರು. ಕೊಡಗು ಜಿಲ್ಲೆಯ ವಿವಿಧೆಡೆ 320ಕ್ಕೂ ಅಧಿಕ ಸಂಘಟನೆಗಳು, ಸಂಘ, ಸಂಸ್ಥೆಗಳು ಏಕಕಾಲದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದವು.

# ‘ಕೃಷಿ ಲಾಭದಾಯಕ ಉದ್ಯಮವಾಗಲಿ’

### ಸಂಸ್ಕರಣಾ ಘಟಕಕ್ಕೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಚಾಲನೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಪ್ರಧಾನಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರಿಕೀಕರಣ ಮತ್ತು ಧನ್ ಧಾನ್ಯ ಕೃಷಿ ಯೋಜನೆಗಳನ್ನು ಪರಿಣಾಮ-ಕಾರಿಯಾಗಿ ಬಳಸಿ ರೈತರು ಕೃಷಿಯನ್ನು ಲಾಭದಾಯಕ ಉದ್ಯಮವಾಗಿ ಪರಿವರ್ತಿಸಬೇಕು’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಲಹೆ ನೀಡಿದರು.

ತಾಲ್ಲೂಕಿನ ಮೆತಗಲ್‌ನಲ್ಲಿ ನಿರ್ಮಲಾ ಸೀತಾರಾಮನ್ ಅವರ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ನಬಾರ್ಡ್ ಮೂಲಕ ನಿರ್ಮಿಸಲಾದ ಕೃಷಿ ಸಂಸ್ಕರಣಾ ತರಬೇತಿ ಘಟಕ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಉದ್ಘಾಟಿಸಿ ಬುಧವಾರ ಮಾತನಾಡಿದರು.

‘ವೋಕಲ್ ಫಾರ್ ಲೋಕಲ್’ ಎನ್ನುವುದು ಪ್ರಧಾನಿ ಅವರ ಆಶಯವಾಗಿದ್ದು, ಅದರಂತೆ ಸಂಸ್ಕರಣೆ ಮೂಲಕ ಹಣ್ಣುಗಳ ಮೌಲ್ಯ ವರ್ಧನೆ ಮಾಡಿ ಬೆಲೆ ಹೆಚ್ಚಿಸುವ ಕೌಶಲವನ್ನು ರೈತರು ರೂಢಿಸಿಕೊಳ್ಳಬೇಕು’ ಎಂದರು.

ಕಿರು ಉದ್ಯಮಗಳ ಮೂಲಕ ಪ್ರಗತಿ ಕಾಣುತ್ತಿರುವ ಕೊಪ್ಪಳ ಜಿಲ್ಲೆ ಉತ್ತರ ಕರ್ನಾಟಕಕ್ಕೆ ‘ಅಕ್ಷಯಪಾತ್ರೆ’ ಆಗಿದೆ. ಜಿಎಸ್‌ಟಿ ತೆರಿಗೆ ಇಳಿತವು ಕೃಷಿ ಕ್ಷೇತ್ರದ ಉತ್ತೇಜನಕ್ಕೆ ಕಾರಣವಾಗಲಿದೆ ಎಂದು ಅಭಿಪ್ರಾಯಪಟ್ಟರು.

‘ಕೇಂದ್ರ ಸರ್ಕಾರ ಐದು ವರ್ಷಗಳಲ್ಲಿ ರೈತರ ಅನುಕೂಲಕ್ಕಾಗಿ ವಿವಿಧ ರಾಜ್ಯಗಳಿಗೆ ₹3,700 ಕೋಟಿಗೂ ಹೆಚ್ಚು ಹಣ ನೀಡಿದೆ. ₹11 ಸಾವಿರ ಕೋಟಿ ಸಾಲಸೌಲಭ್ಯ ಒದಗಿಸಿದೆ. ಧನ್ ಧಾನ್ಯ ಕೃಷಿ ಯೋಜನೆಗಾಗಿ 2025–26ರ ಬಜೆಟ್‌ನಲ್ಲಿ ₹24 ಸಾವಿರ ಕೋಟಿ ಹಂಚಿಕೆ ಮಾಡಿ, ಇದಕ್ಕೆ ದೇಶದ 100 ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ ಕೊಪ್ಪಳ ಜಿಲ್ಲೆಯೂ ಒಂದು’ ಎಂದು ಹೇಳಿದರು.

ಶಾಸಕ ಜನಾರ್ದನ ರೆಡ್ಡಿ, ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ, ರಾಜ್ಯ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿ ವಿಶಾಲ್ ಆರ್., ನಬಾರ್ಡ್ ಅಧ್ಯಕ್ಷ ಶಾಜಿ ಕೆ.ವಿ. ಪಾಲ್ಗೊಂಡಿದ್ದರು.

**ಮುಖ್ಯಾಂಶಗಳು**

- ಕೃಷಿ ಸಂಸ್ಕರಣಾ ತರಬೇತಿ ಘಟಕ ಮತ್ತು ಸೌಲಭ್ಯ ಕೇಂದ್ರ ಉದ್ಘಾಟನೆ
- ಧನ್‌ಧಾನ್ಯ ಕೃಷಿ ಯೋಜನೆಗೆ ಕೊಪ್ಪಳ ಸೇರಿ 100 ಜಿಲ್ಲೆಗಳ ಆಯ್ಕೆ
- ಹಣ್ಣುಗಳ ಸಂಸ್ಕರಣೆ, ಮೌಲ್ಯವರ್ಧನೆ ಕೌಶಲ ಹೊಂದಲು ಸಲಹೆ

ಕೊಪ್ಪಳ ತಾಲ್ಲೂಕಿನ ಮೆತಗಲ್‌ನಲ್ಲಿ ಬುಧವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಣ್ಣುಗಳ ಸಂಸ್ಕರಣಾ ಘಟಕ ಉದ್ಘಾಟಿಸಿ ವೀಕ್ಷಿಸಿದರು

### ಗ್ರಾ.ಪಂ. ಅಧ್ಯಕ್ಷೆ ಬಂದ ಬಳಿಕ ಉದ್ಘಾಟನೆ

ಕೊಪ್ಪಳ: ವನಬಳ್ಳಾರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೆತಗಲ್ ಗ್ರಾಮವಿದ್ದು ಗ್ರಾ.ಪಂ. ಅಧ್ಯಕ್ಷೆ ಅಂಬಮ್ಮ ಶ್ರೀಕಂಠ ಹುಲಸನಹಟ್ಟಿ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರೂ ಬೇರೆ ಕಡೆ ಕುಳಿತುಕೊಂಡಿದ್ದರು. ಅಧಿಕಾರಿಗಳು ಅವರನ್ನು ಕರೆದುಕೊಂಡು ಬರುವ ತನಕವೂ ಕೇಂದ್ರ ಸಚಿವೆ ಕಾದು, ಬಳಿಕವೇ ಮಳಿಗೆಗಳ ಉದ್ಘಾಟನೆ ನೆರವೇರಿಸಿದರು.

**ತಲೆಗೆ ಪೆಟ್ಟು:** ಕಾರ್ಯಕ್ರಮಕ್ಕೆ ವೇದಿಕೆಗೆ ಬರುವ ಮೊದಲು ನಿರ್ಮಲಾ ಅವರು ವಿಶ್ರಾಂತಿಗೆ ನಿರ್ಮಿಸಲಾಗಿದ್ದ ತಾತ್ಕಾಲಿಕ ಕೊಠಡಿಯೊಳಗೆ ಹೋಗಿ ಹೊರಗಡೆ ಬರುವಾಗ ಕರ್ಟನ್ ಹಾಕಲು ಇರಿಸಿದ್ದ ಸ್ಟೀಲ್‌ನ ಕೊಳವೆ ಸಚಿವೆ ತಲೆ ಮೇಲೆ ಬಿದ್ದಿದ್ದರಿಂದ ತಲೆಗೆ ಪೆಟ್ಟಾಯಿತು.

ಕೆಲಹೊತ್ತು ಅಲ್ಲೇ ಕುಳಿತು ಸುಧಾರಿಸಿಕೊಂಡರು. ವೇದಿಕೆ ಮೇಲೆ ಕುಳಿತಾಗಲೂ ಪದೇ ಪದೇ ತಲೆ ನೇವರಿಸಿಕೊಳ್ಳುತ್ತಿದ್ದರು. ಮೆತಗಲ್ ಕಾರ್ಯಕ್ರಮದ ಬಳಿಕ ಚಿಲವಾಡಗಿ ಗ್ರಾಮಕ್ಕೆ ಭೇಟಿ ನೀಡಬೇಕಿತ್ತು. ಆದರೆ, ಈ ಕಾರ್ಯಕ್ರಮ ರದ್ದುಪಡಿಸಿ ನೇರವಾಗಿ ಹೊಸಪೇಟೆಗೆ ತೆರಳಿದರು.

## ಜಯಂತ್ ವಿರುದ್ಧ ಪ್ರಕರಣ ದಾಖಲು

ಮಂಗಳೂರು: ಸೌಜನ್ಯಾ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಗಡೀಪಾರು ಮಾಡುವಲ್ಲಿ ಷಡ್ಯಂತ್ರ ನಡೆದಿದೆ ಎಂದು ಯೂಟ್ಯೂಬ್ ನಲ್ಲಿ ಸುಳ್ಳು ಸುದ್ದಿ ಪ್ರಸಾರ ಮಾಡಿದ ಆರೋಪದ ಮೇಲೆ ಸಾಮಾಜಿಕ ಕಾರ್ಯಕರ್ತ ಜಯಂತ್ ಟಿ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ‘ಸೌಜನ್ಯಾ ಪರ ಹೋರಾಟಕ್ಕೆ ಪೊಲೀಸರು ತೊಂದರೆ ಮಾಡುತ್ತಿದ್ದಾರೆ ಎಂಬಂತೆ ಬಿಂಬಿಸಿ ಜಯಂತ್ ಸುಳ್ಳು ಸುದ್ದಿ ಹರಿಬಿಟ್ಟಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

# ‘ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪಿಸಿ’

### ಮೈಸೂರು: ಬೌದ್ಧ ಮಹಾಸಮ್ಮೇಳನದಲ್ಲಿ ‘ಪಂಚ ನಿರ್ಣಯ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯದಲ್ಲಿ ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪಿಸಿ ₹ 500 ಕೋಟಿ ಅನುದಾನ ಒದಗಿಸಬೇಕು ಹಾಗೂ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಬೌದ್ಧ ಅಧ್ಯಯನ ಕೇಂದ್ರ ಸ್ಥಾಪಿಸಬೇಕು’ ಎಂಬುದು ಸೇರಿ ಹಲವು ಆಗ್ರಹಗಳನ್ನು ಇಲ್ಲಿ ಬುಧವಾರ ಮುಕ್ತಾಯವಾದ ಬೌದ್ಧ ಮಹಾ ಸಮ್ಮೇಳನದಲ್ಲಿ ಮಂಡಿಸಲಾಯಿತು.

ಕರ್ನಾಟಕ ಬಿಕ್ಕು ಸಂಘ, ಬೌದ್ಧ ಸಂಘ-ಸಂಸ್ಥೆಗಳು, ರಾಜ್ಯ ಅಂಬೇಡ್ಕರ್‌ವಾದಿ ಸಂಘ–ಸಂಸ್ಥೆಗಳು ಮತ್ತು ವಿಶ್ವಮೈತ್ರಿ ಬುದ್ಧವಿಹಾರ ಸಹಯೋಗದಲ್ಲಿ ನಡೆದ ಸಮ್ಮೇಳನದ-ದಲ್ಲಿ ನಿರ್ಣಯಗಳಿಗೆ, ಸಭಿಕರು ಚಪ್ಪಾಳೆ ತಟ್ಟಿ ಬೆಂಬಲಿಸಿದರು. ಬುದ್ಧವಿಹಾರದ ಸಂಚಾಲಕ ಪುರುಷೋತ್ತಮ್ ನಿರ್ಣಯ ಮಂಡಿಸಿದರು.

**‘ಬೌದ್ಧರುದ್ಯಾನ’ ಸೇರಿಸಿ:** ‘ನಾಡಗೀತೆಯಲ್ಲಿ ಮೊದಲು ಇದ್ದ ‘ಬೌದ್ಧರುದ್ಯಾನ’ ಪದವನ್ನು ಮತ್ತೆ ಸೇರಿಸಬೇಕು. ಬುದ್ಧವಿಹಾರ ಸ್ಥಾಪನೆಗೆ ಪ್ರತಿ ಜಿಲ್ಲಾ ಕೇಂದ್ರಕ್ಕೆ ಎರಡು ಎಕರೆ ಜಮೀನು ನೀಡಬೇಕು. ಬುದ್ಧಗಯಾ, ಲುಂಬಿನಿಗೆ ಹೋಗುವವರಿಗೆ ‘ಹಜ್ ಯಾತ್ರೆ’ ಮಾದರಿಯಲ್ಲಿ ಆರ್ಥಿಕ ನೆರವು ಒದಗಿಸಬೇಕು. ಅಂಬೇಡ್ಕರ್ ಭವನಗಳನ್ನು ಕೌಶಲ ಅಭಿವೃದ್ಧಿ ಕೇಂದ್ರವನ್ನಾಗಿಸಬೇಕು’ ಎಂದರು.

ಉರಿಲಿಂಗ ಪೆದ್ದಿ ಮಹಾಸಂಸ್ಥಾನ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ‘ಧರ್ಮದ ಕಾಲಂನಲ್ಲಿ ಬೌದ್ಧ ಎಂದು ಬರೆಸಿದರೂ ಪರಿಶಿಷ್ಟ ಜಾತಿ ಪ್ರಮಾಣಪತ್ರ ಕೊಡಬೇಕೆಂದು ಸರ್ಕಾರದಿಂದ ನಡಾವಳಿಯಾಗಿದೆ. ಈ ಬಗ್ಗೆ ಅಧಿಸೂಚನೆ ಹೊರಡಿಸಿ ಅಧಿಕೃತ-ಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ಪ್ರತಿ ಬೌದ್ಧ ವಿಹಾರಗಳ ಅಭಿವೃದ್ಧಿಗೆ ₹ 20 ಕೋಟಿ ಬಿಡುಗಡೆ ಮಾಡಬೇಕು, ಬೌದ್ಧ ಅಧ್ಯಯನ ಅಕಾಡೆಮಿ ಮಾಡಬೇಕು, ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯ ಹಾರೋಹಳ್ಳಿಯ ದಕ್ಷಿಣ ಬುದ್ಧಗಯಾ ಟ್ರಸ್ಟ್‌ಗೆ ₹ 10 ಕೋಟಿ ಮಂಜೂರು ಮಾಡಬೇಕು’ ಎಂಬ ಬೇಡಿಕೆಗಳನ್ನು ಮಂಡಿಸಿದರು.

**ಬೇಡಿಕೆ ಈಡೇರಿಸಲು ಯತ್ನ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಆದಷ್ಟು ಬೇಡಿಕೆಗಳನ್ನು ಈಡೇರಿಸಲಾಗುವುದು. ಸಮ ಸಮಾಜದ ನಿರ್ಮಾಣಕ್ಕೆ ಅಗತ್ಯ ವಾದುದನ್ನು ಮಾಡೋಣ’ ಎಂದರು.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಗೃಹ ಸಚಿವ ಡಾ.ಜಿ.ಪರಮೇಶ್ವರ, ಸಚಿವ ಸತೀಶ ಜಾರಕಿಹೊಳಿ ಪಾಲ್ಗೊಂಡಿದ್ದರು.

‘ಮಾನವ ಮೈತ್ರಿಯ ಪಯಣ–2025’ ಅಂತರರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಂಗಮ ಕಾರ್ಯಕ್ರಮದ ಅಂಗವಾಗಿ ಬುದ್ಧನ ಪ್ರತಿಮೆ ಎದುರು ನೂರಾರು ಮಂದಿ ಮೋಂಬತ್ತಿ ಬೆಳಗಿಸಿದರು.

### ಚಾಮರಾಜನಗರದಲ್ಲಿ ಮುಂದಿನ ಸಮ್ಮೇಳನ

ಚಾಮರಾಜನಗರ ಜಿಲ್ಲೆಯಲ್ಲಿ ಮುಂದಿನ ಸಮ್ಮೇಳನವನ್ನು ಆಯೋಜಿಸಲಾಗುವುದು ಎಂದು ಘೋಷಿಸಲಾಯಿತು. ಆಯೋಜಕರು ನೀಡಿದ ಧಮ್ಮ ಧ್ವಜ ಹಾಗೂ ಧಮ್ಮ ದೀಪವನ್ನು ಅಲ್ಲಿನ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಮತ್ತು ಸಿ.ಪುಟ್ಟರಂಗಶೆಟ್ಟಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಸ್ತಾಂತರಿಸಿದರು.

## ಸಮೀಕ್ಷೆಗೆ ತೆರಳಿ ನಾಪತ್ತೆ ಆಗಿದ್ದ ಶಿಕ್ಷಕಿ ಮೃತದೇಹ ಕೆರೆಯಲ್ಲಿ ಪತ್ತೆ

ಕೋಲಾರ: ಜಾತಿವಾರು ಸಮೀಕ್ಷೆ ಕಾರ್ಯಕ್ಕೆ ತೆರಳಿ 3 ದಿನಗಳ ಹಿಂದೆ ನಾಪತ್ತೆಯಾಗಿದ್ದ ಶಿಕ್ಷಕಿಯ ಶವ ಕೆಜಿಎಫ್ ತಾಲ್ಲೂಕಿನ ಅಯ್ಯಪ್ಪಲ್ಲಿ ಕೆರೆಯಲ್ಲಿ ಬುಧವಾರ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

ಕೋಲಾರ ನಗರದ ಮಹಾಲಕ್ಷ್ಮಿ ಬಡಾವಣೆಯ ಅಖ್ತರಿ ಬೇಗಂ (53) ಮೃತ ಶಿಕ್ಷಕಿ. ಅವರು ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ.

ತಾಲ್ಲೂಕಿನ ಕೆ.ಬಿ.ಹೊಸಹಳ್ಳಿಯಲ್ಲಿ ಶಿಕ್ಷಕಿಯಾಗಿದ್ದರು. ಅವರನ್ನು ಸಮೀಕ್ಷೆಗಾಗಿ ತಾಲ್ಲೂಕಿನ ನರಸಾಪುರ ಗ್ರಾಮಕ್ಕೆ ನಿಯೋಜಿಸಲಾಗಿತ್ತು. ಸೋಮವಾರ ಬೆಳಿಗ್ಗೆಯಿಂದ ಅವರು ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಕುಟುಂಬಸ್ಥರು ಕಾಣೆಯಾಗಿರುವ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು.

ಕೆರೆ ಸಮೀಪ ಸೇರಿದ್ದ ಕೆಲ ಶಿಕ್ಷಕಿಯರು, ‘ಸಮೀಕ್ಷೆ ಒತ್ತಡದಿಂದಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒತ್ತಡದ ಬಗ್ಗೆ ಹೇಳಿಕೊಂಡಿದ್ದರು. ನಿಗದಿಪಡಿಸಿದ ಗುರಿ ತಲುಪಬೇಕೆಂಬ ಒತ್ತಡದಲ್ಲಿದ್ದರು’ ಎಂದು ಆರೋಪಿಸಿದರು.

ಇದನ್ನು ಅಲ್ಲಗಳೆದಿರುವ ಅಧಿಕಾರಿಗಳು, ‘ಶಿಕ್ಷಕಿ ಮೇಲೆ ಯಾವುದೇ ಒತ್ತಡ ಹಾಕಿರಲಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವಂತಹ ಕೆಲಸ, ಒತ್ತಡ ಸಮೀಕ್ಷೆಯಲ್ಲಿ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ಅಖ್ತರಿ ಬೇಗಂ

## ಅತ್ಯಾಚಾರ: ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಹಿಳೆಯ ಕೊಲೆ ಹಾಗೂ ಆಕೆಯ ಮಗಳ ಮೇಲಿನ ಅತ್ಯಾಚಾರ ಪ್ರಕರಣದ ಅಪರಾಧಿಗೆ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ ₹3.50 ಲಕ್ಷ ದಂಡ ವಿಧಿಸಿದೆ.

ಶಫಿಶೇಖ್ ಡಿ.ಕೆ. (22) ಅಲಿಯಾಸ್ ರೆಹಾನ್ ಶಿಕ್ಷೆಗೆ ಒಳಗಾದ ಅಪರಾಧಿ. ಮಹಿಳೆಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಶಫಿಶೇಖ್, 2024ರ ಮಾರ್ಚ್ 15ರಂದು ಆಕೆ ಜೊತೆ ಜಗಳ ಮಾಡಿ, ಹೊಡೆದು, ಸರ್ಜಿಕಲ್ ಬ್ಲೇಡ್‌ನಿಂದ ಚುಚ್ಚಿ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದ. ಬಳಿಕ ಆಕೆಯ ಅಪ್ರಾಪ್ತ ವಯಸ್ಸಿನ ಮಗಳನ್ನು ಕರೆದೊಯ್ದು ಅತ್ಯಾಚಾರ ಎಸಗಿದ್ದ.

ಕಲಬುರಗಿಯ ಸಬರ್ಬನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ್ದ ಇನ್‌ಸ್ಪೆಕ್ಟರ್ ಮಹ್ಮದ್ ಫಸಿಯೋದ್ದೀನ್ ಅವರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ (ಪೋಕ್ಸೊ) ಮಹ್ಮದ್ ಮುಜೀರ್ ಉಲ್ಲಾ ಸಿ.ಜಿ. ಅವರು ಪೋಕ್ಸೊ ಕಾಯ್ದೆ ಸಂಬಂಧಿಸಿ ಅಪರಾಧಿಗೆ 20 ವರ್ಷ ಜೈಲು ಹಾಗೂ ₹2.50 ದಂಡ ವಿಧಿಸಿದ್ದಾರೆ. ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಜೀವಾವಧಿ ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿದ್ದಾರೆ. ನೊಂದ ಬಾಲಕಿಗೆ ಕಾನೂನು ಪ್ರಾಧಿಕಾರದಿಂದ ₹5 ಲಕ್ಷ ಪರಿಹಾರ ನೀಡುವಂತೆಯೂ ಆದೇಶದಲ್ಲಿ ಸೂಚಿಸಿದ್ದಾರೆ. ವಿಶೇಷ ಸರ್ಕಾರಿ ಅಭಿಯೋಜಕ (ಪೋಕ್ಸೊ) ಶಾಂತವೀರ ಬಿ.ತುಪ್ಪದ ವಾದ ಮಂಡಿಸಿದ್ದರು.

### ಅಪರಾಧಿಗೆ 20 ವರ್ಷ ಜೈಲು

ಕಲಬುರಗಿ: ತಾಲ್ಲೂಕಿನ ಗ್ರಾಮವೊಂದರಲ್ಲಿ 17 ವರ್ಷದ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 20 ವರ್ಷ ಜೈಲು ಹಾಗೂ ₹2.50 ಲಕ್ಷ ದಂಡ ವಿಧಿಸಿದೆ. ಕಾಳಗಿ ತಾಲ್ಲೂಕಿನ ಅರಣಕಲ್ ಗ್ರಾಮಸ್ಥ ಮಲ್ಲಿಕಾರ್ಜುನ ಅಲಿಯಾಸ್ ಮಲ್ಲಪ್ಪ ಕಲಗುರ್ತಿ ಅಪರಾಧಿ. ಈತ ಬಾಲಕಿಯನ್ನು ತಾಲ್ಲೂಕಿನ ಗ್ರಾಮವೊಂದರಿಂದ ಒತ್ತಾಯ ಪೂರ್ವಕವಾಗಿ ಬೆಂಗಳೂರಿಗೆ ಕರೆದುಕೊಂಡು ಒಂದು ತಿಂಗಳ ಕಾಲ ಅತ್ಯಾಚಾರ ಎಸಗಿದ್ದ.

### ನವ ಮಂಗಳೂರು ಬಂದರು ಪ್ರಾಧಿಕಾರದ ಸುವರ್ಣ ಮಹೋತ್ಸವ ಕಾರ್ಯಕ್ರಮಗಳಿಗೆ ಚಾಲನೆ

# ‘ಸೂಪರ್ ಪವರ್ ಆಗಲಿದೆ ಭಾರತ’

• ಪ್ರವೀಣ್ ಕುಮಾರ್ ಪಿ.ವಿ

ನವದೆಹಲಿ: ‘ಜಲಯಾನ ಕ್ಷೇತ್ರದಲ್ಲಿ ಭಾರತವನ್ನು ಜಗತ್ತಿನ ಸೂಪರ್ ಪವರ್ ದೇಶವಾಗಿಸಲು ಸರ್ಕಾರ ಅನೇಕ ಯೋಜನೆ ರೂಪಿಸಿದ್ದು, ಬಂದರುಗಳ ಸರಕು ನಿರ್ವಹಣೆಯ ವಾರ್ಷಿಕ ಸಾಮರ್ಥ್ಯವನ್ನು ಸಾವಿರ ಕೋಟಿ ಟನ್‌ಗೆ ಹೆಚ್ಚಿಸಲಾಗುವುದು’ ಎಂದು ಕೇಂದ್ರ ಬಂದರು ಸಚಿವ ಸರ್ಬಾನಂದ ಸೋನೊವಾಲ್ ಹೇಳಿದರು.

ನವ ಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ)ದ ಸುವರ್ಣ ಮಹೋತ್ಸವ ಕಾರ್ಯಕ್ರಮಗಳಿಗೆ ಇಲ್ಲಿನ ಭಾರತ್ ಮಂಡಪಮ್ ಸಭಾಂಗಣದಲ್ಲಿ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಮುಂದಿನ 22 ವರ್ಷಗಳ ಅಮೃತ ಕಾಲದ ಅವಧಿಯಲ್ಲಿ ದೇಶದ ಬಂದರುಗಳ ಅಭಿವೃದ್ಧಿಗೆ ₹80 ಲಕ್ಷ ಕೋಟಿ ಹೂಡಿಕೆ ಆಗಲಿದೆ. ಎಲ್ಲ ಬಂದರುಗಳಿಗೆ ತಂತ್ರಜ್ಞಾನ ಆಧರಿತ ಅತ್ಯಾಧುನಿಕ ಸೌಕರ್ಯ ಒದಗಿಸಲಿದ್ದೇವೆ. ಆವಿಷ್ಕಾರ ಅಳವಡಿ-ಸಿಕೊಳ್ಳಲು ಉತ್ತೇಜನ ನೀಡಲಿದ್ದೇವೆ. ಮಹಾರಾಷ್ಟ್ರದ ವಾರ್ಧವಾನ್ ಬಂದರನ್ನು ಸರಕು ನಿರ್ವಹಣೆಯಲ್ಲಿ ಜಗತ್ತಿನ ಅಗ್ರ 10 ಬಂದರುಗಳಲ್ಲಿ ಒಂದನ್ನಾಗಿ ಅಭಿವೃದ್ಧಿಪಡಿಸಲು ₹76 ಸಾವಿರ ಕೋಟಿ ಹೂಡಿಕೆ ಮಾಡಲಿದ್ದೇವೆ. ಈ ಬಂದರು 12 ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಸಲಿದೆ’ ಎಂದರು.

**ಸ್ಮಾರ್ಟ್ ಬಂದರು ಆಗಿ ಅಭಿವೃದ್ಧಿ:** ಎನ್‌ಎಂಪಿಎ ಅಧ್ಯಕ್ಷ ವೆಂಕಟರಮಣ ಅಕ್ಕರಾಜು ಮಾತನಾಡಿ, ‘2030ರ ಒಳಗೆ ನವ ಮಂಗಳೂರು ಬಂದರನ್ನು ಸ್ಮಾರ್ಟ್ ಬಂದರನ್ನಾಗಿ ಅಭಿವೃದ್ಧಿಪಡಿಸಲಾಗುತ್ತದೆ’ ಎಂದು ಹೇಳಿದರು.

‘ಬಂದರು ಪ್ರವೇಶಿಸುವ ವಾಹನಗಳ ಸಮಗ್ರ ತಪಾಸಣೆ ವ್ಯವಸ್ಥೆ, ದಕ್ಕೆಗಳಲ್ಲಿ ಆಟೊ ಪೈಲಟ್ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ. ಬ್ರೇಕ್ ವಾಟರ್ ವಿಸ್ತರಣೆ, ಎರಡು ಹೊಸ ದಕ್ಕೆಗಳ ಸೇರ್ಪಡೆ ಸೇರಿ ವಿವಿಧ ಯೋಜನೆಗಳನ್ನು ₹12 ಸಾವಿರ ಕೋಟಿ ವೆಚ್ಚದಲ್ಲಿ 2030ರ ಒಳಗೆ ಜಾರಿಗೊಳಿ-ಸಲಿದ್ದೇವೆ’ ಎಂದರು.

‘ಎನ್‌ಎಂಪಿಎ 2024-25ನೇ ಸಾಲಿನಲ್ಲಿ 4.6 ಕೋಟಿ ಟನ್ ಸರಕು ನಿರ್ವಹಿಸಿದೆ. 2025-26ನೇ ಸಾಲಿನಲ್ಲಿ 5 ಕೋಟಿ ಟನ್ ಸರಕು ನಿರ್ವಹಿಸುವ ಗುರಿ ಇದೆ. 2047ರ ವೇಳೆಗೆ ವಾರ್ಷಿಕ ಸರಕು ನಿರ್ವಹಣೆ ಸಾಮರ್ಥ್ಯವನ್ನು 15ಕೋಟಿ ಟನ್ ಹೆಚ್ಚಿಸುವ ಗುರಿ ಇದೆ’ ಎಂದರು.

ಬಂದರು, ನೌಕಾ ಮತ್ತು ಜಲಯಾನ ಸಚಿವಾಲಯದ ಜಂಟಿ ಕಾರ್ಯದರ್ಶಿ ಆರ್.ಲಕ್ಷ್ಮಣನ್, ಅಭಿವೃದ್ಧಿ ಸಲಹೆಗಾರ ಎಚ್.ಎನ್. ಅಶ್ವತ್ಥ್, ಕರ್ನಾಟಕ ಜಲಯಾನ ಮಂಡಳಿ ಸಿಇಒ ಬಾಲಚಂದ್ರ ಎಚ್.ಸಿ., ಡ್ರೆಜ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದ ಸಲಹೆಗಾರ ರಾಜೀವ್ ಜಲೋಟಾ ಭಾಗವಹಿಸಿದ್ದರು.

ಎನ್‌ಎಂಪಿಎ ಉಪಾಧ್ಯಕ್ಷೆ ಎಸ್. ಶಾಂತಿ ವಂದಿಸಿದರು.

(ವರದಿಗಾರರು ಸಂಸ್ಥೆಯ ಆಹ್ವಾನದ ಮೇರೆಗೆ ನವದೆಹಲಿಗೆ ತೆರಳಿದ್ದರು)

ನವಮಂಗಳೂರು ಬಂದರಿನ ಸುವರ್ಣ ಮಹೋತ್ಸವದ ಅಂಗವಾಗಿ ₹50 ಮುಖಬೆಲೆಯ ಹೊಸ ನಾಣ್ಯವನ್ನು ಸಚಿವ ಸರ್ಬಾನಂದ ಸೋನೋವಾಲ್ ಬಿಡುಗಡೆ ಮಾಡಿದರು. ಎಸ್.ಶಾಂತಿ, ಎಚ್.ಎನ್.ಅಶ್ವತ್ಥ್, ಆರ್.ಲಕ್ಷ್ಮಣನ್, ವೆಂಕಟ ರಮಣ ಅಕ್ಕರಾಜು, ರಾಜೀವ ಜಲೋಟ, ಬಾಲಚಂದ್ರ ಎಚ್.ಸಿ ಭಾಗವಹಿಸಿದ್ದರು

**ಎನ್‌ಎಂಪಿಎದಿಂದ ಸ್ಯಾಟಲೈಟ್ ಬಂದರು ನಿರ್ಮಾಣ ಸೇರಿದಂತೆ 2047 ವೇಳೆಗೆ ಒಟ್ಟು ₹ 55 ಸಾವಿರ ಕೋಟಿ ವೆಚ್ಚದ ಯೋಜನೆಗಳನ್ನು ರೂಪಿಸಲಾಗಿದೆ**

**ವೆಂಕಟರಮಣ ಅಕ್ಕರಾಜು**

ಎನ್‌ಎಂಪಿಎ ಅಧ್ಯಕ್ಷ

### ಸುವರ್ಣ ಸಂಭ್ರಮ ಸ್ಮರಣಾರ್ಥ 8 ಯೋಜನೆ

ನವ ಮಂಗಳೂರು ಬಂದರಿನ ಸುವರ್ಣ ಸಂಭ್ರಮದ ಸ್ಮರಣಾರ್ಥ ಕ್ರೂಸ್ ಹಡಗುಗಳಿಗೆ ಮೀಸಲಾದ ಟರ್ಮಿನಲ್ ಗೇಟ್, ಪಣಂಬೂರು ಕಿನಾರೆ ಬಳಿ ನಿರ್ಮಿಸಿರುವ ನೂತನ ಪ್ರವೇಶದ್ವಾರ -ಕೆ.ಕೆ ಗೇಟ್, ಒಟ್ಟು 14 ಸಾವಿರ ಟನ್ ಸಾಮರ್ಥ್ಯದ ಎರಡು ಆಧುನಿಕ ಉಗ್ರಾಣಗಳು ಮತ್ತು 150 ಹಾಸಿಗೆಗಳ ಸಾಮರ್ಥ್ಯದ ಬಂದರು ಆಸ್ಪತ್ರೆ ಹಾಗೂ ಪ್ರಾಧಿಕಾರದ ಸಿಬ್ಬಂದಿ ಮತ್ತು ಪಿಂಚಣಿದಾರರಿಗಾಗಿ ರೂಪಿಸಿದ ಎನ್‌ಎಂಪಿಎ ಚಿಕಿತ್ಸಾ ಮಿತ್ರ ಆ್ಯಪ್ ಅನ್ನು ಸಚಿವ ಸರ್ಬಾನಂದ ಸೊನೊವಾಲ್ ಲೋಕಾರ್ಪಣೆಗೊಳಿಸಿದರು.

ಬೈಕಂಪಾಡಿಯಲ್ಲಿ ಟ್ರಕ್ ನಿಲುಗಡೆ ತಾಣ, ಎಂಡಿಎಲ್ ಯಾರ್ಡ್‌ಗೆ ಹೊಸ ಕಾಂಕ್ರೀಟ್ ರಸ್ತೆ, ಕಸ್ಟಮ್ಸ್ ಹೌಸ್ ಬಳಿ ಟ್ರಕ್ ನಿಲುಗಡೆ ತಾಣ ವಿಸ್ತರಣೆಗೆ ಶಂಕು ಸ್ಥಾಪನೆ ನೆರವೇರಿಸಿದರು.

# ಯುರೋಪ್ ಪ್ರವಾಸಕ್ಕೆ ನಿಮ್ಮ ಕನಸು ಈಗ ಹತ್ತಿರ

# ಕೇವಲ ರೂ. 2,20,000/–

## ವಿಮಾನ ಪ್ರಯಾಣ, ರುಚಿಕರ ಭೋಜನ, ಆರಾಮದಾಯಕ ವಾಸ್ತವ್ಯ – ಅಮೂಲ್ಯ ನೆನಪುಗಳು!

### ಗೋಲ್ಡನ್ ಯುರೋಪ್ ಪ್ರವಾಸ 18 ದಿನಗಳು ₹ 1,35,000 + € 2,650

ಇಂಗ್ಲೆಂಡ್, ಸ್ಕಾಟ್‌ಲೆಂಡ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಫ್ರಾನ್ಸ್, ಲಕ್ಸಮ್‌ಬರ್ಗ್, ಸ್ವಿಡ್ಜರ್‌ಲ್ಯಾಂಡ್, ಲಿಚೆನ್‌ಸ್ಟೈನ್, ಆಸ್ಟ್ರಿಯಾ, ಇಟಲಿ ಮತ್ತು ವ್ಯಾಟಿಕನ್

**ಡಿಲೈಟ್‌ಫುಲ್ ಯುರೋಪ್ ಪ್ರವಾಸ**
12 ದಿನಗಳು ₹ 1,05,000 + € 1,800
ಇಂಗ್ಲೆಂಡ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಫ್ರಾನ್ಸ್, ಸ್ವಿಡ್ಜರ್‌ಲ್ಯಾಂಡ್, ಇಟಲಿ ಮತ್ತು ವ್ಯಾಟಿಕನ್

**ಸ್ಪೇನ್ ಮತ್ತು ಪೋರ್ಚುಗಲ್ ಪ್ರವಾಸ**
12 ದಿನಗಳು ₹ 1,15,000 + € 1,900
ಮ್ಯಾಡ್ರಿಡ್, ಟೋಲೆಡೊ, ಪೋರ್ಟೊ, ಫಾತಿಮಾ, ಲಿಸ್‌ಬನ್, ಸೆವಿಲ್ಲೆ, ಕೊರ್ಡೋಬಾ, ಗ್ರನಾಡ, ವಾಲೆನ್ಸಿಯಾ, ಮತ್ತು ಬಾರ್ಸಿಲೋನ

**ಬೆಸ್ಟ್ ಆಫ್ ಯುರೋಪ್ ಪ್ರವಾಸ**
12 ದಿನಗಳು ₹ 1,05,000 + € 1,750
ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಲಕ್ಸಮ್‌ಬರ್ಗ್, ಜರ್ಮನಿ, ಸ್ವಿಡ್ಜರ್‌ಲ್ಯಾಂಡ್, ಇಟಲಿ ಮತ್ತು ವ್ಯಾಟಿಕನ್

**ಈಸ್ಟರ್ನ್ ಯುರೋಪ್ ಪ್ರವಾಸ**
11 ದಿನಗಳು ₹ 1,15,000 + € 1,775
ಮುನಿಚ್, ಬರ್ಲಿನ್, ಡ್ರೆಸ್‌ಡೆನ್, ಪ್ರಾಗ್, ವಿಯಾನ್ನಾ, ಬ್ರಾಟಿಸ್ಲಾವ, ಬುಡಪೆಸ್ಟ್ ಮತ್ತು ಜೆಲ್‌ಆ್ಯಂಸೀ

**ಗ್ರೇಟ್ ಬ್ರಿಟನ್ ಪ್ರವಾಸ**
11 ದಿನಗಳು ₹ 1,15,000 + € 2,200
ಡಬ್ಲಿನ್, ಬೆಲ್‌ಫಾಸ್ಟ್, ಗ್ಲಾಸ್‌ಗೋ, ಈಡೆನ್‌ಬರ್ಗ್, ವಿಂಡರ್‌ಮೆರೆ, ಮ್ಯಾಂಚೆಸ್ಟರ್, ಆಕ್ಸ್‌ಫರ್ಡ್ ಮತ್ತು ಲಂಡನ್

**ಸ್ಕ್ಯಾಂಡಿನೇವಿಯಾ, ಪ್ರವಾಸ**
11 ದಿನಗಳು ₹ 1,35,000 + € 2,150
ಹೆಲ್ಸಿಂಕಿ, ಸ್ಟಾಕ್‌ಹೋಮ್, ನಾರ್ವೆ ಇನ್ ನಟ್‌ಷೆಲ್, ಓಸ್ಲೊ ಮತ್ತು ಕೋಪನ್ ಹ್ಯಾಂಗ್

ಷರತ್ತುಗಳು ಅನ್ವಯ

### ಗುಂಪು ಪ್ರವಾಸ ಪ್ಯಾಕೇಜ್‌ಗಳು

| | | |
|---|---|---|
| ದುಬೈ<br>6 ದಿನಗಳು<br>₹ 98,000/– | ಸಿಂಗಾಪುರ್<br>ಮಲೇಷಿಯಾ 7 ದಿನಗಳು<br>₹ 1,09,000/– | ವಿಯೆಟ್ನಾಂ<br>8 ದಿನಗಳು<br>₹ 1,22,000/– |
| ಸಿಂಗಾಪುರ್<br>ಮಲೇಷಿಯಾ ಥೈಲ್ಯಾಂಡ್<br>11 ದಿನಗಳು<br>₹ 1,45,000/– | ವಿಯೆಟ್ನಾಂ<br>ಕಾಂಬೊಡಿಯಾ<br>11 ದಿನಗಳು<br>₹ 1,65,000/– | ಈಜಿಪ್ಟ್<br>9 ದಿನಗಳು<br>₹ 1,85,000/– |
| ಸೌತ್ ಆಫ್ರಿಕಾ<br>10 ದಿನಗಳು<br>₹ 2,25,000/– | ಜಪಾನ್<br>8 ದಿನಗಳು<br>₹ 3,30,000/– | ಆಸ್ಟ್ರೇಲಿಯಾ<br>10 ದಿನಗಳು<br>₹ 3,50,000/– |

### ಕಸ್ಟಮೈಸ್ಡ್ ಪ್ರವಾಸ ಪ್ಯಾಕೇಜ್‌ಗಳು

ವಿಮಾನ ಟಿಕೆಟ್ ಹೆಚ್ಚುವರಿ

| | | |
|---|---|---|
| ಶ್ರೀಲಂಕಾ<br>6 ದಿನಗಳು ₹ 38,000/– | ಥೈಲ್ಯಾಂಡ್<br>7 ದಿನಗಳು ₹ 42,000/– | ಬಾಲಿ<br>6 ದಿನಗಳು ₹ 48,000/– |
| ಕಜಖಿಸ್ತಾನ್<br>6 ದಿನಗಳು ₹ 48,000/– | ಮಲೇಷಿಯಾ<br>5 ದಿನಗಳು ₹ 38,000/– | ಮಾರಿಷಸ್<br>7 ದಿನಗಳು ₹ 49,000/– |
| ಜಾರ್ಜಿಯಾ<br>6 ದಿನಗಳು ₹ 58,000/– | ಮಾಲ್ಡೀವ್ಸ್<br>5 ದಿನಗಳು ₹ 62,000/– | ಹಾಂಗ್ ಕಾಂಗ್ ಮತ್ತು ಮಕಾವು<br>6 ದಿನಗಳು ₹ 83,000/– |
| ಜೋರ್ಡಾನ್<br>8 ದಿನಗಳು ₹ 93,000/– | ಕೀನ್ಯಾ<br>8 ದಿನಗಳು ₹ 1,10,000/– | ಸೀಶೆಲ್ಸ್<br>7 ದಿನಗಳು ₹ 1,35,000/– |
| ನ್ಯೂಜಿಲ್ಯಾಂಡ್<br>9 ದಿನಗಳು ₹ 1,50,000/– | ದಕ್ಷಿಣ ಕೊರಿಯಾ<br>7 ದಿನಗಳು ₹ 1,80,000/– | ಫಿನ್‌ಲ್ಯಾಂಡ್ ಮತ್ತು ಸ್ವೀಡೆನ್<br>11 ದಿನಗಳು ₹ 2,60,000/– |

## ಟ್ರಾವೆಲ್ ಮಾರ್ಟ್ ವರ್ಲ್ಡ್ ಟೂರ್ಸ್ ಪ್ರೈ. ಲಿ.

IATA Accredited Agent 14376740

www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com

enquiry@trawelmart.com www.trawelmart.com 080 4642 7999

**ಬೆಂಗಳೂರು** ನಂ. 357, ಟ್ರಾವೆಲ್ ಮಾರ್ಟ್ ಗೃಹ, 10ನೇ ಬಿ ಮುಖ್ಯ ರಸ್ತೆ, ಜಯನಗರ 3ನೇ ಬಡಾವಣೆ, ಬೆಂಗಳೂರು–560011

**ಮಲ್ಲೇಶ್ವರಂ** 1ನೇ ಟೆಂಪಲ್ ಸ್ಟ್ರೀಟ್, 20, 10ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003.

ಮಕ್ಕಳಿಗೆ ಕೊಡಿಸಿದ ಐಸ್‌ಕ್ರೀಂನಲ್ಲಿ ಶೇಕಡ 30ರಷ್ಟನ್ನು ನೀವು ತಿನ್ನುವ ಮೂಲಕ ಅವರಿಗೆ ತೆರಿಗೆಯ ಬಗ್ಗೆ ಬಹಳ ಉತ್ತಮ ಬಗೆಯಲ್ಲಿ ಪಾಠ ಹೇಳಬಹುದು

**ವಾರನ್ ಬಫೆಟ್**, ಹೂಡಿಕೆದಾರ

ದುಡ್ಡಿನಂಥಾ ಮಾತು

# ಚಿನ್ನ, ಬೆಳ್ಳಿ: ನಂಬಿಕೆ ಹಳೆಯದು ಮಾರ್ಗ ಹೊಸದು

ಧನತ್ರಯೋದಶಿ ಹತ್ತಿರವಾಗುತ್ತಿದೆ. ಈ ಹೊತ್ತಿನಲ್ಲಿ ಚಿನ್ನ, ಬೆಳ್ಳಿ ಖರೀದಿಸುವುದು ಶುಭಕರ ಎಂಬ ನಂಬಿಕೆ ಇದೆ. ಚಿನ್ನ, ಬೆಳ್ಳಿ ದರ ಏರುತ್ತಿರುವಾಗ ಸಣ್ಣ ಹೂಡಿಕೆದಾರರು ಏನು ಮಾಡಬೇಕು? ಯಾವ ರೂಪದಲ್ಲಿ ಇವುಗಳನ್ನು ಖರೀದಿಸಬೇಕು? ಈ ಕುರಿತ ನೋಟವೊಂದು ಇಲ್ಲಿದೆ

• ಚಿಂತನ್ ಹಾರಿಯಾ

ಭಾರತದ ಕುಟುಂಬಗಳು ತಮ್ಮಲ್ಲಿನ ಸಂಪತ್ತನ್ನು ಚಿನ್ನದ ಆಭರಣ, ನಾಣ್ಯ ಅಥವಾ ಬೆಳ್ಳಿಯ ಗಟ್ಟಿಗಳ ರೂಪದಲ್ಲಿ ಶತಮಾನಗಳಿಂದ ಸಂಗ್ರಹಿಸಿ ಇರಿಸಿಕೊಂಡಿವೆ. ಈ ಅಮೂಲ್ಯ ಲೋಹಗಳು ಆರ್ಥಿಕ ಸುರಕ್ಷತೆಯನ್ನು ಒದಗಿಸುತ್ತವೆ, ಸಂಪತ್ತನ್ನು ಈ ಲೋಹಗಳ ರೂಪದಲ್ಲಿ ಪರಿವರ್ತಿಸಿದಾಗ ಸಂಪತ್ತಿನ ಮೌಲ್ಯ ಕುಗ್ಗುವುದಿಲ್ಲ, ಕಷ್ಟ ಎದುರಾದಾಗ ಇವುಗಳನ್ನು ಬಳಸಿ ನಗದು ಹಣ ಪಡೆದು-ಕೊಳ್ಳುವುದು ಸುಲಭ ಎಂಬುದು ಸರ್ವವೇದ್ಯ.

ಅಮೂಲ್ಯ ಲೋಹಗಳ ಜೊತೆ ದೇಶದ ಜನ ಹೊಂದಿರುವ ಸಾಂಸ್ಕೃತಿಕ ನಂಟು ಶತಮಾನಗಳಿಂದ ಹಾಗೆಯೇ ಇದೆ. ಆದರೆ ಭೌತಿಕ ಸ್ವರೂಪದ ಚಿನ್ನದ ಮೇಲೆ ಹೂಡಿಕೆ ಮಾಡುವಲ್ಲಿ ಒಂದಿಷ್ಟು ಮಿತಿಗಳು, ಸವಾಲುಗಳು ಕೂಡ ಇವೆ. ಚಿನ್ನ ಹಾಗೂ ಬೆಳ್ಳಿಯನ್ನು ಸಂಗ್ರಹಿಸಿ ಇಟ್ಟುಕೊಳ್ಳುವಲ್ಲಿ, ಅವುಗಳ ಶುದ್ಧತೆಯನ್ನು ಪರೀಕ್ಷಿಸುವಲ್ಲಿ, ಅವುಗಳನ್ನು ಅಗತ್ಯ ಎದುರಾದಾಗ ನಗದೀಕರಿಸಿಕೊಳ್ಳುವಲ್ಲಿ ಸಮಸ್ಯೆಗಳು ಎದುರಾಗಬಹುದು. ಅಲ್ಲದೆ, ಅವುಗಳ ನಗದೀಕರಣದ ಸಂದರ್ಭದಲ್ಲಿ ಭಾವನೆಗಳು ಅಡ್ಡಿ ಉಂಟುಮಾಡಬಹುದು

ಈಚಿನ ವರ್ಷಗಳಲ್ಲಿ ಚಿನ್ನದ ಇಟಿಎಫ್‌ಗಳು ಹಾಗೂ ಬೆಳ್ಳಿಯ ಇಟಿಎಫ್‌ಗಳು ಸಾಂಪ್ರದಾಯಿಕ ಆಸ್ತಿಗಳ ಆಧುನಿಕ ಅವತಾರಗಳ ರೂಪದಲ್ಲಿ ತಲೆಎತ್ತಿವೆ. ಅಮೂಲ್ಯ ಲೋಹಗಳ ಎಲ್ಲ ಒಳಿತುಗಳನ್ನು ಒಳಗೊಂಡಿರುವ ಇವು, ಪಾರದರ್ಶಕವಾದ, ನಗದೀಕರಣ ಸುಲಭವಾದ ಹಾಗೂ ಬಳಕೆಗೆ ಹೆಚ್ಚು ಅನುಕೂಲವಾದ ಹಣಕಾಸಿನ ಉತ್ಪನ್ನವಾಗಿ ಲಭ್ಯವಾಗಿವೆ. ಅಂದರೆ, ಈ ಅಮೂಲ್ಯ ಲೋಹಗಳ ಇಟಿಎಫ್‌ಗಳು ಹೆಚ್ಚು ಅನುಕೂಲಕರವಾದವು, ಲೋಹಗಳ ಮೇಲಿನ ನೇರ ಹೂಡಿಕೆಗೆ ಪರ್ಯಾಯವನ್ನು ಒದಗಿಸುವಂಥವು.

**ಚಿನ್ನ:** ಚಿನ್ನವು ಯಾವಾಗಲೂ ಸ್ಥಿರತೆಯನ್ನು ತರುವ ಲೋಹ. ಆರ್ಥಿಕ ಒತ್ತಡದ ಸಂದರ್ಭಗಳಲ್ಲಿ, ಜಾಗತಿಕ ಮಟ್ಟದಲ್ಲಿ ಸಂಘರ್ಷಗಳು ಉಂಟಾದಾಗ, ಬಡ್ಡಿ ದರವು ಇಳಿಕೆಯ ಹಾದಿಯಲ್ಲಿ ಇದ್ದಾಗ ಚಿನ್ನದ ಬೆಲೆಯು ಬಹಳ ಏರಿಕೆ ದಾಖಲಿಸಿದೆ. ವ್ಯಾಲ್ಯೂ ರಿಸರ್ಚ್ ಸಂಸ್ಥೆಯು ಸಿದ್ಧಪಡಿಸಿರುವ 2025ರ ಸೆಪ್ಟೆಂಬರ್ 18ರ ಅಂಕಿ–ಅಂಶಗಳ ಪ್ರಕಾರ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯು ಒಂದು ವರ್ಷದ ಅವಧಿಯಲ್ಲಿ ಶೇಕಡ 49.84ರಷ್ಟು ಹೆಚ್ಚಳ ಕಂಡಿದೆ. ಈ ವರ್ಷದಲ್ಲಿ ಜನವರಿ 1ರಿಂದ ಈಚೆಗೆ ಬೆಲೆಯು ಶೇ 43.98ರಷ್ಟು ಹೆಚ್ಚಾಗಿದೆ. ಅಂದರೆ ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ ಹೆಚ್ಚಾದಾಗ ಚಿನ್ನವು ಸುರಕ್ಷಿತ ಹೂಡಿಕೆ ಎಂಬ ಭಾವನೆಯು ಇನ್ನಷ್ಟು ಬಲವಾಗಿದೆ ಎಂದು ಅರ್ಥ.

ಆದರೆ, ಜಾಗತಿಕ ಮಟ್ಟದಲ್ಲಿ ಸುಂಕ ಸಮರವು ನಡೆಯುತ್ತಿರುವ ಈ ಕಾಲಘಟ್ಟದಲ್ಲಿ, ಕಳೆದ ಒಂದು ವರ್ಷದ ಅವಧಿಯಲ್ಲಿ ದೇಶಿ ಷೇರುಪೇಟೆ ನೀಡಿರುವ ಗಳಿಕೆಯು ಏನೂ ಇಲ್ಲ (ಶೇ –0.39ರಷ್ಟು).

ಇಟಿಎಫ್‌ಗಳ ಮೂಲಕ ಹೂಡಿಕೆದಾರರು ತಮ್ಮ ಡಿಮ್ಯಾಟ್ ಖಾತೆಯಲ್ಲಿ ಚಿನ್ನವನ್ನು ಯಾವ ಅಡ್ಡಿಯೂ ಇಲ್ಲದೆ ಇರಿಸಿಕೊಳ್ಳಬಹುದು. ಅಲ್ಲದೆ, ವ್ಯವಸ್ಥಿತ ಹೂಡಿಕೆ ಯೋಜನೆಗಳ ಮೂಲಕ ಅವರು ಚಿನ್ನವನ್ನು ಸಣ್ಣ ಪ್ರಮಾಣದಲ್ಲಿ ಖರೀದಿಸುತ್ತಿರಬಹುದು. ಚಿನ್ನವನ್ನು ಆಭರಣದ ರೂಪದಲ್ಲಿ ಖರೀದಿಸಿದರೆ ಅದನ್ನು ಸುರಕ್ಷಿತವಾಗಿ ಇರಿಸಿಕೊಳ್ಳುವ ಸಮಸ್ಯೆ ಎದುರಾಗುತ್ತದೆ. ಚಿನ್ನವನ್ನು ನಾಣ್ಯಗಳ ರೂಪದಲ್ಲಿ ಖರೀದಿಸಿದರೆ ಅಗತ್ಯ ಸಂದರ್ಭದಲ್ಲಿ ಅವುಗಳ ನಗದೀಕರಣಕ್ಕೆ ತುಸು ಸಮಸ್ಯೆ ಎದುರಾಗಬಹುದು. ಆದರೆ ಚಿನ್ನವನ್ನು ಇಟಿಎಫ್ ರೂಪದಲ್ಲಿ ಖರೀದಿಸಿದಾಗ ಈ ಸಮಸ್ಯೆ ಇರುವುದಿಲ್ಲ.

**ಬೆಳ್ಳಿ:** ಚಿನ್ನಕ್ಕೆ ಹೋಲಿಸಿದರೆ ಬೆಳ್ಳಿಯ ಗುಣ ಬೇರೆಯದ್ದು. ಬೆಳ್ಳಿಯ ಬೆಲೆಯು ಹೆಚ್ಚು ಚಂಚಲವಾಗಿರುತ್ತದೆ. ಎಲೆಕ್ಟ್ರಾನಿಕ್ಸ್ ಉದ್ಯಮ ವಲಯದಿಂದ, ಸೌರಫಲಕ ಮತ್ತು ಪರಿಸರ ಪೂರಕ ಇಂಧನ ವಲಯದಿಂದ ಬರುವ ಬೇಡಿಕೆಯು ಇದರ ಬೆಲೆಯ ಮೇಲೆ ಪರಿಣಾಮ ಬೀರುತ್ತದೆ. ಅರ್ಥ ವ್ಯವಸ್ಥೆಯಲ್ಲಿ ನಗದು ಹರಿವನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ, ಆರ್ಥಿಕ ಬೆಳವಣಿಗೆಯ ಕಾಲಘಟ್ಟದಲ್ಲಿ ಬೆಳ್ಳಿಯ ಬೆಲೆ ಹೆಚ್ಚಳವು ಜಾಸ್ತಿ ಇರುತ್ತದೆ. ಕಳೆದ ಮೂರು ತಿಂಗಳಲ್ಲಿ ದೇಶದಲ್ಲಿ ಬೆಳ್ಳಿಯ ಬೆಲೆಯು ಶೇ 15.83ರಷ್ಟು ಏರಿಕೆ ಆಗಿದೆ. ಇದು, ಇದೇ ಅವಧಿಯಲ್ಲಿ ಚಿನ್ನದ ಬೆಲೆಯಲ್ಲಿ ಆಗಿರುವ ಏರಿಕೆಯ ಪ್ರಮಾಣಕ್ಕಿಂತ (ಶೇ 10.67ರಷ್ಟು) ಹೆಚ್ಚು. ಒಂದು ವರ್ಷದಲ್ಲಿ ಬೆಳ್ಳಿಯ ಬೆಲೆಯು ಶೇ 43.47ರಷ್ಟು ಹೆಚ್ಚಳ ಕಂಡಿದ್ದು, ಕೈಗಾರಿಕಾ ವಲಯದಲ್ಲಿನ ಬೆಳವಣಿಗೆಯ ಜೊತೆಗೆ ಇದರ ಬೆಲೆಯೂ ಹೆಚ್ಚಳವಾಗಿದೆ.

ಆದರೆ, ಬೆಳ್ಳಿಯ ಬೆಲೆಯಲ್ಲಿನ ಚಂಚಲತೆಯು ಅದನ್ನು ಭೌತಿಕವಾಗಿ ಇಟ್ಟುಕೊಳ್ಳುವುದನ್ನು ನಿರುತ್ತೇಜಿಸುವಂತೆ ಇರುತ್ತದೆ. ಬೆಳ್ಳಿಯ ಬೆಲೆಯಲ್ಲಿ ಬಹಳ ತೀವ್ರ ಪ್ರಮಾಣದಲ್ಲಿ ಏರಿಳಿತಗಳು ಆಗಬಹುದು. ಇಟಿಎಫ್ ರೂಪದಲ್ಲಿ ಬೆಳ್ಳಿಯನ್ನು ಖರೀದಿಸಿದರೆ ನಗದೀಕರಣ ಸುಲಭವಾಗುತ್ತದೆ.

ಲೇಖಕ ಐಸಿಐಸಿಐ ಪ್ರುಡೆನ್ಶಿಯಲ್ ಎಎಂಸಿ ಕಂಪನಿ ಹೂಡಿಕೆ ಕಾರ್ಯತಂತ್ರದ ಮುಖ್ಯಸ್ಥ

## ವೆಚ್ಚದ ಮೇಲೆ ಇರಲಿ ಗಮನ

ಇಟಿಎಫ್‌ಗಳನ್ನು ಆಯ್ಕೆ ಮಾಡುವಾಗ ಹೂಡಿಕೆದಾರರು ಎಕ್ಸ್‌ಪೆನ್ಸ್ ರೇಷೊ (ವೆಚ್ಚ), ನಗದೀಕರಣದ ಅನುಕೂಲದ ಬಗ್ಗೆ ಪರಿಶೀಲನೆ ನಡೆಸಬೇಕು. ಇವು ದೀರ್ಘಾವಧಿಯಲ್ಲಿ ಸಿಗುವ ಲಾಭವನ್ನು ನಿರ್ಧರಿಸುತ್ತವೆ, ಇಟಿಎಫ್‌ಗಳು ಚಿನ್ನ ಹಾಗೂ ಬೆಳ್ಳಿಯ ಮೌಲ್ಯ ಹೆಚ್ಚಳಕ್ಕೆ ಎಷ್ಟರಮಟ್ಟಿಗೆ ಸರಿಸಮನಾಗಿ ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತವೆ ಎಂಬುದನ್ನು ತೀರ್ಮಾನಿಸುತ್ತವೆ. ಜಾಗತಿಕ ಅನಿಶ್ಚಿತತೆಗಳ ಈ ಸಂದರ್ಭದಲ್ಲಿ ಚಿನ್ನ ಹಾಗೂ ಬೆಳ್ಳಿ ತಮ್ಮ ಗಟ್ಟಿತನ ಏನು ಎಂಬುದನ್ನು ತೋರಿಸಿಕೊಟ್ಟಿವೆ. ಆದರೂ, ಇವೆರಡರ ಮೌಲ್ಯವು ಈಚಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಹೆಚ್ಚಳ ಆಗಿರುವುದರಿಂದ ಸಣ್ಣ ಹೂಡಿಕೆದಾರರು ಹಂತ ಹಂತವಾಗಿ ಇವುಗಳಲ್ಲಿ ಹೂಡಿಕೆ ಮಾಡುವುದೊಳಿತು.

ಹೂಡಿಕೆಯ ಹಣದಲ್ಲಿ ಒಂದು ಪಾಲನ್ನು ಚಿನ್ನ ಹಾಗೂ ಬೆಳ್ಳಿಯ ಇಟಿಎಫ್‌ಗಾಗಿ ಅಥವಾ ಫಂಡ್ ಆಫ್ ಫಂಡ್‌ಗಳಿಗಾಗಿ ಮೀಸಲಿಡುವುದು ಒಳ್ಳೆಯದು. ಎಷ್ಟು ಪ್ರಮಾಣದಲ್ಲಿ ಹಣವನ್ನು ಇವುಗಳಿಗಾಗಿ ಮೀಸಲಿಡಬೇಕು ಎಂಬುದನ್ನು ತೀರ್ಮಾನಿಸುವ ಮೊದಲು ಹಣಕಾಸು ಸಲಹೆಗಾರರಿಂದ ಮಾರ್ಗದರ್ಶನ ಪಡೆಯುವುದು ಸರಿಯಾದ ಕ್ರಮ.

## ಇಟಿಎಫ್‌ಗಳು ಏಕೆ ಉತ್ತಮ?

1) **ಸುಲಭ ನಗದೀಕರಣ, ಪಾರದರ್ಶಕತೆ:** ಭೌತಿಕ ರೂಪದ ಚಿನ್ನ ಮಾರಾಟ ಮಾಡುವಾಗ ಒಂದಿಷ್ಟು ಮೌಲ್ಯ ಕೈತಪ್ಪಿಹೋಗುತ್ತದೆ. ಮೇಕಿಂಗ್ ವೆಚ್ಚ, ಶುದ್ಧತೆಯ ಪರಿಶೀಲನೆ ಹೆಸರಿನಲ್ಲಿ ತುಸು ಮೌಲ್ಯವನ್ನು ಬಿಟ್ಟುಕೊಡಬೇಕಾಗುತ್ತದೆ. ಬೆಳ್ಳಿಯ ಗಟ್ಟಿಗಳನ್ನು ನ್ಯಾಯಸಮ್ಮತ ಬೆಲೆಗೆ ಮಾರಾಟ ಮಾಡುವುದು ಇನ್ನಷ್ಟು ಕಷ್ಟಕರ ಆಗಿರಬಹುದು. ಆದರೆ, ಷೇರುಪೇಟೆಯಲ್ಲಿ ಖರೀದಿ–ಮಾರಾಟ ಆಗುವ ಇಟಿಎಫ್‌ಗಳನ್ನು ತಕ್ಷಣ ನಗದೀಕರಿಸಿಕೊಳ್ಳಬಹುದು.

2) **ಕಡಿಮೆ ವೆಚ್ಚ:** ಚಿನ್ನಾಭರಣ ಸಿದ್ಧಪಡಿಸುವಾಗ ಮೇಕಿಂಗ್ ವೆಚ್ಚ ಪಾವತಿಸಬೇಕು, ಅವುಗಳನ್ನು ಇರಿಸಿಕೊಳ್ಳಲು ಲಾಕರ್ ಸೌಲಭ್ಯ ಪಡೆದಲ್ಲಿ ಅದಕ್ಕೆ ಶುಲ್ಕ ನೀಡಬೇಕು, ನಾಣ್ಯಗಳು ಅಥವಾ ಗಟ್ಟಿಗಳನ್ನು ಮಾಡಿಸಿದರೆ ಅವುಗಳಿಗೆ ತಯಾರಿಕಾ ಶುಲ್ಕವನ್ನು ನೀಡಬೇಕಾಗುತ್ತದೆ. ಇಟಿಎಫ್‌ಗಳಿಗಾಗಿ ಸಣ್ಣ ಮೊತ್ತದ ನಿರ್ವಹಣಾ ಶುಲ್ಕವನ್ನು ನೀಡಬೇಕಾದರೂ, ಅವುಗಳಲ್ಲಿ ಇತರ ಗೋಪ್ಯ ಶುಲ್ಕಗಳು ಇರುವುದಿಲ್ಲ.

3) **ಶುದ್ಧತೆ ಮತ್ತು ಭದ್ರತೆ:** ಭೌತಿಕ ಸ್ವರೂಪದ ಚಿನ್ನ, ಬೆಳ್ಳಿಯನ್ನು ಖರೀದಿಸುವಾಗ ಅವುಗಳ ಪರಿಶುದ್ಧತೆಯ ಬಗ್ಗೆ ಒಂದಿಷ್ಟು ಚಿಂತೆ ಇದ್ದೇ ಇರುತ್ತದೆ. ಇಟಿಎಫ್‌ಗಳಲ್ಲಿ ಈ ಚಿಂತೆ ಇಲ್ಲ. ಅವುಗಳಿಗೆ ಬೆಲೆಯನ್ನು ತಂದುಕೊಡುವ ಉತ್ತಮ ಗುಣಮಟ್ಟದ ಭೌತಿಕ ಚಿನ್ನವನ್ನು ಸುರಕ್ಷಿತವಾಗಿ ಇರಿಸಲಾಗುತ್ತದೆ. ಇದರಿಂದಾಗಿ ಚಿನ್ನದ ಪರಿಶುದ್ಧತೆ ಕುರಿತ ಕಳವಳಕ್ಕೆ ಆಸ್ಪದ ಇರುವುದಿಲ್ಲ.

4) **ತೆರಿಗೆ:** ಅಮೂಲ್ಯ ಲೋಹಗಳನ್ನು ಮತ್ತೆ ಮತ್ತೆ ಖರೀದಿ, ಮಾರಾಟ ಮಾಡುತ್ತಿದ್ದರೆ ವೈಯಕ್ತಿಕ ಮಟ್ಟದಲ್ಲಿ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಹೂಡಿಕೆದಾರರು ತಮ್ಮ ಪೋರ್ಟ್‌ಫೋಲಿಯೊದಲ್ಲಿ ಬದಲಾವಣೆ ತರಲು ಹೀಗೆ ಖರೀದಿ, ಮಾರಾಟವನ್ನು ಮಾಡುತ್ತಿದ್ದಾಗ ಅವರ ಲಾಭದ ಪ್ರಮಾಣ ಕಡಿಮೆ ಆಗಬಹುದು ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ಫಂಡ್ ವ್ಯವಸ್ಥೆಯ ಭಾಗವಾಗಿ ಇಟಿಎಫ್‌ಗಳು ಇದ್ದಾಗ, ಆಂತರಿಕ ಮರುಹೊಂದಾಣಿಕೆಗೆ ತಕ್ಷಣಕ್ಕೆ ತೆರಿಗೆ ಬಾಧ್ಯತೆ ಇರುವುದಿಲ್ಲ.

5) **ವೈವಿಧ್ಯ:** ಸಾಮಾನ್ಯ ಸಂದರ್ಭಗಳಲ್ಲಿ ಚಿನ್ನ ಹಾಗೂ ಬೆಳ್ಳಿಯ ಪೈಕಿ ಒಂದು ಲೋಹದ ಬೆಲೆಯು ಏರುಗತಿಯಲ್ಲಿ ಇದ್ದರೆ, ಇನ್ನೊಂದು ಲೋಹ ಬೆಲೆಯು ಅಷ್ಟೇನೂ ತೀವ್ರವಾಗಿ ಹೆಚ್ಚಾಗುವು-ದಿಲ್ಲ. ಆದರೆ ಕಳೆದ ಒಂದು ವರ್ಷದಲ್ಲಿ ಈ ರೀತಿ ಆಗಿಲ್ಲ, ಈ ಅವಧಿಯು ಒಂದು ಅಪವಾದ. ಈ ಒಂದು ವರ್ಷದಲ್ಲಿ ಎರಡೂ ಲೋಹಗಳ ಬೆಲೆಯು ಹೆಚ್ಚಳ ಕಂಡಿದೆ. ಆದರೆ ಇಂತಹ ಅವಧಿಗಳನ್ನು ಊಹಿಸುವುದು ಬಹಳ ಕಷ್ಟ, ಇಂತಹ ಅವಧಿಗಳು ಅಲ್ಪಾಯುಷ್ಯ ಹೊಂದಿರುತ್ತವೆ ಕೂಡ. ಯಾವಾಗ ಯಾವ ಲೋಹದ ಬೆಲೆ ಹೆಚ್ಚಾಗುತ್ತದೆ ಎಂಬುದನ್ನು ಅಂದಾಜು ಮಾಡುತ್ತ ಇರುವ ಬದಲು, ಇವೆರಡನ್ನೂ ಇಟಿಎಫ್ ರೂಪದಲ್ಲಿ ಇರಿಸಿಕೊಂಡರೆ, ಇವುಗಳನ್ನು ನಾಣ್ಯ ಹಾಗೂ ಗಟ್ಟಿಗಳ ರೂಪದಲ್ಲಿ ಲಾಕರ್‌ಗಳಲ್ಲಿ ಇರಿಸಿಕೊಳ್ಳುವುದಕ್ಕಿಂತಲೂ ಹೆಚ್ಚು ಸ್ಥಿರವಾದ ಹೂಡಿಕೆಯೊಂದನ್ನು ಹೊಂದಿದಂತಾಗು-ತ್ತದೆ.

**ಒಟ್ಟಾರೆಯಾಗಿ ಹೇಳುವುದಾದರೆ:** ಅಮೂಲ್ಯ ಲೋಹಗಳಿಗೆ ಭಾರತದ ಮನೆಗಳಲ್ಲಿ ಯಾವತ್ತಿಗೂ ಒಂದು ಸ್ಥಾನ ಇದ್ದೇ ಇರುತ್ತದೆ. ಆದರೆ ಅವುಗಳನ್ನು ಯಾವ ರೂಪದಲ್ಲಿ ಇರಿಸಿಕೊಳ್ಳಬೇಕು ಎಂಬುದು ಮುಖ್ಯವಾಗುತ್ತದೆ. ಚಿನ್ನ ಹಾಗೂ ಬೆಳ್ಳಿಯನ್ನು ಭೌತಿಕ ರೂಪದಲ್ಲಿ ಇಟ್ಟುಕೊಳ್ಳುವುದು ತ್ರಾಸದ ಕೆಲಸ. ಕೆಲವು ಸಂದರ್ಭಗಳಲ್ಲಿ ಅದು ಅಷ್ಟು ಅನುಕೂಲಕರವೂ ಅಲ್ಲ. ಆದರೆ ಇಟಿಎಫ್‌ಗಳ ರೂಪದಲ್ಲಿ ಚಿನ್ನ ಹಾಗೂ ಬೆಳ್ಳಿಯನ್ನು ಇರಿಸಿಕೊಂಡರೆ, ಅವುಗಳ ಮೌಲ್ಯದ ಪ್ರಯೋಜನವು ಹೆಚ್ಚು ದಕ್ಷವಾಗಿ ಹಾಗೂ ಪಾರದರ್ಶಕ ಬಗೆಯಲ್ಲಿ ದಕ್ಕುತ್ತದೆ.

ಸಂಪ್ರದಾಯವನ್ನು ಇಷ್ಟಪಡುತ್ತ, ಆಧುನಿಕತೆ-ಯನ್ನೂ ಬಯಸುವ ಹೂಡಿಕೆದಾರರಿಗೆ ಚಿನ್ನ ಹಾಗೂ ಬೆಳ್ಳಿಯ ಇಟಿಎಫ್‌ಗಳು ಬಹಳ ಸೂಕ್ತವಾದ ಆಯ್ಕೆಗಳು.

# ಇಟಿಎಫ್: ಭಾರತದಲ್ಲಿ ಇದು ಹೇಗೆ ಬೆಳೆದಿದೆ ಗೊತ್ತಾ?

ಮಾಹಿತಿ ಕಣಜ

**ಪ್ಯಾಸಿವ್ ಹೂಡಿಕೆಗಳನ್ನು** ಇಷ್ಟಪಡುವವರಿಗೆ ಹೇಳಿ ಮಾಡಿಸಿದ ಒಂದು ಹೂಡಿಕೆ ಉತ್ಪನ್ನ ಇಟಿಎಫ್‌ಗಳು. ಇವು ಭಾರತದಲ್ಲಿ ಶುರುವಾಗಿದ್ದು 2001–02ರ ಸುಮಾರಿಗೆ. ಅದಾದ ನಂತರದ ವರ್ಷಗಳಲ್ಲಿ ಇಟಿಎಫ್‌ಗಳಲ್ಲಿನ ಹೂಡಿಕೆಯು ನಿರಂತರವಾಗಿ ಹೆಚ್ಚಾಗುತ್ತಿದೆ. ಇವುಗಳಲ್ಲಿ ಜನಸಾಮಾನ್ಯರೂ ಹೂಡಿಕೆ ಮಾಡುತ್ತಿದ್ದಾರೆ, ಬೃಹತ್ ಮೊತ್ತದ ನಿಧಿಯನ್ನು ನಿರ್ವಹಿಸುವ ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಕೂಡ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡುತ್ತಿದೆ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟದಲ್ಲಿ (ಎಎಂಎಫ್‌ಐ) ಇರುವ ಮಾಹಿತಿಯೊಂದು ಭಾರತದಲ್ಲಿ ಈಗ ಇಟಿಎಫ್‌ಗಳು ಎಷ್ಟು ಜನಪ್ರಿಯ ಆಗಿವೆ ಎಂಬುದನ್ನು ಹೇಳುತ್ತಿದೆ. 2025ರ ಏಪ್ರಿಲ್ ವೇಳೆಗಿನ ಮಾಹಿತಿ ಪ್ರಕಾರ ಭಾರತದಲ್ಲಿ ವಿವಿಧ ವಲಯಗಳಲ್ಲಿ, ವಿವಿಧ ಸೂಚ್ಯಂಕಗಳ ಮೇಲೆ, ವಿವಿಧ ಸರಕುಗಳ ಮೇಲೆ ಹಣ ತೊಡಗಿಸುವ ಒಟ್ಟು 253 ಇಟಿಎಫ್‌ಗಳು ಇದ್ದವು. ಈ ಪೈಕಿ ಚಿನ್ನದ ಮೇಲೆ ಹಣ ತೊಡಗಿಸುವ ಇಟಿಎಫ್‌ಗಳ ಸಂಖ್ಯೆ 20.

ಇಟಿಎಫ್‌ಗಳ ಮೇಲೆ ಹಣ ತೊಡಗಿಸುವುದಕ್ಕಾಗಿ 2.73 ಕೋಟಿ ಖಾತೆಗಳನ್ನು (ಮ್ಯೂಚುವಲ್ ಫಂಡ್ ಉದ್ಯಮದ ಪರಿಭಾಷೆಯಲ್ಲಿ ಇವುಗಳನ್ನು ಫೋಲಿಯೊ ಎಂದು ಕರೆಯಲಾಗುತ್ತದೆ) ತೆರೆಯಲಾಗಿದೆ. ಈ ಪೈಕಿ ಚಿನ್ನದ ಮೇಲೆ ಹಣ ತೊಡಗಿಸುವ ಇಟಿಎಫ್ ಖಾತೆಗಳ ಸಂಖ್ಯೆ 71 ಲಕ್ಷ.

ಚಿನ್ನದ ಇಟಿಎಫ್‌ಗಳ ಮೇಲೆ ತೊಡಗಿಸಿರುವ ಮೊತ್ತವು ₹61 ಸಾವಿರ ಕೋಟಿಯಷ್ಟು ಇದೆ. ಇತರ ಇಟಿಎಫ್‌ಗಳ ಮೇಲೆ ತೊಡಗಿಸಿರುವ ಒಟ್ಟು ಮೊತ್ತವು ₹8.13 ಲಕ್ಷ ಕೋಟಿಯಷ್ಟಾಗಿದೆ. ಒಟ್ಟಾರೆಯಾಗಿ ಇಟಿಎಫ್‌ಗಳ ಮೇಲೆ ತೊಡಗಿಸಿರುವ ಮೊತ್ತ ₹8.75 ಲಕ್ಷ ಕೋಟಿ.

**₹1.54 ಲಕ್ಷ ಕೋಟಿ** — 2020ರ ಮಾರ್ಚ್ ತ್ರೈಮಾಸಿಕದಲ್ಲಿ ಇಟಿಎಫ್‌ಗಳಲ್ಲಿ ಹೂಡಿಕೆ ಆಗಿದ್ದ ಮೊತ್ತ

**253** — 2025ರ ಏಪ್ರಿಲ್ ವೇಳೆಗೆ ಹೂಡಿಕೆ ಲಭ್ಯವಿದ್ದ ಇಟಿಎಫ್‌ಗಳ ಸಂಖ್ಯೆ

**₹8.75 ಲಕ್ಷ ಕೋಟಿ** — 2025ರ ಏಪ್ರಿಲ್ ವೇಳೆಗೆ ಇಟಿಎಫ್‌ಗಳಲ್ಲಿ ಆಗಿರುವ ಹೂಡಿಕೆ

**87** — 2020ರ ಮಾರ್ಚ್ ವೇಳೆಗೆ ಹೂಡಿಕೆಗೆ ಲಭ್ಯವಿದ್ದ ಇಟಿಎಫ್‌ಗಳ ಸಂಖ್ಯೆ

**5 ಪಟ್ಟು** — ಇಟಿಎಫ್‌ಗಳಲ್ಲಿ ಹೂಡಿಕೆ ಆದ ಮೊತ್ತವು ಐದು ವರ್ಷಗಳಲ್ಲಿ ಆಗಿರುವ ಹೆಚ್ಚಳ

**3 ಪಟ್ಟು** — ಇಟಿಎಫ್‌ಗಳ ಸಂಖ್ಯೆ ಐದು ವರ್ಷಗಳಲ್ಲಿ ಆಗಿರುವ ಹೆಚ್ಚಳ

(ಆಧಾರ: ಎಎಂಎಫ್‌ಐ)

# ಎಲ್‌ಜಿ ಎಲೆಕ್ಟ್ರಾನಿಕ್ಸ್

ಬ್ರೋಕರೇಜ್ ಮಾತು

**ಎಲೆಕ್ಟ್ರಾನಿಕ್ಸ್ ಉಪಕರಣಗಳ** ಪ್ರಮುಖ ತಯಾರಿಕಾ ಸಂಸ್ಥೆ ಎಲ್‌ಜಿ ಎಲೆಕ್ಟ್ರಾನಿಕ್ಸ್ ಇಂಡಿಯಾ (ಎಲ್‌ಜಿಇಐಎಲ್) ಷೇರಿನ ಬೆಲೆ ₹1,800ಕ್ಕೆ ತಲುಪಲಿದೆ ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಜಾಗತಿಕ ತಂತ್ರಗಾರಿಕೆಯ ಭಾಗವಾಗಿ ಕಂಪನಿಯು ಪ್ರೀಮಿಯಂ ಗುಣಮಟ್ಟದ ಉಪಕರಣಗಳು ಮತ್ತು ಹೆಚ್ಚಿನ ಜನರು ಬಳಸುವ ಉಪಕರಣಗಳ ನಡುವೆ ಸಮತೋಲನ ಸಾಧಿಸಲು ಯೋಜಿಸಿದೆ. ಜೊತೆಗೆ ಈ ಉತ್ಪನ್ನಗಳನ್ನು ಕೈಗೆಟಕುವಂತೆ ಮಾಡಲು ಗುರಿ ಹೊಂದಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಕಂಪನಿಯ ಉತ್ಪನ್ನಗಳ ರಫ್ತು ಶೇ 6ರಷ್ಟಿತ್ತು. 2027–28ರ ವೇಳೆಗೆ ಶೇ 10ಕ್ಕೆ ಹೆಚ್ಚಿಸಲು ಕಂಪನಿ ಗುರಿ ಹೊಂದಿದೆ.

ಉದ್ದಿಮೆಯಿಂದ ಉದ್ದಿಮೆ (ಬಿ2ಬಿ) ವಹಿವಾಟಿನ ವರಮಾನ ಶೇ 14ರಿಂದ ಶೇ 15ರಷ್ಟಾಗಲಿದೆ. ಇದು ಉದ್ದಿಮೆಯಿಂದ ಗ್ರಾಹಕ (ಬಿ2ಸಿ) ವಹಿವಾಟಿನಲ್ಲಿನ ಲಾಭಕ್ಕಿಂತಲೂ ಅಧಿಕ.

2024–25ರ ಆರ್ಥಿಕ ವರ್ಷದಿಂದ 2027–28ರವರೆಗಿನ ಅವಧಿಯಲ್ಲಿ ತೆರಿಗೆ ನಂತರದ ಲಾಭದ ಬೆಳವಣಿಗೆ ದರವು (ಸಿಎಜಿಆರ್) ಶೇ 12ರಷ್ಟಿರುವ ನಿರೀಕ್ಷೆ ಇದೆ ಎಂದು ಮೋತಿಲಾಲ್ ಓಸ್ವಾಲ್ ತಿಳಿಸಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಮೌಲ್ಯ ₹1,686.50 ಇತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

## ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

## ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

### ವಿಜ್ಞಾನ

## ನಿಯಂತ್ರಣ ಮತ್ತು ಸಹಭಾಗಿತ್ವ

**18) ಕೆಳಗಿನ ಸಂದರ್ಭಗಳನ್ನು ಕಲ್ಪಿಸಿಕೊಳ್ಳಿ**

(1) ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು

(2) ದೇಹದಲ್ಲಿ ಏರುಪೇರಾಗುತ್ತಿರುವ ರಕ್ತದ ಒತ್ತಡ

ಈ ಸಂದರ್ಭಗಳು ಕ್ರಿಯಾತ್ಮಕವಾಗಿ ಹೇಗೆ ಭಿನ್ನವಾಗಿವೆ. ಕಾರಣ ಕೊಡಿ (ಜೂನ್– 2023)

**ಉತ್ತರ:–** ಚಪ್ಪಾಳೆ ತಟ್ಟುವುದು ಐಚ್ಛಿಕ ಕ್ರಿಯೆಯಾಗಿದೆ, ಇದು ಮಾನವನ ಏನು ಮಾಡಬೇಕು ಎಂಬ ನಿರ್ಣಯದ ಮೇಲೆ ನಿಂತಿದೆ. ಇದು ಮುಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.

ಏರುಪೇರಾಗುತ್ತಿರುವ ರಕ್ತದ ಒತ್ತಡವು ಅನೈಚ್ಛಿಕ ಕ್ರಿಯೆಯಾಗಿದ್ದು, ಆಲೋಚನೆಗಳ ನಿಯಂತ್ರಣವಿಲ್ಲದ ಕ್ರಿಯೆಯಾಗಿದ್ದು, ಹಿಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.

* * * * * * * * * * *

## ವಿದ್ಯುಚ್ಛಕ್ತಿ

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

**1) ವಿದ್ಯುತ್ ಮಂಡಲದ ಅರ್ಥವೇನು?**

**ಉತ್ತರ:–** ವಿದ್ಯುತ್ ಪ್ರವಾಹದ ನಿರಂತರ ಮತ್ತು ಆವೃತ ಮಾರ್ಗವನ್ನು ವಿದ್ಯುತ್ ಮಂಡಲ ಎಂದು ಕರೆಯುತ್ತಾರೆ

**2) ವಿದ್ಯುತ್ ಪ್ರವಾಹವನ್ನು ಹೇಗೆ ವ್ಯಕ್ತಪಡಿಸಲಾಗಿದೆ?**

**ಉತ್ತರ:–** ವಿದ್ಯುತ್ ಪ್ರವಾಹವನ್ನು ಒಂದು ಏಕಮಾನ ಕಾಲದಲ್ಲಿ ಒಂದು ನಿರ್ದಿಷ್ಟ ಕ್ಷೇತ್ರದ ಮೂಲಕ ಪ್ರವಹಿಸುವ ಆವೇಶಗಳ ಪರಿಮಾಣ ಎಂದು ವ್ಯಕ್ತಪಡಿಸಲಾಗಿದೆ. (ಅಂದರೆ ವಿದ್ಯುದಾವೇಶಗಳ ಪ್ರವಾಹದ ದರವನ್ನು ವಿದ್ಯುತ್ ಪ್ರವಾಹ ಎಂದು ಕರೆಯುವರು.)

**3) ವಿದ್ಯುದಾವೇಶದ SI ಏಕಮಾನ ಯಾವುದು?**

**ಉತ್ತರ:–** ವಿದ್ಯುದಾವೇಶದ SI ಏಕಮಾನ ಕೂಲಂಬ್(coulomb)

**4) ವಿದ್ಯುತ್ ಪ್ರವಾಹದ ಏಕಮಾನವನ್ನು ವ್ಯಾಖ್ಯಾನಿಸಿ**

**ಉತ್ತರ:–** ವಿದ್ಯುತ್ ಪ್ರವಾಹದ ಏಕಮಾನ ಆಂಪೀಯರ್(A) ಒಂದು ಅಂಪಿಯರ್ ವಿದ್ಯುತ್ ಪ್ರವಾಹದ ರಚನೆಯು ಪ್ರತಿ ಸೆಕೆಂಡಿಗೆ ಒಂದು ಕೂಲಂಬ್ ಆವೇಶದ ಪ್ರವಾಹವಾಗಿದೆ.

**5) ಯಾವುದಕ್ಕೆ ವಿದ್ಯುತ್ ಮಂಡಲ ಎಂದು ಕರೆಯಲಾಗುತ್ತದೆ?**

**ಉತ್ತರ:–** ವಿದ್ಯುತ್ ಪ್ರವಾಹದ ನಿರಂತರ ಮತ್ತು ಆವೃತ ಮಾರ್ಗವನ್ನು ವಿದ್ಯುತ್ ಮಂಡಲ ಎಂದು ಕರೆಯಲಾಗುತ್ತದೆ.

**6) ವಿದ್ಯುತ್ ಪ್ರವಾಹದ ದರವನ್ನು ಅಳೆಯಲು ಉಪಯೋಗಿಸುವ ಉಪಕರಣ ಯಾವುದು?**

**ಉತ್ತರ:–** ಅಮ್ಮೀಟರ್ (ಇದನ್ನು ಉಪಯೋಗಿಸಿ ವಿದ್ಯುತ್ ಮಂಡಲದಲ್ಲಿನ ವಿದ್ಯುತ್ ಪ್ರವಾಹವನ್ನು ಅಳೆಯುತ್ತಾರೆ)

**7) 1 ಕೊಲಂಬ್ ಆವೇಶವನ್ನು ರೂಪಿಸಿದ ಇಲೆಕ್ಟ್ರಾನ್‌ಗಳ ಸಂಖ್ಯೆಯನ್ನು ಲೆಕ್ಕ ಮಾಡಿ**

**ಉತ್ತರ:–** ಇಲೆಕ್ಟ್ರಾನ್‌ಗಳ ಸಂಖ್ಯೆ=ವಿದ್ಯುದಾವೇಶ/1 ಇಲೆಕ್ಟ್ರಾನ್ ಆವೇಶ

$$= \frac{1}{11.6x10^{-19}} = 6.25x10^{18}$$

ಒಂದು ಕೊಲಂಬ್ ವಿದ್ಯುದಾವೇಶವು ಸುಮಾರು ಇಲೆಕ್ಟ್ರಾನುಗಳಿಗೆ ಸಮನಾಗಿರುತ್ತದೆ

**8) ವಿದ್ಯುತ್ ವಿಭವಾಂತರ ಎಂದು ಯಾವುದು ವ್ಯಾಖ್ಯಾನಿಸುತ್ತೇವೆ?**

**ಉತ್ತರ:–** ವಿದ್ಯುತ್ ಪ್ರವಾಹವಿರುವ ವಿದ್ಯುತ್ ಮಂಡಲದಲ್ಲಿ ಎರಡು ಬಿಂದುಗಳ ನಡುವಿನ ವಿದು.ತ್ ವಿಭವಾಂತರವನು. ಒಂದು ಏಕಮಾನ ಆವೇಶವನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ ಆಗುವ ಕೆಲಸ ಎಂದು ವ್ಯಾಖ್ಯಾನಿಸುತ್ತೇವೆ.

**9) ವಿದ್ಯುತ್ ವಿಭವಾಂತರದ SI ಏಕಮಾನ ಯಾವುದು? ಇದನ್ನು ಯಾವ ವಿಜ್ಞಾನಿಯ ಹೆಸರಿನಿಂದ ಸೂಚಿಸಲಾಗಿದೆ**

ಉತ್ತರ:– ವಿದ್ಯುತ್ ವಿಭವಾಂತರದ SI ಏಕಮಾನ ಎಂದರೆ ವೋಲ್ಟ್(V). ಇದನ್ನು ಇಟಲಿಯ ಭೌತ ವಿಜ್ಞಾನಿ ಅಲೆಸ್ಸಾಂಡ್ರೋ ವೋಲ್ಟ್‌ನ ಹೆಸರಿನಿಂದ ಸೂಚಿಸಲಾಗಿದೆ.

**10) ವೋಲ್ಟ್ ಅನ್ನು ಹೇಗೆ ವಾಖ್ಯಾನಿಸಬಹುದು?**

**ಉತ್ತರ:–** ಯಾವುದೇ ಅನುಕ್ರಮ ವಿದ್ಯುತ್ ವಾಹಕದ ಎರಡು ಬಿಂದುಗಳ ನಡುವೆ, ಒಂದು ಕೂಲಮ್ ಆವೇಶವನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ 1 ಜೌಲ್ ಕೆಲಸ ನಡೆದರೆ, ಆ ಎರಡು ಬಿಂದುಗಳ ನಡುವಿನ ವಿಭವಾಂತರ 1 ವೋಲ್ಟ್ ಆಗಿರುತ್ತದೆ.

**11) ವಿಭವಾಂತರವನ್ನು ಅಳೆಯುವ ಉಪಕರಣ ಯಾವುದು?**

**ಉತ್ತರ:–** ವಿಭವಾಂತರವನ್ನು ಅಳೆಯುವ ಉಪಕರಣವನ್ನು ವೋಲ್ಟ್‌ಮೀಟರ್ ಎಂದು ಕರೆಯುತ್ತಾರೆ.

(ಎರಡು ಬಿಂದುಗಳ ನಡುವಿನ ವಿಭವಾಂತರವನ್ನು ಅಳೆಯಲು ವೋಲ್ಟ್‌ಮೀಟರ್‌ಅನ್ನು ಯಾವಾಗಲೂ ಸಮಾಂತರವಾಗಿ ಬಿಂದುಗಳ ತುದಿಗಳಿಗೆ ಜೋಡಿಸಲಾಗುತ್ತದೆ.)

**12) ಓಮ್ ನಿಯಮವನ್ನು ಬರೆಯಿರಿ**

ಉತ್ತರ:- ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್ ಮಂಡಲದಲ್ಲಿನ ಲೋಹದ ತಂತಿಯ ನಡುವಿನ ವಿಭವಾಂತರ Vಯು ಅದರ ಮೂಲಕ ಹರಿಯುವ ವಿದ್ಯುತ್ ಪ್ರವಾಹಕ್ಕೆ ನೇರ ಅನುಪಾತದಲ್ಲಿರುತ್ತದೆ. ಇದನ್ನು ಓಮ್‌ನ ನಿಯಮ ಎಂದು ಕರೆಯುವರು.

**13) ಯಾವುದಕ್ಕೆ ಬದಲಾಯಿಸಬಹುದಾದ ರೋಧ (variable resistance) ಎನ್ನುವರು.?**

ಉತ್ತರ:– ವಿದ್ಯುತ್ ವಿಭವಾಂತರದ ಮೂಲವನ್ನು ಬದಲಾಯಿಸದೆ ವಿದ್ಯುತ್‌ಪ್ರವಾಹವನ್ನು ನಿಯಂತ್ರಿಸಲು ಉಪಯೋಗಿಸುವ ಘಟಕವನ್ನು ಬದಲಾಯಿಸಬಹುದಾದ ರೋಧ (variable resistance) ಎನ್ನುವರು.

*ವಿದ್ಯುತ್ ಮಂಡಳದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಚಿನ್ಹೆಗಳು

| ಕ್ರ. ಸಂ | ಘಟಕಗಳು | ಚಿಹ್ನೆಗಳು |
|---|---|---|
| 1 | ವಿದ್ಯುತ್ ಕೋಶ ( ಸೆಲ್) | |
| 2 | ಶುಷ್ಕ ಕೋಶ ಅಥವಾ ವಿದ್ಯುತ್ ಕೋಶಗಳ ಸಂಯೋಜನೆ | |
| 3 | ಪ್ಲಗ್ ಕೀ ಅಥವಾ ಸ್ವಿಚ್ (ತೆರೆದ) | |
| 4 | ಪ್ಲಗ್ ಕೀ ಅಥವಾ ಸ್ವಿಚ್ (ಮುಚ್ಚಿದ) | |
| 5 | ತಂತಿಗಳು ಸೇರುವ ಸ್ಥಳ | |
| 6 | ಸೇರ್ಪಡೆಯಿಲ್ಲದೆ ದಾಟಿದ ತಂತಿ | |
| 7 | ವಿದ್ಯುತ್ ಬಲ್ಬ್ | or |
| 8 | ರೋಧಕದ ರೋಧ 'R' | |
| 9 | ಬದಲಾಯಿಸಬಹುದಾದ ರೋಧ ಅಥವಾ ರಿಯೋಸ್ಟಾಟ್ | or |
| 10 | ಅಮ್ಮೀಟರ್ | |
| 11 | ವೋಲ್ಟ್‌ಮೀಟರ್ | |



### Biology

## PRINCIPLES OF INHERITANCE AND VARIATION

**5. Colour blindness is a sex-linked disease. It is due to X-chromosome. Normal parents have three normal daughters and one colour blind son. What is the reason for it? Ten possible reasons are given. Find out which are correct -**

**Ans:-** (.........Contd)

(v) Son acquired character from mother.

(vii) Daughter is heterozygous for colour blindness (50%).

(x) In future the family may have normal sons.

**6. Define polypoidy.**

**Ans:-** Polyploidy - It is the increase in number of genomes or chromosome sets beyond the normal diploid condition, e.g., 3N, 4N, 5N, 6N.

**7. Fill in the blanks:-**

**a) Mutation can be defined as .............. variation.**

**b) Mutation leads to evolution of ............ of a gene.**

**c) Genes expressed only in homozygous state are ..............**

**d) When both the alleles of a gene are expressed, it is ......... .**

**e) Gene which is most frequent is ...... type.**

**Ans:-** a) discontinuous, b) allele, c) recessive d) co-dominance, e) wild

**8. Write a note on Pedigree analysis.**

**Ans:-** Pedigree is a record of descent over generations in which the number of offspring and transmission of important traits are given graphically or as family tree.

The study of pedigree for a few generations for analysis of transmission of exceptional phenotypes and the possibility of its occurrence in particular generation is known as pedigree analysis.

The pedigree analysis is carried out for studying inheritance of human traits because the common mendelian experiments cannot be carried out over human beings due to the following reasons-

a) Generation period is long in human beings (20 -25years)

b) In many cases human traits are influenced by a number of factors.

c) A scientific worker can study human inheritance for not more than two or three generations.

d) Progeny of a couple is small.

e) Marriages desired by an experimenter are not always possible in human beings.

f) Study of desired mating requires screening of a large human population. Even then the desired of informative mating may not be observed.

g) Human beings have a mixed population and pure traits are rarely observed.

h) Marriages are not planned so that there is regular mixing of traits coming from unconnected families.

Hence, pedigree analysis is carried out in order to ward off possible disaster due to picking up of harmful genetic defects like dominant polydactyly (extra digits), syndactyly (joined digits) and brachydactyly (short digits), recessive haemophilia, deaf mutism, birth blindness, colour blindness, thalassemia, alkaptonuria, phenylketonuria, sickle cell anaemia, etc. Some factors to be considered during the pedigree analysis, such as -

a) inheritance of genes follow the mendelian principles.

b) There are linkages and crossing overs.

c) As the results to be prophesied on hypothetical matings, the principle of probability and chance of difference are always taken into consideration.

d) Various alternatives are thought and eliminated.

e) A trait can appear in a child though it may be absent in both the parents. However, if both the parents have a trait especially recessive one, the child is liable to have the same. Recessive traits appear more commonly in families where close or cousin marriages are practiced.

f) If pedigree analysis in one case does not give clear possibilities, similar pedigree analyses available for others are studied.

**Importance of pedigree analysis:**

(i) Pedigree analysis is important to know the possibility of a recessive allele which may create disorder in the progeny, e.g., colour blindness, haemophilia, thalassemia, etc.

(ii) It can indicate the origin of a trait in the ancestors, e.g., queen Victoria for haemophilia in royal families.

(iii) It can indicate the usefulness or harm a marriage between close relatives, will cause.

(iv) The analysis is used for genetic counselling about the possibilities of prospective parents transmitting a disorder to their children.

(v) It is extensively used in medical research.

**9. Write a note on Human genetic disorders.**

*(Contd….)*

ಚಿಟಿಕೆ ಸುದ್ದಿ

## ₹175 ಕೋಟಿ ಮೌಲ್ಯದ ಆಸ್ತಿ ವಶಕ್ಕೆ ಪಡೆದ ಜಾರಿ ನಿರ್ದೇಶನಾಲಯ

ನವದೆಹಲಿ (ಪಿಟಿಐ): ಖರೀದಿದಾರರಿಗೆ ಹಸ್ತಾಂತರ ಮಾಡದಿದ್ದ ಫ್ಲ್ಯಾಟ್‌ಗಳು, ವಾಣಿಜ್ಯ ಕಟ್ಟಡಗಳು ಸೇರಿ ಸುಮಾರು ₹175 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇಡಿ) ಮಂಗಳವಾರ ವಶಕ್ಕೆ ಪಡೆದಿದೆ.

ರಾಜಸ್ಥಾನದ ಉದಯಪುರದಲ್ಲಿ ರಾಯಲ್ ರಾಜ್‌ವಿಲಾಸ್ (ಆರ್‌ಆರ್‌ವಿ) ಎಂಬ ಏಜೆನ್ಸಿ ನಿರ್ಮಿಸಿದ್ದ 354 ಫ್ಲ್ಯಾಟ್‌ಗಳು, 17 ವಾಣಿಜ್ಯ ಕಟ್ಟಡಗಳು ಹಾಗೂ 2 ನಿವೇಶನಗಳನ್ನು ಖರೀದಿದಾರರಿಗೆ ಹಂಚಿಕೆ ಮಾಡದೆ ವಂಚಿಸಲಾಗಿತ್ತು. ಮನೆ ಖರೀದಿದಾರರು ಮುಂಗಡ ಹಣ ನೀಡಿ, 12 ವರ್ಷಗಳಿಂದ ಫ್ಲ್ಯಾಟ್‌ಗಾಗಿ ಕಾಯುತ್ತಿದ್ದರು.

ಈ ಪ್ರಕರಣದ ಪ್ರಮುಖ ಆರೋಪಿ, ಸಿಂಡಿಕೇಟ್ ಬ್ಯಾಂಕ್‌ಗೆ ₹1267.79 ಕೋಟಿ ವಂಚಿಸಿದ್ದ ಭಾರತ್ ಬಾಂಬ್ ಮತ್ತಿತರರ ವಿರುದ್ಧವೂ ಇ.ಡಿ ಪ್ರಕರಣ ದಾಖಲಿಸಿದೆ.

## 2040ರಲ್ಲಿ ಚಂದ್ರನ ಮೇಲೆ ಭಾರತೀಯರು

ರಾಂಚಿ (ಪಿಟಿಐ): 2040ರಲ್ಲಿ ಚಂದ್ರನ ಮೇಲೆ ಭಾರತೀಯರನ್ನು ಇಳಿಸುವ ಗುರಿಯಿದ್ದು, ಅದರ ಭಾಗವಾಗಿ ನಡೆಸಲಾಗುವ ಮೊದಲ ಮಾನವ ಬಾಹ್ಯಾಕಾಶ ಹಾರಾಟ 'ಮಿಷನ್ ಗಗನಯಾನ' 2027ರಲ್ಲಿ ಉಡಾವಣೆಯಾಗುವ ಹಾದಿಯಲ್ಲಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ವಿ.ನಾರಾಯಣನ್ ಬುಧವಾರ ಹೇಳಿದ್ದಾರೆ.

2035ರ ವೇಳೆಗೆ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಮತ್ತು 2026ರ ವೇಳೆಗೆ ಮಾನವ ರಹಿತ ಮೂರು 'ಗಗನಯಾನ' ಕಾರ್ಯಾಚರಣೆಗಳು ಸೇರಿದಂತೆ ಹಲವಾರು ಮಹತ್ವಾಕಾಂಕ್ಷೆಯ ಬಾಹ್ಯಾಕಾಶ ಯೋಜನೆಗಳು, ವಲಯ ಸುಧಾರಣೆಗಳು ಪ್ರಸ್ತುತ ನಡೆಯುತ್ತಿವೆ ಎಂದು ನಾರಾಯಣನ್ ಹೇಳಿದ್ದಾರೆ.

ಇದರಲ್ಲಿ 'ವ್ಯೋಮಮಿತ್ರ' ರೋಬೋಟ್ ಅನ್ನು ಒಳಗೊಂಡಿರುವ ಮೊದಲನೆಯ ಯೋಜನೆಯನ್ನು 2025ರ ಡಿಸೆಂಬರ್ ವೇಳೆಗೆ ಪೂರ್ಣಗೊಳಿಸುವ ಗುರಿ ಇದೆ.

## ಲಂಚ: ಹೆದ್ದಾರಿ ಇಲಾಖೆ ಅಧಿಕಾರಿ ಬಂಧನ

ನವದೆಹಲಿ (ಪಿಟಿಐ): ರಾಷ್ಟ್ರೀಯ ಹೆದ್ದಾರಿಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಲಿಮಿಟೆಡ್‌ನ (ಎನ್‌ಎಚ್‌ಐಡಿಸಿಎಲ್) ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಪ್ರಾದೇಶಿಕ ಅಧಿಕಾರಿಯನ್ನು ₹10 ಲಕ್ಷ ಲಂಚ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ಗುವಾಹಟಿಯಲ್ಲಿ ಬಂಧಿಸಿದೆ ಎಂದು ಅಧಿಕಾರಿಳು ಬುಧವಾರ ತಿಳಿಸಿದ್ದಾರೆ.

ಮೈಸ್ನಮ್ ರಿತೇನ್ ಕುಮಾರ್ ಸಿಂಗ್ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ದಾಳಿ ನಡೆದಿದೆ ಎಂದು ಸಿಬಿಐ ಹೇಳಿದೆ.

# ಗಲ್ಲುಶಿಕ್ಷೆಗೆ ಪರ್ಯಾಯ ಆಯ್ಕೆ: ಒಪ್ಪದ ಕೇಂದ್ರ

### 'ನೇಣುಗಂಬ'ದ ಬದಲು 'ಚುಚ್ಚುಮದ್ದು' ಆಯ್ಕೆ ನೀಡಲು ಮನವಿ

ನವದೆಹಲಿ (ಪಿಟಿಐ): 'ಮರಣದಂಡನೆಗೆ ಗುರಿಯಾದ ಅಪರಾಧಿಯನ್ನು ಗಲ್ಲಿಗೇರಿಸಿ ಕೊಲ್ಲುವ ಬದಲು, ಸಿರಿಂಜ್ ಮೂಲಕ ವಿಷ ನೀಡುವ ಪರ್ಯಾಯ ಆಯ್ಕೆಯು ಕಾರ್ಯಸಾಧುವಲ್ಲ' ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ನೇಣುಗಂಬಕ್ಕೆ ಏರಿಸಿ ಅಪರಾಧಿಯನ್ನು ಕೊಲ್ಲುವ ಬದಲು, ಮಾನವೀಯವಾದ ಪರ್ಯಾಯ ಮಾರ್ಗದ ಆಯ್ಕೆಯನ್ನು ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ 2023ರಲ್ಲಿ ಪ್ರಕರಣವೊಂದರಲ್ಲಿ ಹೇಳಿತ್ತು. 'ಗಲ್ಲಿಗೇರಿಸುವ' ಪದ್ಧತಿ ರದ್ದತಿ ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠ ಬುಧವಾರ ನಡೆಸಿತು.

**ಮುಖ್ಯಾಂಶಗಳು**

- ಗಲ್ಲಿಗೇರಿಸುವ ಪದ್ಧತಿ ರದ್ದತಿ ಕೋರಿ ಸಲ್ಲಿಸಲಾದ ಪಿಐಎಲ್
- ತಜ್ಞರ ಸಮಿತಿ ರಚನೆ ಬಗ್ಗೆ ಪರಿಶೀಲಿಸಲು ಸುಪ್ರೀಂ ಸೂಚನೆ
- ಮಾನವೀಯವಾದ ಪರ್ಯಾಯ ಆಯ್ಕೆಗೆ ಸಲಹೆ

'ಮರಣದಂಡನೆಗೆ ಗುರಿಯಾಗಿರುವ ಅಪರಾಧಿಗೆ 'ನೇಣುಗಂಬ' ಅಥವಾ 'ಪ್ರಾಣಹರಣ ಮಾಡುವ ಚುಚ್ಚುಮದ್ದು' ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನಾದರೂ ನೀಡಬೇಕು' ಎಂದು ಪಿಐಎಲ್ ಸಲ್ಲಿಸಿರುವ ವಕೀಲ ರಿಶಿ ಮಲ್ಹೋತ್ರಾ ಕೋರ್ಟ್‌ಗೆ ಮನವಿ ಮಾಡಿದರು.

'ನೇಣು ಬಿಗಿದು ಕೊಲ್ಲುವುದಕ್ಕಿಂತ ಹೆಚ್ಚು ಮಾನವೀಯವಾದ ಪರ್ಯಾಯ ಮಾರ್ಗ ಚುಚ್ಚುಮದ್ದು ನೀಡುವುದು. ಅಮೆರಿಕದಲ್ಲಿ 50ರಲ್ಲಿ 49 ರಾಜ್ಯಗಳಲ್ಲಿ ಈ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ನೇಣಿಗೇರಿಸಿದ ವ್ಯಕ್ತಿಯ ದೇಹವು 40 ನಿಮಿಷ ಹಗ್ಗದಲ್ಲೇ ನೇತಾಡುತ್ತಿರುತ್ತದೆ. ಇದು ಅನಾಗರಿಕ, ಅಮಾನವೀಯ. ಮರಣದಂಡನೆ ಶಿಕ್ಷೆ ಜಾರಿಗೊಳಿಸುವಾಗ ಮಾನವನ ಘನತೆಗೆ ಸಂಬಂಧಿಸಿದ ಅಂಶಗಳನ್ನೂ ಪರಿಗಣಿಸಬೇಕು' ಎಂದು ಅವರು ಪೀಠದ ಗಮನಕ್ಕೆ ತಂದರು.

### 'ಪರ್ಯಾಯ ಮಾರ್ಗ ಅರಸಬೇಕಿದೆ'

'ಸಮಸ್ಯೆಯೆಂದರೆ, ಸರ್ಕಾರವು ಕಾಲಕ್ಕೆ ತಕ್ಕಂತೆ ಸುಧಾರಣಾವಾದಿ ಆಲೋಚನೆಗಳನ್ನು ಅಳವಡಿಸಿಕೊಂಡಿಲ್ಲ. ಈಗ ಕಾಲ ಬದಲಾಗಿದೆ. ಮರಣದಂಡನೆ ಜಾರಿಯಲ್ಲೂ ಪರ್ಯಾಯ ಮಾರ್ಗ ಅರಸಬೇಕಿದೆ' ಎಂದು ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅಭಿಪ್ರಾಯಪಟ್ಟರು.

'ಮರಣದಂಡನೆ ಜಾರಿಯಲ್ಲಿ ನಿರ್ದಿಷ್ಟ ವಿಧಾನವನ್ನು ಅಳವಡಿಸಿಕೊಳ್ಳುವಂತೆ ಶಾಸಕಾಂಗಕ್ಕೆ ನಿರ್ದೇಶಿಸಲು ಸಾಧ್ಯವಿಲ್ಲ' ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿತು.

ಮಲ್ಹೋತ್ರಾ ಸಲ್ಲಿಸಿರುವ ಮನವಿಯ ಬಗ್ಗೆ, ಸರ್ಕಾರಕ್ಕೆ ಸಲಹೆ ನೀಡುವಂತೆ ನ್ಯಾಯಪೀಠ, ಕೇಂದ್ರವನ್ನು ಪ್ರತಿನಿಧಿಸಿದ್ದ ವಕೀಲರಿಗೆ ಸೂಚಿಸಿತು.

'ಈಗಾಗಲೇ ಈ ಬಗ್ಗೆ ಚರ್ಚಿಸಲಾಗಿದೆ. ಆದರೆ, ಪರ್ಯಾಯ ಆಯ್ಕೆ ನೀಡುವುದು ಕಾರ್ಯಸಾಧುವಲ್ಲ. ಇದು ಸರ್ಕಾರ ನೀತಿ ನಿರ್ಧಾರದ ಭಾಗ. ಆ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ' ಎಂದು ಕೇಂದ್ರವನ್ನು ಪ್ರತಿನಿಧಿಸಿದ್ದ ವಕೀಲರು ಕೋರ್ಟ್‌ಗೆ ತಿಳಿಸಿದರು.

ಗಲ್ಲಿಗೇರಿಸುವ ಪದ್ಧತಿ ರದ್ದುಗೊಳಿಸುವ ವಿಚಾರವಾಗಿ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರ ಪ್ರಸ್ತಾವದ ಮೇರೆಗೆ, 2023ರಲ್ಲಿ ಸಮಿತಿ ರಚಿಸುವಂತೆ ಸರ್ಕಾರಕ್ಕೆ ಸೂಚಿಸಲಾಗಿತ್ತು. ಈ ಸಮಿತಿ ಏನು ಮಾಡಿದೆ ಎನ್ನುವುದನ್ನೂ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಿದ ಕೋರ್ಟ್, ಮುಂದಿನ ವಿಚಾರಣೆಯನ್ನು ನವೆಂಬರ್ 11ಕ್ಕೆ ನಿಗದಿಪಡಿಸಿತು.

# ಬಸ್ ಅಗ್ನಿ ದುರಂತ; 21 ಮಂದಿ ಸಾವು

ಜೈಸಲ್ಮೇರ್ (ಪಿಟಿಐ): ಜೈಸಲ್ಮೇರ್‌ನಿಂದ ಜೋಧಪುರಕ್ಕೆ ಮಂಗಳವಾರ ಮಧ್ಯಾಹ್ನ ತೆರಳುತ್ತಿದ್ದ ಖಾಸಗಿ ಬಸ್‌ಗೆ ಹಠಾತ್ ಬೆಂಕಿ ಹೊತ್ತಿಕೊಂಡ ಪರಿಣಾಮ ಸಾವಿಗೀಡಾದವರ ಸಂಖ್ಯೆ 21 ಕ್ಕೆ ಏರಿಕೆಯಾಗಿದೆ. ಗಾಯಗೊಂಡು ಜೀವನ್ಮರಣ ಸ್ಥಿತಿಯಲ್ಲಿದ್ದ ಎಂಟು ವರ್ಷದ ಬಾಲಕನೊಬ್ಬ ಜೋಧಪುರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಗಂಭೀರವಾಗಿ ಗಾಯಗೊಂಡಿದ್ದ 16 ಜನರಲ್ಲಿ ನಾಲ್ವರು ಕೃತಕ ಉಸಿರಾಟ ವ್ಯವಸ್ಥೆಯ ನೆರವಿನಲ್ಲಿದ್ದಾರೆ ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ. ಮೃತರ ಕುಟುಂಬ ಸದಸ್ಯರಿಂದ ಡಿಎನ್‌ಎ ಮಾದರಿಗಳನ್ನು ಸಂಗ್ರಹಹಿಸಲಾಗಿದ್ದು, ಶವಗಳನ್ನು ಗುರುತಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಘಟನೆಯಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಕೂಡಾ ಸಂತಾಪ ವ್ಯಕ್ತಪಡಿಸಿದ್ದು, ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಮಧ್ಯಾಹ್ನ 3ಕ್ಕೆ ಹೊರಟಿದ್ದ ಬಸ್‌ನಲ್ಲಿ 57 ಪ್ರಯಾಣಿಕರು ಇದ್ದರು ಎಂದು ರಾಜಸ್ಥಾನದ ಪೊಲೀಸರು ತಿಳಿಸಿದ್ದಾರೆ. ಬಸ್ ಜೈಸಲ್ಮೇರ್–ಜೋಧಪುರ ಹೆದ್ದಾರಿಯಲ್ಲಿ ಪ್ರಯಾಣಿಸುತ್ತಿದ್ದಾಗ ಬಸ್‌ನ ಹಿಂಭಾಗದಿಂದ ಹೊಗೆ ಕಾಣಿಸಿಕೊಂಡಿತ್ತು. ಇದನ್ನು ಗಮನಿಸಿದ ಚಾಲಕ ಬಸ್ ನಿಲ್ಲಿಸಿದರಾದರೂ, ಕ್ಷಣಾರ್ಧದಲ್ಲೇ ಅದು ಬೆಂಕಿಗೆ ಆಹುತಿಯಾಯಿತು.

ಸ್ಥಳೀಯರು ಮತ್ತು ದಾರಿಹೋಕರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯದಲ್ಲಿ ಸಹಕರಿಸಿದ್ದು, ಸೇನೆ ಕೂಡಾ ನೆರವಾಗಿದೆ. ಗಾಯಗೊಂಡ ಪ್ರಯಾಣಿಕರನ್ನು ಜೈಸಲ್ಮೇರ್‌ನ ಜವಾಹರ್ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

# ವಾಂಗ್ಚುಕ್: ವಿಚಾರಣೆ ಅ.29ಕ್ಕೆ ಮುಂದೂಡಿಕೆ

ನವದೆಹಲಿ (ಪಿಟಿಐ): ಲಡಾಖ್‌ಗೆ ರಾಜ್ಯದ ಸ್ಥಾನಮಾನಕ್ಕಾಗಿ ಆಗ್ರಹಿಸಿ, ಹೋರಾಟ ನಡೆಸಿ ಬಂಧನದಲ್ಲಿರುವ ಪರಿಸರ ಹೋರಾಟಗಾರ ಸೊನಮ್ ವಾಂಗ್ಚುಕ್ ಅವರ ಬಿಡುಗಡೆಗೆ ಕೋರಿ, ಅವರ ಪತ್ನಿ ಗೀತಾಂಜಲಿ ಆಂಗ್ಮೊ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಅ.29ಕ್ಕೆ ಮುಂದೂಡಿದೆ.

ರಾಷ್ಟ್ರೀಯ ಭದ್ರತಾ ಕಾಯ್ದೆಯ (ಎನ್‌ಎಸ್‌ಎ) ಅನ್ವಯ ಸೆಪ್ಟೆಂಬರ್ 26ರಂದು ವಾಂಗ್ಚುಕ್ ಅವರನ್ನು ಬಂಧಿಸಲಾಗಿತ್ತು. ಸದ್ಯ ಅವರು ರಾಜಸ್ಥಾನದ ಜೋಧಪುರ ಜೈಲಿನಲ್ಲಿದ್ದಾರೆ. ವಾಂಗ್ಚುಕ್ ಅವರ ಬಂಧನವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯನ್ನು ತಿದ್ದುಪಡಿ ಮಾಡಲು ಬಯಸುವುದಾಗಿ ಗೀತಾಂಜಲಿ ಆಂಗ್ಮೊ ಕೋರ್ಟ್‌ಗೆ ಮನವಿ ಮಾಡಿದ್ದಾರೆ.

ನ್ಯಾಯಮೂರ್ತಿಗಳಾದ ಅರವಿಂದ ಕುಮಾರ್ ಮತ್ತು ಎನ್.ವಿ ಅಂಜಾರಿಯಾ ಅವರ ಪೀಠವು ಬುಧವಾರ, 'ವಾಂಗ್ಚುಕ್ ಅವರ ಸಹೋದರ ಮತ್ತು ವಕೀಲ ಜೈಲಿನಲ್ಲಿ ವಾಂಗ್ಚುಕ್ ಅವರನ್ನು ಭೇಟಿ ಯಾಗಿದ್ದಾರೆ' ಎಂದು ರಾಜಸ್ಥಾನದ ಜೋಧಪುರ ಜೈಲಿನ ಜೈಲರ್ ಸಲ್ಲಿಸಿರುವ ಪ್ರಮಾಣಪತ್ರ ಪರಿಶೀಲಿಸಿತು.



ಸೊನಮ್ ವಾಂಗ್ಚುಕ್

'ವಾಂಗ್ಚುಕ್ ಅವರನ್ನು ಯಾವ ಆಧಾರದಲ್ಲಿ ಬಂಧಿಸಲಾಗಿದೆ ಎಂದು ಪ್ರಶ್ನಿಸಿ, ಅರ್ಜಿಯನ್ನು ತಿದ್ದುಪಡಿ ಮಾಡಿ ಸಲ್ಲಿಸಲಾಗುವುದು' ಎಂದು ಗೀತಾಂಜಲಿ ಆಂಗ್ಮೊ ಪರವಾಗಿ ಹಾಜರಾದ ವಕೀಲ ಕಪಿಲ್ ಸಿಬಲ್ ಪೀಠದ ಗಮನಕ್ಕೆ ತಂದರು.

'ಪತ್ನಿಯ ಜತೆಗೆ ಕೆಲವು ವಿಷಯಗಳನ್ನು ಹಂಚಿಕೊಳ್ಳಲು ವಾಂಗ್ಚುಕ್ ಅವರಿಗೆ ಅವಕಾಶ ನೀಡಬೇಕು' ಎಂದು ಸಿಬಲ್ ಮನವಿ ಮಾಡಿದರು. ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಇದಕ್ಕೆ ಯಾವುದೇ ಆಕ್ಷೇಪ ಇಲ್ಲ ಎಂದು ಪೀಠದ ಗಮನಕ್ಕೆ ತಂದರು.

## ಔಷಧ ಗುಣಮಟ್ಟ: ಹೊಸ ಕಾನೂನು ರೂಪಿಸುತ್ತಿರುವ ಕೇಂದ್ರ

ನವದೆಹಲಿ (ಪಿಟಿಐ): ಔಷಧ ಗುಣಮಟ್ಟ ಪರೀಕ್ಷೆ ಮತ್ತು ಮಾರುಕಟ್ಟೆ ಕಣ್ಗಾವಲು ಹಾಗೂ ವೈದ್ಯಕೀಯ ಸಾಧನಗಳು ಮತ್ತು ಸೌಂದರ್ಯವರ್ಧಕಗಳ ನಿಯಂತ್ರಣಕ್ಕಾಗಿರುವ ಕಾನೂನು ಚೌಕಟ್ಟನ್ನು ಬಲಪಡಿಸಲು ಕೇಂದ್ರ ಸರ್ಕಾರ ಹೊಸ ಕಾನೂನೊಂದನ್ನು ರೂಪಿಸುತ್ತಿದೆ.

'ಔಷಧಗಳು, ವೈದ್ಯಕೀಯ ಸಾಧನಗಳು ಮತ್ತು ಸೌಂದರ್ಯವರ್ಧಕಗಳ ಕಾಯ್ದೆ 2025'ರ ಕರಡು ಮಸೂದೆಯನ್ನು ಮಂಗಳವಾರ ನಡೆದ ಕೇಂದ್ರ ಆರೋಗ್ಯ ಸಚಿವಾಲಯದ ಉನ್ನತ ಮಟ್ಟದ ಸಭೆಯಲ್ಲಿ ಭಾರತೀಯ ಔಷಧ ಮಹಾನಿಯಂತ್ರಕ (ಡಿಸಿಜಿಐ) ಡಾ. ರಾಜೀವ್ ರಘುವಂಶಿ ಮಂಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಮಸೂದೆಯನ್ನು ಮುಂಬರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಪರಿಚಯಿಸಲು ಉದ್ದೇಶಿಸಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ವಹಿಸಿದ್ದರು. ಸಭೆಯಲ್ಲಿ ಡಿಸಿಜಿಐ ಮತ್ತು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯ ಹಿರಿಯ ಅಧಿಕಾರಿಗಳು ಪ್ರಸ್ತಾವಿತ ಕಾನೂನಿನ ಚೌಕಟ್ಟನ್ನು ವಿವರಿಸಿದರು.

ಭಾರತೀಯ ಔಷಧ ತಯಾರಕರ ಗುಣಮಟ್ಟದಲ್ಲಿ ಗಂಭೀರ ಲೋಪಗಳ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಸೇರಿದಂತೆ ವಿಶ್ವದಾದ್ಯಂತ ಆರೋಗ್ಯ ನಿಯಂತ್ರಕರು ಪದೇ ಪದೇ ದೂರುಗಳು ಮತ್ತು ಆತಂಕಗಳನ್ನು ವ್ಯಕ್ತಪಡಿಸುತ್ತಿರುವ ಕಾರಣ ಕೇಂದ್ರ ಸರ್ಕಾರ ಈ ಕಾನೂನನ್ನು ರೂಪಿಸಲು ಮುಂದಾಗಿದೆ.

## ನೀರಿನಲ್ಲಿ ಆಟ

ಪಿಟಿಐ ಚಿತ್ರ

ಉತ್ತರಾಖಂಡದ ಡೆಹರಾಡೂನ್ ಜಿಲ್ಲೆಯ ಋಷಿಕೇಶ್‌ನಲ್ಲಿ ಗಂಗಾ ನದಿಯಲ್ಲಿ ಪ್ರವಾಸಿಗರು ಬುಧವಾರ ರಿವರ್ ರ‍್ಯಾಫ್ಟಿಂಗ್ ಮಾಡಿದರು

# ಜುಬಿನ್ ಸಾವು ಪ್ರಕರಣ: ಐವರು ನ್ಯಾಯಾಂಗ ಬಂಧನಕ್ಕೆ

ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಅವರ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದ್ದ ಐವರನ್ನು ನ್ಯಾಯಾಂಗ ಬಂಧನಕ್ಕೆ ಬುಧವಾರ ಒಪ್ಪಿಸಲಾಗಿದೆ.

ಜುಬಿನ್ ಗರ್ಗ್

ಈಶಾನ್ಯ ಭಾರತ ಉತ್ಸವದ ಮುಖ್ಯ ಆಯೋಜಕ ಶ್ಯಾಮಕನು ಮಹಾಂತ, ಜುಬಿನ್ ಅವರ ವ್ಯವಸ್ಥಾಪಕ ಸಿದ್ಧಾರ್ಥ ಶರ್ಮಾ, ಅವರ ಸಹೋದರ ಸಂಬಂಧಿ, ಪೊಲೀಸ್ ಅಧಿಕಾರಿ ಸಂದೀಪನ್ ಗರ್ಗ್ ಮತ್ತು ಅವರ ಭದ್ರತಾ ಅಧಿಕಾರಿ ನಂದೇಶ್ವರ ಬೋರಾ ಮತ್ತು ಪ್ರಬಿನ್ ಬೈಶ್ಯಾ ಅವರನ್ನು ಕಾಮರೂಪ್ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಅವರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಆರೋಪಿಗಳ ಭದ್ರತೆ ಬಗ್ಗೆ ನ್ಯಾಯಾಲಯವು ಕಳವಳ ವ್ಯಕ್ತಪಡಿಸಿ, ಕಡಿಮೆ ಕೈದಿಗಳಿರುವ ಕಾರಾಗೃಹಕ್ಕೆ ಅವರನ್ನು ಕಳುಹಿಸುವಂತೆ ಸೂಚಿಸಿತು.

'ಆರೋಪಿಗಳನ್ನು ಮುಸ್ಸಲಾಪುರದ ಬಕ್ಸಾದಲ್ಲಿರುವ ಕಾರಾಗೃಹದಲ್ಲಿರಿಸಲು ನಿರ್ಧರಿಸಲಾಗಿದೆ. ಇದು ಎರಡು ತಿಂಗಳ ಹಿಂದಷ್ಟೇ ಉದ್ಘಾಟನೆಗೊಂಡಿದೆ. ಅಲ್ಲಿ ಯಾವುದೇ ಕೈದಿ ಇಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

### ಮತ್ತೆ ಮೂವರು ವಿಚಾರಣೆಗೆ ಹಾಜರು

ಜುಬಿನ್ ಅವರ ಸಾವಿಗೆ ಸಂಬಂಧಿಸಿದಂತೆ ಸಿಂಗಪುರದಲ್ಲಿ ನೆಲಸಿರುವ ಅಸ್ಸಾಂನ ಮೂವರು ಬುಧವಾರ ಎಸ್‌ಐಟಿ ಎದುರು ವಿಚಾರಣೆಗೆ ಹಾಜರಾದರು ಎಂದು ಅಸ್ಸಾಂನ ವಿಶೇಷ ಪೊಲೀಸ್ ಮಹಾನಿರ್ದೇಶಕ ಮುನ್ನಾ ಪ್ರಸಾದ್ ಗುಪ್ತಾ ಅವರು ತಿಳಿಸಿದರು.

ಸುಷ್ಮಿತಾ ಗೋಸ್ವಾಮಿ, ಪ್ರತೀಮ್ ಭುಯಾನ್ ಮತ್ತು ದೇಬೋಜ್ಯೋತಿ ಹಜಾರಿಕಾ ಅವರು ಸಿಐಡಿ ಕಚೇರಿಗೆ ಬಂದು ಹೇಳಿಕೆ ನೀಡಿದರು ಎಂದು ಅವರು ತಿಳಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ 11 ಮಂದಿಗೆ ಸಮನ್ಸ್ ನೀಡಲಾಗಿತ್ತು. ಈ ಪೈಕಿ 10 ಮಂದಿ ವಿಚಾರಣೆ ಎದುರಿಸಿದ್ದಾರೆ ಎಂದು ಮಾಹಿತಿ ನೀಡಿದರು.

## ಎಂಜಿನಿಯರಿಂಗ್ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಕೋಲ್ಕತ್ತ (ಪಿಟಿಐ): ಕೋಲ್ಕತ್ತದ ಖಾಸಗಿ ಎಂಜಿನಿಯರಿಂಗ್ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿನಿಯ ಮೇಲೆ ಆಕೆಯ ಸಹಪಾಠಿ ಅತ್ಯಾಚಾರ ಎಸಗಿದ್ದಾಗಿ ಆರೋಪಿಸಲಾಗಿದೆ. ಆರೋಪಿಯನ್ನು ನಗರದ ದಕ್ಷಿಣ ಭಾಗದಲ್ಲಿರುವ ಆನಂದಪುರ ಪ್ರದೇಶದಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳಕ್ಕೆ ಅಧ್ಯಯನಕ್ಕಾಗಿ ಬಂದಿರುವ ಯುವತಿ ತನ್ನ ಸಹಪಾಠಿಯ ಮೇಲೆ ಆನಂದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಆನಂದಪುರದಲ್ಲಿ ವಾಸಿಸುತ್ತಿದ್ದ ಯುವತಿಯ ಫ್ಲಾಟ್‌ಗೆ ಬಂದಿದ್ದ ಆರೋಪಿ, ಪಾನೀಯಕ್ಕೆ ಮಾದಕದ್ರವ್ಯ ಬೆರೆಸಿದ್ದನು. ಅದನ್ನು ಸೇವಿಸಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ ತನ್ನ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಯುವತಿ ಆರೋಪಿಸಿದ್ದಾರೆ' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆರೋಪಿ ಕೆಲವು ದಿನಗಳ ಕಾಲ ತಲೆಮರೆಸಿಕೊಂಡಿದ್ದನು, ನಂತರ ಆನಂದಪುರದ ತನ್ನ ಮನೆಗೆ ಮರಳುತ್ತಿದ್ದಂತೆ ಆತನನ್ನು ಬಂಧಿಸಲಾಯಿತು ಎಂದು ಅಧಿಕಾರಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿಯೊಬ್ಬರು ಸಾಮೂಹಿಕ ಅತ್ಯಾಚಾರಕ್ಕೊಳಗಾದ ಕೆಲವು ದಿನಗಳ ನಂತರ ಈ ಘಟನೆ ವರದಿಯಾಗಿದೆ.

## 8 ದಿನಗಳ ಬಳಿಕ ಪೂರನ್ ಕುಮಾರ್ ಅಂತ್ಯಕ್ರಿಯೆ

ಚಂಡೀಗಢ (ಪಿಟಿಐ): ಅ.7ರಂದು ಆತ್ಮಹತ್ಯೆ ಮಾಡಿಕೊಂಡಿದ್ದ ಹರಿಯಾಣದ ಐಪಿಎಸ್ ಅಧಿಕಾರಿ ವೈ. ಪೂರನ್ ಕುಮಾರ್ ಅವರ ಅಂತ್ಯಕ್ರಿಯೆಯು 8 ದಿನಗಳ ಬಳಿಕ ಬುಧವಾರ ಇಲ್ಲಿನ ಸೆಕ್ಟರ್ 25ರ ಸ್ಮಶಾನದಲ್ಲಿ ನಡೆಯಿತು.

ಜಾತಿ ಆಧಾರಿತ ತಾರತಮ್ಯ ಮತ್ತು ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿ ಪೂರನ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ತನ್ನ ಸಾವಿಗೆ ಇಲಾಖೆಯ ಕೆಲವು ಅಧಿಕಾರಿಗಳು ಕಾರಣ ಎಂದು ಮರಣಪತ್ರದಲ್ಲಿ ಉಲ್ಲೇಖಿಸಿದ್ದರು. ಈ ಬಗ್ಗೆ ತನಿಖೆಗೆ ಆಗ್ರಹಿಸಿ ಅವರ ಕುಟುಂಬ ಸದಸ್ಯರು ಮರಣೋತ್ತರ ಪರೀಕ್ಷೆಗೆ ಒಪ್ಪಿಗೆ ನೀಡಿರಲಿಲ್ಲ.

ಪೂರನ್ ಕುಮಾರ್

ಮರಣೋತ್ತರ ಪರೀಕ್ಷೆ ಅನುಮತಿಗಾಗಿ ಚಂಡೀಗಢ ಪೊಲೀಸರು ಸ್ಥಳೀಯ ಕೋರ್ಟ್ ಮೊರೆ ಹೋಗಿದ್ದರು. ಬುಧವಾರ ಬೆಳಿಗ್ಗೆ ಮರಣೋತ್ತರ ಪರೀಕ್ಷೆಗೆ ಅವರ ಪತ್ನಿ ಒಪ್ಪಿಗೆ ಸೂಚಿಸಿದರು. ಬಳಿಕ ಇಲ್ಲಿನ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಅಂತ್ಯಸಂಸ್ಕಾರ ನಡೆಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿತೆಗೆ ಅಗ್ನಿಸ್ಪರ್ಶ ಮಾಡುವ ಮೊದಲು ಸ್ವಲ್ಪ ಸಮಯ ಪೂರನ್ ಅವರ ಪೊಲೀಸ್ ಸಮವಸ್ತ್ರ ಮತ್ತು ಕ್ಯಾಪ್ ಅನ್ನು ಅವರ ಪಾರ್ಥಿವ ಶರೀರದ ಮೇಲೆ ಇರಿಸಲಾಗಿತ್ತು. ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿದ್ದವರು ಪೂರನ್ ಕುಮಾರ್ ಪರವಾಗಿ ಘೋಷಣೆಗಳನ್ನು ಮೊಳಗಿಸಿದರು. ಭಾವುಕ ಕ್ಷಣಗಳಿಗೆ ಸೆಕ್ಟರ್ 25ರ ಸ್ಮಶಾನ ಸಾಕ್ಷಿಯಾಯಿತು. ಪೂರನ್ ಪತ್ನಿ ಅಮ್ನೀತ್ ಪಿ. ಕುಮಾರ್ ಮತ್ತು ಇಬ್ಬರು ಪುತ್ರಿಯರು ಅಂತಿಮ ನಮನ ಸಲ್ಲಿಸಿದರು.

'ಚಂಡೀಗಢ ಪೊಲೀಸರು ಮತ್ತು ಹರಿಯಾಣ ಸರ್ಕಾರದಿಂದ ಪೂರನ್ ಸಾವಿನ ಬಗ್ಗೆ ನ್ಯಾಯಯುತ ತನಿಖೆ ನಡೆಯುವ ಭರವಸೆ ಲಭಿಸಿದ್ದರಿಂದ ಮರಣೋತ್ತರ ಪರೀಕ್ಷೆಗೆ ಒಪ್ಪಿಗೆ ನೀಡಲಾಯಿತು' ಎಂದು ಅವರ ಪತ್ನಿ, ಐಎಎಸ್ ಅಧಿಕಾರಿ ಅಮ್ನೀತ್ ಪಿ. ಕುಮಾರ್ ತಿಳಿಸಿದ್ದಾರೆ.

**ತನಿಖೆ ಭರವಸೆ:** ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಎಎಸ್‌ಐ ಸಂದೀಪ್ ಕುಮಾರ್ ಅವರ ನಿವಾಸಕ್ಕೆ ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಬುಧವಾರ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ಸಂದೀಪ್ ಕುಮಾರ್ ಅ.14ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

ನಿಧನ ವಾರ್ತೆ

## ಮಹಾಭಾರತ: ಕರ್ಣ ಪಾತ್ರಧಾರಿ ಪಂಕಜ್

ಮುಂಬೈ (ಪಿಟಿಐ): ಹಿಂದಿಯ 'ಮಹಾಭಾರತ' ಪೌರಾಣಿಕ ಧಾರಾವಾಹಿಯಲ್ಲಿ ಕರ್ಣನ ಪಾತ್ರ ನಿರ್ವಹಿಸಿದ್ದ, ಜನಪ್ರಿಯ ನಟ ಪಂಕಜ್ ಧೀರ್ (68) ಅವರು ಬುಧವಾರ ನಿಧನರಾದರು.



ಅವರಿಗೆ ಪತ್ನಿ ಅನಿತಾ ಧೀರ್ ಹಾಗೂ ಪುತ್ರ ನಿಕಿತಿನ್ ಧೀರ್ ಇದ್ದಾರೆ.

'ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಪಂಕಜ್ ಅವರು ಕಳೆದ ಹಲವು ತಿಂಗಳುಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು' ಎಂದು ಪಂಕಜ್ ಅವರ ಸ್ನೇಹಿತ ಹಾಗೂ ನಿರ್ಮಾಪಕರಾಗಿರುವ ಅಶೋಕ ಪಂಡಿತ್ ತಿಳಿಸಿದರು.

ಪಂಜಾಬ್ ರಾಜ್ಯದವರಾದ ಪಂಕಜ್ ಅವರು 1980ರಲ್ಲಿ ಸಿನಿಮಾ ರಂಗಕ್ಕೆ ಕಾಲಿಟ್ಟರು. ಹಲವಾರು ಸಿನಿಮಾ ಹಾಗೂ ಧಾರಾವಾಹಿಗಳಲ್ಲಿ ಇವರು ನಟಿಸಿದ್ದಾರೆ. 'ವಿಷ್ಣುಸೇನಾ', 'ವಿಷ್ಣು ವಿಜಯ', 'ಅಪ್ಪಾಜಿ' ಕನ್ನಡ ಚಿತ್ರಗಳಲ್ಲೂ ಅವರು ಅಭಿನಯಿಸಿದ್ದರು.

## ಗೋವಾ ಸಚಿವ ರವಿ ನಾಯಕ್

ಪಣಜಿ (ಪಿಟಿಐ): ಗೋವಾದ ಕೃಷಿ ಸಚಿವ ಮತ್ತು ಮಾಜಿ ಮುಖ್ಯಮಂತ್ರಿ ರವಿ ನಾಯಕ್ ಅವರು ಹೃದಯಸ್ತಂಭನದಿಂದ ಬುಧವಾರ ಮೃತಪಟ್ಟಿದ್ದಾರೆ.

ನಾಯಕ್ (79) ಅವರು ಹುಟ್ಟೂರು ಖಡಪ ಬಂಧ್‌ನಲ್ಲಿ ಹೃದಯ ಸ್ತಂಭನಕ್ಕೆ ಒಳಗಾಗಿದ್ದರು. ಬಳಿಕ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಮಧ್ಯರಾತ್ರಿ 1 ಗಂಟೆ ಸುಮಾರಿಗೆ ನಾಯಕ್ ಮೃತಪಟ್ಟರು ವುದಾಗಿ ವೈದ್ಯರು ದೃಢಪಡಿಸಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ನಾಯಕ್ ಅವರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ. ಮೃತರ ಅಂತಿಮ ವಿಧಿವಿಧಾನ ಬುಧವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ನಡೆಯಿತು.

ಎರಡು ಬಾರಿ ಗೋವಾದ ಮುಖ್ಯಮಂತ್ರಿಯಾಗಿದ್ದ ನಾಯಕ್ ಅವರು, ಏಳು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಹಲವು ವರ್ಷಗಳಿಂದ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ, ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದಲ್ಲಿಯೂ ಕಾರ್ಯನಿರ್ವಹಿಸಿದ್ದರು.

## ಕೆನ್ಯಾ ಮಾಜಿ ಪ್ರಧಾನಿ ರೈಲಾ

ಕೊಚ್ಚಿ (ಪಿಟಿಐ): ಕೆನ್ಯಾದ ಮಾಜಿ ಪ್ರಧಾನಿ ರೈಲಾ ಒಡಿಂಗಾ ಅವರು ಹೃದಯ ಸ್ತಂಭನದಿಂದ ಕೇರಳದ ಎರ್ನಾಕುಲಂನ ಕೊತ್ತಾಟ್ಟುಕುಳಂನಲ್ಲಿ ಬುಧವಾರ ಮೃತಪಟ್ಟರು. ಆಯುರ್ವೇದ ಚಿಕಿತ್ಸೆ ಪಡೆಯಲು ಅವರು ಇಲ್ಲಿಗೆ ಬಂದಿದ್ದರು.

ಇಲ್ಲಿರುವ ಕಣ್ಣಿನ ಆಯುರ್ವೇದ ಚಿಕಿತ್ಸಾಲಯದಲ್ಲಿ ಮುಂಜಾನೆ ವಾಯುವಿಹಾರ ಮಾಡುತ್ತಿದ್ದ ವೇಳೆ ಒಡಿಂಗಾ ಅವರು ಕುಸಿದು ಬಿದ್ದರು. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಒಡಿಂಗಾ ಮೃತದೇಹವನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದೆ. ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಗೆ ಮಾಹಿತಿ ನೀಡಿದ್ದೇವೆ ಎಂದು ಪೊಲೀಸರು ತಿಳಿಸಿದರು.

### ತಮಿಳುನಾಡು ವಿಧಾನಸಭೆ ಅಧಿವೇಶನ: ವಿಜಯ್ ಹೆಸರು ಉಲ್ಲೇಖಿಸದೇ ವಾಗ್ದಾಳಿ

# 'ಕಾಲ್ತುಳಿತ: ಟಿವಿಕೆ 'ನಾಯಕ'ನೇ ಹೊಣೆ'

ಪ್ರಜಾವಾಣಿ ವಾರ್ತೆ

ಚೆನ್ನೈ: 'ಕರೂರಿನಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ತಮಿಳಗ ವೆಟ್ರಿ ಕಳಗಂ (ಟಿವಿಕೆ) 'ಪಕ್ಷದ ನಾಯಕ'ನೇ ಹೊಣೆ. ಪಕ್ಷದ ರ‍್ಯಾಲಿ ಸ್ಥಳಕ್ಕೆ ಅವರು ತಡವಾಗಿ ಬಂದಿದ್ದೇ ದುರ್ಘಟನೆಗೆ ಕಾರಣ' ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ವಿಧಾನಸಭೆಯಲ್ಲಿ ಬುಧವಾರ ಹೇಳಿದರು.

ಸ್ಟಾಲಿನ್

ವಿರೋಧ ಪಕ್ಷಗಳ ಸದಸ್ಯರ ಗದ್ದಲದ ನಡುವೆಯೇ, ಕರೂರಿನಲ್ಲಿ ಸಂಭವಿಸಿದ ಕಾಲ್ತುಳಿತ ಕುರಿತು ಹೇಳಿಕೆ ನೀಡಿದ ಸ್ಟಾಲಿನ್, ಟಿವಿಕೆ ಪಕ್ಷದ ಮುಖ್ಯಸ್ಥ ಹಾಗೂ ನಟ ವಿಜಯ್ ಅವರ ಹೆಸರನ್ನು ಉಲ್ಲೇಖಿಸಲಿಲ್ಲ. ತಮ್ಮ ಮಾತಿನುದ್ದಕ್ಕೂ 'ಪಕ್ಷದ ನಾಯಕ' ಎಂದೇ ಹೇಳಿದರು.

**ಮುಖ್ಯಾಂಶಗಳು**

- ಟಿವಿಕೆ ಮುಖ್ಯಸ್ಥ, ನಟ ವಿಜಯ್ ಹೆಸರು ಉಲ್ಲೇಖಿಸದೇ ಟೀಕೆ
- ರ‍್ಯಾಲಿ ಆಯೋಜಕರು ಅಗತ್ಯ ಸೌಲಭ್ಯ ಒದಗಿಸಿರಲಿಲ್ಲ: ಸ್ಟಾಲಿನ್
- 'ಪಳನಿಸ್ವಾಮಿ ನೇತೃತ್ವದ ರ‍್ಯಾಲಿ ಸುಗಮವಾಗಿ ನಡೆದಿತ್ತು'

'ಪಕ್ಷವು ಘೋಷಿಸಿದ ಪ್ರಕಾರ, 'ಪಕ್ಷದ ನಾಯಕ' ಮಧ್ಯಾಹ್ನ 12ಕ್ಕೆ ವೇದಿಕೆಗೆ ಬರಬೇಕಿತ್ತು. ಆದರೆ, ಏಳು ಗಂಟೆಯಷ್ಟು ತಡವಾಗಿ, ರಾತ್ರಿ 7ಕ್ಕೆ ವೇದಿಕೆಗೆ ಬಂದರು. ಇದು ಕಾಲ್ತುಳಿತಕ್ಕೆ ಕಾರಣವಾಯಿತಲ್ಲದೇ, 41 ಜನರು ಪ್ರಾಣ ಕಳೆದುಕೊಂಡರು' ಎಂದು ಹೇಳಿದರು.

'ಟಿವಿಕೆ ಪಕ್ಷವು ರ‍್ಯಾಲಿ ನಡೆಸುವುದಕ್ಕಾಗಿ ಎರಡು ಸ್ಥಳಗಳನ್ನು ಸೂಚಿಸಿತ್ತು. ಅವುಗಳನ್ನು ತಿರಸ್ಕರಿಸಿದ್ದ ಕರೂರು ಜಿಲ್ಲಾಡಳಿತ, ವೇಲುಸ್ವಾಮಿಪುರಂನಲ್ಲಿ ಬಹಿರಂಗ ಸಭೆ ನಡೆಸಲು ಅನುಮತಿ ನೀಡಿತ್ತು. ಇದಕ್ಕಾಗಿ 11 ಷರತ್ತುಗಳನ್ನು ವಿಧಿಸಿತ್ತು' ಎಂದೂ ಸ್ಟಾಲಿನ್ ಸದನಕ್ಕೆ ವಿವರಿಸಿದರು.

'ಬಹಿರಂಗ ಸಭೆಗೆ 'ಪಕ್ಷದ ನಾಯಕ' ಹಾಗೂ ಪಕ್ಷವು ಸಮರ್ಪಕ ವ್ಯವಸ್ಥೆ ಮಾಡಿರಲಿಲ್ಲ. ಕುಡಿಯುವ ನೀರು ಸೇರಿ ಯಾವುದೇ ಮೂಲಸೌಕರ್ಯಗಳನ್ನು ಸಹ ಒದಗಿಸಿರಲಿಲ್ಲ' ಎಂದು ಟೀಕಿಸಿದರು. ಅಗತ್ಯ ಸಂಖ್ಯೆಯಲ್ಲಿ ಪೊಲೀಸರ ನಿಯೋಜನೆ ಮಾಡಿರಲಿಲ್ಲ ಎಂಬ ಆರೋಪಗಳನ್ನು ತಳ್ಳಿ ಹಾಕಿದ ಅವರು, 'ಕರೂರು ಜಿಲ್ಲಾಡಳಿತ ಮೂವರು ಎಎಸ್‌ಪಿ, ಐವರು ಡಿವೈಎಸ್‌ಪಿ, 18 ಜನ ಇನ್‌ಸ್ಪೆಕ್ಟರ್, 75 ಎಐಗಳು ಸೇರಿ 517 ಅಧಿಕಾರಿಗಳನ್ನು ನಿಯೋಜಿಸಿತ್ತು. ಇತರ ಜಿಲ್ಲೆಗಳಿಂದ ಹೆಚ್ಚುವರಿಯಾಗಿ 99 ಸಿಬ್ಬಂದಿಯನ್ನು ಸಹ ಕರೆಸಿಕೊಳ್ಳಲಾಗಿತ್ತು' ಎಂದು ಸದನಕ್ಕೆ ವಿವರಿಸಿದರು.

'ವಿರೋಧ ಪಕ್ಷದ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ ಹಮ್ಮಿಕೊಂಡಿದ್ದ ರೋಡ್ ಶೋ ಯಾವುದೇ ಸಮಸ್ಯೆಗೆ ಆಸ್ಪದವಾಗದಂತೆ ಸುಗಮವಾಗಿ ನಡೆಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವರು ಶಿಸ್ತಿನಿಂದ ವರ್ತಿಸಿದರು. ಆದರೆ, ಟಿವಿಕೆ ಮುಖ್ಯಸ್ಥನ ಅನೇಕ ಬೆಂಬಲಿಗರು ರ‍್ಯಾಲಿ ನಿಗದಿಯಾಗಿದ್ದ ಸ್ಥಳದವರೆಗೆ ಅವರ ವಾಹನ ಹಿಂಬಾಲಿಸಿದರು' ಎಂದು ಕುಟುಕಿದರು.

## ಇಳಯರಾಜ ಸಂಸ್ಥೆಗೆ ನೋಟಿಸ್

ನವದೆಹಲಿ (ಪಿಟಿಐ): ಕೃತಿಸ್ವಾಮ್ಯ ಪ್ರಕರಣಕ್ಕೆ ಸಂಬಂಧಿಸಿ 'ಇಳಯರಾಜ ಮ್ಯೂಸಿಕ್ ಎನ್. ಮ್ಯಾನೇಜ್‌ಮೆಂಟ್ ಪ್ರೈ ಲಿ.' ಕಂಪನಿಯು ಮದ್ರಾಸ್ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯನ್ನು ಬಾಂಬೆ ಹೈಕೋರ್ಟ್‌ಗೆ ವರ್ಗಾಯಿಸುವಂತೆ ಕೋರಿ ಸೋನಿ ಎಂಟರ್‌ಟೈನ್‌ಮೆಂಟ್ ಸಂಸ್ಥೆ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯಿಸುವಂತೆ ನ್ಯಾಯಾಲಯವು ಸಂಗೀತ ಕಂಪನಿಗೆ ನೋಟಿಸ್ ನೀಡಿದೆ.



ಇಳಯರಾಜ

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರು ಬುಧವಾರ ಅರ್ಜಿಯ ವಿಚಾರಣೆ ನಡೆಸಿದರು. ವಿವಿಧ ಸಿನಿಮಾಗಳ ಸುಮಾರು 536 ಹಾಡುಗಳ ಕೃತಿಸ್ವಾಮ್ಯ ಸಂಬಂಧ ವಿಚಾರಣೆ ನಡೆಯುತ್ತಿದೆ. ಈ ಹಾಡುಗಳ ಕೃತಿಸ್ವಾಮ್ಯವು ಸೋನಿ ಸಂಸ್ಥೆ ಬಳಿ ಇವೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

# ಅಭಿಮತ

**ಸುಭಾಷಿತ**

ದೇಹಶುದ್ಧಿ, ನುಡಿಶುದ್ಧಿ ಮತ್ತು ಮನಸ್ಸು ಶುದ್ಧಿ – ಇವುಗಳನ್ನು ಸಾಧಿಸಲು ನೆರವಾಗುವುದೇ ಸದ್ಧಮ್ಮ.

–ಗೌತಮ ಬುದ್ಧ

## ತ್ಯಾಜ್ಯ ವಿಲೇವಾರಿಯಲ್ಲಿ ಅಸಡ್ಡೆ ನಗರದ ಆರೋಗ್ಯಕ್ಕೆ ಅಪಾಯಕಾರಿ

**ಬೆಂಗಳೂರು** ನಗರದಲ್ಲಿ ಪ್ರತಿದಿನ ಸುಮಾರು ಒಂಬತ್ತು ಲಕ್ಷ ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸಿ ಎಸೆಯಲಾಗುತ್ತಿದೆ. ಈ ಪ್ಯಾಡ್‌ಗಳ ಪೈಕಿ ಹೆಚ್ಚಿನವು ಒಣ ತ್ಯಾಜ್ಯದ ಜೊತೆ ಸೇರುತ್ತವೆ. ಅಪಾಯಕಾರಿ ತ್ಯಾಜ್ಯ ಎಂದು ಪರಿಗಣಿಸಿ, ಪ್ರತ್ಯೇಕವಾಗಿ ಹಾಗೂ ಜಾಗರೂಕತೆಯಿಂದ ವಿಲೇವಾರಿ ಮಾಡಬೇಕಿದ್ದ ಸ್ಯಾನಿಟರಿ ಪ್ಯಾಡ್‌ಗಳನ್ನು ಬೇಜವಾಬ್ದಾರಿಯಿಂದ ಕಸದ ಬುಟ್ಟಿಗೆ ಎಸೆಯಲಾಗುತ್ತಿದೆ. ಇದರಿಂದಾಗಿ ನಗರದ ಪೌರಕಾರ್ಮಿಕರು ಹಾಗೂ ತ್ಯಾಜ್ಯವನ್ನು ಆಯುವ 22 ಸಾವಿರಕ್ಕೂ ಹೆಚ್ಚು ಮಂದಿ ವಿವಿಧ ಸೋಂಕುಗಳಿಗೆ ತುತ್ತಾಗುವ ಅಪಾಯ ಎದುರಿಸುತ್ತಿದ್ದಾರೆ. ಈ ಹಿಂದೆ ಅಸ್ತಿತ್ವದಲ್ಲಿ ಇದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಸ್ಯಾನಿಟರಿ ಪ್ಯಾಡ್, ಡೈಪರ್‌ಗಳು ಮತ್ತು ವೈದ್ಯಕೀಯ ತ್ಯಾಜ್ಯವನ್ನು ಪ್ರತ್ಯೇಕಿಸುವಂತೆ ಮೊದಲ ಬಾರಿಗೆ ಮನವಿ ಮಾಡಿದ್ದು 2016ರಲ್ಲಿ. ಆದರೆ, ತ್ಯಾಜ್ಯವನ್ನು ಪ್ರತ್ಯೇಕಿಸುವ ಕೆಲಸವು ಈಗಲೂ ತೃಪ್ತಿಕರ ಮಟ್ಟದಲ್ಲಿ ಆಗುತ್ತಿಲ್ಲ. ನಗರದ ನಿವಾಸಿಗಳು ವೈದ್ಯಕೀಯ ತ್ಯಾಜ್ಯವನ್ನು ಮನೆಯ ಇತರ ತ್ಯಾಜ್ಯಗಳ ಜೊತೆಯೇ ಇರಿಸುತ್ತಿದ್ದಾರೆ ಅಥವಾ ಅಂತಹ ತ್ಯಾಜ್ಯವನ್ನು ಖಾಲಿ ನಿವೇಶನಗಳಲ್ಲಿ ಸುರಿಯುತ್ತಿದ್ದಾರೆ. ನಗರದ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ತ್ಯಾಜ್ಯ ಆಯುವವರು ಈ ಬಗೆಯ ತ್ಯಾಜ್ಯವನ್ನು ಬರಿಗೈಯಲ್ಲಿ ಹೆಕ್ಕುತ್ತಿದ್ದಾರೆ. ಬಹುತೇಕ ಸಂದರ್ಭಗಳಲ್ಲಿ ಅವರಿಗೆ ಕೈಗವಸು, ಮುಖಗವಸು ಇರುವುದಿಲ್ಲ. ಬಳಸಿ ಬಿಸಾಡಿದ ಪ್ಯಾಡ್‌ಗಳು, ಗಾಜಿನ ಚೂರುಗಳು, ಚುಚ್ಚುಮದ್ದಿನಲ್ಲಿ ಬಳಸಿದ ಸೂಜಿಗಳು ಕೂಡ ಇರುವ ತ್ಯಾಜ್ಯದ ಗುಪ್ಪೆಯಿಂದ ಅವರು ಪುನರ್ಬಳಕೆಗೆ ಬರುವ ತ್ಯಾಜ್ಯವನ್ನು ಆಯಲು ಮುಂದಾಗುತ್ತಾರೆ. ಈ ಕೆಲಸದಲ್ಲಿ ಅವರು ಗಾಯಗಳಿಗೆ, ಸೋಂಕುಗಳಿಗೆ, ವಿವಿಧ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಅವರು ಮಾಡಿದ ಕೆಲಸವು ಯಾರ ಕಣ್ಣಿಗೂ ಬೀಳುವುದಿಲ್ಲ, ಆ ಕೆಲಸಕ್ಕೆ ಬೆಲೆಕಟ್ಟುವ ಕಾರ್ಯವೂ ಆಗುವುದಿಲ್ಲ.

ಬೆಂಗಳೂರು ಮಹಾನಗರದಲ್ಲಿ, ಅಪಾಯಕಾರಿ ತ್ಯಾಜ್ಯಗಳ ಅಸಮರ್ಪಕ ವಿಂಗಡಣೆ ಕಸ ಸಂಗ್ರಹಕಾರರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತಿದೆ.

ನಾಗರಿಕರು ಸ್ಯಾನಿಟರಿ ಪ್ಯಾಡ್‌ಗಳನ್ನು ಹಾಗೂ ಬಳಸಿದ ಸೂಜಿಗಳನ್ನು ತೆಳುವಾದ ಪ್ಲಾಸ್ಟಿಕ್ ಪೊಟ್ಟಣಗಳಲ್ಲಿ ಅಥವಾ ಕಾಗದದ ಪೊಟ್ಟಣಗಳಲ್ಲಿ ಸುತ್ತಿ ಎಸೆಯುತ್ತಿದ್ದರೆ, ಅವರು ನಗರವನ್ನು ಸ್ವಚ್ಛವಾಗಿ ಇರಿಸಲು ಯತ್ನಿಸುತ್ತಿರುವ ಪೌರ ಕಾರ್ಮಿಕರ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಿಲ್ಲ ಎಂದೇ ಅರ್ಥ. ಪ್ರತ್ಯೇಕಿಸದ ವೈದ್ಯಕೀಯ ತ್ಯಾಜ್ಯವು ರಕ್ತದ ಮೂಲಕ ಹರಡುವ ಕಾಯಿಲೆಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ಅಂಟಿಸುವ ಅಪಾಯ ಇರುತ್ತದೆ. ಅದರ ಜೊತೆಯಲ್ಲೇ ಅಂತಹ ತ್ಯಾಜ್ಯವು, ಪುನರ್ಬಳಕೆ ಮಾಡಬಹುದಾದ ಇತರ ತ್ಯಾಜ್ಯಗಳನ್ನೂ ಕಲುಷಿತಗೊಳಿಸುತ್ತದೆ. ‘ಮಾರ್ಕ್‌ಇಟ್‌ರೆಡ್’ ಹೆಸರಿನಲ್ಲಿ ನಡೆದಿರುವ ಅಭಿಯಾನವು, ವೈದ್ಯಕೀಯ ತ್ಯಾಜ್ಯ ಹಾಗೂ ಸ್ಯಾನಿಟರಿ ಪ್ಯಾಡ್‌ಗಳನ್ನು ಕಾಗದದ ಪೊಟ್ಟಣದಲ್ಲಿ ಇರಿಸಿ, ಅದರ ಮೇಲೆ ರೆಡ್‌ಕ್ರಾಸ್‌ನ ಗುರುತು ಮಾಡಿ, ನಂತರ ಅದನ್ನು ಪೌರಕಾರ್ಮಿಕರಿಗೆ ಪ್ರತ್ಯೇಕವಾಗಿ ನೀಡಲು ಜನರನ್ನು ಉತ್ತೇಜಿಸುತ್ತಿದೆ. ಈ ಅಭಿಯಾನವು ಜವಾಬ್ದಾರಿಯುತ ನಾಗರಿಕರು ಏನು ಸಾಧಿಸಬಹುದು ಎಂಬುದನ್ನು ತೋರಿಸಿದೆ. ಬೆಂಗಳೂರಿನ ಜೆ.ಪಿ. ನಗರದಲ್ಲಿ ಇಂತಹ ತ್ಯಾಜ್ಯದ ಪೈಕಿ ಸರಿಸುಮಾರು ಶೇ 60ರಷ್ಟನ್ನು ಈಗ ಸರಿಯಾದ ಬಗೆಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಈ ಬಗೆಯ ಜಾಗೃತಿಯು ರಾಜ್ಯದ ಇತರ ಕಡೆಗಳಲ್ಲಿಯೂ ಮೂಡಬೇಕು.

ದುರದೃಷ್ಟದ ಸಂಗತಿಯೆಂದರೆ, ವೈದ್ಯಕೀಯ ತ್ಯಾಜ್ಯವನ್ನು ವಿಲೇವಾರಿ ಮಾಡುವುದಕ್ಕೆ ಸಂಬಂಧಿಸಿದಂತೆ ನಗರದಾದ್ಯಂತ ಅನ್ವಯವಾಗುವ ಶಿಷ್ಟಾಚಾರವೊಂದನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಇನ್ನಷ್ಟೇ ರೂಪಿಸಬೇಕಿದೆ. ಅಪಾಯಕಾರಿ ಆಗಬಲ್ಲ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಪ್ರತ್ಯೇಕವಾದ ಕಸದಬುಟ್ಟಿಗಳು ಇಲ್ಲ. ಕೆಲವು ಕುಟುಂಬಗಳು ತ್ಯಾಜ್ಯವನ್ನು ವೈಜ್ಞಾನಿಕವಾಗಿ ಪ್ರತ್ಯೇಕಿಸಿದರೂ ಅದನ್ನು ಸಾಗಾಟ ಮಾಡುವಾಗ ಮತ್ತೆ ಒಂದರಲ್ಲಿ ಇನ್ನೊಂದನ್ನು ಸೇರಿಸುವ ಪ್ರವೃತ್ತಿ ಇದೆ. ತ್ಯಾಜ್ಯದ ವಿಲೇವಾರಿ, ಸಾಗಾಟಕ್ಕೆ ಸೂಕ್ತವಾದ ವ್ಯವಸ್ಥೆ ಇಲ್ಲದಿದ್ದರೆ ಪೌರಕಾರ್ಮಿಕರಿಗೇ ಅಪಾಯ ಎದುರಾಗುತ್ತದೆ, ನಾಗರಿಕರ ಪ್ರಯತ್ನಕ್ಕೆ ಬೆಲೆ ಇಲ್ಲದಂತಾಗುತ್ತದೆ. ವೈದ್ಯಕೀಯ ತ್ಯಾಜ್ಯ ಹಾಗೂ ಸ್ಯಾನಿಟರಿ ಪ್ಯಾಡ್‌ಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವುದು ನಗರ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಚರ್ಚೆಯ ಕೇಂದ್ರಬಿಂದುವಿನಂತಿದೆ. ವೈದ್ಯಕೀಯ ತ್ಯಾಜ್ಯವನ್ನು ವಿಲೇವಾರಿ ಮಾಡಲು ಆಡಳಿತ ವ್ಯವಸ್ಥೆಯು ಪ್ರತ್ಯೇಕವಾದ ಕಸದ ಬುಟ್ಟಿಯನ್ನು ಇರಿಸಬೇಕು. ಅವುಗಳನ್ನು ಸರಿಯಾಗಿ ವಿಲೇವಾರಿ ಮಾಡುವ ಬಗ್ಗೆ ಪೌರ ಕಾರ್ಮಿಕರಿಗೆ ಪಾಠ ಹೇಳಬೇಕು, ಅವರಿಗೆ ಅಗತ್ಯ ಉಪಕರಣಗಳನ್ನು ಒದಗಿಸಬೇಕು. ಆದರೆ, ನಾಗರಿಕರ ಉಪೇಕ್ಷೆಯು ದೊಡ್ಡ ತಲೆನೋವಾಗಿ ಮುಂದುವರಿದಿದೆ. ಜವಾಬ್ದಾರಿಯು ಮನೆಗಳಿಂದಲೇ ಆರಂಭವಾಗುತ್ತದೆ ಎಂಬುದನ್ನು ನಾಗರಿಕರು ಅರ್ಥ ಮಾಡಿಕೊಳ್ಳಬೇಕು. ತ್ಯಾಜ್ಯದ ಮೇಲೆ ಕೆಂಪು ಬಣ್ಣದಿಂದ ಗುರುತುಹಾಕುವುದು ಸಾಂಕೇತಿಕ ಕೆಲಸ ಅಲ್ಲ. ಅದು ನಗರವನ್ನು ಸ್ವಚ್ಛವಾಗಿ ಇರಿಸುವ ಕಾರ್ಮಿಕರಿಗೆ ಗೌರವ ತೋರಬೇಕಾದ ನೈತಿಕ ಅಗತ್ಯವೂ ಹೌದು.

### ಸೇವಾದಳ ನೆನಪಿಸಿಕೊಳ್ಳಿ

ಆರ್‌ಎಸ್‌ಎಸ್ ನಿಷೇಧ ಎಂಬ ಪ್ರಹಸನ ಕೈಬಿಡಿ. ಸ್ವಾತಂತ್ರ್ಯಪೂರ್ವದ ಕಾಂಗ್ರೆಸ್ ಪಕ್ಷದ್ದೇ ಆದ ‘ಭಾರತ್ ಸೇವಾದಳ’ ಎಂಬ ಸಂಸ್ಥೆಯ ಪುನರುತ್ಥಾನ ಮಾಡಿ. ತನ್ಮೂಲಕ, ವಿದ್ಯಾರ್ಥಿಗಳು ಹಾಗೂ ಯುವಜನರನ್ನು ರಾಷ್ಟ್ರ ಸೇವೆಗೆ ಅಣಿ ಮಾಡಿ.

**ಜಿ.ಟಿ. ನರೇಂದ್ರ,** ವಕೀಲ, ‘ಫೇಸ್‌ಬುಕ್’ನಿಂದ

### ಕಿಡಿನುಡಿ

ಸಕಾಲದಲ್ಲಿ ವೇತನ ನೀಡದೆ ಇರುವ ಕಾರಣಕ್ಕೆ ಕಲಬುರಗಿ ಜಿಲ್ಲೆಯಲ್ಲಿ ಗ್ರಂಥಪಾಲಕಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವುದು ಸರ್ಕಾರದ ಆಡಳಿತಾತ್ಮಕ ವೈಫಲ್ಯಕ್ಕೆ, ಬ್ರಹ್ಮಾಂಡ ಭ್ರಷ್ಟಾಚಾರ ಹಾಗೂ ಸರ್ಕಾರದ ಸಂಪನ್ಮೂಲಗಳನ್ನು, ಸಮಯವನ್ನು ತಪ್ಪಾದ ಆದ್ಯತೆಗಳಿಗೆ ಉಪಯೋಗಿಸುತ್ತಿರುವುದಕ್ಕೆ ಹಿಡಿದ ಕೈಗನ್ನಡಿ.

**ಬಸನಗೌಡ ಪಾಟೀಲ ಯತ್ನಾಳ,** ಶಾಸಕ

### 25 ವರ್ಷಗಳ ಹಿಂದೆ

**ಸೋಮವಾರ, 16-10-2000**

● **ರಾಯಚೂರು ವಿದ್ಯುತ್ 7ನೇ ಘಟಕಕ್ಕೆ ಒಪ್ಪಂದ**

**ಬೆಂಗಳೂರು, ಅ. 15–** ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಏಳನೇ ಘಟಕದ ವಿಸ್ತರಣೆಗೆ ಬಹುಪಕ್ಷೀಯ ಒಪ್ಪಂದವೊಂದಕ್ಕೆ ಕರ್ನಾಟಕ ವಿದ್ಯುತ್ ನಿಗಮವು ಇಂದು ಇಲ್ಲಿ ಸಹಿ ಹಾಕುವ ಮೂಲಕ ಕರ್ನಾಟಕವು ದೇಶದಲ್ಲೇ ವಿದ್ಯುತ್ ಸುಧಾರಣಾ ಯೋಜನೆಗಳ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟ ಮೊದಲ ರಾಜ್ಯ ಎಂಬ ಕೀರ್ತಿಗೆ ಪಾತ್ರವಾಯಿತು.

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸಮ್ಮುಖದಲ್ಲಿ ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್), ಮೂಲ ಸೌಲಭ್ಯ ಅಭಿವೃದ್ಧಿ ಹಣಕಾಸು ಕಂಪನಿ (ಐಡಿಎಫ್‌ಸಿ), ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ಮತ್ತು ಆಂಧ್ರ ಬ್ಯಾಂಕ್‌ಗಳ ಪ್ರತಿನಿಧಿಗಳು ಒಪ್ಪಂದಕ್ಕೆ ಸಹಿ ಹಾಕಿದರು.

● **ಬಳ್ಳಾರಿ: ಗೋಡೆ ಕುಸಿದು ಒಂದೇ ಕುಟುಂಬದ ಮೂವರ ಸಾವು**

**ಬಳ್ಳಾರಿ, ಅ. 15–** ತಾಲ್ಲೂಕಿನ ಕುಂಟನಹಾಳ್ ಗ್ರಾಮದಲ್ಲಿ ಮಳೆಯಿಂದಾಗಿ ನಿನ್ನೆ ರಾತ್ರಿ ಮನೆಯೊಂದರ ಗೋಡೆ ಕುಸಿದು ಒಂದೇ ಕುಟುಂಬದ ಮೂವರು ಮೃತಪಟ್ಟ ಘಟನೆ ಸಂಭವಿಸಿದೆ.

ರಾಮಯ್ಯ (25), ಆತನ ಪತ್ನಿ ಓಬಳಮ್ಮ (22) ಮತ್ತು ಮಗ ಜಂಭುನಾಥ (4) ಎಂಬುವರು ಸ್ಥಳದಲ್ಲಿಯೇ ಮೃತರಾಗಿದ್ದಾರೆ. ಇವರು ಸೇರಿ ಜಿಲ್ಲೆಯಲ್ಲಿ ಮಳೆಯಿಂದ ಸತ್ತವರ ಸಂಖ್ಯೆ 16ಕ್ಕೆ ಏರಿದೆ.

### 75 ವರ್ಷಗಳ ಹಿಂದೆ

**ಸೋಮವಾರ, 16-10-1950**

● **ಹುಟ್ಟಿಸಿದ ದೇವರು ಹುಲ್ಲು ಮೇಯಿಸುವಾಗ...**

**ಜೋಧಪುರ, ಅ. 15–** ರಾಜಸ್ಥಾನದ ಜಯಸಾಲ್ಮರ್ ಜಿಲ್ಲೆಯ (16,000 ಚದರ ಮೈಲಿಗಳು) ಮರುಭೂಮಿ ಪ್ರದೇಶದಲ್ಲಿರುವ ಬಡಜನರು ಒಂದು ಬಗೆಯ ಹುಲ್ಲನ್ನು ಆಹಾರವಾಗಿ ಉಪಯೋಗಿಸುತ್ತಿದ್ದಾರೆ.

ತೆಳುವಾಗಿ ಮುಳ್ಳಿರುವ ಈ ಹುಲ್ಲಿಗೆ ‘ಭೂರತ್’ ಎಂದು ಹೆಸರು. ಮಿಡತೆ ಹಾವಳಿಯಿಂದ ಈ ಜಿಲ್ಲೆಯಲ್ಲಿ ಧಾನ್ಯಗಳು ಸಂಪೂರ್ಣ ನಾಶವಾಗಿವೆ.

ಹುಲ್ಲು ತಿನ್ನಲು ಹೇಗೆ ಒಗ್ಗಿದೆಯೋ ತಿಳಿಯದಾದರೂ, ಕಾರಣಾಂತರಗಳಿಂದ ಈ ಜನಕ್ಕೆ ‘ಭೂರತಿಯಾ’ ಎಂಬ ಅಪಹಾಸ್ಯದ ಅಡ್ಡ ಹೆಸರು ಶತಮಾನಗಳಿಂದ ಅಂಟಿಕೊಂಡು ಬಂದಿದೆ. ‘ಭೂರತಿಯಾ’ ಎಂದರೆ ಹುಲ್ಲು ತಿನ್ನುವವರು ಎಂದರ್ಥ.

# ಎಸ್‌ಐಆರ್: ಲೋಪಗಳ ಕೂಪ

**ವಿಶ್ಲೇಷಣೆ**

**ಯೋಗೇಂದ್ರ ಯಾದವ್**
**ರಾಹುಲ್ ಶಾಸ್ತ್ರಿ**

ಬಿಹಾರದಲ್ಲಿ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆಯಿಂದ ಚುನಾವಣಾ ಆಯೋಗ ಪಾಠ ಕಲಿಯಬೇಕು. ಇದೇ ಪ್ರಯೋಗವನ್ನು ಯಥಾರೂಪದಲ್ಲಿ ಬೇರೆಡೆಯೂ ವಿಸ್ತರಿಸುವ ಪ್ರಯತ್ನ, ಭಾರತದ ಚುನಾವಣಾ ಪ್ರಜಾಪ್ರಭುತ್ವದ ತೀವ್ರ ಕುಸಿತಕ್ಕೆ ಕಾರಣವಾಗಬಹುದು.

ಬಿಹಾರದ ಮತದಾರರ ಅಂತಿಮ ಪಟ್ಟಿಯೂ ಚುನಾವಣಾ ವೇಳಾಪಟ್ಟಿಯೂ ಜೊತೆ ಜೊತೆಗೆ ಪ್ರಕಟವಾಗಿವೆ. ಆ ರಾಜ್ಯದಲ್ಲಿ ನಡೆಸಲಾದ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆಯ (ಎಸ್‌ಐಆರ್) ಕುರಿತು ತತ್‌ಕ್ಷಣದ ಒಂದು ವಿಶ್ಲೇಷಣೆ ಇಲ್ಲಿದೆ. ಮತದಾರರ ಪಟ್ಟಿಯಲ್ಲಿ ನೋಂದಣಿಗೆ ಸಂಬಂಧಿಸಿ ಜಾಗತಿಕವಾಗಿ ಮಾನ್ಯತೆ ಇರುವ ಮೂರು ಮಾನದಂಡಗಳಾದ ಪೂರ್ಣತೆ, ಸಮಾನತೆ ಮತ್ತು ನಿಖರತೆಯ ಆಧಾರದಲ್ಲಿ ಬಿಹಾರದ ಮತದಾರರ ಹೊಸ ಪಟ್ಟಿಯ ಗುಣಮಟ್ಟದ ವಿಶ್ಲೇಷಣೆಯನ್ನು ಇಲ್ಲಿ ನಡೆಸಿದ್ದೇವೆ.

ಮತದಾರರ ಪಟ್ಟಿಯ ಗುಣಮಟ್ಟವನ್ನು ಅಳೆಯುವ ಮೊದಲ ಮಾನದಂಡ ಪೂರ್ಣತೆ; ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾದ ಅರ್ಹ ಮತದಾರರ ಪ್ರಮಾಣದ ಆಧಾರದಲ್ಲಿ ಪೂರ್ಣತೆಯನ್ನು ಅಳೆಯಲಾಗುತ್ತದೆ. ಬಿಹಾರದ ಮತದಾರರ ಕರಡು ಪಟ್ಟಿ ಪ್ರಕಟವಾದ ಬಳಿಕ ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆದ ವಯಸ್ಕ ಮತದಾರರ ಪ್ರಮಾಣದ ಆಘಾತಕಾರಿ ಕುಸಿತವನ್ನು ನಾವು ದಾಖಲಿಸಿದ್ದೇವೆ (ದಿ ಮಿಸ್ಸಿಂಗ್ ವೋಟರ್ಸ್, ಇಂಡಿಯನ್ ಎಕ್ಸ್‌ಪ್ರೆಸ್ ಜುಲೈ 31). ಕುಸಿತದ ಪ್ರಮಾಣವು ಈ ಹಿಂದಿನ ಶೇ 97ಕ್ಕಿಂತ ಶೇ 88. ಮತದಾರರ ಅಂತಿಮ ಪಟ್ಟಿಯು ಒಂದು ಮಟ್ಟಿಗೆ ಸುಧಾರಣೆಗೊಂಡಿದೆ ಮತ್ತು ಮತದಾರರ ಪಟ್ಟಿ ಸೇರಿದ ವಯಸ್ಕರ ಪ್ರಮಾಣವು ಶೇ 90ಕ್ಕೆ ಏರಿದೆ. ಹಾಗಿದ್ದರೂ ಒಟ್ಟು ಚಿತ್ರಣದಲ್ಲಿ ದೊಡ್ಡ ಬದಲಾವಣೆ ಏನೂ ಇಲ್ಲ. ವಯಸ್ಕ ಮತದಾರರ ಅನುಪಾತವು ತೀವ್ರವಾಗಿ ಕುಸಿಯುವುದಕ್ಕೆ ಎಸ್‌ಐಆರ್ ಕಾರಣವಾಗಿದೆ. ಭಾರತ ಸರ್ಕಾರದ ಜನಸಂಖ್ಯೆ ಅಂದಾಜು ತಾಂತ್ರಿಕ ಸಮಿತಿಯ ಅಂದಾಜಿನ ಪ್ರಕಾರ, 2025ರ ಸೆಪ್ಟೆಂಬರ್‌ನಲ್ಲಿ ಬಿಹಾರದಲ್ಲಿ 8.22 ಕೋಟಿ ಮತದಾರರು ಇರಬೇಕಿತ್ತು. ಆದರೆ, ಅಂತಿಮ ಪಟ್ಟಿಯ ಪ್ರಕಾರ ಅಲ್ಲಿ ಇರುವ ಮತದಾರರ ಸಂಖ್ಯೆಯು 7.42 ಕೋಟಿ ಮಾತ್ರ.

ಅಂತಿಮ ಪಟ್ಟಿಯ ಸಂಖ್ಯೆಯ ಕುರಿತು ತಪ್ಪಾದ ಒಂದು ನಿರಾಳಭಾವ ಇದೆ; ಅದಕ್ಕೆ ಮುಖ್ಯವಾದ ಕಾರಣ ಏನೆಂದರೆ, ಕರಡು ಪಟ್ಟಿಯಲ್ಲಿ ಕಡಿಮೆಯಾದ ಮತದಾರರ ಸಂಖ್ಯೆಯು ಕರಡು ಪಟ್ಟಿಯಿಂದ ಹೊರಗಿಡಲಾದ ಸಂಖ್ಯೆಗಿಂತ 65 ಲಕ್ಷದಷ್ಟು ಕಡಿಮೆ ಇದೆ. ಸುಮಾರು ಎರಡು ಕೋಟಿ ಹೆಸರು ಕೈಬಿಡಲಾಗುವುದು ಎಂಬ ಕಳವಳ ಹಿಂದೆ ಇತ್ತು. ಆದರೆ, ಈಗ ಕೈಬಿಡಲಾದ ಸಂಖ್ಯೆಯು ಅದಕ್ಕಿಂತ ಬಹಳ ಕಡಿಮೆ ಇದೆ ಎಂಬುದು ಹುಸಿ ಸಮಾಧಾನಕ್ಕೆ ಇನ್ನೊಂದು ಕಾರಣ. ಮತದಾರರ ಮತದಾನದ ಹಕ್ಕುಗಳನ್ನು ಈ ಪ್ರಮಾಣದಲ್ಲಿ ಕಸಿದುಕೊಳ್ಳಲಾಗಿಲ್ಲ ಎಂಬುದಕ್ಕೆ ಎಸ್‌ಐಆರ್ ಅಥವಾ ಚುನಾವಣಾ ಆಯೋಗವು ಕಾರಣ ಅಲ್ಲ. ಬದಲಿಗೆ ಸುಪ್ರೀಂ ಕೋರ್ಟ್‌ನಿಂದಾಗಿ ಇದು ಸಾಧ್ಯವಾಯಿತು. ನಿರಂತರವಾದ ನಿಗಾ ಇರಿಸಿದ ನ್ಯಾಯಾಲಯಕ್ಕೆ ಕೃತಜ್ಞತೆ ಸಲ್ಲಬೇಕು. ಇದರಿಂದಾಗಿ ಹಾನಿ ಸರಿಪಡಿಸುವ ಕೆಲಸಕ್ಕೆ ಆಯೋಗವು ಮುಂದಾಯಿತು ಮತ್ತು ತನ್ನದೇ ಆದೇಶಗಳು ಮತ್ತು ಪ್ರಕ್ರಿಯೆಗಳನ್ನು ಕೈಬಿಟ್ಟಿತು. ಮೊದಲನೆಯದಾಗಿ, ದೊಡ್ಡ ಸಂಖ್ಯೆಯ ಗಣತಿ ನಮೂನೆಗಳನ್ನು (ಎನ್ಯುಮರೇಷನ್ ಫಾರಂ) ಮತಗಟ್ಟೆ ಅಧಿಕಾರಿಗಳು ಸಲ್ಲಿಕೆ ಮಾಡಿರಲಿಲ್ಲ ಮತ್ತು ಈ ವಂಚನೆಗೆ ಚುನಾವಣಾ ಆಯೋಗದ ಪ್ರೋತ್ಸಾಹ ಕೂಡ ಇತ್ತು ಎಂದು ಹೇಳಲಾಗಿತ್ತು. ಬಳಿಕ, ಹೀಗೆ ಸಂಗ್ರಹಿಸಲಾದ ಕನಿಷ್ಠ ಶೇ 20ರಷ್ಟು ನಮೂನೆಗಳನ್ನು ಸಲ್ಲಿಸಲಾಯಿತು. ಎರಡನೆಯದಾಗಿ, ಮಾಧ್ಯಮಗಳಲ್ಲಿ ವರದಿಯಾದಂತೆ, ಅಗತ್ಯ ದಾಖಲೆಪತ್ರಗಳು ಇಲ್ಲದ ಐದನೇ ಮೂರರಷ್ಟು ಸಂಭಾವ್ಯ ಮತದಾರರಿಗೆ ವಂಶಾವಳಿಯ ಮೂಲಕ ಅವಕಾಶ ನೀಡಲಾಯಿತು. ಅಂತಿಮವಾಗಿ, ಆಧಾರ್ ಸಂಖ್ಯೆಯನ್ನು ಪರಿಗಣಿಸುವಂತೆ ಸ್ವಲ್ಪ ವಿಳಂಬವಾಗಿಯಾದರೂ ಸುಪ್ರೀಂ ಕೋರ್ಟ್ ನೀಡಿದ ಆದೇಶದಿಂದಾಗಿ ಎಸ್‌ಐಆರ್‌ನ ಮತದಾನದ ಅರ್ಹತೆ ರದ್ದುಪಡಿಸುವ ಪ್ರವೃತ್ತಿಗೆ ಕಡಿವಾಣ ಬಿತ್ತು.

ಎರಡನೇ ಮಾನದಂಡ ‘ಸಮಾನತೆ’. ಸಮಾನತೆ ಎಂದರೆ ಎಲ್ಲ ಸಾಮಾಜಿಕ ಗುಂಪುಗಳಿಗೆ ಅದರ ಅರ್ಹ ಜನಸಂಖ್ಯೆಯ ಪ್ರಮಾಣದಲ್ಲಿ ಪ್ರಾತಿನಿಧ್ಯ ಕಲ್ಪಿಸುವುದು. ಮಹಿಳೆಯರು ಮತ್ತು ಮುಸ್ಲಿಮರ ಪ್ರಾತಿನಿಧ್ಯವನ್ನು ಎಸ್‌ಐಆರ್ ಪ್ರತಿಕೂಲವಾಗಿ ಬಾಧಿಸಿದೆ ಎಂಬುದಕ್ಕೆ ಪುರಾವೆಗಳಿವೆ. ಹಾಗಿದ್ದರೂ ದಲಿತರು ಮತ್ತು ಅಲ್ಪಸಂಖ್ಯಾತರಂತಹ ವಿವಿಧ ಶೋಷಿತ ಗುಂಪುಗಳ ಮೇಲೆ ಎಸ್‌ಐಆರ್ ಯಾವ ಪರಿಣಾಮ ಬೀರಿದೆ ಎಂಬುದರ ಕುರಿತು ಗಾಢವಾದ ವಿಶ್ಲೇಷಣೆಯ ಫಲಿತಾಂಶಕ್ಕೆ ನಾವು ಕಾಯಬೇಕಿದೆ.

ಮುಸ್ಲಿಮರಿಗೆ ಸಂಬಂಧಿಸಿ ಈ ಪುರಾವೆಯು ಅಷ್ಟೊಂದು ಸ್ಪಷ್ಟವಾಗಿ ಇಲ್ಲ. ಆದರೆ, ಹೆಸರು ಗುರುತಿಸುವಿಕೆ ಸಾಫ್ಟ್‌ವೇರ್ ನೀಡುವ ವಾಸ್ತವಾಂಶಗಳು ಆಘಾತಕಾರಿಯಾಗಿವೆ: ಮತದಾರರ ಕರಡು ಪಟ್ಟಿಯಿಂದ ಹೆಸರು ಕೈಬಿಡಲಾದ 65 ಲಕ್ಷ ಜನರಲ್ಲಿ ಮುಸ್ಲಿಮರ ಪ್ರಮಾಣವು ಶೇ 24.7ರಷ್ಟಿತ್ತು. ಅಂತಿಮ ಪಟ್ಟಿಯಿಂದ ಕೈಬಿಡಲಾದ 3.66 ಲಕ್ಷ ಜನರಲ್ಲಿ ಮುಸ್ಲಿಮರ ಪ್ರಮಾಣವು ಶೇ 33ರಷ್ಟಿದೆ.

ಮೂರನೇ ಮಾನದಂಡ ‘ನಿಖರತೆ’. ಎಸ್‌ಐಆರ್ ಪೂರ್ವ ಮತ್ತು ಎಸ್‌ಐಆರ್ ನಂತರದ ಪಟ್ಟಿಗಳನ್ನು ಹೋಲಿಸಿ ನಿಖರತೆಯ ಅಂಕಗಳನ್ನು ಕಂಡುಕೊಳ್ಳಲು ಪೂರ್ಣಪ್ರಮಾಣದ ಪರಿಶೀಲನೆಯೊಂದರ ಅಗತ್ಯ ಇದೆ. ಆದರೆ, ಕೆಲವು ಅತ್ಯಂತ ಸಾಮಾನ್ಯ ಲೋಪಗಳ ಪ್ರಾಥಮಿಕ ವಿಶ್ಲೇಷಣೆ ನಡೆಸಿದಾಗ ಎಸ್‌ಐಆರ್ ಮೂಲಕ ಮತದಾರರ ಪಟ್ಟಿಯ ‘ಶುದ್ಧೀಕರಣ’ ಮಾಡಲಾಗಿದೆ ಎಂಬ ಚುನಾವಣಾ ಆಯೋಗದ ಹೇಳಿಕೊಳ್ಳುವಿಕೆಯನ್ನು ಒಪ್ಪುವುದು ಕಷ್ಟ. ಬಿಹಾರದ ಅಂತಿಮ ಮತದಾರರ ಪಟ್ಟಿಯಲ್ಲಿ 24 ಸಾವಿರ ಅರ್ಥಹೀನ ಹೆಸರುಗಳಿವೆ; 5.2 ಲಕ್ಷ ಹೆಸರುಗಳು ಪುನರಾವರ್ತನೆಗೊಂಡಿವೆ; ಆರು ಸಾವಿರಕ್ಕೂ ಹೆಚ್ಚು ಅಮೌಲಿಕ ಲಿಂಗತ್ವ ನಮೂದುಗಳಿವೆ (ಮಹಿಳೆ, ಪುರುಷ ಮತ್ತು ಲೈಂಗಿಕ ಅಲ್ಪಸಂಖ್ಯಾತ ವರ್ಗದಿಂದ ಹೊರಗಿನ ಉಲ್ಲೇಖಗಳು). 51 ಸಾವಿರಕ್ಕೂ ಹೆಚ್ಚು ಅಮೌಲಿಕ ಸಂಬಂಧಗಳಿವೆ (ತಾಯಿ, ತಂದೆ, ಗಂಡ ಇತ್ಯಾದಿ ಅಲ್ಲದೇ ಇರುವ ಸಂಬಂಧಗಳು); ಎರಡು ಲಕ್ಷಕ್ಕೂ ಹೆಚ್ಚು ಮನೆ ಸಂಖ್ಯೆಗಳು ನಮೂದಾಗಿಲ್ಲ ಅಥವಾ ಅಮೌಲಿಕವಾಗಿವೆ (ಮನೆ ಸಂಖ್ಯೆಯ ಕಾಲಂನಲ್ಲಿ 0 ಎಂಬ ನಮೂದು). ಇದು ಶುದ್ಧೀಕರಣದ ಮಾದರಿ ಅಲ್ಲವೇ ಅಲ್ಲ. ಬಿಹಾರದಲ್ಲಿ ಈಗ 10 ಅಥವಾ ಅದಕ್ಕೂ ಹೆಚ್ಚು ಮತದಾರರು ಇರುವ 24 ಲಕ್ಷಕ್ಕೂ ಹೆಚ್ಚು ಮನೆಗಳಿದ್ದು (ಚುನಾವಣಾ ಆಯೋಗವೇ ವ್ಯಾಖ್ಯಾನಿಸಿದಂತೆ ಇದು ಮೇಲ್ನೋಟಕ್ಕೆ ಸಂಶಯಾಸ್ಪದ) ಇಲ್ಲಿ ಒಟ್ಟು 3.2 ಕೋಟಿ ಮತದಾರರಿದ್ದಾರೆ. ಈ ಎಲ್ಲ ವಿಚಾರಗಳಲ್ಲಿ ಕೂಡ ಮತದಾರರ ಕರಡು ಪಟ್ಟಿಗಿಂತ ಅಂತಿಮ ಪಟ್ಟಿ ಇನ್ನೂ ಕೆಟ್ಟದಾಗಿದೆ.

ಬಿಜೆಪಿ ಮುಖಂಡರು ಪದೇ ಪದೇ ಹೇಳಿಕೊಂಡಂತೆ ಮತ್ತು ಆಯೋಗವು ಅನುಮೋದಿಸಿದಂತೆ ವಿದೇಶಿಯರು ಅದರಲ್ಲಿಯೂ ಬಾಂಗ್ಲಾದೇಶಿ ನುಸುಳುಕೋರರು ಮತ್ತು ರೋಹಿಂಗ್ಯಾ ಸಮುದಾಯದವರ ಹೆಸರುಗಳನ್ನು ತೆಗೆದು ಹಾಕುವ ಪ್ರಕ್ರಿಯೆಯು ಏನಾಗಿದೆ? ಕುತೂಹಲಕರವೆಂದರೆ, ಆಯೋಗವು ಎಸ್‌ಐಆರ್ ಕುರಿತು ನಿತ್ಯವೂ ನೀಡುತ್ತಿದ್ದ ಬುಲೆಟಿನ್‌ನಲ್ಲಿ ಹೆಸರು ತೆಗೆದು ಹಾಕಲು ವಿವಿಧ ಕಾರಣಗಳನ್ನು ನೀಡಲಾಗಿದೆ. ಆದರೆ ಎಲ್ಲಿಯೂ ಮನೆಮನೆ ಪರಿಶೀಲನೆಯ ವೇಳೆ ಪತ್ತೆಯಾದ ವಿದೇಶಿಯರ ಸಂಖ್ಯೆಯ ಉಲ್ಲೇಖವೇ ಇರಲಿಲ್ಲ. ಈ ಕಾರಣವನ್ನು ಮುಂದಿಟ್ಟು ಬಿಜೆಪಿ ಒಬ್ಬನೇ ಒಬ್ಬ ಮತದಾರನಿಗೆ ಆಕ್ಷೇಪ ಎತ್ತಿ ದೂರು ಸಲ್ಲಿಸಿಲ್ಲ. ಬಿಹಾರ ಮುಖ್ಯ ಚುನಾವಣಾಧಿಕಾರಿಯವರ ವೆಬ್‌ಸೈಟ್‌ನಲ್ಲಿ ಕರಡು ಮತದಾರರ ಪಟ್ಟಿಗೆ 2.4 ಲಕ್ಷ ಆಕ್ಷೇಪಗಳು ಸಲ್ಲಿಕೆಯಾಗಿವೆ ಎಂಬ ಮಾಹಿತಿ ಇದೆ. ಅವುಗಳ ಪೈಕಿ 1,087 ಪ್ರಕರಣಗಳು (ಶೇ 0.015) ಮಾತ್ರ ಭಾರತದ ಪ್ರಜೆ ಅಲ್ಲ ಎಂಬ ಕಾರಣವನ್ನು ಹೊಂದಿವೆ. ಇವುಗಳಲ್ಲಿ ಬಹುಪಾಲು ಪ್ರಕರಣಗಳು ಸಂದೇಹಾಸ್ಪದವಾಗಿವೆ (ಇವುಗಳಲ್ಲಿ 779 ಪ್ರಕರಣಗಳು ಸ್ವಯಂ ಆಕ್ಷೇಪಗಳಾಗಿವೆ; ವ್ಯಕ್ತಿಯೇ ತಾನು ವಿದೇಶಿ ಎಂದು ಹೇಳಿಕೊಂಡ ಪ್ರಕರಣಗಳು) ಅಥವಾ ನೇಪಾಳಿಯರು (ಇವುಗಳಲ್ಲಿ 226 ಹೆಸರುಗಳು ಮಾತ್ರ ಮುಸ್ಲಿಮರದ್ದಾಗಿವೆ). ಅದೇನೇ ಇದ್ದರೂ ಆಯೋಗವು 390 ಆಕ್ಷೇಪಗಳಿಗೆ ಮಾತ್ರ ಮನ್ನಣೆ ನೀಡಿದ್ದು (ಅವುಗಳಲ್ಲಿ 87 ಮಂದಿ ಮುಸ್ಲಿಮರು) ಅವರ ಹೆಸರನ್ನು ತೆಗೆದುಹಾಕಲಾಗಿದೆ. ತೆಗೆದುಹಾಕಲಾದ ವಿದೇಶಿಯರ ಹೆಸರುಗಳ ಕುರಿತು ಮಾಹಿತಿ ಬಹಿರಂಗಪಡಿಸಲು ಆಯೋಗವು ಉತ್ಸುಕವಾಗಿಲ್ಲ ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ.

ಮತದಾರರ ನೋಂದಣಿಯ ಗುಣಮಟ್ಟದ ಮಾನದಂಡಗಳಿಗೆ ಇನ್ನೂ ಎರಡು ಮಾನದಂಡಗಳನ್ನು ಸೇರಿಸಬಹುದು. ಅವುಗಳೆಂದರೆ, ಪಾರದರ್ಶಕತೆ ಮತ್ತು ನ್ಯಾಯಸಮ್ಮತಿ. ಬೇಸರದ ಸಂಗತಿ ಎಂದರೆ, ಇಡೀ ಪ್ರಕ್ರಿಯೆಯು ಎಲ್ಲಿಯೂ ಪಾರದರ್ಶಕವಾಗಿಯಾಗಲಿ ನ್ಯಾಯಯುತವಾಗಿಯಾಗಲಿ ಇರಲಿಲ್ಲ. ಸಮಗ್ರ ಪರಿಷ್ಕರಣೆಗಾಗಿ 2003ರಲ್ಲಿ ಹೊರಡಿಸಲಾದ ಆದೇಶವನ್ನು ಆಯೋಗವು ಬಹಿರಂಗಪಡಿಸಲಿಲ್ಲ ಅಥವಾ ಅದರ ಪ್ರತಿಗಾಗಿ ಆರ್‌ಟಿಐ ಅಡಿ ಸಲ್ಲಿಸಿದ ಅರ್ಜಿಗೆ ಸ್ಪಂದಿಸಲೂ ಇಲ್ಲ; ಪ್ರಮಾಣೀಕೃತ ಮಾದರಿಯಲ್ಲಿ ಅಂತಿಮ ಪಟ್ಟಿಯನ್ನು ಬಿಡುಗಡೆಮಾಡಲಿಲ್ಲ. ಮಾಹಿತಿ ಬಹಿರಂಗಪಡಿಸುವಿಕೆ ಕಡ್ಡಾಯವೇ ಆಗಿದ್ದರೂ ಆಯೋಗವು ತನ್ನದೇ ನಿಯಮಗಳು, ಪೂರ್ವನಿದರ್ಶನಗಳು ಮತ್ತು ಸ್ವತಃ ತಯಾರಿಸಿದ ಕೈಪಿಡಿಯಲ್ಲಿರುವ ನಿಬಂಧನೆಗಳನ್ನು ಉಲ್ಲಂಘಿಸುತ್ತಲೇ ಹೋಗಿದೆ. ಆಯೋಗವು ಮಾಡಬೇಕಾದ್ದು ಅಥವಾ ಮಾಡುತ್ತಿದ್ದುದಕ್ಕೆ ತದ್ವಿರುದ್ಧವಾದುದನ್ನೇ ಮಾಡಲಾಗಿದೆ – ಪ್ರತಿಯೊಂದು ಮಾಹಿತಿಯನ್ನೂ ಆಯೋಗವು ತಡೆಹಿಡಿದಿದೆ. ಪೂರ್ವ ಸಮಾಲೋಚನೆಯ ಕೊರತೆ, ಅನುಷ್ಠಾನದ ತರಾತುರಿ, ಎಲ್ಲ ನಿರ್ಧಾರಗಳ ಸುತ್ತ ಇದ್ದ ಗೋಪ್ಯತೆ, ವಿರೋಧ ಪಕ್ಷಗಳ ನಾಯಕರಿಗೆ ಸಂಬಂಧಿಸಿ ಆಯೋಗ ತೋರಿದ ಸಂಘರ್ಷಾತ್ಮಕ ನಿಲುವು ಎಲ್ಲವೂ ಆಯೋಗವು ತಟಸ್ಥ ಅಂಪೈರ್ ಅಲ್ಲ ಎಂಬ ಭಾವನೆ ಮೂಡುವುದಕ್ಕೆ ಕೊಡುಗೆ ನೀಡಿವೆ.

ಈಗಿನ ಪ್ರಯೋಗದಿಂದ ಪಾಠಗಳನ್ನು ಕಲಿಯದೆ ಈ ಪ್ರಯೋಗವನ್ನು ಬಿಹಾರದ ಹೊರಗೆ ವಿಸ್ತರಿಸುವ ಪ್ರಯತ್ನವು ಸಾಮೂಹಿಕವಾಗಿ ಮತದಾರರ ಹಕ್ಕು ಕಸಿಯುವ ಪ್ರಕ್ರಿಯೆಯಾಗಬಹುದು. ಏನಿಲ್ಲವೆಂದರೂ ಚುನಾವಣೆಯಲ್ಲಿ ಜನರಿಗೆ ಇರುವ ವಿಶ್ವಾಸವು ನಷ್ಟವಾಗಬಹುದು ಮತ್ತು ಭಾರತದ ಚುನಾವಣಾ ಪ್ರಜಾಪ್ರಭುತ್ವದ ಕುಸಿತವು ತ್ವರಿತಗೊಳ್ಳಬಹುದು.

## ವಾಚಕರ ವಾಣಿ

### ಮಹಾಲೇಖಪಾಲರ ಕಚೇರಿ: ಕನ್ನಡ ಎಲ್ಲಿ?

**ಪಾರ್ಶ್ವವಾಯುಪೀಡಿತ** ನನ್ನ ಮಿತ್ರರೊಬ್ಬರ ಪಿಂಚಣಿ ಬಗ್ಗೆ ವಿಚಾರಿಸಲು ಇತ್ತೀಚೆಗೆ ಮಹಾಲೇಖಪಾಲರ ಕಚೇರಿಗೆ ಹೋಗಿದ್ದೆ. ಅಲ್ಲಿನ ನೌಕರನೊಬ್ಬ ಅಲ್ಲಿಟ್ಟಿದ್ದ ಸಾವಿರಾರು ನೌಕರರ ಸೇವಾಪುಸ್ತಕಗಳನ್ನು ತೋರಿಸಿ, ‘ಏ ಸಬ್ಕೋ ಪಢನಾ ಹೈ’ ಎಂದ. ನಾನು ಕುಸಿದುಬೀಳುವುದಷ್ಟೇ ಬಾಕಿಯಿತ್ತು.

ಮಹಾಲೇಖಪಾಲರ ಕಚೇರಿಯು ಸುಮಾರು ಐದು ಲಕ್ಷ ನೌಕರರ ಪಿಂಚಣಿ, ಭವಿಷ್ಯನಿಧಿ ಮತ್ತು ಇತರ ಉಪಾದಾನಗಳ ಲೆಕ್ಕಪತ್ರ ಇಡುತ್ತದೆ. ವಿಚಿತ್ರವೆಂದರೆ, ಈ ಕಚೇರಿಯ ಶೇ 90ರಷ್ಟು ಸಿಬ್ಬಂದಿಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ! ಆದರೂ, ಇವರು ಪತ್ರಾಂಕಿತ ಅಧಿಕಾರಿಗಳಿಂದ ಹಿಡಿದು ‘ಡಿ’ ಗ್ರೂಪ್ ನೌಕರರ ನಿವೃತ್ತಿ ವೇತನ ಹಾಗೂ ಇತರ ಲೆಕ್ಕಗಳನ್ನು ಮಾಡಿ ಖಜಾನೆ ಇಲಾಖೆಗೆ ಇಂತಿಷ್ಟು ನಿವೃತ್ತಿ ವೇತನ ನೀಡಲು ನಿರ್ದೇಶನ ನೀಡುತ್ತಾರೆ. ಸಾಮಾನ್ಯವಾಗಿ ಸೇವಾಪುಸ್ತಕವನ್ನು ಕನ್ನಡದಲ್ಲೇ ಬರೆಯಲಾಗುತ್ತದೆ. ಕನ್ನಡ ಬಾರದ ಇವರು ಕೈಬರಹದ ಕನ್ನಡ ಅಕ್ಷರಗಳನ್ನು ಓದುತ್ತಾರೆಯೆ? ಇದರಿಂದಲೇ ಹಲವು ನೌಕರರ ಪಿಂಚಣಿ ಸಮಸ್ಯೆ ಇಂದಿಗೂ ಇತ್ಯರ್ಥವಾಗಿಲ್ಲ ಎನಿಸುತ್ತದೆ.

**ಶರಣು ಬಿರಾದಾರ,** ಬೆಂಗಳೂರು

### ಮೊಬೈಲ್ ಮೋಹ; ಬದುಕಿಗೆ ಆಪತ್ತು

**ಬೆಂಗಳೂರಿನಲ್ಲಿ** ಮೊಬೈಲ್ ರಿಚಾರ್ಜ್ ಮಾಡಿಸಲಿಲ್ಲ ಎಂಬ ಕಾರಣಕ್ಕೆ ಪತಿಯ ಮೇಲೆ ಕೋಪಗೊಂಡು ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ (ಪ್ರ.ವಾ., ಅ. 15). ಹಿಂದೆ ಟಿ.ವಿ. ರಿಮೋಟ್‌ಗಾಗಿ ಮನೆಗಳಲ್ಲಿ ಜಗಳ, ಆತ್ಮಹತ್ಯೆಯಂಥ ಪ್ರಕರಣ ವರದಿಯಾಗುತ್ತಿದ್ದವು. ಈಗ ರಿಮೋಟ್ ಸ್ಥಾನವನ್ನು ಮೊಬೈಲ್ ಫೋನ್‌ಗಳು ಆಕ್ರಮಿಸಿಕೊಂಡಿವೆ.

**ಹರೀಶ್ ಎಚ್.ಸಿ.,** ಬೆಂಗಳೂರು

### ಶುದ್ಧ ನೀರು: ಗ್ರಾಮೀಣರಿಗೆ ಮರೀಚಿಕೆ

**ಪ್ರತಿ** ಹಳ್ಳಿಗೂ ಶುದ್ಧ ಕುಡಿಯುವ ನೀರು ಪೂರೈಸಲಾಗುವುದು ಎಂದು ಚುನಾವಣೆಯ ವೇಳೆ ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸುತ್ತವೆ. ಅಧಿಕಾರಕ್ಕೆ ಬಂದ ಬಳಿಕ ಆ ಭರವಸೆಯು ಕಾಗದದಲ್ಲಿಯೇ ಉಳಿಯುತ್ತದೆ. ಗ್ರಾಮ ಪಂಚಾಯಿತಿ ಆಡಳಿತಗಳು ಈ ದಿಸೆಯಲ್ಲಿ ಕ್ರಮ ವಹಿಸುವುದಿಲ್ಲ. ನನ್ನೂರು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಶ್ರೀರಾಮನಹಳ್ಳಿಯಲ್ಲಿ ಶುದ್ಧ ಕುಡಿಯುವ ನೀರಿನ ಅಭಾವದಿಂದ ಜನರು ನಿತ್ಯವೂ ತೊಂದರೆ ಅನುಭವಿಸುತ್ತಿದ್ದಾರೆ. ಅಶುದ್ಧ ನೀರಿನಿಂದ ಅನಾರೋಗ್ಯಕ್ಕೆ ತುತ್ತಾಗುವ ಪರಿಸ್ಥಿತಿ ಉಂಟಾಗಿದೆ. ರಾಜ್ಯದ ಬಹಳಷ್ಟು ಗ್ರಾಮಗಳ ಸ್ಥಿತಿಯು ಇದಕ್ಕಿಂತ ಭಿನ್ನವಾಗಿಲ್ಲ. ಪ್ರತಿ ಹಳ್ಳಿಯಲ್ಲೂ ಶುದ್ಧ ಕುಡಿಯುವ ನೀರು ಪೂರೈಕೆ ಘಟಕ ಸ್ಥಾಪಿಸಬೇಕಿದೆ.

**ಯಶವಂತ್ ಎನ್.,** ಕೊರಟಗೆರೆ

### ದ್ವಿಮುಖ ಹಾಗೂ ಅಸ್ಪಷ್ಟ ಕ್ರೀಡಾನೀತಿ

**ಭಾರತ** ಮತ್ತು ಪಾಕಿಸ್ತಾನದ ಯುವ ಹಾಕಿ ಕ್ರೀಡಾಪಟುಗಳು ಹಸ್ತಲಾಘವ ನೀಡಿ ಕ್ರೀಡಾಸ್ಫೂರ್ತಿ ಮೆರೆದ ಸುದ್ದಿ (ಪ್ರ.ವಾ., ಅ. 15) ಓದಿ ಸಂತೋಷವಾಯಿತು. ಆದರೆ, ಕ್ರಿಕೆಟ್‌ಗೆ ಪ್ರತ್ಯೇಕ ಕ್ರೀಡಾನೀತಿ ಇದೆಯೇ ಎಂಬ ಅನುಮಾನ ಕಾಡುತ್ತಿದೆ. ಏಕೆಂದರೆ, ಕ್ರಿಕೆಟ್‌ನಲ್ಲಿ ಹಣದ ಹುಚ್ಚು ಹೊಳೆ ಇದೆ. ಬೇರೆ ಕ್ರೀಡೆಗಳಲ್ಲಿ ಹಣದ ಹರಿವು ಇಲ್ಲ. ರಾಜಕೀಯ ನೀತಿಯೂ ಅಷ್ಟೇ. ಇಂತಹ ದ್ವಂದ್ವ ನೀತಿ ಅನುಸರಿಸುವುದು ಸರಿಯಲ್ಲ.

**ಚಂದ್ರಶೇಖರ ಎಚ್.ಎಸ್.,** ಬೆಂಗಳೂರು

### ಪೋಷಕರಿಗೊಂದು ವಿವೇಕದ ಪಾಠ

**ನಟ** ಅಮಿತಾಭ್ ಬಚ್ಚನ್ ನಡೆಸಿಕೊಡುವ ‘ಕೌನ್ ಬನೇಗಾ ಕರೋಡ್ ಪತಿ’ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಇಶಿತ್ ಭಟ್ ಎಂಬ ಹತ್ತು ವರ್ಷದ ಬಾಲಕನ ಒರಟು ನಡವಳಿಕೆಯ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಘಟನೆಯು ಪಾಲಕರಿಗೆ ಪಾಠವಂತೂ ಹೌದು. ಗೆಲುವೇ ಬದುಕಿನ ಗುರಿ. ಅದನ್ನು ಪಡೆದುಕೊಳ್ಳಲು ಏನು ಬೇಕಾದರೂ ಮಾಡಬಹುದು, ಹೇಗೆ ಬೇಕಾದರೂ ವರ್ತಿಸಬಹುದು ಎನ್ನುವ ರೀತಿಯಲ್ಲಿ ಇಂದಿನ ಮಕ್ಕಳು ಬೆಳೆಯುತ್ತಿದ್ದಾರೆ ಎನ್ನುವುದು ಕಟುಸತ್ಯ. ಮೊಬೈಲ್ ಬಳಸಲು ಕಲಿತರೆ ತಾವೇ ಅತಿ ಬುದ್ಧಿವಂತರು ಎಂಬ ಭ್ರಮೆ ಮಕ್ಕಳಲ್ಲಿ ಹುಟ್ಟುವಂತೆ ಮಾಡಿದೆ. ಇದರಲ್ಲಿ ಮಕ್ಕಳ ತಪ್ಪಿಗಿಂತ ಪೋಷಕರ ಪಾಲು ಹೆಚ್ಚಿದೆ.

**ಎಚ್.ಎಸ್. ನವೀನ ಕುಮಾರ್,** ಹೊಸದುರ್ಗ

### ರಾಜಕೀಯ ಕಾಲೇಜು ಸ್ವಾಗತಾರ್ಹ

**ಕರ್ನಾಟಕ** ವಿಧಾನಮಂಡಲದಿಂದ ಬೆಂಗಳೂರಿನಲ್ಲಿ ರಾಜಕೀಯ ಕಾಲೇಜು ಪ್ರಾರಂಭಿಸಲು ನಿರ್ಧರಿಸಿರುವುದು ಒಳ್ಳೆಯ ನಿರ್ಧಾರ. ಇಂದಿನ ವಿದ್ಯಾರ್ಥಿಗಳಿಗೆ ರಾಜಕೀಯದ ಅರಿವು ಅವಶ್ಯವಿದೆ. ಈಗಾಗಲೇ, ಈ ದಿಸೆಯಲ್ಲಿ ರಾಜ್ಯ ಸರ್ಕಾರ ಕಾರ್ಯೋನ್ಮುಖವಾಗಿರುವುದು ಮೆಚ್ಚುವಂತದ್ದು.

**ಪ್ರೊ. ಟಿ. ನಾರಾಯಣಪ್ಪ,** ಬೆಂಗಳೂರು

### ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆಯಾಗಲಿ

**ಪಶ್ಚಿಮ** ಬಂಗಾಳದ ದುರ್ಗಾಪುರದ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿರುವುದು ಖಂಡನಾರ್ಹ. ಹೆಣ್ಣುಮಕ್ಕಳು ಅದೆಷ್ಟೋ ಶ್ರಮ ಮತ್ತು ಕನಸುಗಳೊಂದಿಗೆ ವೈದ್ಯಕೀಯ ಶಿಕ್ಷಣ ಕಲಿಕೆಗೆ ಪ್ರವೇಶ ಪಡೆಯುತ್ತಾರೆ. ಇಂತಹ ಅಮಾನವೀಯ ಕೃತ್ಯಗಳು ಹೆಣ್ಣುಮಕ್ಕಳ ಕನಸುಗಳನ್ನು ಹೊಸಕಿ ಹಾಕುತ್ತವೆ. ಸಮಾಜ ನೈತಿಕ ಅಧಃಪತನದ ಹಾದಿ ಹಿಡಿದಿರುವುದಕ್ಕೆ ಇಂತಹ ಘಟನೆಗಳು ಸಾಕ್ಷಿಯಾಗಿವೆ. ಕರ್ನಾಟಕದಲ್ಲಿಯೂ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಘಟನೆಗಳು ಹೆಚ್ಚುತ್ತಿವೆ. ತಪ್ಪಿತಸ್ಥರಿಗೆ ತ್ವರಿತವಾಗಿ ಶಿಕ್ಷೆ ವಿಧಿಸಬೇಕಿದೆ.

**ದಿವ್ಯ ಬಿ.ಕೆ.,** ತುಮಕೂರು

## ಚುರುಮುರಿ

### ಸರ್ಕಾರದ ಕೆಲಸ...

● ಗುರು ಪಿ.ಎಸ್.

**‘ಬೆಳೆದಿದೆ** ನೋಡ ಬೆಂಗಳೂರು ನಗರ...’ ದಶಕಗಳ ಹಿಂದಿನ ಹಳೆಯ ಸಿನಿಮಾ ಹಾಡು ಗುನುಗುತ್ತ ಬಂದರು ಜಿಬಿಎ ಅಧಿಕಾರಿ ವಿಜಿ.

‘ತುಂಬಾ ದಿನಗಳಾಯ್ತು ಸಾರ್, ಆಫೀಸ್ ಹತ್ತಿರ ಕಾಣಲೇ ಇಲ್ಲ ನೀವು’ ಎಂದ ಟೀ ಅಂಗಡಿ ಮಾಲೀಕ ಮುದ್ದಣ್ಣ.

‘ಕೆಲಸ ಮುದ್ದಣ್ಣ ಕೆಲಸ, ಬಿಡುವೇ ಇಲ್ಲ’.

‘ತುಂಬಾ ಕೆಲಸ ಅಂತೀರಿ, ಆದರೆ, ಆಫೀಸಲ್ಲೇ ಇರಲ್ಲ ನೀವು. ಜನ ಮಾತ್ರ ಸರ್ಕಾರಿ ಕಚೇರಿಗಳಿಗೆ ಅಲೆದಾಡಿ ಸುಸ್ತಾಗಿ ನಿಮಗೆ ಮತ್ತು ಸರ್ಕಾರಕ್ಕೆ ಶಾಪ ಹಾಕಿ ಹೋಗ್ತಿದ್ದಾರೆ’ ಹೆದರುತ್ತಲೇ ಹೇಳಿದ ಮುದ್ದಣ್ಣ.

‘ನಾವೇನ್ ಮಾಡ್ತಿದೀವಿ ನಮಗೇ ಗೊತ್ತಾಗ್ತಿಲ್ಲ, ಇನ್ನು ನಿನಗೇನ್ ಗೊತ್ತಾಗುತ್ತೆ ಹೇಳು’.

‘ಬಿ ಖಾತಾದಲ್ಲಿ ಮನೆ ಕಟ್ಟೋರಿಗೆ ವಿದ್ಯುತ್, ನೀರು ಕೊಡ್ತಿಲ್ವಂತಲ್ಲ ಸರ್ ನೀವು. ‘ಒಸಿ’ ಬೇಡ ಅಂತ ಪೇಪರ್‌ನಲ್ಲಿ ಬರುತ್ತೆ, ಆದರೆ ನಕ್ಷೆ ಬೇಕು ಅಂತ ನಿಮ್ಮ ಸಿಬ್ಬಂದಿ ಕೇಳ್ತಾರೆ, ಜನ ಏನ್ ಮಾಡಬೇಕು’.

‘ನೋಡು, ಪೇಪರ್‌ನಲ್ಲಿ ಬರಲಿ ಅಂತ ಮಿನಿಸ್ಟರ್ ಸಾಹೇಬ್ರು ಏನೋ ಹೇಳ್ತಿರ್ತಾರೆ, ಒಳಗಡೆ ಬೇರೆಯೇ ಇರುತ್ತೆ, ಕೆಲಸ ಆಗ್ತಿದೆ ಅಂತ ಅನಿಸಬೇಕು, ಆದರೆ ಕೆಲಸ ಆಗಬಾರದು ಅಷ್ಟೇ’ ಮಾರ್ಮಿಕವಾಗಿ ಹೇಳಿದರು ಆಫೀಸರ್.

‘ಈಗ ಜಿಬಿಎ ಕೆಲಸಗಳಾದರೂ ಆಗ್ತಿವೆಯಾ ಸರ್’.

‘ಇಲ್ಲ. ನಮ್ಮ ಸಿಬ್ಬಂದಿ ಎಲ್ಲ ಈಗ ಜಾತಿ ಸಮೀಕ್ಷೆಯಲ್ಲಿ ಬ್ಯುಸಿ ಇದ್ದಾರೆ’.

‘ಸಮೀಕ್ಷೆನಾದರೂ ಸರಿಯಾಗಿ ಆಗ್ತಿದೆಯಾ ಸರ್’.

‘ನೀನೇನಯ್ಯಾ ಒಳ್ಳೆ ಇ.ಡಿ. ಆಫೀಸರ್ ಥರ ಪ್ರಶ್ನೆ ಮೇಲೆ ಪ್ರಶ್ನೆ ಕೇಳ್ತೀಯ, ಒಂದ್ ಟೀ ಕೊಡು, ನಾನು ಹೊರಡಬೇಕು’.

‘ಎಲ್ಲಿಗೆ ಸರ್?’

‘ಲಾಲ್‌ಬಾಗ್‌ಗೆ ಹೋಗಬೇಕು ಕಣಯ್ಯ. ಅಲ್ಲಿ ಸುರಂಗ ಕೊರೆದು ದಶಪಥ ರಸ್ತೆ ಮಾಡೋದಕ್ಕೆ ಎಷ್ಟು ಸಾವಿರ ಕೋಟಿ ಬೇಕಾಗುತ್ತೆ ಅಂತ ರಿಪೋರ್ಟ್ ಕೊಡೋದಕ್ಕೆ ಹೇಳಿದ್ದಾರೆ ಮಿನಿಸ್ಟರ್ ಸಾಹೇಬ್ರು’ ಎಂದು ಟೀ ಹೀರಿ ಹೊರಟರು ಆಫೀಸರ್.

## ಸಂಗತ

# ಸ್ತ್ರೀ ಶೋಷಣೆ: ಇದು ಮುಗಿಯದ ಕಥೆಯೆ?

**ಲಿಂಗಸಮಾನತೆಯ ಜಾಗೃತಿ ಪ್ರಯತ್ನಗಳ ನಡುವೆಯೂ ಹೆಣ್ಣಿನ ಶೋಷಣೆ ಮುಂದುವರಿದಿದೆ ಹಾಗೂ ಸಾರ್ವಜನಿಕ ಪ್ರದರ್ಶನದ ರೂಪ ತಳೆದಿದೆ.**

● ರಾಜಕುಮಾರ ಕುಲಕರ್ಣಿ

**ಕ್ರಿಕೆಟಿಗ** ರವೀಂದ್ರ ಜಡೇಜಾ ಅವರ ಪತ್ನಿ ಗುಜರಾತ್ ವಿಧಾನಸಭೆಯ ಶಾಸಕಿ. ಅವರು ಕ್ರಿಕೆಟ್ ಮೈದಾನದಲ್ಲಿ ತಮ್ಮ ಪತಿಯ ಪಾದಮುಟ್ಟಿ ನಮಸ್ಕರಿಸುತ್ತಿರುವ ಫೋಟೊ ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟವಾಗಿ ಗಮನ ಸೆಳೆದಿದೆ. ಮತ್ತೊಬ್ಬ ಕ್ರಿಕೆಟಿಗರಿಗೆ ಸಂಬಂಧಿಸಿದ ಇದೇ ರೀತಿಯ ಫೋಟೊ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಗೊಂಡಿದ್ದು, ಆ ಚಿತ್ರ ‘ಎ.ಐ’ ಸೃಷ್ಟಿ ಎನ್ನುವುದು ಖಚಿತವಾಗಿದೆ. ಗಂಡಿನ ಪಾದಗಳಿಗೆ ಹೆಣ್ಣು ನಮಸ್ಕರಿಸುವ ನಡವಳಿಕೆ ನಮ್ಮ ಸಮಾಜದಲ್ಲಿ ಅಸಹಜವೇನಲ್ಲ. ರವೀಂದ್ರ ಜಡೇಜಾ ಹಾಗೂ ಪತ್ನಿಯ ಚಿತ್ರಕ್ಕೆ ಸಂಬಂಧಿಸಿದಂತೆ ಪರ, ವಿರೋಧದ ಸಾವಿರಾರು ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಆಕ್ಷೇಪ ವ್ಯಕ್ತಪಡಿಸಿದವರ ಪ್ರತಿಕ್ರಿಯೆಗಳಲ್ಲಿ ‘ಇದೊಂದು ವಿಧದ ಸ್ತ್ರೀ ಶೋಷಣೆ’ ಎನ್ನುವ ಪ್ರತಿರೋಧದ ಧ್ವನಿ ಅಡಕವಾಗಿದೆ.

ಸಾವಿರಾರು ಜನ ಸೇರಿರುವ ಆಟದ ಮೈದಾನದಲ್ಲಿ ಓರ್ವ ಮಹಿಳೆ, ಅದರಲ್ಲೂ ಶಾಸಕಿ, ತನ್ನ ಪತಿಯ ಕಾಲುಮುಟ್ಟಿ ನಮಸ್ಕರಿಸುವ ವರ್ತನೆ ನಿಜಕ್ಕೂ ಆಕ್ಷೇಪಾರ್ಹವಾದದ್ದು. ವಿದ್ಯಾವಂತ ಹಾಗೂ ಜನಪ್ರಿಯ ಮಹಿಳೆಯಿಂದ ವ್ಯಕ್ತವಾಗುವ ಇಂತಹ ವರ್ತನೆ, ಮಹಿಳಾ ಶೋಷಣೆಯ ಹಲವು ಅನಿಷ್ಟ ಪದ್ಧತಿಗಳ ಹುಟ್ಟಿಗೆ ಪ್ರೇರಣೆಯಾಗಬಹುದು. ಮೆಚ್ಚುಗೆಯನ್ನು ವ್ಯಕ್ತಪಡಿಸಲು ಅಪ್ಪುಗೆ, ಹಣೆಗೊಂದು ಮುತ್ತು, ಬೆನ್ನುತಟ್ಟುವಿಕೆ– ಹೀಗೆ ಹಲವು ದಾರಿಗಳಿದ್ದವು. ಮಹಿಳೆ ಇನ್ನೂ ಪುರುಷನ ಅಡಿಯಾಳು ಎನ್ನುವುದನ್ನು ಸಂಕೇತಿಸುವಂತೆ ಈ ವರ್ತನೆ ಬಿಂಬಿತವಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾಕಷ್ಟು ಪ್ರಗತಿಯಾಗಿರುವ ದಿನಗಳಲ್ಲೂ ಮಹಿಳೆಯರ ಕುರಿತು ಜನರ ಕರ್ಮಠ ಮನೋಭಾವ ಬದಲಾಗಿಲ್ಲ. ಕೆಲವು ಸಮುದಾಯಗಳಲ್ಲಿ ಮಹಿಳೆಯರಿಗೆ ದೇವರನ್ನು ಪೂಜಿಸುವ ಹಕ್ಕಿಲ್ಲ. ಅವರು ದೇವರ ವಿಗ್ರಹಗಳನ್ನು ಮತ್ತು ಪಟಗಳನ್ನು ಸ್ಪರ್ಶಿಸುವಂತಿಲ್ಲ. ಆದರೆ, ಮಹಿಳೆಯರು ಮಾಡುವ ಅಡುಗೆ ನೈವೇದ್ಯವಾಗಿ ದೇವರಿಗೆ ಸಮರ್ಪಣೆಯಾಗುತ್ತದೆ. ದೈವಪ್ರಜ್ಞೆಯಲ್ಲೂ ಮಹಿಳೆಯರನ್ನು ಅಡುಗೆ ಮನೆಗೆ ಸೀಮಿತಗೊಳಿಸುವ ಹುನ್ನಾರವಿದು. ಮುಟ್ಟಾದ ಮಹಿಳೆಯರಂತೂ ಆ ಅವಧಿಯಲ್ಲಿ ಮನೆಯಲ್ಲೇ ಬಹಿಷ್ಕೃತ ಬಾಳನ್ನು ಬದುಕಬೇಕು.

ಪತಿಯ ಆಯುಷ್ಯದ ವೃದ್ಧಿಗಾಗಿ ಕರ್ವಾ ಚೌತ್ ಮತ್ತು ಭೀಮನ ಅಮಾವಾಸ್ಯೆಗಳಿವೆ. ಮಹಿಳೆಯರು ಪತಿಯ ಶ್ರೇಯೋಭಿವೃದ್ಧಿಗಾಗಿ ಉಪವಾಸ ವ್ರತ ಆಚರಿಸುತ್ತಾರೆ. ಯುವತಿಯರು ಭವಿಷ್ಯದಲ್ಲಿ ಉತ್ತಮ ಪತಿ ದೊರೆಯಲೆಂದು ಗಿಡಗಳಿಗೆ ಸೀರೆ, ಬಳೆತೊಡಿಸಿ ಸುತ್ತು ಹಾಕುತ್ತಾರೆ. ಬಾಲ್ಯದಿಂದಲೇ ಮನೆಗಳಲ್ಲಿ ಹೆಣ್ಣುಮಕ್ಕಳಿಗೆ ಸೀತೆ, ಸಾವಿತ್ರಿಯರ ಕಥೆಗಳನ್ನು ಬೋಧಿಸಲಾಗುತ್ತದೆ. ಆದರೆ, ಪತ್ನಿಯ ಒಳಿತಿಗಾಗಿ ಪತಿ ಉಪವಾಸ ಮಾಡಿದ ಉದಾಹರಣೆಗಳಿಲ್ಲ.

ವಿಧವೆಯರು ಮಂಗಳಸೂತ್ರ, ಬಳೆ ಮತ್ತು ಕಾಲುಂಗುರ ಧರಿಸುವುದನ್ನು ತ್ಯಜಿಸಬೇಕು, ಹೂ ಮುಡಿದುಕೊಳ್ಳಬಾರದು ಎನ್ನುವ ಕಟ್ಟುಪಾಡುಗಳಿವೆ. ವಿಪರ್ಯಾಸ ಎಂದರೆ, ಯಾವುದೇ ಕಟ್ಟುಪಾಡು ವಿಧುರರಿಗಿರುವುದಿಲ್ಲ. ತಮ್ಮ ಕಾದಂಬರಿಗಳಲ್ಲಿ ಸ್ತ್ರೀ ಶೋಷಣೆ ಕುರಿತಾದ ಚರ್ಚೆಯನ್ನು ಮುನ್ನೆಲೆಗೆ ತಂದ ಗೀತಾ ನಾಗಭೂಷಣ ಅವರು, ತಮ್ಮ ಪತಿಯ ಮರಣಾನಂತರವೂ ತಾಳಿ, ಕುಂಕುಮ ಮತ್ತು ಕಾಲುಂಗುರ ಧರಿಸುತ್ತಿದ್ದರು. ಹೆಣ್ಣಿಗೆ ಜನ್ಮದತ್ತವಾಗಿ ಪ್ರಾಪ್ತವಾದ ಅಲಂಕಾರ ಸಾಧನಗಳಿವು ಎನ್ನುತ್ತಿದ್ದರು. ಅವರ ನಡೆ ಅನೇಕ ಮಹಿಳೆಯರಿಗೆ ಮಾದರಿಯಾಯಿತು.

ರಾಜಕೀಯದಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಇನ್ನೂ ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಪ್ರತಿನಿಧಿಗಳಿದ್ದರೂ ಅದು ನೆಪಕ್ಕೆ ಮಾತ್ರ ಎನ್ನುವಂತಾಗಿದೆ. ಚುನಾಯಿತ ಮಹಿಳೆಯರ ಪರವಾಗಿ ಕುಟುಂಬದ ಪುರುಷ ಸದಸ್ಯರೇ ಅಧಿಕಾರ ಚಲಾಯಿಸುವುದು ಸಾಮಾನ್ಯವಾಗಿದೆ.

ಕುಟುಂಬ ವ್ಯವಸ್ಥೆಯ ಗೋಡೆಗಳ ನಡುವಿನಿಂದಲೇ ಸ್ತ್ರೀ ಶೋಷಣೆ ಶುರುವಾಗುತ್ತದೆ. ಗಂಡುಮಕ್ಕಳೇ ಜನಿಸಬೇಕೆಂದು ಅಪೇಕ್ಷಿಸುವ ಪಾಲಕರ ಸಂಖ್ಯೆ ಹೇರಳವಾಗಿದೆ. ಮಕ್ಕಳ ಶಿಕ್ಷಣದ ವಿಷಯದಲ್ಲಿ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳೆಂಬ ತಾರತಮ್ಯವಿದೆ. ಹೆಣ್ಣುಭ್ರೂಣ ಹತ್ಯೆ ಅವ್ಯಾಹತವಾಗಿ ಮುಂದುವರಿದಿದೆ.

ಭಾಷೆಯ ಭೇದವಿಲ್ಲದಂತೆ ಭಾರತೀಯ ಸಿನಿಮಾಗಳಲ್ಲಿ ಪುರುಷ ಪ್ರಧಾನ ಸಿನಿಮಾಗಳು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣವಾಗುತ್ತಿವೆ. ಮಹಿಳಾ ಪಾತ್ರಗಳು ಹಾಡು, ನೃತ್ಯ, ಅತ್ಯಾಚಾರದಂತಹ ದೃಶ್ಯಗಳಲ್ಲಿ ಅಂಗಾಂಗ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿವೆ. ಕರ್ವಾ ಚೌತ್ ಆಚರಣೆಯ ದೃಶ್ಯಗಳನ್ನು ಸಿನಿಮಾಗಳಲ್ಲಿ ಅತ್ಯಂತ ಆಕರ್ಷಣೀಯವಾಗಿ ತೋರಿಸಲಾಗುತ್ತಿದೆ. ಧಾರಾವಾಹಿಗಳಲ್ಲಿ ಸ್ತ್ರೀ ಪಾತ್ರಗಳನ್ನು ಬಾಲಿಶವಾಗಿ ಚಿತ್ರಿಸಲಾಗುತ್ತಿದೆ. ಹಾದರಕ್ಕೆ ಎಡೆಮಾಡಿಕೊಡುವ ಮತ್ತು ಕುಟುಂಬಗಳನ್ನು ಒಡೆಯುವ ಖಳನಾಯಕಿಯರಂತೆ ಮಹಿಳಾ ಪಾತ್ರಗಳನ್ನು ತೋರಿಸುವುದರಲ್ಲೇ ಸಿನಿಮಾ ಮತ್ತು ಧಾರಾವಾಹಿಗಳ ನಿರ್ದೇಶಕರು ತಮ್ಮ ಜಾಣ್ಮೆ ಹಾಗೂ ಪ್ರೌಢಿಮೆ ಮೆರೆಯುತ್ತಿದ್ದಾರೆ.

1899ರಲ್ಲಿ ಪ್ರಕಟವಾದ ಗುಲ್ವಾಡಿ ವೆಂಕಟರಾವ್ ಅವರ ‘ಇಂದಿರಾಬಾಯಿ’ ಕಾದಂಬರಿಯಲ್ಲಿ ವಿಧವಾ ವಿವಾಹಕ್ಕೆ ಆದ್ಯತೆ ನೀಡಲಾಗಿದೆ. ಸನಾತನ ಸಂಪ್ರದಾಯ ಕಟ್ಟುನಿಟ್ಟಾಗಿದ್ದ ಕಾಲದಲ್ಲಿ ವಿಧವಾ ವಿವಾಹ ಪ್ರಸ್ತಾಪಿಸಿದ್ದು ಕಾದಂಬರಿಯ ಹೆಗ್ಗಳಿಕೆ. ಇಂದಿರಾಬಾಯಿ ಪಾತ್ರದ ಮೂಲಕ ಕಾದಂಬರಿಕಾರರು ಕೇಳುವ ಪ್ರಶ್ನೆ ಹೀಗಿದೆ: ‘ಸ್ತ್ರೀಯು ಪತಿಯ ಮರಣಾನಂತರ ತಲೆಬೋಳಿಸಿ, ರೂಪ ವಿರೂಪ ಮಾಡಿ ಸನ್ಯಾಸದಲ್ಲಿರಬೇಕಂತೆ. ಪುರುಷನು ಪತ್ನಿಯ ಮರಣಾನಂತರ ತಲೆ, ಗಡ್ಡ, ಮೀಸೆ ಬೋಳಿಸಿ ಏಕೆ ಸನ್ಯಾಸಿಯಾಗಬಾರದು?’. ಒಂದೇ ಕಾಲಾವಧಿಯಲ್ಲಿ ಬದುಕುತ್ತಿರುವ ಎರಡು ಜೀವಗಳ ನಡುವಣ ತಾರತಮ್ಯಕ್ಕೆ ಇಂದಿರಾಬಾಯಿ ಮಾತು ದೃಷ್ಟಾಂತವಾಗಿದೆ. ಶತಮಾನ ಕಳೆದರೂ ಸ್ತ್ರೀ ಶೋಷಣೆಯ ಈ ಪ್ರಶ್ನೆ ಅನುರಣಿಸುತ್ತಲೇ ಇದೆ.

# ಸುರಂಗ ರಸ್ತೆ ಜನರಿಗೆ ಆತಂಕ

ಬೆಂಗಳೂರಿನ ಸಂಚಾರ ದಟ್ಟಣೆ ಉದ್ಯಮಿಗಳು ಮತ್ತು ರಾಜ್ಯ ಸರ್ಕಾರದ ನಡುವೆ ವಾಗ್ವಾದಕ್ಕೆ ಕಾರಣವಾಗಿ ವಿವಾದ ಸೃಷ್ಟಿಸಿರುವಂತೆಯೇ, ಸಂಚಾರ ದಟ್ಟಣೆಗೆ ಪರಿಹಾರವಾಗಿ ಸರ್ಕಾರವು ರೂಪಿಸಿರುವ ಸುರಂಗ ಮಾರ್ಗ ಯೋಜನೆಯೂ ವಿವಾದಕ್ಕೆ ಕಾರಣವಾಗಿದೆ. 16.7 ಕಿ.ಮೀ.ಉದ್ದದ ಉತ್ತರ– ದಕ್ಷಿಣ ಕಾರಿಡಾರ್‌ನ ವಿಸ್ತೃತ ಯೋಜನಾ ವರದಿಯಲ್ಲಿನ (ಡಿಪಿಆರ್) ವಿವರಗಳು ಸಾರ್ವಜನಿಕರು, ಜನಪ್ರತಿನಿಧಿಗಳ ಆತಂಕಕ್ಕೆ ಕಾರಣವಾಗಿದೆ. ಯೋಜನೆಯ ಬಗ್ಗೆ ಅಧ್ಯಯನ ಮಾಡಲು ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿಯು ಉದ್ದೇಶಿತ ಯೋಜನೆಯ ರೂಪುರೇಷೆಯಲ್ಲಿ ಅನೇಕ ಲೋಪಗಳಿರುವುದನ್ನು ಬೊಟ್ಟು ಮಾಡಿದೆ. ಮುಖ್ಯವಾಗಿ, ನಗರದ ಜೀವನಾಡಿಯಾದ ಲಾಲ್‌ಬಾಗ್‌ಗೆ ಯೋಜನೆಯಿಂದ ಕಂಟಕವಾಗುವ ಸಾಧ್ಯತೆ ಇದೆ ಎಂದು ಸಮಿತಿ ಹೇಳಿದೆ. ಆದರೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸುರಂಗ ರಸ್ತೆ ಅಗತ್ಯ ಎಂದು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ

● ಬಿ.ವಿ. ಶ್ರೀನಾಥ್, ಸೂರ್ಯನಾರಾಯಣ ವಿ.

ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಸುರಂಗ ರಸ್ತೆ ನಿರ್ಮಾಣ ಯೋಜನೆ ರಾಜಧಾನಿಯ ಜನರ ಆತಂಕಕ್ಕೆ ಕಾರಣವಾಗಿದೆ. ಲಾಲ್‌ಬಾಗ್‌ನಂತಹ ಪರಿಸರ ಸೂಕ್ಷ್ಮ ಪ್ರದೇಶದ ಮೇಲೆ ಈ ಯೋಜನೆಯು ಪರಿಣಾಮ ಬೀರುವ ಕಳವಳವೂ ವ್ಯಕ್ತವಾಗಿದೆ.

ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್‌ವರೆಗಿನ 16.7 ಕಿ.ಮೀ ಉದ್ದದ ಉತ್ತರ–ದಕ್ಷಿಣ ಕಾರಿಡಾರ್ ಹಾಗೂ ಕೆ.ಆರ್.ಪುರದಿಂದ ನಾಯಂಡಹಳ್ಳಿವರೆಗಿನ 28.18 ಕಿ.ಮೀ ಉದ್ದದ ಪೂರ್ವ–ಪಶ್ಚಿಮ ಕಾರಿಡಾರ್‌ನ ಪೈಕಿ ಉತ್ತರ–ದಕ್ಷಿಣ ಸುರಂಗ ರಸ್ತೆ ಯೋಜನೆಯನ್ನು ಸರ್ಕಾರ ಆದ್ಯತೆ ಮೇರೆಗೆ ಕೈಗೆತ್ತಿಕೊಂಡಿದೆ.

ಹಿಂದಿನ ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯು (ಬಿಬಿಎಂಪಿ) ಯೋಜನೆಯ ವಿಸ್ತೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ₹9.5 ಕೋಟಿ ವೆಚ್ಚದಲ್ಲಿ ಸಿದ್ಧಪಡಿಸಲಾಗಿರುವ ಈ ಡಿಪಿಆರ್‌ಗೆ ವಿವಿಧ ವಲಯಗಳಿಂದ ಆಕ್ಷೇಪ ವ್ಯಕ್ತವಾಗಿದ್ದರಿಂದ ಅದರ ಅಧ್ಯಯನಕ್ಕಾಗಿ ಸರ್ಕಾರ ತಜ್ಞರ ಸಮಿತಿ ನೇಮಿಸಿತ್ತು.

ಬಿಎಂಆರ್‌ಸಿಎಲ್ ಕಾರ್ಯನಿರ್ವಾಹಕ ನಿರ್ದೇಶಕರಾದ ಸಿದ್ದನಗೌಡ ಹೆಗ್ಗರೆಡ್ಡಿ ನೇತೃತ್ವದ ಸಮಿತಿಯು ಡಿಪಿಆರ್‌ನಲ್ಲಿ 121 ಲೋಪಗಳಿರುವುದನ್ನು ಗುರುತಿಸಿದೆ. ಅದು ಡಿಪಿಆರ್‌ನಲ್ಲಿ ಉಲ್ಲೇಖಿಸಲಾದ ಪ್ರದೇಶಗಳಿಗೆ ಭೇಟಿ ನೀಡಿ, ಭೂಮಿಯ ಲಭ್ಯತೆ, ಪ್ರವೇಶ ಮತ್ತು ನಿರ್ಗಮನ ದ್ವಾರಗಳು, ಶಾಫ್ಟ್ (ಪ್ರವೇಶ ಮತ್ತು ನಿರ್ಗಮನದ ಸೌಲಭ್ಯಗಳ ತಾಣ) ಬರುವ ಸ್ಥಳ ಇತ್ಯಾದಿಗಳನ್ನು ಪರಿಶೀಲನೆ ಮಾಡಿ ಹಲವು ಪ್ರಶ್ನೆಗಳನ್ನು ಎತ್ತಿದೆ.

## ಸಮಿತಿಯ ಮುಖ್ಯ ಆಕ್ಷೇಪಗಳು

- ಸುರಂಗ ರಸ್ತೆಯು ಬಹುತೇಕ ಮೆಟ್ರೊ ಮಾರ್ಗಕ್ಕೆ ಪರ್ಯಾಯವಾಗಿಯೇ ಸಾಗುತ್ತದೆ. ಲಾಲ್‌ಬಾಗ್‌ನಲ್ಲಿ ಶಾಫ್ಟ್ ನಿರ್ಮಾಣಕ್ಕೆ ಉದ್ದೇಶಿಸಲಾಗಿದ್ದು, ಅದು ಸೂಕ್ಷ್ಮ ಪರಿಸರ ತಾಣವಾಗಿದೆ
- ಪ್ರವೇಶ ಮತ್ತು ನಿರ್ಗಮನದ ರ್‍ಯಾಂಪ್‌ಗಳಲ್ಲಿ ಸಂಚಾರ ದಟ್ಟಣೆಯು ಹೆಚ್ಚಾಗಲಿದ್ದು, ಅದನ್ನು ಸೂಕ್ತವಾಗಿ ನಿರ್ವಹಿಸಬೇಕು. ದಟ್ಟಣೆ ನಿಯಂತ್ರಣಕ್ಕೆ ಡಿಪಿಆರ್‌ನಲ್ಲಿ ವಿವರವಾದ ಕಾರ್ಯತಂತ್ರ ಇಲ್ಲ
- ಅರಮನೆ ಮೈದಾನ/ಮೇಖ್ರಿ ವೃತ್ತದ ಪ್ರವೇಶ ಮತ್ತು ನಿರ್ಗಮನ ರ್‍ಯಾಂಪ್‌ನಲ್ಲಿ ಏಕಪಥದ ರಸ್ತೆ ಯೋಜಿಸಲಾಗಿದ್ದು, ಅಲ್ಲಿ ಕನಿಷ್ಠ ಎರಡು ಪಥಗಳ ರಸ್ತೆ ಅಗತ್ಯವಿದೆ
- ಯೋಜನೆಯಲ್ಲಿ ಲಂಬ ವಿನ್ಯಾಸದ ಚರಂಡಿಗಳನ್ನು ಪ್ರಸ್ತಾವಿಸಲಾಗಿದ್ದು, ಅವು ನೀರಿನ ಹರಿವಿಗೆ ಪೂರಕವಾಗಿರುವುದಿಲ್ಲ. ಹೀಗಾಗಿ ಚರಂಡಿ ವ್ಯವಸ್ಥೆಯ ಬಗ್ಗೆ ಸೂಕ್ತವಾದ ಹಾಗೂ ವಿವರವಾದ ರೂಪುರೇಷೆ ತಯಾರಿಸುವ ಅಗತ್ಯವಿದೆ
- ಹೆಬ್ಬಾಳ ಕೆರೆಯ ಕಾಲುವೆ ಮಾರ್ಗವನ್ನು ಯು–ಟರ್ನ್ ತೆಗೆದುಕೊಳ್ಳುವಂತೆ ಬದಲಾಯಿಸಲು ಪ್ರಸ್ತಾವಿಸಲಾಗಿದೆ. ಆದರೆ, ಕಾಲುವೆಯ ಮಾರ್ಗ ಬದಲಾವಣೆಗೆ ಸಂಬಂಧಿಸಿದಂತೆ ವಿವರವಾದ ಅಧ್ಯಯನ ನಡೆದಿರುವುದು ಕಂಡುಬರುವುದಿಲ್ಲ
- ನಾಲ್ಕು ಕಡೆಗಳಲ್ಲಿ ಮಾತ್ರ ಭೂಗರ್ಭದಲ್ಲಿ ನೀರಿನ ಲಭ್ಯತೆಯ ಪರೀಕ್ಷೆ ಮಾಡಲಾಗಿದೆ. ಈ ಸಂಬಂಧ ಇನ್ನೂ ಹೆಚ್ಚಿನ ಎಲೆಕ್ಟ್ರೋ ರೆಸಿಸ್ಟಿವಿಟಿ ಟೋಮೊಗ್ರಫಿ (ಇಆರ್‌ಟಿ) ಪರೀಕ್ಷೆಗಳನ್ನು ಮಾಡುವ ಅಗತ್ಯವಿದೆ
- ಮಾನದಂಡಗಳ ಪ್ರಕಾರ, ಮುಂದಿನ 25 ವರ್ಷಗಳಲ್ಲಿ ಹೆಚ್ಚಾಗಬಹುದಾದ ಸಂಚಾರ ದಟ್ಟಣೆಯ ಆಧಾರದಲ್ಲಿ ಸುರಂಗ ರಸ್ತೆಯಲ್ಲಿ ಪಥಗಳನ್ನು ನಿರ್ಧರಿಸಬೇಕು. ಆದರೆ, ಡಿಪಿಆರ್‌ನಲ್ಲಿ ಯೋಜನೆ ಆರಂಭವಾದ ನಂತರದ ಕೇವಲ ಹತ್ತು ವರ್ಷಗಳ ದಟ್ಟಣೆಯನ್ನು ಪರಿಗಣಿಸಲಾಗಿದೆ. ಪ್ರಸ್ತಾವಿತ ಯೋಜನೆಯು 3 + 3 ಪಥಗಳಾಗಿರುವುದರಿಂದ ಕಾಲಾವಧಿಯನ್ನು 25ಕ್ಕೆ ಏರಿಸಬೇಕು
- ಡಿಪಿಆರ್‌ನಲ್ಲಿ ಸಂಚಾರ ದಟ್ಟಣೆ ಹೆಚ್ಚಿರುವ ಸಮಯದ ನಿಖರ ದತ್ತಾಂಶ ಮತ್ತು ಭವಿಷ್ಯದಲ್ಲಿ ಅದು ಎಷ್ಟರ ಮಟ್ಟಿಗೆ ಹೆಚ್ಚಾಗಲಿದೆ ಎನ್ನುವುದರ ಮಾಹಿತಿಯ ಕೊರತೆ ಇದೆ
- ಪ್ರವೇಶ ಮತ್ತು ನಿರ್ಗಮನ ದ್ವಾರಗಳ ನಿರ್ಮಾಣ, ಶಾಫ್ಟ್ ನಿರ್ಮಾಣ, ಸುರಂಗ ನಿರ್ಮಾಣ, ಹೆಚ್ಚುವರಿ ಪಥಗಳ ನಿರ್ಮಾಣದ ಬಗ್ಗೆ ವಿವರವಾದ ಯೋಜನೆಯ ಕೊರತೆ
- ಯೋಜನೆ ಪೂರ್ಣಗೊಳಿಸಲು ಕಡಿಮೆ ಕಾಲಾವಧಿ ನಿಗದಿಪಡಿಸಲಾಗಿದ್ದು, ಭೂಸ್ವಾಧೀನ, ಸಂಚಾರ ಬದಲಾವಣೆ, ಮರಗಳನ್ನು ಕಡಿಯುವುದು ಇತ್ಯಾದಿ ಅಂಶಗಳತ್ತ ಗಮನಹರಿಸಬೇಕಿತ್ತು
- ಭೂಸ್ವಾಧೀನ ಯೋಜನೆಗಳು ಮತ್ತು ಕಾಲಮಿತಿಗಳು, ಮೂಲಸೌಕರ್ಯಗಳ ಸ್ಥಳಾಂತರ ಯೋಜನೆ, ಮರಗಳನ್ನು ಗುರುತು ಮಾಡುವುದು ಮತ್ತು ಅವುಗಳನ್ನು ಬೇರೆ ಕಡೆ ಸ್ಥಳಾಂತರಿಸುವ ಯೋಜನೆ, ಪರಿಸರದ ಮೇಲಾಗುವ ಪರಿಣಾಮದ ಮೌಲ್ಯಮಾಪನ, ಸಾಮಾಜಿಕ ಪರಿಣಾಮಗಳು, ಎಲ್ಲ ಕೆಲಸಗಳ ತಾಂತ್ರಿಕ ವಿವರಗಳು, ವಿಪತ್ತು ನಿರ್ವಹಣೆ ಮತ್ತು ರಕ್ಷಣೆಯ ಸಮಗ್ರ ಯೋಜನೆ ಸೇರಿದಂತೆ ಇನ್ನಿತರ ಕೆಲವು ವಿವರಗಳು ಡಿಪಿಆರ್‌ನಲ್ಲಿ ಇಲ್ಲ
- ಸುರಂಗ ಕೊರೆಯುವ ಯಂತ್ರದ ವೆಚ್ಚವನ್ನು ಒಂದು ಕಂಪನಿ ನೀಡಿದ ಮಾಹಿತಿ ಆಧಾರದಲ್ಲಿ ಪರಿಗಣಿಸಲಾಗಿದೆ. ಇದಕ್ಕಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯ ನಿಯಮಗಳ ಪ್ರಕಾರ ಮೂರು ಸಂಸ್ಥೆಗಳ ಕೊಟೇಷನ್ ಪಡೆಯಬೇಕು
- ಭೂಸ್ವಾಧೀನ, ವಿದ್ಯುತ್, ನೀರು ಸರಬರಾಜು ಮುಂತಾದ ಜನ ಉಪಯೋಗಿ ಮೂಲಸೌಕರ್ಯಗಳ ಸ್ಥಳಾಂತರ, ಟೋಲ್ ಸಂಗ್ರಹ ಸೇರಿದಂತೆ ಇನ್ನಿತರ ವ್ಯವಸ್ಥೆಗಳ ವೆಚ್ಚಕ್ಕಾಗಿ ನಿರ್ದಿಷ್ಟ ಮೊತ್ತವನ್ನು ಮೀಸಲಿಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಆದರೆ, ಪ್ರತಿಯೊಂದಕ್ಕೂ ವಿವರವಾದ ಅಂದಾಜಿನ ಅಗತ್ಯವಿದೆ

## ‘ಯೋಜನೆ ಕೈಬಿಡುವುದೇ ಒಳಿತು’

ನಗರದ ಹಿತದೃಷ್ಟಿಯಿಂದ ಸುರಂಗ ರಸ್ತೆ ನಿರ್ಮಾಣ ಯೋಜನೆಯನ್ನು ಕೈಬಿಡುವುದು ಒಳಿತು ಎನ್ನುವವರ ಸಂಖ್ಯೆ ಹೆಚ್ಚಾಗಿದೆ. ಸಮಗ್ರ ಸಂಚಾರ ಯೋಜನೆ ಮತ್ತು ಪರಿಸರದ ಮೇಲಾಗುವ ಪರಿಣಾಮಗಳನ್ನು ಪರಿಗಣಿಸದೆಯೇ ಯೋಜನೆ ಕೈಗೆತ್ತಿಕೊಳ್ಳಲಾಗಿದೆ; ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷಿ ಯೋಜನೆ ಇದಾಗಿದ್ದು, ಜನರು ವಿರೋಧ ವ್ಯಕ್ತಪಡಿಸುತ್ತಿದ್ದರೂ ಅವರು ಯೋಜನೆಯನ್ನು ಮುಂದುವರಿಸುವ ಮಾತುಗಳನ್ನು ಆಡುತ್ತಿದ್ದಾರೆ.

ಬೆಂಗಳೂರಿನ ದಟ್ಟಣೆಗೆ ರಸ್ತೆಗಳನ್ನು ಉತ್ತಮವಾಗಿ ನಿರ್ವಹಿಸುವುದು, ಮೆಟ್ರೊ ರೈಲುಗಳನ್ನು, ಮಾರ್ಗಗಳನ್ನು ಹೆಚ್ಚಿಸುವುದು, ಬಿಎಂಟಿಸಿ ಬಸ್‌ಗಳನ್ನು ಹೆಚ್ಚಿಸುವುದು ಪರಿಹಾರವಾಗಿದೆ. ಅದನ್ನು ಮಾಡದೇ ಜನರ ತೆರಿಗೆಯ ಲಕ್ಷಾಂತರ ಕೋಟಿ ಹಣವನ್ನು ವ್ಯಯ ಮಾಡಿ, ನಗರದ ಪರಿಸರವನ್ನೂ ಹಾನಿ ಮಾಡುವ ಮೂಲಕ ಸರ್ಕಾರವು ಬೆಂಗಳೂರಿಗೆ ಎಂದಿಗೂ ಸರಿಪಡಿಸಲಾಗದಷ್ಟು ಹಾನಿ ಮಾಡಲು ಹೊರಟಿದೆ ಎನ್ನುವ ಅಸಮಾಧಾನ ವ್ಯಾಪಕವಾಗಿದೆ.




## ಭೂಮಿಯ ಗುಣಲಕ್ಷಣದ ಸಮಗ್ರ ಅಧ್ಯಯನ ಅಗತ್ಯ

ಬೆಂಗಳೂರಿನ ಭೂಮಿಯ ಗುಣಲಕ್ಷಣಗಳು ಸಂಕೀರ್ಣವಾಗಿವೆ. ಹಾಗಾಗಿ, ಸುರಂಗ ಮಾರ್ಗ ಹಾದುಹೋಗುವ ಸ್ಥಳದಲ್ಲಿರುವ ಮಣ್ಣು, ಕಲ್ಲು ಸೇರಿದಂತೆ ಭೂವಿಜ್ಞಾನಕ್ಕೆ ಸಂಬಂಧಿಸಿದ ವಿವರಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ಅಧ್ಯಯನ ನಡೆಸುವ ಅಗತ್ಯವಿದೆ ಎಂದು ಸಮಿತಿ ಪ್ರತಿಪಾದಿಸಿದೆ.

ಮೆಟ್ರೊ ಸುರಂಗ ಮಾರ್ಗ ನಿರ್ಮಾಣ ಮಾಡುವ ಸಂದರ್ಭದಲ್ಲಿ ಎದುರಾದ ಸವಾಲುಗಳನ್ನು ಪ್ರಸ್ತಾಪಿಸಿರುವ ಸಮಿತಿಯು, ಸುರಂಗ ಕೊರೆಯುವ ಸಂದರ್ಭದಲ್ಲಿ ಎದುರಾಗಬಹುದಾದ ಅನಿರೀಕ್ಷಿತ ಸನ್ನಿವೇಶಗಳನ್ನು ನಿಭಾಯಿಸುವುದಕ್ಕಾಗಿ ಭೂವಿಜ್ಞಾನಕ್ಕೆ ಸಂಬಂಧಿಸಿದಂತೆ ಇನ್ನಷ್ಟು ತಾಂತ್ರಿಕ ಅಧ್ಯಯನದ ಅಗತ್ಯವಿದೆ ಎಂದು ಹೇಳಿದೆ.

ತಿಂಗಳಿಗೆ ಸರಾಸರಿ 150 ಮೀಟರ್‌ಗಳಷ್ಟು ಉದ್ದದ ಸುರಂಗ ಕೊರೆಯಬಹುದು ಎಂದು ಅಂದಾಜಿಸಲಾಗಿದೆ. ಆದರೆ, ಮೆಟ್ರೊ ಕಾಮಗಾರಿ ವೇಳೆ ತಿಂಗಳಿಗೆ ಸುಮಾರು 100 ಮೀಟರ್‌ನಷ್ಟೇ ಕೊರೆಯಲು ಸಾಧ್ಯವಾಗಿತ್ತು. ಮೆಟ್ರೊ ಸುರಂಗದ ವ್ಯಾಸ 6.65 ಮೀಟರ್ ಇತ್ತು. ಆದರೆ, ಇಲ್ಲಿ 15.2 ಮೀಟರ್ ವ್ಯಾಸದ ಸುರಂಗ ನಿರ್ಮಾಣದ ಪ್ರಸ್ತಾಪ ಮಾಡಲಾಗಿದೆ. ಹಾಗಾಗಿ, ಯೋಜನೆಯ ಕಾಲಮಿತಿ ನಿಗದಿಪಡಿಸುವಾಗ ಮೆಟ್ರೊ ಯೋಜನೆಗಳಲ್ಲಿ ಪಡೆದ ಪ್ರಾಯೋಗಿಕ ಅನುಭವಗಳನ್ನು ಪರಿಗಣಿಸಬೇಕು ಎಂದು ಸಲಹೆ ನೀಡಿದೆ.

ಭೂಮಿಯ ಗುಣಲಕ್ಷಣಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸದೇ ಇರುವುದರಿಂದ, ಕಾಮಗಾರಿಯ ವೇಳೆ ಎದುರಾಗಬಹುದಾದ ಯಾವುದೇ ಸಮಸ್ಯೆಯನ್ನು ಎದುರಿಸುವುದಕ್ಕಾಗಿ ಸುರಂಗ ನಿರ್ಮಾಣದ ವೆಚ್ಚವನ್ನು ಶೇ 10ರಿಂದ ಶೇ 15ರಷ್ಟು ಹೆಚ್ಚಿಸುವ ಅಗತ್ಯವಿದೆ ಎಂದು ಸಮಿತಿ ವರದಿಯಲ್ಲಿ ತಿಳಿಸಿದೆ.

### ಲಾಲ್‌ಬಾಗ್‌ಗೆ ಕಂಟಕ?

ಡಿಪಿಆರ್ ಪ್ರಕಾರ, ಪ್ರಸ್ತಾವಿತ ಸುರಂಗ ಮಾರ್ಗವು ಲಾಲ್‌ಬಾಗ್ ಉದ್ಯಾನದ ಕೆಳಗಡೆ ಹಾದುಹೋಗಲಿದೆ. ಉದ್ಯಾನದ ನೆಲದ ಅಡಿಯಲ್ಲಿ 10 ಪಥಗಳ ರಸ್ತೆ ನಿರ್ಮಾಣವಾಗಲಿದ್ದು, ಎರಡು ಪಥಗಳು ಕೆರೆಯ ಸಮೀಪವೇ ಹಾದುಹೋಗಲಿವೆ. ಪರಿಸರಸೂಕ್ಷ್ಮ ಪ್ರದೇಶವಾಗಿರುವ ಲಾಲ್‌ಬಾಗ್ ವ್ಯಾಪ್ತಿಯಲ್ಲಿ ಈ ಯೋಜನೆಗಾಗಿ ಆರು ಎಕರೆಯಷ್ಟು ಜಮೀನು ಬೇಕಾಗುತ್ತದೆ ಎಂದೂ ಅಂದಾಜಿಸಲಾಗಿದೆ. ಸುರಂಗ ರಸ್ತೆಯ ಪ್ರವೇಶ ನಿರ್ಗಮನದ ಸೌಲಭ್ಯವನ್ನೂ ಇಲ್ಲಿ ಕಲ್ಪಿಸುವ (ಶಾಫ್ಟ್) ಬಗ್ಗೆಯೂ ಡಿಪಿಆರ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಉದ್ಯಾನದ ಪರಿಸರ ಸೂಕ್ಷ್ಮತೆಯನ್ನು ಗಮನದಲ್ಲಿರಿಸಿಕೊಂಡು ಅಲ್ಲಿ ಪ್ರವೇಶ/ನಿರ್ಗಮನದ ಸೌಲಭ್ಯ ಕಲ್ಪಿಸುವ ಪ್ರಸ್ತಾವವನ್ನು ಮರುಪರಿಶೀಲಿಸುವ ಅಗತ್ಯವಿದೆ ಎಂದು ತಜ್ಞರ ಸಮಿತಿ ಅಭಿಪ್ರಾಯಪಟ್ಟಿದೆ.

ಲಾಲ್‌ಬಾಗ್‌ನಲ್ಲಿ ಸುರಂಗ ಮಾರ್ಗ ನಿರ್ಮಾಣ ಮಾಡುವುದನ್ನು ಪರಿಸರವಾದಿಗಳು ಕೂಡ ವಿರೋಧಿಸಿದ್ದಾರೆ. ಕಾಮಗಾರಿಯಿಂದ ಉದ್ಯಾನದ ಪರಿಸರಕ್ಕೆ ಹಾನಿಯಾಗಲಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

---

ರಾಜ್ಯ

# ವಿಶೇಷ ರೈಲು ಇನ್ನು ಸಾಮಾನ್ಯ ರೈಲು

## ಪ್ರಯಾಣದರ ಶೇ 30ರಷ್ಟು ಇಳಿಕೆ

● ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಯಶವಂತಪುರ–ಹೊಸಪೇಟೆ–ವಿಜಯಪುರ ಹಾಗೂ ಬೆಂಗಳೂರು–ಹುಬ್ಬಳ್ಳಿ ವಿಶೇಷ ರೈಲುಗಳು ಸಾಮಾನ್ಯ ರೈಲುಗಳಾಗಿ ಪರಿವರ್ತನೆಗೊಳ್ಳಲಿವೆ. ಪ್ರಯಾಣಿಕರು ಶೇ 30ರಷ್ಟು ಹೆಚ್ಚುವರಿಯಾಗಿ ದರ ಪಾವತಿ ಮಾಡುವುದೂ ಕೊನೆಗೊಳ್ಳಲಿದೆ.

06545/46 ಯಶವಂತಪುರ–ಹೊಸಪೇಟೆ–ವಿಜಯಪುರ ರೈಲು ಮತ್ತು 07339/40 ಬೆಂಗಳೂರು–ಹುಬ್ಬಳ್ಳಿ ರೈಲುಗಳಲ್ಲಿ ಡಿ.14ರ ನಂತರ ಕಾಯ್ದಿರಿಸುವುದನ್ನು ವಾಪಸ್ ಪಡೆಯಲಾಗಿದೆ. ಸಾಮಾನ್ಯ ರೈಲುಗಳಾದಾಗ ರೈಲು ಸಂಖ್ಯೆ ಬದಲಾಗಲಿದೆ.

ರೈಲಿಗಾಗಿ ಪ್ರಯಾಣಿಕರು ಬೇಡಿಕೆ ಇಟ್ಟಾಗ ಇಲ್ಲವೇ ಯಾವುದೇ ಮಾರ್ಗದಲ್ಲಿ ರೈಲು ಸಂಚರಿಸಿದರೆ ಯಶಸ್ವಿಗೊಳ್ಳಬಹುದೇ ಎಂದು ಪರೀಕ್ಷಿಸಬೇಕಾದಾಗ ವಿಶೇಷ ರೈಲುಗಳನ್ನು ಓಡಿಸಲಾಗುತ್ತದೆ. ಮೂರು ತಿಂಗಳು ಅಥವಾ ಆರು ತಿಂಗಳು ರೈಲುಗಳು ಸಂಚರಿಸಿದಾಗ ಪ್ರಯಾಣಿಕರ ಸ್ಪಂದನ ಹೇಗಿದೆ ಎಂಬುದು ರೈಲ್ವೆ ಮಂಡಳಿಗೆ ಗೊತ್ತಾಗುತ್ತದೆ. ಪ್ರಯಾಣಿಕರ ಸಂಖ್ಯೆ ನಿರೀಕ್ಷೆಯಷ್ಟು ಇಲ್ಲದೇ ಇದ್ದರೆ ರೈಲು ರದ್ದು ಮಾಡುವ, ಉತ್ತಮ ಸ್ಪಂದನ ದೊರಕಿದರೆ ಸಾಮಾನ್ಯ ರೈಲನ್ನಾಗಿ ಪರಿವರ್ತಿಸುವ ಪದ್ಧತಿ ಇದೆ.

ಅದರಂತೆ ಸುರೇಶ್ ಅಂಗಡಿ ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದಾಗ ಈ ವ್ಯವಸ್ಥೆಯಡಿ 2019ರಲ್ಲಿ ಯಶವಂತಪುರ–ಹೊಸಪೇಟೆ–ವಿಜಯಪುರ, ಬೆಂಗಳೂರು–ಹುಬ್ಬಳ್ಳಿ ವಿಶೇಷ ರೈಲುಗಳಿಗೆ ಚಾಲನೆ ನೀಡಲಾಗಿತ್ತು.

ಆದರೆ, ಕೋವಿಡ್ ಕಾಲದ ನಂತರ ಈ ವಿಶೇಷ ರೈಲುಗಳನ್ನು ಸಾಮಾನ್ಯ ರೈಲುಗಳನ್ನಾಗಿ ಪರಿವರ್ತನೆ ಮಾಡದೇ ಹಾಗೇ ಮುಂದುವರಿಸಲಾಯಿತು. ವಿಶೇಷ ರೈಲುಗಳಲ್ಲಿ ಪ್ರಯಾಣದರವು ಸಾಮಾನ್ಯ ರೈಲುಗಳಿಗಿಂತ ಶೇ 30ರಷ್ಟು ಅಧಿಕ ಇರುವುದರಿಂದ ಸತತ ಆರು ವರ್ಷ ಹೆಚ್ಚುವರಿ ದರವನ್ನು ಪ್ರಯಾಣಿಕರು ಪಾವತಿ ಮಾಡಿಕೊಂಡು ಬಂದಿದ್ದರು.

‘ಪ್ರಜಾವಾಣಿ’ ಈ ಬಗ್ಗೆ ಒಂದು ತಿಂಗಳ ಹಿಂದೆ ‘ಆರು ವರ್ಷಗಳಿಂದ ಓಡುತ್ತಿರುವ ವಿಶೇಷ ರೈಲು’ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ಈಗ ರೈಲ್ವೆ ಮಂಡಳಿಯಿಂದ ಸಾಮಾನ್ಯ ರೈಲು ಪರಿವರ್ತಿಸುವ ಬಗ್ಗೆ ನೈರುತ್ಯ ರೈಲ್ವೆಗೆ ‘ಹಸಿರು’ ಸೂಚನೆ ರವಾನಿಸಿದೆ.

ನೈರುತ್ಯ ರೈಲ್ವೆಯ ಬೆಂಗಳೂರು, ಹುಬ್ಬಳ್ಳಿ, ಮೈಸೂರು ವಿಭಾಗಗಳಲ್ಲಿ ಸಾರಿಗೆ-ಆಧಾರಿತ ಅಭಿವೃದ್ಧಿ (ಟಿಒಡಿ) ಆಧಾರದಲ್ಲಿ ಸುಮಾರು 20 ವಿಶೇಷ ರೈಲುಗಳು ಸಂಚರಿಸುತ್ತಿವೆ. ‘0’ (ಸೊನ್ನೆ) ಯಿಂದ ಆರಂಭವಾಗುವ ಸಂಖ್ಯೆಯನ್ನು ಹೊಂದಿರುವ ಎಲ್ಲ ರೈಲುಗಳು ವಿಶೇಷ ರೈಲುಗಳಾಗಿವೆ. ಒಂದೊಂದೇ ವಿಶೇಷ ರೈಲನ್ನು ಸಾಮಾನ್ಯ ರೈಲಾಗಿ ಪರಿವರ್ತಿಸಲು ರೈಲ್ವೆ ಮಂಡಳಿ ಕ್ರಮ ಕೈಗೊಳ್ಳುತ್ತಿದೆ. ವಿಜಯಪುರ–ಮಂಗಳೂರು–ವಿಜಯಪುರ ವಿಶೇಷ ರೈಲನ್ನು ಒಂದು ತಿಂಗಳ ಹಿಂದೆ ಪರಿವರ್ತನೆ ಮಾಡಲಾಗಿತ್ತು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

### ‘ನಿರ್ಧಾರ ಆಗಿದೆ’

‘ಯಶವಂತಪುರ–ವಿಜಯಪುರ ರೈಲು ಸಹಿತ ಕೆಲವು ಟಿಒಡಿ ವಿಶೇಷ ರೈಲುಗಳನ್ನು ನಿರಂತರ ಸಂಚರಿಸುವ ಸಾಮಾನ್ಯ ರೈಲುಗಳನ್ನಾಗಿ ಪರಿವರ್ತಿಸಲು ರೈಲ್ವೆ ಮಂಡಳಿ ನಿರ್ಧಾರ ಕೈಗೊಂಡಿದೆ. ಈ ಬಗ್ಗೆ ಅಧಿಸೂಚನೆ ಕೆಲವೇ ದಿನಗಳಲ್ಲಿ ಬರಲಿದೆ. ಸಾಮಾನ್ಯ ರೈಲುಗಳಾದಾಗ ಜನರಿಗೆ ಇನ್ನಷ್ಟು ಪ್ರಯೋಜನವಾಗಲಿದೆ’ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಜುನಾಥ್ ಕನಮರಡಿ ತಿಳಿಸಿದರು.

### ಹಲವು ಸಮಯದ ಪ್ರಯತ್ನ

‘ಐದಾರು ವರ್ಷಗಳಿಂದ ಓಡಾಡುತ್ತಿರುವ ವಿಶೇಷ ರೈಲುಗಳನ್ನು ಪರಿವರ್ತಿಸಿ ಎಂದು ಹಲವು ಸಮಯದಿಂದ ಪ್ರಯತ್ನ ಮಾಡಲಾಗಿತ್ತು. ರೈಲ್ವೆ ಅಧಿಕಾರಿಗಳು, ನೈರುತ್ಯ ರೈಲ್ವೆ ಅಧಿಕಾರಿಗಳು, ಜನಪ್ರತಿನಧಿಗಳ ಗಮನಕ್ಕೆ ತಂದಿದ್ದೆ. ಈಗ ಅದಕ್ಕೆ ಕಾಲ ಕೂಡಿಬಂದಿದೆ. ಪ್ರಯಾಣಿಕರಿಗೆ ಶೇ 30ರಷ್ಟು ದರ ಉಳಿಯಲಿದೆ. ಇನ್ನು ಅನೇಕ ಉಪಯೋಗಗಳಾಗಿವೆ’ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ತಿಳಿಸಿದ್ದಾರೆ.

---

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಭಾರತಕ್ಕೆ** ಭೇಟಿ ನೀಡಿದ್ದ ಅಫ್ಗಾನಿಸ್ತಾನದ ವಿದೇಶಾಂಗ ಸಚಿವ, ತಾಲಿಬಾನ್ ಸಂಘಟನೆಯ ಹಿರಿಯ ಮುಖಂಡ ಅಮೀರ್ ಮುತ್ತಾಕಿ ಅವರು, ‘ಭಾರತವು ತಾಲಿಬಾನ್‌ಗೆ ಹಣ ನೀಡಿದರೆ ನಾವು ಶಿವ ಮತ್ತು ವಿಷ್ಣು ದೇವಿ ದೇವಾಲಯವನ್ನು ಕಾಬೂಲ್, ಕಂದಹಾರ್ ಮತ್ತು ಹೆಲ್ಮಾಂಡ್‌ನಲ್ಲಿ ನಿರ್ಮಿಸುತ್ತೇವೆ ಎಂದು ಪ್ರಧಾನಿ ಮೋದಿ ಅವರಿಗೆ ತಿಳಿಸಿದ್ದೇನೆ. ಇದರಿಂದ ಭಾರತೀಯರು ಅಫ್ಗಾನಿಸ್ತಾನಕ್ಕೆ ತೀರ್ಥಯಾತ್ರೆ ಬರಬಹುದು. ನಾವು ಇಲ್ಲಿ ಜೈ ಶ್ರೀರಾಮ್ ಘೋಷಣೆ ಕೂಗಿದ್ದೇವೆ. ನಮ್ಮ ಮೇಲೆ ತೋರಿಸಿದ ಪ್ರೀತಿ ವಿಶ್ವಾಸಕ್ಕೆ ಮೋದಿ ಅವರಿಗೆ ಕೃತಜ್ಞರಾಗಿದ್ದೇವೆ’ ಎಂದು ಹೇಳಿದ್ದಾರೆ ಎನ್ನಲಾದ ವಿಡಿಯೊ ತುಣುಕೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು.

**ವಿಡಿಯೊ** ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ ಪಿಟಿಐ ಸುದ್ದಿ ಸಂಸ್ಥೆಯ ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಲಾದ ವಿಡಿಯೊ ಸಿಕ್ಕಿತು. ಸಾಮಾಜಿಕ ಜಾಲತಾಣಗಳಲ್ಲಿ ಹಂಚಲಾಗುತ್ತಿರುವ ವಿಡಿಯೊ ತುಣುಕು ಮತ್ತು ಪಿಟಿಐ ಎಕ್ಸ್ ಖಾತೆಯಲ್ಲಿದ್ದ ವಿಡಿಯೊದಲ್ಲಿ ಸಾಕಷ್ಟು ಹೋಲಿಕೆ ಇತ್ತು. ಪಿಟಿಐನ ಎಲ್ಲ ಪೋಸ್ಟ್‌ಗಳನ್ನು ಪರಿಶೀಲಿಸಿದಾಗ, ಮುತ್ತಾಕಿ ಸುದ್ದಿಗೋಷ್ಠಿಯಲ್ಲಿ ದೇವಾಲಯಗಳ ಬಗ್ಗೆ ಪ್ರಸ್ತಾಪಿಸಿರುವ ಅಂಶಗಳು ಇರಲಿಲ್ಲ. ಮಾಧ್ಯಮಗಳಲ್ಲೂ ಈ ಬಗ್ಗೆ ವರದಿಗಳಿರಲಿಲ್ಲ. ಅನುಮಾನ ಬಂದು ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಮುತ್ತಾಕಿ ಅವರ ತುಟಿ ಚಲನೆಗೂ ವಿಡಿಯೊದಲ್ಲಿರುವ ಧ್ವನಿಗೂ ವ್ಯತ್ಯಾಸ ಕಂಡು ಬಂತು. ರಿಸೆಂಬಲ್ ಎಐ ಪತ್ತೆ ಟೂಲ್ ಮೂಲಕ ವಿಡಿಯೊವನ್ನು ಪರಿಶೀಲನೆಗೆ ಒಳಪಡಿಸಿದಾಗ, ನಕಲಿ ಧ್ವನಿಯನ್ನು ಸೇರಿಸಿ ವಿಡಿಯೊವನ್ನು ಎಡಿಟ್ ಮಾಡಿರುವುದು ದೃಢಪಟ್ಟಿತು ಎಂದು ಪಿಟಿಐ ‘ಫ್ಯಾಕ್ಟ್‌ಚೆಕ್’ ವರದಿ ತಿಳಿಸಿದೆ.

---

## ಪದಬಂಧ 6195

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಒಳ್ಳೆಯ ದಾರಿ (3)
2.ಉಪಾಯದಿಂದ ಮಾನವಂತನು ನೀಡಿದ ಹೋಲಿಕೆ (4)
4.ಕುಸ್ತಿ ಮಾಡುವ ಕಸುಬಿನವನು (2)
5.ತಾಯಿಯ ಮನೆಯ ಕಿಟಕಿ (4)
7.ಮುತ್ತಿಗೆಗೊಂದು ಪರ್ಯಾಯ ಪದ (2)
8.ಉಲ್ಟಾ ಆಗಿರುವ ವೇಳೆ (3)
9.ಜವಾನನ ಸುತ್ತ ನೆರೆದ ಮಂದಿ (2)
10.ಗೌರವಪೂರ್ವಕವಾಗಿ ಬಲಗಡೆಯಿಂದ ಸುತ್ತುವಿಕೆ ಹಿಂದು ಮುಂದಾಗಿದೆ! (4)
11.ವ್ಯಥೆ ಯಿಲ್ಲಿ ಉಲ್ಟಾ ಆಗಿದೆ (2)
12.ಬೇರೆಯವರ ಅಧೀನದಲ್ಲಿರುವಿಕೆ (4)
13.ಹರನನ್ನು ಸ್ತುತಿಸುತ್ತಿರುವವನು ಶೂರ (3)

**ಮೇಲಿಂದ ಕೆಳಕ್ಕೆ**
1.ಸಮಾಜವನ್ನು ತಿದ್ದುವುದು (7)
2.ಆಹಾರ ಸೇವಿಸದೇ ಹೂಡುವ ಮುಷ್ಕರ (8)
3.ಕೆರೆ ಕೊಳಗಳಿಗೆ ಸೇರುವ ನೀರು ಹರಿದು ಬರುವ ಸ್ಥಳ (8)
6.ಸುಂದರವಾದುದು ನರನಲ್ಲಿದೆ (7)



### 6194ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಮಲಮಗ 3.ಒಡ್ಡೋಲಗ
5.ಜುಲುಮೆ 6.ರಿಕಾಪು
8.ದುರುಳ 9.ನಿಮೇಷ
10.ನಗದು 12.ಸಂಭಾವ್ಯ
14.ರಣಭೇರಿ 15.ನತದೃಷ್ಟ

**ಮೇಲಿಂದ ಕೆಳಕ್ಕೆ:**
1.ಮದಕರಿ 2.ಗಲೀಜು
3.ಒಲುಮೆ 4.ಗಟ್ಟಿಕುಳ
7.ಪುರುಷ 8.ದುಮ್ಮಾನ
9.ನಿರಕ್ಷರ 11.ದುರಾದೃಷ್ಟ
12.ಸಂಚಾರಿ 13.ವ್ಯಸನ

## ಸುಡೊಕು 6579

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 3 | 5 | | 7 | | 2 | | 8 | |
| 6 | | | | | | 3 | | 4 |
| | 7 | 8 | 3 | | 9 | | 1 | |
| 1 | | 4 | 8 | | | | 2 | 3 |
| | | | | 3 | | | | |
| 8 | | 7 | | | 1 | | 5 | 9 |
| 2 | | 3 | 9 | | 6 | 5 | | 8 |
| | | 6 | | | | | | |
| | 8 | | 5 | | 4 | | 3 | 2 |

6578 ಸುಡೊಕು

| | | | | | | | | |
|---|---|---|---|---|---|---|---|---|
| 5 | 6 | 3 | 9 | 2 | 7 | 8 | 1 | 4 |
| 8 | 1 | 7 | 6 | 5 | 4 | 2 | 3 | 9 |
| 4 | 2 | 9 | 3 | 8 | 1 | 7 | 5 | 6 |
| 2 | 4 | 6 | 7 | 1 | 3 | 9 | 8 | 5 |
| 3 | 9 | 1 | 8 | 4 | 5 | 6 | 7 | 2 |
| 7 | 5 | 8 | 2 | 9 | 6 | 3 | 4 | 1 |
| 6 | 8 | 5 | 1 | 7 | 9 | 4 | 2 | 3 |
| 1 | 3 | 2 | 4 | 6 | 8 | 5 | 9 | 7 |
| 9 | 7 | 4 | 5 | 3 | 2 | 1 | 6 | 8 |

---

# ಕ್ರಿಸ್ತರು ಹೇಳಿದ ಕೆಡುಕಿನ ಸ್ವರೂಪ

ನುಡಿ ಬೆಳಗು

ಪಿ.ಚಂದ್ರಿಕಾ

**ಮಾಡಿನ** ಮೇಲೆ ಬಿದ್ದ ಮಳೆಯ ನೀರು ನೆಲಕ್ಕೆ ಸುರಿಯುವಂತೆ ಮನುಷ್ಯನ ಒಳಗೆ ಇರುವ ಭಾವನೆಗಳು ಹೊರಗೆ ಬರುತ್ತವೆ. ಭಗವಾನ್ ಕ್ರಿಸ್ತರು ಜಗತ್ತಿನ ಪಾಪವನ್ನು ಕಳೆಯಲೆಂದು ಊರೂರು ಸುತ್ತುತ್ತಾ ಒಂದು ಹಳ್ಳಿಗೆ ಬರುತ್ತಾರೆ. ಅಲ್ಲಿ ಅತ್ಯಂತ ಹೀನ ಸ್ಥಿತಿಯಲ್ಲಿರುವ ಹೆಂಗಸನ್ನು ಊರಿಂದ ಹೊರಗೆ ಹಾಕುತ್ತಿರುತ್ತಾರೆ. ಕ್ರಿಸ್ತರಿಗೆ ಆಕೆಯ ಸ್ಥಿತಿಯನ್ನು ನೋಡಿ ಕರುಣೆ ಉಕ್ಕಿ ಬರುತ್ತದೆ. ಆಕೆಯನ್ನು ಆತುಕೊಂಡು ಜನರಿಗೆ, ‘ಈಕೆ ಅಂಥಾ ತಪ್ಪನ್ನು ಏನು ಮಾಡಿದ್ದಳು’ ಎನ್ನುತ್ತಾರೆ. ಆಗ ಜನರು ಆಕೆಯನ್ನು ದೂಷಿಸುತ್ತಾ, ‘ಯವ್ವನದಲ್ಲಿದ್ದಾಗ ದೇಹವನ್ನು ವಿಕ್ರಯಿಸಿದ್ದಳು, ಯಾರಿಗೂ ಸಣ್ಣ ಸಹಾಯವನ್ನೂ ಮಾಡಲಿಲ್ಲ, ದಿನಾ ದೇವರನ್ನೂ ಪ್ರಾರ್ಥಿಸಲಿಲ್ಲ; ಈಕೆಯ ಪಾಪಕ್ಕೆ ಕೊಲ್ಲದೇ ಉಳಿಸಿರುವುದೇ ಹೆಚ್ಚು’ ಎನ್ನುತ್ತಾರೆ.

ಜನರ ಮಾತುಗಳನ್ನು ಕೇಳಿ ಕ್ರಿಸ್ತರ ಮನಸ್ಸಿಗೆ ನೋವಾಗುತ್ತದೆ. ‘ಪಾಪ ಎನ್ನುವುದು ಆಕೆಯೊಬ್ಬಳಿಂದ ಆಗಲು ಸಾಧ್ಯವೇ? ಆಕೆ ದೇಹವನ್ನು ವಿಕ್ರಯಿಸಲು ಒಬ್ಬ ಪುರುಷ ಬೇಕಲ್ಲವೇ. ಅವನನ್ನು ಮಾತ್ರ ಬಿಟ್ಟು ಈಕೆಯನ್ನು ಯಾಕೆ ಪಾಪ ಮಾಡಿದ್ದಾಳೆ ಎನ್ನುತ್ತಿದ್ದೀರ? ಇನ್ನು ಪ್ರಾರ್ಥನೆ ಅಂತರಂಗದ ವಿಷಯ. ಮನುಷ್ಯರ ಬಗ್ಗೆ ಲಘುವಾಗಿ ಯೋಚಿಸಬಾರದು’ ಎನ್ನುತ್ತಾರೆ. ‘ಇಷ್ಟೆಲ್ಲಾ ತಿಳಿದ ನಿನಗೆ ಈಕೆಯ ಮುಖದಲ್ಲಿನ ಪಾಪ ಗೊತ್ತಾಗುತ್ತಿಲ್ಲ ಎಂದರೆ ಹೇಗೆ? ಪಾಪವನ್ನು ಕಳೆದು ಸ್ವರ್ಗದ ಬಾಗಿಲು ಈಕೆಗೆ ತೆರೆಯುವಂತೆ ಮಾಡಬಲ್ಲೆಯಾ?’ ಎನ್ನುತ್ತಾರೆ ಜನ. ಕ್ರಿಸ್ತರು ನಕ್ಕು, ‘ಭಗವಂತ ಯಾರಿಗೂ ಬಾಗಿಲುಗಳನ್ನು ಮುಚ್ಚಿರುವುದಿಲ್ಲ. ನಾವು ಮನುಷ್ಯರು ಭಾವಿಸುತ್ತೇವೆ ನಾವು ಮಾತ್ರ ಪುಣ್ಯ ಮಾಡಿದ್ದೇವೆ ಎಂದು. ಈಕೆಯನ್ನು ನೋಡಿ ಈಗಲೂ ನಿಮಗೆ ದೇಹ ವಿಕ್ರಯಿಸುವ ಹೆಣ್ಣಾಗಿ ಕಾಣುತ್ತಿದ್ದಾಳೆಯೆ’ ಎನ್ನುತ್ತಾರೆ. ಆಗ ಆ ಜನ, ‘ನಾವೇ ಕಣ್ಣಾರೆ ಕಂಡಿದ್ದೇವೆ. ಮತ್ತೊಮ್ಮೆ ನೋಡಲು ಏನಿದೆ. ನಿನಗೆ ಈಕೆ ದೇವದೂತೆಯ ಥರ ಕಾಣುತ್ತಾಳೆಯೇ?’ ಎನ್ನುತ್ತಾರೆ. ‘ಅಲ್ಲ, ನನ್ನ ತಾಯಿಯ ಹಾಗೆ ಕಾಣುತ್ತಿದ್ದಾಳೆ, ಅವಳ ಕಣ್ಣುಗಳ ಅಂತಃಕರಣ ನನ್ನ ಎದೆಯನ್ನು ತಟ್ಟುತ್ತಿದೆ. ಮಾತೃಭಾವದ ಪ್ರತೀಕವಾದ ಅವಳ ವಾತ್ಸಲ್ಯಭರಿತವಾದ ನೋಟದಲ್ಲಿ ಜಗತ್ತಿನ ಕಾರುಣ್ಯ ಕಾಣುತ್ತಿದೆ. ಭಗವಂತ ಈಕೆಗೆ ಸ್ವರ್ಗದ ಪ್ರವೇಶ ಒದಗಿಸುತ್ತಾನೆ. ನಿಮ್ಮ ವಿಷಯ ನನಗೆ ಗೊತ್ತಿಲ್ಲ’ ಎನ್ನುತ್ತಾರೆ.

ಕ್ರಿಸ್ತರ ಮಾತುಗಳನ್ನು ಕೇಳಿದ ಜನ, ‘ನಾವು ದಿನನಿತ್ಯ ಪ್ರಾರ್ಥನೆಯಲ್ಲಿ ತೊಡಗುತ್ತೇವೆ, ಧರ್ಮದಲ್ಲಿ ಹೇಳುವ ಯಾವ ತಪ್ಪನ್ನೂ ಮಾಡುವುದಿಲ್ಲ. ಹಾಗಿದ್ದೂ ನಮಗೆ ಸ್ವರ್ಗದಲ್ಲಿ ಪ್ರವೇಶವಿಲ್ಲ. ಕುಲಟೆಯಾದ ಈ ಹೆಣ್ಣಿಗೆ ಪ್ರವೇಶ ಸಾಧ್ಯ ಹೇಗೆ?’ ಎನ್ನುತ್ತಾರೆ. ನಗುತ್ತಾ, ‘ಕೆಡಕು ಮಾಡುವವನಿಗೆ, ಕೆಡುಕಿನ ಬಗ್ಗೆ ಯೋಚಿಸುವವನಿಗೆ ಕೆಡುಕು ಜೊತೆಯಾಗುತ್ತದೆ. ಅವರಿಗೆ ಸ್ವರ್ಗದ ಪ್ರವೇಶ ಹೇಗೆ ಸಾಧ್ಯ? ಮೇಲೆ ಚೆನ್ನಾಗಿ ಕಂಡರೂ ಹಣ್ಣಿನ ಒಳಗೆ ಹುಳುಕಿದ್ದರೆ ಅದು ತಿನ್ನಲು ಯೋಗ್ಯ ಇರುವುದಿಲ್ಲ. ಮನುಷ್ಯನ ಮನಸ್ಸು ಕೂಡ ಹಾಗೆಯೇ. ಇನ್ನೊಬ್ಬರಲ್ಲಿ ಕೆಡುಕೇ ಇದೆ ಎಂದು ನೋಡುವಿರಿ ಎಂದರೆ, ಅದಕ್ಕೆ ನೀವೇ ಬಲಿಯಾಗುವಿರಿ’ ಎನ್ನುತ್ತಾರೆ ಕ್ರಿಸ್ತರು.

ಕೆಡುಕೆನ್ನುವುದು ಹಿಮದ ಪದರದ ಕೆಳಗಿನ ಖಾಲಿ ಜಾಗದಂತೆ; ಹೆಜ್ಜೆ ಇಟ್ಟರೆ ಅದು ನಮ್ಮನ್ನೇ ಸೆಳೆದುಕೊಳ್ಳುತ್ತದೆ. ❖

---

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**16 ಅಕ್ಟೋಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಆಶ್ವಯುಜ ಕೃಷ್ಣ ದಶಮಿ ಗಂ. 10-36 **ನಕ್ಷತ್ರ:** ಆಶ್ಲೇಷ ಗಂ. 12-42, **ಯೋಗ:** ಶುಭ ಗಂ. 26-11 **ಕರಣ:** ವಿಷ್ಠಿ ಗಂ. 10-36 ಕನ್ಯಾ ಮಾಸದ 29 ನೇ ದಿನ. **ಮಳೆ ನಕ್ಷತ್ರ** : ಚಿತ್ತಾ 2 ನೇ ಪಾದ. **ರಾಹುಕಾಲ** : ಮಧ್ಯಾಹ್ನ 01-30 03-00, **ಸೂರ್ಯೋದಯ** : 06-25 **ಸೂರ್ಯಾಸ್ತ** : 06-08, **ಮುಸ್ಲಿಂ ದಿನಾಂಕ** : 23 ರಬಿಯುಸ್ಸಾನಿ, **ಅದೃಷ್ಟ ಸಂಖ್ಯೆ** : 2, 4

**ಮೇಷ:** ತಪ್ಪುಗಳನ್ನು ತಿದ್ದಿಹೇಳುವಲ್ಲಿ ಹಿರಿಯ ಅಧಿಕಾರಿಗಳು ಈ ದಿನ ನೆರವಿಗೆ ನಿಲ್ಲುವರು. ಅವರೇ ನಿಮ್ಮನ್ನು ಸರಿಯಾದ ದಾರಿಗೆ ಕರೆದೊಯ್ಯುವರು. ಕಟ್ಟಡಗಳ ಬಾಡಿಗೆಯಿಂದಾಗಿ ಆರ್ಥಿಕವಾಗಿ ಅಭಿವೃದ್ಧಿ ಕಂಡುಬರುವುದು.

**ವೃಷಭ:** ಬೆಳ್ಳಿ ವಸ್ತುಗಳ ಮಾರಾಟ ಮಾಡುವವರು ಆದಾಯವನ್ನು ಗಳಿಸುವಿರಿ. ಸರ್ಕಾರಿ ಗುತ್ತಿಗೆ ಕೆಲಸಗಳು ನಿಮ್ಮದಾಗಲಿವೆ. ನಿರುದ್ಯೋಗಿಗಳಿಗೆ ಸಾಧಾರಣ ಉದ್ಯೋಗ ದೊರೆಯಲಿದೆ.

**ಮಿಥುನ:** ವರ್ಚಸ್ಸಿನ ಪ್ರಭಾವದಿಂದ ವಿನೂತನ ಅವಕಾಶಗಳು ದೊರೆಯಲಿವೆ. ಭಾವನೆಗಳ ಮೇಲೆ ಹಿಡಿತ ಸಾಧಿಸಿ. ಮನಸ್ಸು ಬೇಡದ ದಿಕ್ಕಿನಲ್ಲಿ ಹರಿಯುವುದನ್ನು ನಿಲ್ಲಿಸಿ. ನೀರಿನ ಬಗ್ಗೆ ಜಾಗರೂಕತೆ ಇರಲಿ.

**ಕರ್ಕಾಟಕ:** ಬದಲಾವಣೆಯನ್ನು ಬಯಸಿದ ನಿಮಗೆ ಇದು ಹರ್ಷ ಸಮಯ. ಸಾಂಸಾರಿಕವಾಗಿ ಸುಖ-ದುಃಖಗಳ ಸಮ್ಮಿಶ್ರ ಫಲವನ್ನು ಅನುಭವಿಸುವಿರಿ. ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಖರ್ಚು ಉಂಟಾಗುವುದು.

**ಸಿಂಹ:** ಹೊಸ ಬದುಕನ್ನು ಆರಂಭಿಸಲು ಅವಕಾಶದ ಬಾಗಿಲು ತೆರೆದಿದೆ. ಕೆಲಸದಲ್ಲಿ ತುಂಬಾ ಮಟ್ಟಿನ ಉತ್ಸಾಹವಿರುವುದು. ಸರ್ಕಾರಿ ಕೆಲಸಗಳು ನಡೆಯುವುದು ಸ್ವಲ್ಪ ವಿಳಂಬವಾಗುವುದು.

**ಕನ್ಯಾ:** ಅವಿವಾಹಿತರ ಮನೋಕಾಮನೆಗಳು ಪೂರ್ಣಗೊಳ್ಳುವ ದಿನ. ಕುಟುಂಬ ಸದಸ್ಯರ ಆರೋಗ್ಯದ ಬಗೆಗಿನ ಚಿಂತೆ ತಪ್ಪಿದ್ದಲ್ಲ. ಸ್ವಯಂ ರಕ್ಷಣೆ ತಿಳಿದಿರುವುದರಿಂದ ಮೋಸ ಹೋಗುವ ಪ್ರಮೇಯ ಕಡಿಮೆಯಾಗಿರುತ್ತದೆ.

**ತುಲಾ:** ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ನಾಯಕನನ್ನು ಜಾಗೃತಗೊಳಿಸುವಿರಿ. ಅಧಿಕಾರದ ಇತಿ ಮಿತಿ ತಿಳಿದಿದೆ. ಹಳೆಯ ಗೆಳೆಯರ ಜೊತೆ ಮಾತುಕತೆ ನಡೆಯುವುದು. ಉತ್ಸಾಹ ಅಧಿಕಗೊಂಡಿದೆ.

**ವೃಶ್ಚಿಕ:** ವೃತ್ತಿಯಲ್ಲಿ ಅಧಿಕಾರಿಗಳು ಕಾರ್ಯಸಾಧನೆ ಗುರುತಿಸಿ ಸೌಲಭ್ಯ ಒದಗಿಸಿಕೊಡುವರು. ನಿವೇಶನ ಕೊಳ್ಳಲು ಸೂಕ್ತ ಸ್ಥಳದ ಹುಡುಕಾಟ ನಡೆಸುವಿರಿ. ಮಕ್ಕಳ ವಿದ್ಯಾಭ್ಯಾಸ ಸಮಾಧಾನ ತರಲಿದೆ.

**ಧನು:** ವರಮಾನ ತೆರಿಗೆ ಸಿಬ್ಬಂದಿಗೆ ಕೆಲಸದಲ್ಲಿ ಸ್ವಲ್ಪ ಬಿಡುವು ಸಿಗುವುದು. ಕೋರ್ಟು ವ್ಯವಹಾರದಲ್ಲಿ ನಿರೀಕ್ಷಿತವಾದ ಜಯದ ಸಿಹಿಯನ್ನು ಅನಿರೀಕ್ಷಿತ ಸೋಲಿನ ಕಹಿ ಕಸಿಯುವ ಸಾಧ್ಯತೆಗಳಿವೆ. ವರ್ಗಾವಣೆಯ ಸಾಧ್ಯತೆಯಿದೆ.

**ಮಕರ:** ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಪ್ರಗತಿ. ಮಗನಿಗೆ ಸಂಸ್ಥೆಯಿಂದ ವಿದೇಶದಲ್ಲಿ ವಿದ್ಯಾಭ್ಯಾಸಕ್ಕೆ ನೆರವು ಸಿಗುವುದು. ಆಕಸ್ಮಿಕ ಧನಾಗಮನದಿಂದ ಬಾಕಿ ಇರಿಸಿದ ವ್ಯವಹಾರವು ಪೂರ್ಣಗೊಳ್ಳುವುದು.

**ಕುಂಭ:** ಬಡ್ತಿ ಅವಕಾಶವನ್ನು ಕೈತಪ್ಪದಂತೆ ನೋಡಿಕೊಳ್ಳಿ. ಭಕ್ತಿಯಿಂದ ಈಶ್ವರನನ್ನು ಆರಾಧಿಸಿ ಶುಭವಾಗುವುದು. ಹೆಂಡತಿಯ ಆರೋಗ್ಯದ ಬಗ್ಗೆ ಅನಗತ್ಯ ಭೀತಿ ಬೇಡ. ಆಹಾರ ಪದ್ಧತಿ ಬದಲಿಸಿಕೊಳ್ಳಿ.

**ಮೀನ:** ಇಂದಿನ ಸಂಧಾನ ಅಥವಾ ಕರಾರು ಒಪ್ಪಂದಗಳು ಅನುಕೂಲಕರ ಎನಿಸಲಿವೆ. ವಾಣಿಜ್ಯ ಇಲಾಖೆಯ ಅಧಿಕಾರಿಗಳಿಗೆ ಅನುಕೂಲ ಉಂಟಾಗುವುದು. ಪತಿ ಪತ್ನಿಯ ಅನ್ಯೋನ್ಯತೆಯ ಕನಸು ನನಸಾಗಲಿದೆ.

---

## ಗುಂಡಣ್ಣ



# ದೇವದತ್ತ–ಕರುಣ್ ಶತಕದ ಜತೆಯಾಟ

## ಕರ್ನಾಟಕದ ಇನಿಂಗ್ಸ್‌ಗೆ ಬಲ ತುಂಬಿದ ಸ್ಮರಣ್–ಶ್ರೇಯಸ್ • ಜಡೇಜಗೆ 4 ವಿಕೆಟ್

ಪ್ರಜಾವಾಣಿ ವಾರ್ತೆ

**ರಾಜ್‌ಕೋಟ್:** ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಶತಕದ ಹೊಸ್ತಿಲಲ್ಲಿ ಎಡವಿದರು. ತವರಿಗೆ ಮರಳಿದ ಖುಷಿಯಲ್ಲಿರುವ ಕರುಣ್ ನಾಯರ್ ಅರ್ಧಶತಕ ಅರಳಿಸಿದರು. ಯುವ ಬ್ಯಾಟರ್ ಸ್ಮರಣ್ ರವಿಚಂದ್ರನ್ ತಮ್ಮ ಲಯದಲ್ಲಿ ಮುಂದುವರಿದರು.

ನಿರಂಜನ್ ಶಾ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಪಂದ್ಯದ ಮೊದಲ ದಿನ ಕರ್ನಾಟಕ ಉತ್ತಮ ಮೊತ್ತ ಕಲೆಹಾಕಿತು. 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 295 ರನ್ ಗಳಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಕರ್ನಾಟಕ ತಂಡಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ನಾಯಕ ಮಯಂಕ್ ಅಗರ್‌ವಾಲ್ ಲಯ ಕಂಡುಕೊಳ್ಳುವಲ್ಲಿ ವಿಫಲರಾದರು. 30 ಎಸೆತಗಳಲ್ಲಿ ಕೇವಲ 2 ರನ್ ಗಳಿಸಿದರು. ಅನುಭವಿ ಸ್ಪಿನ್ನರ್ ಧರ್ಮೇಂದ್ರಸಿಂಹ ಜಡೇಜ (100ಕ್ಕೆ4) ಅವರ ಎಸೆತದಲ್ಲಿ ಚೇತನ್ ಸಕಾರಿಯಾಗೆ ಕ್ಯಾಚಿತ್ತರು.

ನಾಲ್ಕು ಓವರ್‌ಗಳ ನಂತರ ಇನ್ನೊಬ್ಬ ಆರಂಭಿಕ ಬ್ಯಾಟರ್ ನಿಕಿನ್ ಜೋಸ್ (12; 40ಎ) ಅವರೂ ದುಡುಕಿದರು. ಜಡೇಜ ಎಸೆತದಲ್ಲಿ ನಿಕಿನ್ ಅವರು ಅಂಶ್ ಗೋಸಾಯಿಗೆ ಕ್ಯಾಚಿತ್ತರು. ಇದರಿಂದಾಗಿ ಆತಿಥೇಯರ ಬಳಗದಲ್ಲಿ ಅಪಾರ ಆತ್ಮ ವಿಶ್ವಾಸ ಮೂಡಿತು. ಆದರೆ ಜಯದೇವ್ ಉನದ್ಕತ್ ಬಳಗದ ಉತ್ಸಾಹಕ್ಕೆ ಭಾರತ ತಂಡದ ಬ್ಯಾಟರ್‌ಗಳಾದ ದೇವದತ್ತ ಮತ್ತು ಕರುಣ್ ತಣ್ಣೀರೆರಚಿದರು. ಎಡಗೈ ಬ್ಯಾಟರ್ ದೇವದತ್ತ 141 ಎಸೆತಗಳಲ್ಲಿ 96 ರನ್ ಗಳಿಸಿದರು. ಅದರಲ್ಲಿ 11 ಬೌಂಡರಿ ಗಳಿದ್ದವು. ಕರುಣ್ 126 ಎಸೆತಗಳಲ್ಲಿ 73

### ಮೂವರು ಸ್ಪಿನ್ನರ್‌ಗಳು ಕಣಕ್ಕೆ

ಕರ್ನಾಟಕ ತಂಡವು ಮೂವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿದಿದೆ. ಇಲ್ಲಿಯ ಪಿಚ್ ಸ್ಪಿನ್ನರ್‌ಗಳಿಗೆ ಹೆಚ್ಚು ಅವಕಾಶ ನೀಡುವುದರಿಂದ ಈ ನಿರ್ಧಾರ ಮಾಡಲಾಗಿದೆ. ಅನುಭವಿ ಶ್ರೇಯಸ್, ಆಫ್‌ಸ್ಪಿನ್ನರ್ ಮೊಹಸಿನ್ ಖಾನ್ ಮತ್ತು ಪದಾರ್ಪಣೆ ಪಂದ್ಯ ಆಡುತ್ತಿರುವ ಎಡಗೈ ಸ್ಪಿನ್ನರ್ ಶಿಖರ್ ಶೆಟ್ಟಿ ತಂಡದಲ್ಲಿದ್ದಾರೆ. ವೇಗದ ಹೊಣೆ ಅಭಿಲಾಷ್ ಶೆಟ್ಟಿ ಹಾಗೂ ಎಂ. ವೆಂಕಟೇಶ್ ಅವರಿಗೆ ವಹಿಸಲಾಗಿದೆ.

ಅನುಭವಿ ವೇಗಿಗಳಾದ ವೈಶಾಖ ವಿಜಯಕುಮಾರ್ ಮತ್ತು ವಿದ್ವತ್ ಕಾವೇರಪ್ಪ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ರನ್ ಗಳಿಸಿದರು. ಹೋದ ವರ್ಷ ವಿದರ್ಭ ತಂಡದಲ್ಲಿ ಆಡಿದ್ದ ಕರುಣ್ ಅವರು ತವರಿಗೆ ಮರಳಿದ್ದಾರೆ. ಮೂರನೇ ವಿಕೆಟ್ ಜೊತೆಯಾಟದಲ್ಲಿ 146 ರನ್ ಸೇರಿಸಿದರು.

ಉನದ್ಕತ್ ಸೇರಿದಂತೆ ಏಳು ಬೌಲರ್‌ಗಳು ಕಣಕ್ಕಿಳಿದರು. ಆದರೆ ಜಡೇಜ ಬಿಟ್ಟರೆ ಉಳಿದವರು ಹೆಚ್ಚು ಪರಿಣಾಮ ಬೀರಲಿಲ್ಲ. ದೇವದತ್ತ ಸ್ವೀಪ್, ಬ್ಯಾಕ್‌ಫುಟ್ ಪಂಚ್ ಮತ್ತು ಡ್ರೈವ್‌ಗಳ ಮೂಲಕ ರನ್ ಗಳಿಸಿದರು. ಕರುಣ್ ಕೂಡ ಕಟ್, ಡ್ರೈವ್‌ಗಳನ್ನು ಪ್ರಯೋಗಿಸಿದರು. ಇಬ್ಬರೂ ಬ್ಯಾಟರ್‌ಗಳ ಉತ್ತಮ ತಾಳಮೇಳದಿಂದಾಗಿ ಫೀಲ್ಡರ್‌ಗಳಿಗೆ ಯಾವುದೇ ಅವಕಾಶ ಸಿಗಲಿಲ್ಲ.

ಊಟದ ವಿರಾಮದ ನಂತರ ಜಡೇಜ ಮತ್ತೊಮ್ಮೆ ಪರಿಣಾಮಕಾರಿ ದಾಳಿ

ರಾಜ್‌ಕೋಟ್‌ನಲ್ಲಿ ಬುಧವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಕರ್ನಾಟಕ ತಂಡದ ಆರ್. ಸ್ಮರಣ್ (ಎಡ) ಹಾಗೂ ಕರುಣ್ ನಾಯರ್ ಬ್ಯಾಟಿಂಗ್ ಪಿಟಿಐ ಚಿತ್ರಗಳು

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್**

**ಕರ್ನಾಟಕ 5ಕ್ಕೆ295 (90 ಓವರ್‌ಗಳಲ್ಲಿ)**

ನಿಕಿನ್ ಸಿ ಅಂಶ್ ಬಿ ಧರ್ಮೇಂದ್ರಸಿಂಹ 12 (40ಎ, 4x1)
ಮಯಂಕ್ ಸಿ ಚೇತನ್ ಬಿ ಧರ್ಮೇಂದ್ರಸಿಂಹ 2 (30ಎ)
ದೇವದತ್ತ ಬಿ ಧರ್ಮೇಂದ್ರಸಿಂಹ 96 (141ಎ, 4X11)
ಕರುಣ್ ಎಲ್‌ಬಿಡಬ್ಲ್ಯು ಬಿ ಧರ್ಮೇಂದ್ರಸಿಂಹ 73 (126ಎ, 4X9)
ಸ್ಮರಣ್ ಬ್ಯಾಟಿಂಗ್ 66 (120ಎ, 4X4, 6X2)
ಶ್ರೀಜಿತ್ ಸಿ ದೇಸಾಯಿ ಬಿ ದೊಡಿಯಾ 5 (15ಎ, 4X1)
ಶ್ರೇಯಸ್ ಬ್ಯಾಟಿಂಗ್ 38 (69ಎ, 4X2, 6X2)
**ಇತರೆ:** 3 (ಬೈ 1, ಲೆಗ್‌ಬೈ 1, ನೋಬಾಲ್ 1)

**ವಿಕೆಟ್ ಪತನ:** 1–13 (ಮಯಂಕ್ ಅಗರವಾಲ್;9.2), 2–26 (ನಿಕಿನ್ ಜೋಸ್;13.5), 3–172 (ಕರುಣ್ ನಾಯರ್; 53.4), 4–195 (ದೇವದತ್ತ ಪಡಿಕ್ಕಲ್; 59.5), 5–214 (ಕೆ.ಎಲ್. ಶ್ರೀಜಿತ್; 66.1)
**ಬೌಲಿಂಗ್:** ಜಯದೇವ್ ಉನದ್ಕತ್ 14–2–36–0, ಚೇತನ್ ಸಕಾರಿಯಾ 12–3–21–0, ಧರ್ಮೇಂದ್ರಸಿಂಹ ಜಡೇಜ 30–3–100–4, ಚಿರಾಗ್ ಜಾನಿ 3–1–5–0, ಪ್ರೇರಕ್ ಮಂಕಡ್ 3–1–14–0, ಯುವರಾಜ್ ಸಿಂಗ್ ದೊಡಿಯಾ 19–2–79–1, ಸಮರ್ ಗಜ್ಜರ್ 9–0–38–0
(ಸೌರಾಷ್ಟ್ರ ವಿರುದ್ಧದ ಪಂದ್ಯ)

ಮಾಡಿದರು. ಕರುಣ್ ನಾಯರ್ ಅವರನ್ನು 54ನೇ ಓವರ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಜಡೇಜ ಜೊತೆಯಾಟ ಮುರಿದರು. ಆರು ಓವರ್‌ಗಳ ನಂತರ ಜಡೇಜ ಮೋಡಿಗೆ ದೇವದತ್ತ ಕ್ಲೀನ್‌ಬೌಲ್ಡ್ ಆದರು. ಕೇವಲ 4 ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರು. ಕೃಷ್ಣನ್ ಶ್ರೀಜಿತ್ 15 ಎಸೆತ ಆಡಿ 5 ರನ್ ಗಳಿಸಿ ನಿರ್ಗಮಿಸಿದರು.

**ಸ್ಮರಣ್ ಆಟದ ರಂಗು:** ಹೋದ ವರ್ಷದ ರಣಜಿ ಋತುವಿನಲ್ಲಿ ಪದಾರ್ಪಣೆ ಮಾಡಿದ್ದ ಸ್ಮರಣ್ ಈ ಸಲವೂ ಉತ್ತಮ ಆರಂಭ ಮಾಡಿದರು. 22ವರ್ಷದ ಎಡಗೈ ಬ್ಯಾಟರ್ ಸ್ಮರಣ್ (ಬ್ಯಾಟಿಂಗ್ 66; 120ಎ) ಅಮೋಘ ಬ್ಯಾಟಿಂಗ್ ಮಾಡಿದರು. ಜಡೇಜ ಅವರ ಎಸೆತಗಳನ್ನು ದಂಡಿಸುವ ದಿಟ್ಟತನ ತೋರಿದರು. ಇನಿಂಗ್ಸ್‌ನ ಮೊದಲ ಸಿಕ್ಸರ್ ಸಿಡಿಸುವಲ್ಲಿ ಸಫಲರಾದರು. ಫ್ರಂಟ್‌ಫುಟ್ ಡ್ರೈವ್‌ಗಳ ಮೂಲಕ ಬೌಲರ್‌ಗಳಿಗೆ ಸವಾಲೆಸೆದರು.

ಅವರೊಂದಿಗೆ ಸೇರಿಕೊಂಡ ಶ್ರೇಯಸ್ ಗೋಪಾಲ್ (ಬ್ಯಾಟಿಂಗ್ 38) ಅವರು ದಿನದಾಟದಲ್ಲಿ ಯಾವುದೇ ವಿಕೆಟ್ ಪತನಕ್ಕೆ ಆಸ್ಪದ ಕೊಡಲಿಲ್ಲ. ಇಬ್ಬರೂ ಸೇರಿ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 81 ರನ್ ಸೇರಿಸಿದರು.

## 'ಆಯ್ಕೆ ಸಮಿತಿಗೆ ಫಿಟ್ನೆಸ್ ಅಪ್ಡೇಟ್ ಮಾಡುವುದು ನನ್ನ ಕೆಲಸವಲ್ಲ'

**ಕೋಲ್ಕತ್ತ (ಪಿಟಿಐ):** ತಮ್ಮನ್ನು ಆಸ್ಟ್ರೇಲಿಯಾ ಪ್ರವಾಸಕ್ಕೆ ಕಡೆಗಣಿಸಿದ ಆಯ್ಕೆಗಾರರ ವಿರುದ್ಧ ಭಾರತ ತಂಡದ ವೇಗಿ ಮೊಹಮ್ಮದ್ ಶಮಿ ಅಸಮಾಧಾನ ಹೊರಹಾಕಿದ್ದಾರೆ. ರಣಜಿ ಟ್ರೋಫಿಯಲ್ಲಿ ಬಂಗಾಲ ತಂಡಕ್ಕೆ ಆಡಲು

ಲಭ್ಯರಾಗಿರುವುದು ತಾವು ಆಡಲು ಸಮರ್ಥ ಎಂಬುದನ್ನು ಸೂಚಿಸಿದೆ. ಆಯ್ಕೆ ಸಮಿತಿಗೆ ಫಿಟ್ನೆಸ್ ಬಗ್ಗೆ ಅಪ್ಡೇಟ್ ಮಾಡುವುದು ತಮ್ಮ ಕೆಲಸವಲ್ಲ ಎಂದಿದ್ದಾರೆ.

35 ವರ್ಷ ವಯಸ್ಸಿನ ಶಮಿ ಅವರು ಚಾಂಪಿಯನ್ಸ್ ಟ್ರೋಫಿಯಲ್ಲಿ ಕೊನೆಯ ಬಾರಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ವರುಣ್ ಚಕ್ರವರ್ತಿ ಜೊತೆ ಅವರು ತಂಡದ ಪರ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದರು. 2023ರ ಏಕದಿನ ವಿಶ್ವಕಪ್ ಬಳಿಕ ಅವರು ಪಾದದ ಮತ್ತು ಮೊಣಗಂಟು ನೋವಿನ ಸಮಸ್ಯೆ ಎದುರಿಸುತ್ತಿದ್ದಾರೆ.

2023ರ ಜೂನ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಅವರು ಕೊನೆಯ ಬಾರಿ ಟೆಸ್ಟ್ ಪಂದ್ಯ ಆಡಿದ್ದರು.

'ಈ ಹಿಂದೆಯೂ ಇದನ್ನು ಹೇಳಿದ್ದೇನೆ. ಆಯ್ಕೆ ನನ್ನ ಕೈಲಿ ಇಲ್ಲ. ಫಿಟ್ನೆಸ್ ಸಮಸ್ಯೆ ಇದ್ದಿದ್ದರೆ ನಾನು ಬಂಗಾಳ ತಂಡಕ್ಕೆ ಆಯ್ಕೆಯಾಗುತ್ತಿರಲಿಲ್ಲ' ಎಂದು ಶಮಿ ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

## ಹೊಸ ಚೆಸ್ ವಿಶ್ವ ಚಾಂಪಿಯನ್‌ಷಿಪ್ ಒಮ್ಮತಕ್ಕೆ ಬಂದ ಫಿಡೆ, ಕಾರ್ಲ್‌ಸನ್

**ಓಸ್ಲೊ (ಎಎಫ್‌ಪಿ):** ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ (ಫಿಡೆ) ಮತ್ತು ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರ ನಡುವಣ ಭಿನ್ನಾಭಿಪ್ರಾಯ ದೀರ್ಘಕಾಲದ್ದು. ಆದರೆ ಹೊಸ ವಿಶ್ವಚಾಂಪಿಯನ್‌ಷಿಪ್‌ನ ಅವರ ಕಲ್ಪನೆಗೆ ಫಿಡೆ ಒಮ್ಮತ ಸೂಚಿಸಿದೆ.

ಸಾಂಪ್ರದಾಯಿಕ ಮಾದರಿಯ ದೀರ್ಘ ಪಂದ್ಯಗಳಿಗಿಂತ ಹೆಚ್ಚಾಗಿ ಅಲ್ಪಾವಧಿಯ ಪಂದ್ಯಗಳನ್ನು ಆಡುವುದರ ಪರ ಕಾರ್ಲ್‌ಸನ್ ಬಲವಾಗಿ ನಿಂತವರು. ಇದೇ ಕಾರಣಕ್ಕೆ ವಿಶ್ವ ಚಾಂಪಿಯನ್ ಆಗಿದ್ದಾಗಲೇ ಅವರು ಇನ್ನು ಫೈನಲ್‌ನಲ್ಲಿ ತಾವು ಆಡುವುದಿಲ್ಲ ಎಂದು 2023ರಲ್ಲಿ ಹಿಂದೆಸರಿದಿದ್ದರು. 'ತಮಗೆ ಮೊದಲಿನ ಉತ್ಸಾಹ ಉಳಿದಿಲ್ಲ' ಎಂದು ಕಾರಣ ನೀಡಿದ್ದರು.

ಹೊಸ ಮಾದರಿಯ 'ಟೋಟಲ್ ಚೆಸ್ ವರ್ಲ್ಡ್ ಚಾಂಪಿಯನ್‌ಷಿಪ್ ಟೂರ್' ಅನ್ನು ನಾರ್ವೆ ಚೆಸ್ ಫೆಡರೇಷನ್ ಬುಧವಾರ ಅನಾವರಣಗೊಳಿಸಿತು. ಈ ಟೂರ್‌ನಡಿ ವರ್ಷದಲ್ಲಿ ನಾಲ್ಕು ಟೂರ್ನಿಗಳಿರುತ್ತವೆ. ಅಂತಿಮವಾಗಿ ಮೂರೂ ವಿಭಾಗಗಳಿಗೆ (ಫಾಸ್ಟ್ ಕ್ಲಾಸಿಕ್, ರ್‍ಯಾಪಿಡ್ ಮತ್ತು ಬ್ಲಿಟ್ಜ್) ಒಟ್ಟಾಗಿ ಒಬ್ಬ ಚಾಂಪಿಯನ್ ಆಟಗಾರ ಹೊರಹೊಮ್ಮಲಿದ್ದಾರೆ.

'ಸಾಕಷ್ಟು ಯೋಚಿಸಿ, ಚೆಸ್‌ನ ಮತ್ತಷ್ಟು ಬೆಳವಣಿಗೆಗೆ ನೆರವಾಗುವಂತೆ ಈ ಚಾಂಪಿಯನ್‌ಷಿಪ್ ವಿನ್ಯಾಸಗೊಳಿಸಲಾಗಿದೆ' ಎಂದು ಕಾರ್ಲ್‌ಸನ್ ಹೇಳಿರುವುದಾಗಿ ನಾರ್ವೆ ಚೆಸ್ ತಿಳಿಸಿದೆ.

ಇದು ಆಟಗಾರರ ಒಟ್ಟಾರೆ ಸಾಮರ್ಥ್ಯವನ್ನು ಅಳೆಯಲಿದೆ ಎಂದೂ 34 ವರ್ಷ ವಯಸ್ಸಿನ ಕಾರ್ಲ್‌ಸನ್ ಅಭಿಪ್ರಾಯಪಟ್ಟಿದ್ದಾರೆ.

ಫಿಡೆ ಕೂಡ ಈ ಹೊಸ ವಿಶ್ವ ಚಾಂಪಿಯನ್‌ಷಿಪ್ ಟೂರ್ ಅನ್ನು ಸ್ವಾಗತಿಸಿದೆ.

ಮೂಲ ವಿಶ್ವ ಚಾಂಪಿಯನ್‌ಷಿಪ್ (ಕ್ಲಾಸಿಕಲ್ ಮಾದರಿಯ) ಮುಂದುವರಿಯಲಿದೆ ಎಂದೂ ಫಿಡೆ ಅಧ್ಯಕ್ಷ ಅರ್ಕಾಡಿ ಡ್ವೊರ್ಕೊವಿಚ್ ತಿಳಿಸಿದ್ದಾರೆ. ಹೊಸ ಮಾದರಿ ಇದಕ್ಕೆ ಪೂರಕವಾಗಿರಲಿದೆ ಎಂದಿದ್ದಾರೆ.

## ಪ್ರಿಕ್ವಾರ್ಟರ್‌ಗೆ ತನ್ವಿ, ಉನ್ನತಿ

**ಗುವಾಹಟಿ (ಪಿಟಿಐ):** ಭಾರತದ ಅಗ್ರ ಆಟಗಾರ್ತಿಯರಾದ ತನ್ವಿ ಶರ್ಮಾ, ಉನ್ನತಿ ಹೂಡಾ ಅವರು ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ಗಳಲ್ಲಿ ಬುಧವಾರ ನೇರ ಆಟಗಳಿಂದ ಜಯಗಳಿಸಿ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಆದರೆ, ರಕ್ಷಿತಾಶ್ರೀ ರಾಮರಾಜ್ ಗೆಲ್ಲುವ ಮೊದಲು ಆತಂಕದ ಕ್ಷಣಗಳನ್ನು ಕಾಣಬೇಕಾಯಿತು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಅಗ್ರಶ್ರೇಯಾಂಕದ ತನ್ವಿ 15–12, 15–7 ರಿಂದ ಇಂಡೊನೇಷ್ಯಾದ ಒಯಿ ವಿನಾರ್ಟೊ ಅವರನ್ನು ಸೋಲಿಸಿದರು. ಎಂಟನೇ ಶ್ರೇಯಾಂಕದ ಉನ್ನತಿ 15–8, 15–5 ರಿಂದ ಅಮೆರಿಕದ ಅಲೈಸ್ ವಾಂಗ್ ಅವರನ್ನು ಹಿಮ್ಮೆಟ್ಟಿಸಲು ಕಷ್ಟಪಡಲಿಲ್ಲ. ಆದರೆ ಹತ್ತನೇ ಶ್ರೇಯಾಂಕದ ರಕ್ಷಿತಾ 11–15, 15–5, 15–8 ರಿಂದ ಸಿಂಗಪುರದ ಆಲಿಯಾ ಝಕಾರಿಯಾ ವಿರುದ್ಧ ಗೆಲ್ಲುವ ಮೊದಲು ಆತಂಕದ ಕ್ಷಣಗಳನ್ನು ಕಾಣಬೇಕಾಯಿತು.

'ವಿನಾರ್ಟೊ ವಿರುದ್ಧ ನಾನು ಆರಂಭದಲ್ಲಿ ಉತ್ತಮವಾಗಿ ಆಡಿ 9–4, 9–5 ಮುನ್ನಡೆ ಪಡೆದಿದ್ದೆ. ಇದಕ್ಕಿದ್ದ ಹಾಗೆ ತಪ್ಪುಗಳನ್ನು ಮಾಡತೊಡಗಿದೆ. ರ್‍ಯಾಲಿಗಳನ್ನು ಆಡುವಂತೆ ಕೋಚ್ ಸಲಹೆ ನೀಡಿದರು. ನಂತರ ನಾನು ಸರಾಗವಾಗಿ ಆಡಿದೆ' ಎಂದು ವಿಶ್ವದ ಅಗ್ರಮಾನ್ಯ ಜೂನಿಯರ್ ಆಟಗಾರ್ತಿ ತನ್ವಿ ಪಂದ್ಯದ ನಂತರ ಹೇಳಿದರು.

ತನ್ವಿ 16ರ ಸುತ್ತಿನ ಪಂದ್ಯದಲ್ಲಿ ಚೀನಾದ ಲಿ ಯುವಾನ್ ಸುನ್ ಅವರನ್ನು ಎದುರಿಸಲಿದ್ದಾರೆ. ಲಿ ಇನ್ನೊಂದು ಪಂದ್ಯದಲ್ಲಿ ಒಂಬತ್ತನೇ ಶ್ರೇಯಾಂಕದ ಲಿಯಾವೊ ಜುಯಿ ಚಿ ಅವರಿಗೆ ಆಘಾತ ನೀಡಿದರು.

ರಕ್ಷಿತಾಶ್ರೀ ಮುಂದಿನ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ರನಿತ್ಮಾ ಲಿಯಾನಗೆ (ಶ್ರೀಲಂಕಾ) ಅವರನ್ನು ಎದುರಿಸಲಿದ್ದಾರೆ.

ನ್ಯಾಷನಲ್ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಜ್ಞಾನ ದತ್ತು ಟಿ.ಟಿ. ಅವರು ಭಾರತದ ಪದಕದ ಭರವಸೆಯಾಗಿ ಉಳಿದಿದ್ದಾರೆ. ಅವರು 32ರ ಸುತ್ತಿನಲ್ಲಿ ಸ್ವದೇಶದ ಆಟಗಾರ, 15ನೇ ಶ್ರೇಯಾಂಕದ ಸೂರ್ಯಾಕ್ಷ್ ರಾವತ್ ಅವರನ್ನು 11–15, 15–6, 15–11 ರಿಂದ ಸೋಲಿಸಿದರು.

ಆದರೆ, 11ನೇ ಶ್ರೇಯಾಂಕದ ರೌನಕ್ ಚೌಹಾನ್ 11–15, 12–15 ರಲ್ಲಿ ಲಿ ಝಿ ಹಾಂಗ್ ಅವರಿಗೆ ಮಣಿದರು. ಮಿಶ್ರ ಡಬಲ್ಸ್‌ನಲ್ಲಿ 14ನೇ ಶ್ರೇಯಾಂಕದ ಭವ್ಯಾ ಛಾಬ್ರಾ ಮತ್ತು ವಿಶಾಖ ಟೊಪ್ಪೊ 16ರ ಸುತ್ತನ್ನು ಪ್ರವೇಶಿಸಿದರು.

Terms and Conditions applied. *Approval of the loan is at the sole discretion of the financiers, and additional documentation may be required. *The interest rates, loan amount, down payment, tenure options and EMI are based on the financier's assessment of the applicant's credit profile. *Low EMI offers are applicable for select HMSI models as follows: ₹49/- per day for Shine100 DX ; ₹79/- per day for Shine125, SP125 & CB125 Hornet; ₹1999/- per month for Activa. *Some of the mentioned components of the scheme cannot be clubbed together. *The offers/features may be modified or withdrawn at any time without prior intimation. *Offer valid until 31st October 2025. **Instant Cashback up to ₹5000 is available on selected HMSI models for EMI transactions using HDFC Bank credit cards with a minimum transaction value of ₹40000. **An instant cashback of flat ₹2000 is applicable on a minimum full swipe transaction of ₹40000, and flat ₹3000 Instant cashback on a minimum full swipe transaction of ₹75002. **Instant Cashback up to ₹4000 is available on selected HMSI models for EMI transactions made using IDFC Bank credit cards with a minimum transaction value of ₹40000. **The offer is valid on credit card transactions processed through Pine Labs machines only and is applicable for one transaction per card/order during the offer period. **The Instant Cashback offers from HDFC Bank and IDFC Bank are valid until 31st October 2025. ^GST benefit is based on a reduction from 28% to 18% GST on the Ex-showroom price of NX 200. ^The actual savings may vary depending on the selected model and state. Product shown in the picture may vary from actual product available in the market. Accessories shown in the picture are not part of standard equipment.

For dealer details scan the QR Code

For more information give a missed call on 7230032200

**Honda Motorcycle & Scooter India Pvt. Ltd., Registered Office:** Plot No. 1, Sector - 03, IMT Manesar, Distt. Gurugram, (Haryana) – 122052, India; **Website:** www.honda2wheelersindia.com; **Customer Care:** customercare@honda.hmsi.in

**Honda Exclusive Authorised Dealerships:** **Ananda Honda** - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda** - **ANEKAL:** 9880458863; **City Honda** - **ST. JOHNS ROAD:** 08025139199; **H.R.B.R:** 9845941305; **FRAZER TOWN:** 9480812353; **LALBAGH:** 9480812397; **Haiku Honda** - **DOMLUR:** 9342432156; **INDIRANAGAR:** 9342432157; **Dhruvdesh Honda** - **MEKHRI CIRCLE:** 9343968419; **THANISANDRA (NAGAWARA):** 7353030333; **YELAHANKA:** 9343968407; **VIDYARANYAPURA:** 8150866333; **MALLESHWARAM:** 8971887792; **Raja Honda** - **KORAMANGALA:** 08067329000; **Prime Honda** - **VIJAYNAGAR:** : 080-23010300; **NAGARBHAVI:** 080-23010700; **KAMAKSHIPALYA:** 080-23019700; **Silicon Honda** - **RV ROAD:** 9844502222; **BANSHANKARI:** 9844502444; **R.R. NAGAR:** 9964388333; **MONOTYPE:** 7353744400; **JAYANAGAR:** 8722801626; **Saphire Honda** - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda** - **KR PURAM:** 9071858885; **HENNUR ROAD:** 9108989811; **Tansi Honda** - **HOODI:** 7259030091; **MARTHAHALLI:** 7259030100; **VARTHUR RD:** 8105597877; **GUNJUR:** 9606450642; **Turbo Honda** - **DODDABALLAPURA:** 7022620885; **NELAMANAGALA:** 7022008894; **Wings Honda** - **HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda** - **KOLAR:** 9900018515; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda** - **CHIKKABALLAPUR:** 9606060610; **CHINTAMANI:** 9606060620; **BAGEPALLI:** 9611596112; **Shankar Honda** - **GOWRIBIDANUR:** 9900007422/33; **SIDLAGHATTA:** 9611596113; **Shantinath Honda** - **TUMKUR:** 9972433799; **KUNIGAL:** 08132-295609; **KUNIGAL ROAD:** 9844351599; **KORATAGERE:** 9606955149; **Honey Honda** - **PAVAGADA:** 9535941215; **Annapoorna Honda** - **MADHUGIRI:** 9886627429; **Vignesh Honda** - **TIPTUR:** 9886711161; **TURUVEKERE:** 9964605093; **Sri Srinivasa Honda** - **CHIKKANAYAKANAHALLI:** 8722522221; **Prestige Honda** - **RAMNAGARA:** 9606490030; **KANAKAPURA:** 9606036053; **CHANNAPATNA:** 9606490034; **ART Honda** - **BIDADI:** 9945966771; **Springs Honda** - **KENGERI:** 9513771114; **Nideesh Honda** - **DEVANAHALLI:** 9108871999; **VIJAYAPURA:** 9108871999.

**For Bulk/Institutional enquiries, please write us at: institutionalsales@honda.hmsi.in**